
ಗುರುವಾರ, ಸೆಪ್ಟೆಂಬರ್ 7, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 249 | ಪುಟ 16
• www.prajavani.net
prajavani.net | prajavani | prajavani | prajavani

ಪ್ರಜಾ ವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
65,880 ▲	19,611 ▲	₹61,080 (ಬೆಂಗಳೂರು) ▼	₹74,300 (ಬೆಂಗಳೂರು) ▼	83.13 ▼

'ಸನಾತನ ಧರ್ಮ' ಹೇಳಿಕೆ ವಿವಾದ • ಎಚ್ಚರಿಕೆಯ ಹೆಜ್ಜೆ ಇಡಲು ತೀರ್ಮಾನ

'ತಕ್ಕ ಉತ್ತರ' ಅಗತ್ಯ: ಮೋದಿ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಸನಾತನ ಧರ್ಮ ಕುರಿತು ತಮಿಳುನಾಡು ಸಚಿವ ಉದಯನಿಧಿ ಸ್ಟಾಲಿನ್ ನೀಡಿದ ಹೇಳಿಕೆಗೆ ತಕ್ಕ ಉತ್ತರ ಅಗತ್ಯ' ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಬುಧವಾರ ಹೇಳಿದ್ದಾರೆ.



ನರೇಂದ್ರ ಮೋದಿ

ವಿವಾದ ಕುರಿತು ಇದೇ ಮೊದಲ ಬಾರಿಗೆ ಪ್ರತಿಕ್ರಿಯಿಸಿರುವ ಅವರು, 'ಇಂತಹ ಹೇಳಿಕೆ ನೀಡಿರುವ ಪಕ್ಷಗಳು ಹಾಗೂ ನಾಯಕರ ಮುಖವಾಡ ಕಳಚಿ, ಸತ್ಯವನ್ನು ಜನರ ಮುಂದಿಡಬೇಕು' ಎಂದು ಸೂಚಿಸಿದ್ದಾರೆ.

ಜಿ–20 ಶೃಂಗಸಭೆ ಹಿನ್ನೆಲೆಯಲ್ಲಿ ನಡೆದ ಮಂತ್ರಿ ಪರಿಷತ್ತಿನ ಸಭೆಯಲ್ಲಿ ಮಾತನಾಡಿದ ಅವರು, 'ಈ ಕುರಿತು ವಾಸ್ತವಾಂಶಗಳ ಆಧಾರದಲ್ಲಿ ಪ್ರತಿಕ್ರಿಯೆ ನೀಡಬೇಕು ಎಂಬುದಾಗಿ ಸಲಹೆ ನೀಡಿದ್ದಾರೆ' ಎಂದು ಮೂಲಗಳು ಹೇಳಿವೆ.

'ಸಾವಿರಾರು ವರ್ಷಗಳಿಂದಲೂ ಸನಾತನ ಧರ್ಮದಲ್ಲಿ ಸಹಿಷ್ಣುತೆ ಹಾಸುಹೊಕ್ಕಾಗಿದೆ. ಹೀಗಾಗಿ ವಿರೋಧ ಪಕ್ಷಗಳ ನಾಯಕರು ಸನಾತನ ಧರ್ಮ ಕುರಿತು ನೀಡಿರುವ ಹೇಳಿಕೆಗಳನ್ನು ಬಲವಾಗಿ ಖಂಡಿಸಬೇಕು ಎಂದು ಮೋದಿ ಅವರು ಸಚಿವರಿಗೆ ಸೂಚಿಸಿದರು' ಎಂದು ತಿಳಿಸಿವೆ.

'ಸನಾತನ ಧರ್ಮ ಮಲೇರಿಯಾ, ಡೆಂಗಿ, ಕೊರೊನಾ ರೋಗ ಇದ್ದಂತೆ. ಅದನ್ನು ನಿರ್ಮೂಲನೆ ಮಾಡಬೇಕು' ಎಂದು ಇತ್ತೀಚೆಗೆ ಚೆನ್ನೈನಲ್ಲಿ ನಡೆದ ಸಭೆಯಲ್ಲಿ ಉದಯನಿಧಿ ಹೇಳಿದ್ದರು.

'ಸಂಸತ್‌ನ ನೂತನ ಭವನ ಉದ್ಘಾಟನೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಆಹ್ವಾನಿಸಿರಲಿಲ್ಲ. ಕೇಂದ್ರ ಸರ್ಕಾರದ ಈ ನಡೆ ಸನಾತನ ಧರ್ಮ ಪಾಲಿಸುವವರ ತಾರತಮ್ಯಕ್ಕೆ ನಿದರ್ಶನ' ಎಂದೂ ಉದಯನಿಧಿ ಮಂಗಳವಾರ ಹೇಳಿದ್ದಾರೆ. ಮಾರನೇ ದಿನವೇ ಮೋದಿ ಅವರಿಂದ ಈ ಪ್ರತಿಕ್ರಿಯೆ ವ್ಯಕ್ತವಾಗಿದೆ.

ರಾಜಕೀಯವಾಗಿ ಬಹಳ ಸೂಕ್ಷ್ಮವಾಗಿರುವ ಈ ವಿಚಾರ ಕುರಿತು ಕೇಂದ್ರ ಸರ್ಕಾರ ಎಚ್ಚರಿಕೆ ಹೆಜ್ಜೆ ಇಡುತ್ತಿದೆ. ಕೆಲವೇ ತಿಂಗಳಲ್ಲಿ ತಮಿಳುನಾಡು ವಿಧಾನಸಭೆಗೆ ಚುನಾವಣೆ ನಡೆಯಲಿರುವುದೇ ಇದಕ್ಕೆ ಕಾರಣ. ವಿರೋಧ ಪಕ್ಷಗಳು ಪರಿಶಿಷ್ಟರ ಮತಗಳನ್ನು ತಮ್ಮತ್ತ ಸೆಳೆಯಲು ಈ ವಿವಾದವನ್ನು ಬಳಸಿಕೊಳ್ಳುವ ಸಾಧ್ಯತೆ ಕೂಡ ಸರ್ಕಾರದ ಈ ಎಚ್ಚರಿಕೆಯ ನಡೆಗೆ ಕಾರಣ ಎನ್ನಲಾಗುತ್ತಿದೆ.

ಉದಯನಿಧಿ ಹೇಳಿಕೆಗೆ ವ್ಯಾಪಕ ಆಕ್ರೋಶ ವ್ಯಕ್ತವಾಗುತ್ತಿದೆ. 'ಉದಯನಿಧಿ ಹೇಳಿಕೆ ಸಾಮೂಹಿಕ ನರಹತ್ಯೆಗೆ ಕರೆ ನೀಡಿರುವುದಕ್ಕೆ ಸಮ' ಎಂದು ಬಿಜೆಪಿ ಪ್ರತಿಕ್ರಿಯಿಸಿತ್ತು. ಈ ಆರೋಪಗಳನ್ನು ಡಿಎಂಕೆ ತಳ್ಳಿಹಾಕಿತ್ತು.

ಈ ವಿವಾದ ಜೋರಾಗುತ್ತಿದ್ದಂತೆ ಪ್ರತಿಕ್ರಿಯಿಸಿದ್ದ ಉದಯನಿಧಿ, 'ನನ್ನ ಹೇಳಿಕೆ ವಿಚಾರವಾಗಿ ಯಾವುದೇ ಕಾನೂನು ಕ್ರಮ ಎದುರಿಸಲು ಸಿದ್ಧ' ಎಂದು ಪುನರುಚ್ಚರಿಸಿದ್ದರು.

5ನೇ ಪುಟ ನೋಡಿ

ಉದಯನಿಧಿ, ಪ್ರಿಯಾಂಕ್ ವಿರುದ್ಧ ಎಫ್‌ಐಆರ್

ರಾಮ್‌ಪುರ (ಉತ್ತರ ಪ್ರದೇಶ) (ಪಿಟಿಐ): ಧಾರ್ಮಿಕ ಭಾವನೆಗಳಿಗೆ ನೋವುಂಟು ಮಾಡಿದ್ದಾರೆ ಎಂಬ ಆರೋಪದ ಮೇಲೆ ತಮಿಳುನಾಡಿನ ಸಚಿವ ಉದಯನಿಧಿ ಸ್ಟಾಲಿನ್ ಹಾಗೂ ಕರ್ನಾಟಕದ ಸಚಿವ ಪ್ರಿಯಾಂಕ್ ಖರ್ಗೆ ವಿರುದ್ಧ ಇಲ್ಲಿನ ಪೊಲೀಸ್ ಠಾಣೆಯಲ್ಲಿ ಮಂಗಳವಾರ ಎಫ್‌ಐಆರ್ ದಾಖಲಾಗಿದೆ.



ಉದಯನಿಧಿ

ತಮಿಳುನಾಡಿನಲ್ಲಿ ನಡೆದ ಸಮಾರಂಭದಲ್ಲಿ ಉದಯನಿಧಿ ಅವರು, 'ಸನಾತನ ಧರ್ಮ ಎಂಬುದು ಕೊರೊನಾ ಸೋಂಕು, ಡೆಂಗಿ, ಮಲೇರಿಯಾ ಇದ್ದಂತೆ. ಅದನ್ನು ನಿರ್ಮೂಲನೆ ಮಾಡಬೇಕು' ಎಂದು ಹೇಳಿಕೆ ನೀಡಿದ್ದರು. ಇದಕ್ಕೆ ಪ್ರಿಯಾಂಕ್ ಖರ್ಗೆ ಕೂಡ ಬೆಂಬಲ ವ್ಯಕ್ತಪಡಿಸಿದ್ದರು. ಧಾರ್ಮಿಕ ಭಾವನೆಗಳಿಗೆ ಈ ಇಬ್ಬರು ಚ್ಯುತಿ ತಂದಿದ್ದಾರೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ.

ಐಪಿಸಿ ಸೆಕ್ಷನ್ 295ಎ (ಧಾರ್ಮಿಕ ನಂಬಿಕೆ, ಭಾವನೆಗೆ ಉದ್ದೇಶಪೂರ್ವಕವಾಗಿ ಧಕ್ಕೆ ತರುವುದು) ಹಾಗೂ 153ಎ (ಧರ್ಮ, ಜಾತಿ, ಜನಾಂಗ, ಹುಟ್ಟಿದ ಸ್ಥಳ, ಭಾಷೆ ಇತ್ಯಾದಿ ಆಧಾರದಲ್ಲಿ ಭಿನ್ನ ಸಮುದಾಯಗಳ ನಡುವೆ ದ್ವೇಷ ಮೂಡಿಸಲು ಯತ್ನ) ಅಡಿ ಪ್ರಕರಣ ದಾಖಲಿಸಲಾಗಿದೆ ಎಂದು ಬುಧವಾರ ಪೊಲೀಸರು ತಿಳಿಸಿದ್ದಾರೆ.



ಒಂದು ಧರ್ಮದ ವಿರುದ್ಧ ಹೇಳಿಕೆ ನೀಡಿಲ್ಲ. ನನ್ನ ಹೇಳಿಕೆಗೆ ಬದ್ಧವಾಗಿದ್ದೇನೆ. ಉತ್ತರ ಪ್ರದೇಶ ಸರ್ಕಾರ ಏನು ಬೇಕಾದರೂ ಮಾಡಿಕೊಳ್ಳಲಿ. ಎದುರಿಸಲು ಸಿದ್ಧ
ಪ್ರಿಯಾಂಕ್ ಖರ್ಗೆ, ಸಚಿವ

ಮಾಧ್ಯಮಗಳಲ್ಲಿ ವರದಿಯಾಗಿರುವ ಸ್ಟಾಲಿನ್ ಅವರ ಹೇಳಿಕೆ ಆಧರಿಸಿ ವಕೀಲರಾದ ಹರ್ಷ ಗುಪ್ತ ಹಾಗೂ ರಾಮ್ ಸಿಂಗ್ ಲೋಧಿ ದೂರು ದಾಖಲಿಸಿದ್ದಾರೆ.

ಸ್ಟಾಲಿನ್ ವಿರುದ್ಧ ಸ್ವಯಂಪ್ರೇರಿತವಾಗಿ ಕಾನೂನು ಕ್ರಮಕ್ಕೆ ಆಗ್ರಹಿಸಿ ನಿವೃತ್ತ ನ್ಯಾಯಮೂರ್ತಿಗಳು ಸೇರಿದಂತೆ 260ಕ್ಕೂ ಹೆಚ್ಚು ಮಂದಿ, ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರಿಗೆ ಪತ್ರ ಬರೆದಿದ್ದಾರೆ.

ಮತಕ್ಕಾಗಿ ಸನಾತನ ಧರ್ಮ ದೂಷಿಸುವ ಹುಚ್ಚು: ಕಲ್ಲಡ್ಕ

ಪುತ್ತೂರು (ದಕ್ಷಿಣ ಕನ್ನಡ): 'ಸನಾತನ ಧರ್ಮವನ್ನು ದೂಷಿಸಿದರೆ ಅಲ್ಪಸಂಖ್ಯಾತ ಮತಗಳು ಸಿಗುತ್ತವೆ, ಆ ಮತ ಬ್ಯಾಂಕ್ ಮೇಲೆ ಅಧಿಕಾರ ಸ್ಥಾಪನೆ ಮಾಡಬಹುದು ಎಂಬ ಹುಚ್ಚು ಶುರುವಾಗಿದೆ' ಎಂದು ಆರ್‌ಎಸ್‌ಎಸ್ ಮುಖಂಡ ಡಾ. ಕಲ್ಲಡ್ಕ ಪ್ರಭಾಕರ ಭಟ್ ಹೇಳಿದರು.

ಸನಾತನ ಧರ್ಮದ ಬಗ್ಗೆ ಗೃಹ ಸಚಿವ ಡಾ. ಜಿ. ಪರಮೇಶ್ವರ ಹೇಳಿಕೆ ಬಗ್ಗೆ ಬುಧವಾರ ಪ್ರತಿಕ್ರಿಯಿಸಿದ ಅವರು, 'ಪರಮೇಶ್ವರ ಅವರು ಇಸ್ಮಾಯಿಲ್ ಅಥವಾ ಸ್ಟಾಲಿನ್ ಎಂದು ಹೆಸರು ಇಟ್ಟುಕೊಳ್ಳಬಹುದಿತ್ತಲ್ಲ? ಒಂದೆಡೆ ಅವರು ದೇವಸ್ಥಾನಕ್ಕೆ ಹೋಗುತ್ತಾರೆ, ಅಲ್ಲಿಂದ ಹೊರ ಬಂದಮೇಲೆ ಧರ್ಮ ಯಾವಾಗ ಹುಟ್ಟಿದೆ ಎಂದು ಪ್ರಶ್ನಿಸುತ್ತಾರೆ' ಎಂದರು.

'ಸನಾತನ ಧರ್ಮ ಯಾವಾಗ ಹುಟ್ಟಿದ್ದೆಂದು ಯಾರಿಗೂ ಗೊತ್ತಿಲ್ಲ. ಹೀಗಾಗಿ ಈ ಧರ್ಮಕ್ಕೆ ನಾಶವೂ ಇಲ್ಲ. ಹುಟ್ಟೂ ಇಲ್ಲದ ಮತ್ತು ನಾಶವೂ ಇಲ್ಲದ ಧರ್ಮ ಸನಾತನ ಧರ್ಮ. ಉಳಿದ ಮತಗಳು ಸಾವಿರಾರು ವರ್ಷಗಳ ಹಿಂದೆ ಹುಟ್ಟಿದವು' ಎಂದರು.

'ಇಂಡಿಯಾ'ದ ಗುಪ್ತ ಅಜೆಂಡಾ: ಬೊಮ್ಮಾಯಿ

ಬೆಂಗಳೂರು: ಸನಾತನ ಧರ್ಮವನ್ನು ಅಪಮಾನ ಮಾಡುವುದು ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷಗಳ ಒಕ್ಕೂಟ 'ಇಂಡಿಯಾ'ದ ಗುಪ್ತ ಅಜೆಂಡಾ ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಹರಿಹಾಯ್ದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಸನಾತನ ಧರ್ಮ ಎಲ್ಲಿ, ಯಾವಾಗ ಹುಟ್ಟಿತು ಎನ್ನುವುದೇ ಗೊತ್ತಿಲ್ಲ ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿಕೆ ನೀಡಿರುವುದು ಖಂಡನೀಯ' ಎಂದರು.

ಪರಮೇಶ್ವರ ಅವರು ವೇದ, ಉಪನಿಷತ್ತುಗಳನ್ನು ಓದಿ ತಿಳಿದುಕೊಳ್ಳುವ ಪ್ರಯತ್ನ ಮಾಡಲಿ. ಹಿಂದೂ ಧರ್ಮ ಟೀಕಿಸುವ ಮೂಲಕ ತುಷ್ಟೀಕರಣದ ರಾಜಕಾರಣವನ್ನು ಮಾಡಿಕೊಂಡು ಬಂದಿದ್ದಾರೆ' ಎಂದು ಟೀಕಿಸಿದರು.

'ಉದಯನಿಧಿ ಸನಾತನ ಧರ್ಮದ ಬಗ್ಗೆ ಕೆಟ್ಟ ರೀತಿಯಲ್ಲಿ ಹೇಳಿಕೆ ನೀಡಿದ್ದು, ಧರ್ಮವನ್ನು ರೋಗಕ್ಕೆ ಹೋಲಿಕೆ ಮಾಡುವುದೇ ಒಂದು ರೋಗ. ಇಂಡಿಯಾ ಒಕ್ಕೂಟದ ಕೆಲವರಿಗೆ ಅವರ ಹೇಳಿಕೆ ಅಪಥ್ಯವಾಗಿದೆ' ಎಂದರು.



ನಟರಾಜ – ಸಂಕೇತ ಜಿ–20 ಶೃಂಗಸಭೆ ನಡೆಯುವ ದೆಹಲಿಯ 'ಭಾರತ ಮಂಟಪಂ' ಬಳಿ ಪ್ರತಿಷ್ಠಾಪಿಸಲಾಗಿರುವ ನಟರಾಜ ವಿಗ್ರಹ – ಪಿಟಿಐ ಚಿತ್ರ

ಇನ್ನಷ್ಟು ಸುದ್ದಿಗಳು 07

'ಸುಪ್ರೀಂ'ಗೆ ಕರ್ನಾಟಕ ಸರ್ಕಾರ ಪ್ರಮಾಣಪತ್ರ ಸಲ್ಲಿಕೆ

12ರ ನಂತರ ನೀರು ಬಿಡಲ್ಲ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾವೇರಿ ಮತ್ತು ಕೃಷ್ಣಾ ನದಿ ಪಾತ್ರದ ಪ್ರದೇಶಗಳೆರಡೂ ಭೀಕರ ಬರ ಪರಿಸ್ಥಿತಿ ಎದುರಿಸುತ್ತಿದ್ದು, ಸೆಪ್ಟೆಂಬರ್ 12ರ ನಂತರ ತಮಿಳುನಾಡಿಗೆ ಕಾವೇರಿ ನೀರು ಬಿಡಲು ಸಾಧ್ಯವಿಲ್ಲ ಎಂದು ಕರ್ನಾಟಕ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಈ ಸಂಬಂಧ ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿರುವ ಜಲಸಂಪನ್ಮೂಲ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್, 'ಆಗಸ್ಟ್ 29ರಿಂದ ಸೆಪ್ಟೆಂಬರ್ 11ರ ವರೆಗೆ ಪ್ರತಿದಿನ 5 ಸಾವಿರ ಕ್ಯೂಸೆಕ್ ನೀರನ್ನು ಬಿಡಬೇಕು ಎಂದು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ (ಸಿಡಬ್ಲ್ಯುಎಂಎ) ನಿರ್ದೇಶನ ನೀಡಿತ್ತು. ಆ ಪ್ರಕಾರ, ಕರ್ನಾಟಕವು ತಮಿಳುನಾಡಿಗೆ ಕಾವೇರಿ ನೀರನ್ನು ಹರಿಸುತ್ತಿದೆ. ನೀರು ಬಿಡುಗಡೆ ಪ್ರಮಾಣವನ್ನು ದಿನಕ್ಕೆ 5 ಸಾವಿರ ಕ್ಯೂಸೆಕ್‌ನಿಂದ 3 ಸಾವಿರ ಕ್ಯೂಸೆಕ್‌ಗೆ ಇಳಿಸಬೇಕು ಎಂದು ಆಗ್ರಹಿಸಿ ಪ್ರಾಧಿಕಾರಕ್ಕೆ ಈಗಾಗಲೇ ಪತ್ರ ಬರೆಯಲಾಗಿದೆ' ಎಂದೂ ತಿಳಿಸಿದ್ದಾರೆ.

ಪ್ರಾಧಿಕಾರದ ಆದೇಶದ ಪ್ರಕಾರ, ಆಗಸ್ಟ್ 29ರಿಂದ ಸೆಪ್ಟೆಂಬರ್ 3 ರ ವರೆಗೆ 30 ಸಾವಿರ ಕ್ಯೂಸೆಕ್ ನೀರನ್ನು ಬಿಡಬೇಕಿತ್ತು. ಆದರೆ, ತಮಿಳುನಾಡಿಗೆ 37,869 ಕ್ಯೂಸೆಕ್ ನೀರನ್ನು ಬಿಡಲಾಗಿದೆ. ರಾಜ್ಯವು ಹೆಚ್ಚುವರಿಯಾಗಿ 7,869 ಕ್ಯೂಸೆಕ್ ನೀರನ್ನು ಬಿಟ್ಟಿದೆ.

ವಿಚಾರಣೆ 21ಕ್ಕೆ ಮುಂದೂಡಿಕೆ

ಪ್ರತಿದಿನ 24 ಸಾವಿರ ಕ್ಯೂಸೆಕ್ ಕಾವೇರಿ ನೀರನ್ನು ಬಿಡುಗಡೆ ಮಾಡಲು ಕರ್ನಾಟಕಕ್ಕೆ ನಿರ್ದೇಶನ ನೀಡಬೇಕು ಎಂದು ಕೋರಿ ತಮಿಳುನಾಡು ಸರ್ಕಾರ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಸೆ. 21ಕ್ಕೆ ಮುಂದೂಡಿದೆ. ಸೆಪ್ಟೆಂಬರ್ 6ರಂದು ಪ್ರಕರಣದ ವಿಚಾರಣೆ ನಡೆಸುವುದಾಗಿ ತ್ರಿಸದಸ್ಯ ಪೀಠ ಕಳೆದ ವಾರ ತಿಳಿಸಿತ್ತು. ನ್ಯಾಯಮೂರ್ತಿಯೊಬ್ಬರ ಅನುಪಸ್ಥಿತಿ ಹಿನ್ನೆಲೆಯಲ್ಲಿ ವಿಚಾರಣೆಗೆ ಪಟ್ಟಿ ಆಗಿರಲಿಲ್ಲ.

ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಪರ ಅರ್ಜಿ ಸಲ್ಲಿಸಿದ್ದ ವಕೀಲರು, 'ಇದನ್ನು ಮುಖ್ಯ ಅರ್ಜಿಯೊಂದಿಗೆ ವಿಲೀನ ಮಾಡಬೇಕು' ಎಂದು ಮನವಿ ಮಾಡಿದರು. 21ರಂದೇ ರೈತರ ಸಂಘದ ಅರ್ಜಿಯನ್ನೂ ವಿಚಾರಣೆ ಮಾಡಲಾಗುವುದು ಎಂದು ನ್ಯಾಯಮೂರ್ತಿ ಹೇಳಿದರು.

ತಮಿಳುನಾಡಿಗೆ ನೀರು ಬಿಡುಗಡೆ ಪ್ರಮಾಣ (ಕ್ಯೂಸೆಕ್‌ಗಳಲ್ಲಿ)

ದಿನಾಂಕ	ಸಿಡಬ್ಲ್ಯುಎಂಎ ಆದೇಶ	ತಮಿಳುನಾಡಿಗೆ ಬಿಟ್ಟ ನೀರು
ಆ.29	5,000	3,870
ಆ.30	5,000	2,805
ಆ.31	5,000	3,397
ಸೆ.1	5,000	8,144
ಸೆ.2	5,000	10,185
ಸೆ.3	5,000	9,468
ಒಟ್ಟು	30,000	37,869

ಮುಂದಿನ ದಿನಗಳಲ್ಲಿ ನೀರಿನ ಬಿಡುಗಡೆ ಪ್ರಮಾಣವನ್ನು ಹೊಂದಾಣಿಕೆ ಮಾಡುವ ಅಧಿಕಾರವನ್ನು ರಾಜ್ಯ ಹೊಂದಿದೆ ಎಂದು ಅವರು ಹೇಳಿದ್ದಾರೆ.

'ಕಾವೇರಿ ಕಣಿವೆಯಲ್ಲಿ ಶೇ 60.12ರಷ್ಟು ಮಳೆ ಕೊರತೆಯಾಗಿದೆ ಎಂದು ಪ್ರಾಧಿಕಾರ ಅಂದಾಜಿಸಿದೆ. ಆದರೆ, ಕರ್ನಾಟಕದ ಕಾವೇರಿ ಜಲಾನಯನ ಪ್ರದೇಶದಲ್ಲಿ ಶೇ 66ರಷ್ಟು ಮಳೆ ಕೊರತೆ ಆಗಿದೆ. ಇದರಿಂದಾಗಿ, ಜಲಾಶಯಗಳಿಗೆ ಒಳಹರಿವು ಗಣನೀಯವಾಗಿ ಕಡಿಮೆ ಆಗಿದೆ. ರಾಜ್ಯದ ಕಾವೇರಿ ಹಾಗೂ ಕೃಷ್ಣಾ ಕಣಿವೆಗಳಲ್ಲಿ ಗಂಭೀರ ಬರ ಎದುರಾಗುವ ಸನ್ನಿವೇಶ ಇದೆ. ಇದರಿಂದಾಗಿ, ರಾಜ್ಯ ಸರ್ಕಾರದ ಮೇಲೆ ಒತ್ತಡ ಹೆಚ್ಚಾಗಿದೆ' ಎಂದೂ ಅವರು ಉಲ್ಲೇಖಿಸಿದ್ದಾರೆ.

'ಕಾವೇರಿ ಕಣಿವೆಯ ನಾಲ್ಕು ಜಲಾಶಯಗಳಲ್ಲಿ 56 ಟಿಎಂಸಿ ಅಡಿ ನೀರು ಇದೆ. ಮುಂದಿನ ದಿನಗಳಲ್ಲಿ 40 ಟಿಎಂಸಿ ನೀರು ಜಲಾಶಯಗಳಿಗೆ ಹರಿದು ಬರಬಹುದು ಎಂದು ಅಂದಾಜಿಸಲಾಗಿದೆ. ಕುಡಿಯುವ ನೀರು, ಬೆಳೆಗಳಿಗೆ ನೀರು ಹರಿಸಲು ರಾಜ್ಯಕ್ಕೆ 140 ಟಿಎಂಸಿ ಅಡಿಯಷ್ಟು ನೀರು ಬೇಕಾಗಿದೆ. ಈ ಸಂಬಂಧ ಪ್ರಾಧಿಕಾರಕ್ಕೆ ಆಗಸ್ಟ್‌ನಲ್ಲೇ ಪ್ರಮಾಣಪತ್ರ ಸಲ್ಲಿಸಲಾಗಿದೆ' ಎಂದೂ ಅವರು ಹೇಳಿದ್ದಾರೆ.

90 ಡಾಲರ್ ಸನಿಹಕ್ಕೆ ಕಚ್ಚಾ ತೈಲ

ನವದೆಹಲಿ (ಪಿಟಿಐ): ಕಚ್ಚಾ ತೈಲ ಉತ್ಪಾದನೆ ಹಾಗೂ ರಫ್ತು ಕಡಿತವನ್ನು ಈ ವರ್ಷದ ಅಂತ್ಯದವರೆಗೆ ಮುಂದುವರಿಸಲು ರಷ್ಯಾ ಮತ್ತು ಸೌದಿ ಅರೇಬಿಯಾ ತೀರ್ಮಾನಿಸಿರುವ ಪರಿಣಾಮವಾಗಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯು ಬ್ಯಾರೆಲ್‌ಗೆ 90 ಡಾಲರ್ ಸನಿಹಕ್ಕೆ ಬಂದಿದೆ.

ಇದು 10 ತಿಂಗಳ ಗರಿಷ್ಠ ಮಟ್ಟ. ಈ ಬೆಲೆ ಏರಿಕೆಯ ಕಾರಣದಿಂದಾಗಿ ಭಾರತವು ಕಚ್ಚಾ ತೈಲ ಆಮದಿಗೆ ಹೆಚ್ಚು ಹಣ ವ್ಯಯಿಸಬೇಕಾಗಿದೆ. 11

ಚಿನಕುರಳಿ

ಪ್ರಕಾಶ್ ಶೆಟ್ಟಿ



ಪಿಡಿಒ ಪಟ್ಟಿ ಸೋರಿಕೆ: ಇಬ್ಬರ ಬಂಧನ

ಆಯುಕ್ತರ ಆಪ್ತ ಸಹಾಯಕನ ಕಂಪ್ಯೂಟರ್‌ನಿಂದಲೇ ಕಡತ ಡೌನ್‌ಲೋಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿಯವರ ಅನುಮೋದನೆಗಾಗಿ ಸಲ್ಲಿಸಿದ್ದ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ (ಪಿಡಿಒ) ವರ್ಗಾವಣೆ ಪಟ್ಟಿ ಸೋರಿಕೆ ಯಾಗಿರುವ ಪ್ರಕರಣದಲ್ಲಿ ಶಾಮೀಲಾದ ಇಬ್ಬರನ್ನು ಬೆಂಗಳೂರು ಕೇಂದ್ರ ವಿಭಾಗದ ಸೈಬರ್ ಅಪರಾಧ ಠಾಣೆ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಪಂಚಾಯತ್ ರಾಜ್ ಆಯುಕ್ತರ ಕಚೇರಿಯಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಡಿ ದರ್ಜೆ ನೌಕರನಾಗಿರುವ ಶ್ರೀಧರ್ ಮತ್ತು ಅವರ ತಂದೆ ನಾರಾಯಣ್ ಬಂಧಿತರು. ನಾರಾಯಣ್ ವಿಧಾನಸೌಧದಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಚಾಲಕನಾಗಿ ಕೆಲಸ ಮಾಡುತ್ತಿದ್ದಾರೆ. ಪಂಚಾಯತ್ ರಾಜ್ ಇಲಾಖೆ ಆಯುಕ್ತೆ ಪ್ರಿಯಾಂಕಾ ಮೇರಿ ಫ್ರಾನ್ಸಿಸ್ ಅವರ ಆಪ್ತ ಸಹಾಯಕ ಜೀವನ್ ಅವರಿಗೂ ನೋಟಿಸ್ ಜಾರಿ ಮಾಡಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮುಂದುವರಿದ ತನಿಖೆ

ಆರೋಪಿಗಳನ್ನು ಪಂಚಾಯತ್ ರಾಜ್ ಆಯುಕ್ತರ ಕಚೇರಿಗೆ ಬುಧವಾರ ಕರೆತಂದು ಸ್ಥಳ ಮಹಜರು ನಡೆಸಲಾಗಿದೆ. ಆಯುಕ್ತರ ಆಪ್ತ ಸಹಾಯಕ ಜೀವನ್ ವಿಚಾರಣೆ ಮುಂದುವರಿದಿದೆ. ಪಿಡಿಒಗಳ ವರ್ಗಾವಣೆ ಪಟ್ಟಿಯ ಸೋರಿಕೆಯಲ್ಲಿ ಪಂಚಾಯತ್ ರಾಜ್ ಆಯುಕ್ತಾಲಯದ ಹಿರಿಯ ಅಧಿಕಾರಿಗಳ ಪಾತ್ರದ ಬಗ್ಗೆ ಪರಿಶೀಲನೆ ನಡೆಸುತ್ತಿದ್ದು, ತನಿಖೆ ಮುಂದುವರಿದಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸಾರ್ವತ್ರಿಕ ವರ್ಗಾವಣೆ ಅವಧಿ ಮುಗಿದ ಬಳಿಕ ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಅನುಮೋದನೆ ಕೋರಿ ಸಲ್ಲಿಸಿದ್ದ ಪಿಡಿಒಗಳ ವರ್ಗಾವಣೆಯ ಕರಡು ಪಟ್ಟಿಗಳು ಆಗಸ್ಟ್ 21 ಮತ್ತು 24ರಂದು ಸೋರಿಕೆಯಾಗಿದ್ದವು. ಈ ಸಂಬಂಧ ಪಂಚಾಯತ್ ರಾಜ್ ಆಯುಕ್ತಾಲಯದ ಆಡಳಿತ ವಿಭಾಗದ ಉಪ ನಿರ್ದೇಶಕಿ ಭಾಗ್ಯಶ್ರೀ ಎಚ್.ಎಸ್. ಸಲ್ಲಿಸಿದ್ದ ದೂರನ್ನು ಆಧರಿಸಿ ಸೈಬರ್ ಅಪರಾಧ ವಿಭಾಗದ ಪೊಲೀಸರು ಆ.24ರಂದು ಎಫ್‌ಐಆರ್ ದಾಖಲಿಸಿದ್ದರು.

'ಪಂಚಾಯತ್ ರಾಜ್ ಆಯುಕ್ತರ ಕಚೇರಿಯ ದ್ವಿತೀಯ ದರ್ಜೆ ಸಹಾಯಕ ಜೀವನ್ ಎಂಬುವವರ ಕಂಪ್ಯೂಟರ್‌ನಲ್ಲಿ ಪಿಡಿಒಗಳ ವರ್ಗಾವಣೆ ಪಟ್ಟಿಗಳನ್ನು ಇ–ಆಫೀಸ್ ತಂತ್ರಾಂಶದಿಂದ ಡೌನ್‌ಲೋಡ್ ಮಾಡಲಾಗಿತ್ತು. ಈ ಪಟ್ಟಿಗಳನ್ನು ಶ್ರೀಧರ್ ಮೊಬೈಲ್‌ಗೆ ವರ್ಗಾವಣೆ ಮಾಡಲಾಗಿತ್ತು. ಬಳಿಕ ಅವರು ಅದನ್ನು ವಾಟ್ಸ್ ಆ್ಯಪ್ ಮೂಲಕ ತಂದೆಯ ಮೊಬೈಲ್‌ಗೆ ಕಳುಹಿಸಿದ್ದರು. ಅವರಿಂದ ಇತರರಿಗೆ ರವಾನಿಸಿರುವುದು ಕಂಡುಬಂದಿದೆ' ಎಂದು ಪೊಲೀಸ್ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

'2013ರ ಬ್ಯಾಚ್‌ನ ಪಿಡಿಒ ಸ್ಟೇಟ್ ಯೂನಿಯನ್' ಎಂಬ ವಾಟ್ಸ್ ಆ್ಯಪ್ ಗುಂಪಿನಲ್ಲಿ ವರ್ಗಾವಣೆ ಪಟ್ಟಿಗಳನ್ನು ಹಂಚಿಕೊಂಡಿದ್ದ ನಿವಿತ್ ನಿಹಾಲ್ ಮತ್ತು ಮಂಕಾನಿ ಎಸ್.ಎ. ಎಂಬ ಪಿಡಿಒಗಳನ್ನು ಪ್ರಮುಖ ಆರೋಪಿಗಳು ಎಂದು ಎಫ್‌ಐಆರ್‌ನಲ್ಲಿ ಹೆಸರಿಸಲಾಗಿತ್ತು. ಈ ಇಬ್ಬರು ಸೇರಿದಂತೆ ಹಲವು ಮಂದಿ ಪಿಡಿಒಗಳ ವಿಚಾರಣೆ ನಡೆಸಲಾಗಿದೆ. ವರ್ಗಾವಣೆ ಪಟ್ಟಿಯ ಸೋರಿಕೆಯಲ್ಲಿ ಪಿಡಿಒಗಳ ಪಾತ್ರ ಇರಲಿಲ್ಲ ಎಂಬುದು ತನಿಖೆ ವೇಳೆ ಗೊತ್ತಾಗಿದೆ.

'ಹ್ಯಾಕಿಂಗ್ ನಡೆದಿಲ್ಲ': 'ಪಂಚಾಯತ್ ರಾಜ್ ಆಯುಕ್ತಾಲಯದ ಕಂಪ್ಯೂಟರ್‌ಗಳನ್ನು ಹ್ಯಾಕ್ ಮಾಡಿ ಪಿಡಿಒಗಳ ವರ್ಗಾವಣೆ ಪಟ್ಟಿ ಸೋರಿಕೆ ಮಾಡಲಾಗಿದೆ ಎಂದು ಭಾಗ್ಯಶ್ರೀ ದೂರಿನಲ್ಲಿ ಉಲ್ಲೇಖಿಸಿದ್ದರು. ಆದರೆ, ಆಯುಕ್ತಾಲಯದ ಕಂಪ್ಯೂಟರ್ ಹ್ಯಾಕಿಂಗ್ ಆಗಿರುವುದು ಕಂಡುಬಂದಿಲ್ಲ. ನೇರವಾಗಿ ಇ–ಆಫೀಸ್ ತಂತ್ರಾಂಶದಿಂದಲೇ ಡೌನ್‌ಲೋಡ್ ಮಾಡಿದ ಕಡತಗಳನ್ನು ಸೋರಿಕೆ ಮಾಡಿರುವುದು ಪತ್ತೆಯಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಸಿದ್ದಲಿಂಗೇಶ್ವರ ಇಂಗಳಗಿ ನಿರಂತರ ಪ್ರಯತ್ನ, ಬೇಡಿಕೆಗೆ ಸ್ಪಂದಿಸಿದ ಗೂಗಲ್

ಎಲ್‌ಎವಿ ಆ್ಯಪ್‌ಗೆ ಕನ್ನಡ ಸೇರ್ಪಡೆ

• ಇಮಾಮ್‌ಹುಸೇನ್ ಗೂಡುನವರ

ಬೆಳಗಾವಿ: ದೃಷ್ಟಿದೋಷವುಳ್ಳವರಿಗೆ ಸುತ್ತಮುತ್ತಲಿನ ವಸ್ತುಗಳನ್ನು ಅರಿಯಲು ತೊಂದರೆ ಆಗದಿರಲಿ ಎಂದು ಗೂಗಲ್ ಸಂಸ್ಥೆ ರೂಪಿಸಿದ 'ಲುಕ್‌ಔಟ್ ಅಸಿಸ್ಟೆಡ್ ವಿಷನ್' (ಎಲ್‌ಎವಿ) ತಂತ್ರಾಂಶಕ್ಕೆ ಈಗ ಕನ್ನಡ ಭಾಷೆ ಸೇರ್ಪಡೆಯಾಗಿದೆ.

ಬೈಲಹೊಂಗಲ ತಾಲ್ಲೂಕು ಪಂಚಾಯಿತಿಯಲ್ಲಿ ದ್ವಿತೀಯ ದರ್ಜೆ ಲೆಕ್ಕ ಸಹಾಯಕ, ದೃಷ್ಟಿದೋಷ ಹೊಂದಿರುವ ಸಿದ್ದಲಿಂಗೇಶ್ವರ ಇಂಗಳಗಿ, ಈ ತಂತ್ರಾಂಶದಲ್ಲಿ ಕನ್ನಡ ಭಾಷೆ ಸೇರ್ಪಡೆಗೆ ಧ್ವನಿ ಎತ್ತಿದ್ದರು. ಗೂಗಲ್ ಸಂಸ್ಥೆಯ ಡಿಸೆಬಿಲಿಟಿ ಹೆಲ್ಪ್‌ಡೆಸ್ಕ್‌ಗೆ 2021ರಲ್ಲಿ ಇ–ಮೇಲ್, ಟ್ವಿಟರ್ ಮೂಲಕ ಒತ್ತಾಯಿಸಿದ್ದರು. ಸತತ ಎರಡು ವರ್ಷಗಳಿಂದ ಪ್ರಯತ್ನಿಸಿದ್ದರು. ಅದರ ಫಲವಾಗಿ ಈ ವರ್ಷದ ಆಗಸ್ಟ್ 17ರಂದು ಈ ತಂತ್ರಾಂಶಕ್ಕೆ ಕನ್ನಡ ಸೇರ್ಪಡೆಯಾಗಿದೆ.

'ದೃಷ್ಟಿದೋಷ ಹೊಂದಿದವರಿಗೆ ತಂತ್ರಜ್ಞಾನದ ಮೂಲಕ ಅನುಕೂಲ ಕಲ್ಪಿಸಲು ಸಿದ್ದಲಿಂಗೇಶ್ವರ ನಿರಂತರವಾಗಿ ಶ್ರಮಿಸುತ್ತಿದ್ದಾರೆ. ಅವರ ಪ್ರಯತ್ನದಿಂದ ಲುಕ್‌ಔಟ್ ಅಸಿಸ್ಟೆಡ್ ವಿಷನ್ ತಂತ್ರಾಂಶದಲ್ಲಿ ಕನ್ನಡ ಸೇರ್ಪಡೆಯಾಗಿದೆ' ಎಂದು ಬೆಳಗಾವಿಯ ಸಮರ್ಥನಂ ಅಂಗವಿಕಲರ ಸಂಸ್ಥೆ ಮುಖ್ಯಸ್ಥ ಎಂ.ಜಿ.ಅರುಣಕುಮಾರ ಹರ್ಷ ವ್ಯಕ್ತಪಡಿಸಿದರು.



ಗೂಗಲ್‌ನ ಲುಕ್‌ಔಟ್ ಅಸಿಸ್ಟೆಡ್ ವಿಷನ್ ಆ್ಯಪ್

ಕಾರ್ಯನಿರ್ವಹಣೆ ಹೇಗೆ?: 'ಸ್ಮಾರ್ಟ್‌ಫೋನ್‌ನಲ್ಲಿನ ಪ್ಲೇ ಸ್ಟೋರ್ ಆ್ಯಪ್‌ಗೆ ಹೋಗಿ, ಲುಕ್‌ಔಟ್ ಅಸಿಸ್ಟೆಡ್ ವಿಷನ್ (lookout assisted vision) ತಂತ್ರಾಂಶ ಡೌನ್‌ಲೋಡ್ ಮಾಡಿಕೊಳ್ಳಬೇಕು. ಇದರಲ್ಲಿ ಟೆಕ್ಸ್ಟ್, ಡಾಕ್ಯುಮೆಂಟ್ಸ್, ಎಕ್ಸ್‌ಪ್ಲೋರ್ (ಬೇಟಾ), ಕರೆನ್ಸಿ, ಫುಡ್ ಲೇಬಲ್ಸ್, ಇಮೇಜಸ್ (ಬೇಟಾ) ಎಂಬ 6 ವಿಧಾನಗಳಿವೆ. ಕನ್ನಡ ಭಾಷೆ ಆಯ್ಕೆ ಮಾಡಿಕೊಂಡು, ಫೋನ್‌ನ ಹಿಂಭಾಗದ ಕ್ಯಾಮೆರಾ ಬಳಸಿ ವಿವಿಧ ಸಂಗತಿ ತಿಳಿಯಬಹುದು' ಎಂದು ಸಿದ್ದಲಿಂಗೇಶ್ವರ ಇಂಗಳಗಿ ತಿಳಿಸಿದರು.



ಎರಡು ವರ್ಷಗಳ ಪ್ರಯತ್ನಕ್ಕೆ ಫಲ ಸಿಕ್ಕಿದೆ. ದೃಷ್ಟಿದೋಷವುಳ್ಳವರಿಗೆ ಗೂಗಲ್ ಸಂಸ್ಥೆಯವರು ಇನ್ನಷ್ಟು ಹೊಸ ತಂತ್ರಾಂಶಗಳನ್ನು ಅಭಿವೃದ್ಧಿಪಡಿಸಿ ಬಿಡುಗಡೆಗೊಳಿಸಬೇಕು
ಸಿದ್ದಲಿಂಗೇಶ್ವರ ಇಂಗಳಗಿ, ಬೈಲಹೊಂಗಲ

'ಟೆಕ್ಸ್ಟ್ ವಿಧಾನವು ಕನ್ನಡ ಭಾಷೆಯಲ್ಲಿರುವ ಪಠ್ಯ ಗುರುತಿಸಿ, ಗಟ್ಟಿಯಾಗಿ ಓದಿ ಹೇಳುತ್ತದೆ. ಇದರಿಂದ ವಿವಿಧ ಪುಸ್ತಕ, ದಾಖಲೆಗಳು ಮತ್ತು ದಿನಪತ್ರಿಕೆಗಳಲ್ಲಿನ ಮಾಹಿತಿ ತಿಳಿಯಬಹುದು. ಡಾಕ್ಯುಮೆಂಟ್ಸ್ ವಿಧಾನದಲ್ಲಿ ಪುಸ್ತಕ ಅಥವಾ ಕಡತವೊಂದರ ಇಡೀ ಪುಟದಲ್ಲಿರುವ ವಿಷಯವಸ್ತು ಸ್ಕ್ಯಾನ್ ಆಗಿ, ಟೆಕ್ಸ್ಟ್ ಮಾದರಿಯಲ್ಲಿ ಪರಿವರ್ತನೆಯಾಗುತ್ತದೆ. ನಂತರ ಯಥಾವತ್ತಾಗಿ ಓದಿ ಹೇಳುತ್ತದೆ' ಎಂದು ಅವರು ಹೇಳಿದರು.

ಎಕ್ಸ್‌ಪ್ಲೋರ್(ಬೇಟಾ) ವಿಧಾನ ನಾವು ಕುಳಿತಿರುವ ಸ್ಥಳದ ಅಕ್ಕಪಕ್ಕದಲ್ಲಿರುವ ವಸ್ತುಗಳನ್ನು (ಕಿಟಕಿ, ಬಾಗಿಲು, ಕಂಪ್ಯೂಟರ್, ಕುರ್ಚಿ ಇತ್ಯಾದಿ) ಗುರುತಿಸಿ ತಿಳಿಸುತ್ತದೆ. ಕರೆನ್ಸಿ ವಿಧಾನದಿಂದ ಭಾರತದಲ್ಲಿ ಚಲಾವಣೆಯಲ್ಲಿರುವ ನೋಟುಗಳ ಮೌಲ್ಯ ತಿಳಿಯಬಹುದು. ತಂತ್ರಾಂಶ ಜಾಗತಿಕವಾಗಿ 20ಕ್ಕೂ ಹೆಚ್ಚು ಭಾಷೆಗಳಲ್ಲಿ ಲಭ್ಯವಿದೆ' ಎಂದರು.

ಟಿಟಿಎಸ್ ಆ್ಯಪ್‌ಗೆ ಕನ್ನಡ ಸೇರ್ಪಡೆ ಮಾಡುವಲ್ಲಿ ಯಶಸ್ವಿ: ಸಿದ್ದಲಿಂಗೇಶ್ವರ ಇಂಗಳಗಿ ಅವರು ಈ ಹಿಂದೆ ಗೂಗಲ್ ಟಿಟಿಎಸ್ (Google text to speech) ಎಂಬ ಆ್ಯಂಡ್ರಾಯ್ಡ್ ಕಿರು ತಂತ್ರಾಂಶಕ್ಕೆ ಕನ್ನಡ ಭಾಷೆ ಧ್ವನಿ ಸೇರ್ಪಡೆಗೊಳಿಸುವಂತೆ ಅಭಿಯಾನ ನಡೆಸಿ ಯಶಸ್ವಿಯಾಗಿದ್ದಾರೆ.

ಸಿದ್ದಲಿಂಗೇಶ್ವರ ಇಂಗಳಗಿ ಅವರ ದೂರವಾಣಿ ಸಂಖ್ಯೆ: 8792639989.

ಕ್ಷೀರಭಾಗ್ಯ ಯೋಜನೆ ದಶಮಾನೋತ್ಸವ: ಭದ್ರಾ ಯೋಜನೆ ಕುರಿತು ಸಿ.ಎಂ. ಪ್ರಸ್ತಾಪ

‘ಒಂದೂ ಪೈಸೆ ನೀಡದ ಕೇಂದ್ರ’

ಪ್ರಜಾವಾಣಿ ವಾರ್ತೆ

ತುಮಕೂರು: ಭದ್ರಾ ಮೇಲ್ದಂಡೆ ಯೋಜನೆಗೆ ಕೇಂದ್ರ ಸರ್ಕಾರ ಬಜೆಟ್‌ನಲ್ಲಿ ಘೋಷಿಸಿರುವ ₹5,300 ಕೋಟಿ ಹಣದಲ್ಲಿ ಈವರೆಗೂ ಒಂದು ಪೈಸೆ ನೀಡಿಲ್ಲ. ತಕ್ಷಣ ಹಣ ಬಿಡುಗಡೆ ಮಾಡಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆಗ್ರಹಿಸಿದರು.

ಮಧುಗಿರಿಯಲ್ಲಿ ಬುಧವಾರ ಕ್ಷೀರ ಭಾಗ್ಯ ಯೋಜನೆ ದಶಮಾನೋತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಭದ್ರಾ ಮೇಲ್ದಂಡೆ ಯೋಜನೆಯನ್ನು ‘ರಾಷ್ಟ್ರೀಯ ಯೋಜನೆ’ ಎಂದು ಕೇಂದ್ರ ಸರ್ಕಾರ ಪ್ರಕಟಿಸಬೇಕು ಎಂದು ಆಗ್ರಹಿಸಿದರು.

‘ಎತ್ತಿನಹೊಳೆ ನೀರಾವರಿ ಯೋಜನೆಗೆ ಹಿಂದಿನ ಬಿಜೆಪಿ ಸರ್ಕಾರ ಹಣ ಕೊಡದೆ ಕಾಮಗಾರಿ ನಿಧಾನವಾಗಿತ್ತು. ಇದರಿಂದ ಯೋಜನೆ ಮೊತ್ತ ₹23 ಸಾವಿರ ಕೋಟಿಗೆ ಏರಿಕೆಯಾಗಿದೆ. ಈಗ ಹಣ ನೀಡುತ್ತಿದ್ದು, ನನ್ನ ಅವಧಿಯಲ್ಲೇ ಪೂರ್ಣಗೊಳಿಸಲಾಗುವುದು’ ಎಂದರು.



ಮಧುಗಿರಿಯಲ್ಲಿ ಬುಧವಾರ ಕ್ಷೀರ ಭಾಗ್ಯ ಯೋಜನೆ ದಶಮಾನೋತ್ಸವ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಕ್ಕಳಿಗೆ ಸಾಂಕೇತಿಕವಾಗಿ ಹಾಲು ನೀಡಿದರು. ಕೆಎಂಎಫ್ ಅಧ್ಯಕ್ಷ ಎಲ್.ಬಿ.ಪಿ.ಭೀಮನಾಯ್ಕ ಇದ್ದರು

ಕ್ಷೀರ ಭಾಗ್ಯ ಯೋಜನೆ ಯಶಸ್ವಿಯಾಗಿ ಮುಂದುವರಿದಿದೆ. ಇದಕ್ಕಾಗಿ ಈ ವರ್ಷ ₹1ಸಾವಿರ ಕೋಟಿ ಖರ್ಚು ಮಾಡಲಾಗುತ್ತಿದೆ ಎಂದರು.

10 ಕೆ.ಜಿ ಅಕ್ಕಿ: ರಾಜ್ಯದಲ್ಲಿ ಸರಿಯಾಗಿ ಮಳೆಯಾಗದೆ ಬರ ಆವರಿಸಿದೆ. ಮುಂದಿನ ದಿನಗಳಲ್ಲಿ, 5 ಕೆ.ಜಿ ಅಕ್ಕಿಗೆ ನೀಡುತ್ತಿರುವ ಹಣದ ಬದಲು 10ಕೆ.ಜಿ ಅಕ್ಕಿಯನ್ನೇ ನೀಡಲಾಗುವುದು ಎಂದರು.

ಮಧುಗಿರಿಯನ್ನು ಜಿಲ್ಲಾ ಕೇಂದ್ರವನ್ನಾಗಿ ಮಾಡುವ ಬಗ್ಗೆ ಪರಿಶೀಲನೆ ನಡೆಸಲಾಗುವುದು ಎಂದು ಮುಖ್ಯಮಂತ್ರಿ ಭರವಸೆ ನೀಡಿದರು. ಸಚಿವರಾದ ಜಿ.ಪರಮೇಶ್ವರ, ಕೆ.ಎನ್. ರಾಜಣ್ಣ ಬೇಡಿಕೆಗೆ ಸ್ಪಂದಿಸಿದ ಅವರು, ‘ತಕ್ಷಣಕ್ಕೆ ಜಿಲ್ಲೆ ಘೋಷಣೆ ಕಷ್ಟಕರ. ಮುಂದಿನ ದಿನಗಳಲ್ಲಿ ಪರಿಗಣಿಸಲಾಗುವುದು’ ಎಂದು ಅವರು ಹೇಳಿದರು.

‘1,700 ಗ್ರಾಮ ಲೆಕ್ಕಾಧಿಕಾರಿಗಳ ನೇಮಕ’

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ರಾಜ್ಯದಲ್ಲಿ 1,700 ಗ್ರಾಮ ಲೆಕ್ಕಾಧಿಕಾರಿ ಹುದ್ದೆಗಳನ್ನು ನೇಮಕ ಮಾಡಿಕೊಳ್ಳಲು ಸಿದ್ಧತೆ ನಡೆಸಲಾಗಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದರು.



ಕೃಷ್ಣ ಬೈರೇಗೌಡ

ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಆಯಾ ಜಿಲ್ಲಾಧಿಕಾರಿ ಮೂಲಕವೇ ನೇಮಕಾತಿ ನಡೆದರೂ ಪಾರದರ್ಶಕತೆ ತರಲು ಈ ಪ್ರಕ್ರಿಯೆಗೆ ಕಂದಾಯ ಇಲಾಖೆ ಆಯುಕ್ತರ ನೇತೃತ್ವದಲ್ಲಿ ಏಕರೂಪದ ವ್ಯವಸ್ಥೆ ರೂಪಿಸಲಾಗುತ್ತಿದೆ. ನೇಮಕಾತಿ ಪ್ರಕ್ರಿಯೆ ಮುಂದಿನ ಆರು ತಿಂಗಳಲ್ಲಿ ಪೂರ್ಣಗೊಳ್ಳಲಿದೆ’ ಎಂದರು.

‘ಇ–ಆಡಳಿತ ಜಾರಿ’

ಕಂದಾಯ ಇಲಾಖೆಯಲ್ಲಿ ಮುಂದಿನ 15 ದಿನಗಳ ಒಳಗಾಗಿ ಇ-ಆಡಳಿತ ಜಾರಿಗೊಳಿಸಲಾಗುತ್ತಿದೆ. ಎಲ್ಲ ಕಡತಗಳು ಡಿಜಿಟಲೈಸ್ ಆಗಲಿವೆ. ತಾಲ್ಲೂಕು ಕಚೇರಿ ಹಾಗೂ ಮೇಲಿನ ಎಲ್ಲ ಕಚೇರಿಗಳ ಕಡತಗಳು ಇ-ಆಫೀಸ್ ಮೂಲಕವೇ ವಿಲೇವಾರಿ ಆಗಲಿವೆ. ಇದರಿಂದ ಜನರು ಕಚೇರಿಗೆ ಅಲೆಯುವುದು ತಪ್ಪಲಿದೆ ಎಂದು ಕೃಷ್ಣ ಬೈರೇಗೌಡ ಅವರು ಹೇಳಿದರು.

ಸರ್ವೆ ಇಲಾಖೆಯಲ್ಲೂ ಸಿಬ್ಬಂದಿ ಕೊರತೆ ಇದೆ. ಅಲ್ಲಿಯೂ ನೇಮಕಾತಿ ಅಗತ್ಯವಿದೆ. ಪರವಾನಗಿ ಪಡೆದ 2,000 ಸರ್ವೆಯರ್‌ಗಳಿಗೆ ಪರೀಕ್ಷೆ ಪೂರ್ಣಗೊಳಿಸಲಾಗಿದೆ. ಅವರಿಗೂ ತರಬೇತಿ ನೀಡಿ ಡಿಸೆಂಬರ್‌ನಿಂದ ಅವರ ಸೇವೆ ಪಡೆದುಕೊಳ್ಳಲಾಗುವುದು. 354 ಸರ್ವೆ ಅಧಿಕಾರಿಗಳ ನೇಮಕಾತಿ ಪ್ರಕ್ರಿಯೆಗೂ ಚಾಲನೆ ನೀಡಲಾಗಿದೆ ಎಂದರು.

ಜಮೀನುಗಳನ್ನು ಡ್ರೋನ್ ಮೂಲಕ ಸರ್ವೆ ಮಾಡುವ ವ್ಯವಸ್ಥೆಯಲ್ಲಿ ಸಮಸ್ಯೆಗಳು ಕಂಡುಬಂದಿವೆ. ಹಿಂದೆ ಸರ್ವೆ ಮಾಡುತ್ತಿದ್ದಾಗ ಕಾಣಸಿಗುತ್ತಿದ್ದ ಲೋಪಗಳೇ ಮತ್ತೆ ಕಂಡುಬರುತ್ತಿವೆ. ದಾಖಲೆಯಲ್ಲಿರುವುದು, ಸರ್ವೆಯಲ್ಲಿ ಕಾಣುತ್ತಿರುವುದು ತಾಳೆಯಾಗುತ್ತಿಲ್ಲ. ಈ ತೊಂದರೆಗೆ ಪರಿಹಾರ ಕಂಡುಕೊಳ್ಳಲು ಸರ್ವೆ ಆಯುಕ್ತರಿಗೆ ಸೂಚಿಸಲಾಗಿದೆ ಎಂದು ಹೇಳಿದರು.

ಶಾಸಕರ ಮೇಲೆ ಸಚಿವ ಜಮೀರ್ ಅಸಮಾಧಾನ

ಮಂಗಳೂರು: ವಿವಿಧ ವಸತಿ ಯೋಜನೆಗಳಲ್ಲಿ ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ಫಲಾನುಭವಿಗಳಿಗೆ ಮನೆಗಳನ್ನು ಹಂಚುವ ಕಾರ್ಯ ಸಮರ್ಪಕವಾಗಿ ನಡೆಯುತ್ತಿಲ್ಲ. ಶಾಸಕರು ಜನರಲ್ಲಿ ಅರಿವು ಮೂಡಿಸದೇ ಇರುವುದು ಕೂಡ ಇದಕ್ಕೆ ಕಾರಣ ಎಂದು ವಸತಿ ಸಚಿವ ಜಮೀರ್ ಅಹಮ್ಮದ್ ಖಾನ್ ಅಸಮಾಧಾನ ವ್ಯಕ್ತಪಡಿಸಿದರು.

ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಬುಧವಾರ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ‘ಮಂಡಳಿ ವತಿಯಿಂದ 2013ರಿಂದ 2023ರ ವರೆಗೆ 1,67,600 ಮನೆಗಳು ಮಂಜೂರಾಗಿವೆ. ಆದರೆ, ಒಂದು ಮನೆಯನ್ನು ಕೂಡ ಹಂಚಲು ಸಾಧ್ಯವಾಗಿಲ್ಲ. ಮನೆಯೊಂದಕ್ಕೆ ₹ 7.50 ಲಕ್ಷ ಖರ್ಚಾಗುತ್ತದೆ. ಕೇಂದ್ರ ಸರ್ಕಾರ ₹ 1.50 ಲಕ್ಷ ಮತ್ತು ರಾಜ್ಯ ಸರ್ಕಾರ ₹ 1.20 ಲಕ್ಷ ಸಬ್ಸಿಡಿ ನೀಡುತ್ತದೆ. ಉಳಿದ ಮೊತ್ತವನ್ನು ಫಲಾನುಭವಿಗಳು ಭರಿಸಬೇಕು’ ಎಂದು ತಿಳಿಸಿದರು.

‘ಶಾಸಕರು ಮನೆಗಳನ್ನು ಮಂಜೂರು ಮಾಡಿದ್ದರ ಬಗ್ಗೆ ಹೇಳಿಕೊಂಡು ಓಡಾಡುತ್ತಾರೆಯೇ ಹೊರತು ಅವುಗಳನ್ನು ಫಲಾನುಭವಿಗೆ ತಲುಪಿಸುವ ನಿಟ್ಟಿನಲ್ಲಿ ಕೆಲಸ ಮಾಡುವುದಿಲ್ಲ. ಹೀಗಾಗಿ ಫಲಾನುಭವಿ ಭರಿಸಬೇಕಾದ ಹಣ ಪಾವತಿಯಾಗುವುದಿಲ್ಲ’ ಎಂದು ಹೇಳಿದರು.

ಕಾವೇರಿ ವನ್ಯಧಾಮದಲ್ಲಿ ಬಿಳಿ ಕಡವೆ ಪತ್ತೆ

ವನ್ಯಜೀವಿ ತಜ್ಞ ಸಂಜಯ್ ಗುಬ್ಬಿ ಮತ್ತು ತಂಡ ಅಳವಡಿಸಿದ್ದ ಕ್ಯಾಮೆರಾ ಟ್ರ್ಯಾಪ್‌ನಲ್ಲಿ ಸೆರೆ

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ಜಿಲ್ಲೆಯ ಕಾವೇರಿ ವನ್ಯಧಾಮದಲ್ಲಿ ಮೊದಲ ಬಾರಿಗೆ ಅಪರೂಪದ ಬಿಳಿ ಕಡವೆ ಕಂಡುಬಂದಿದೆ.

ಚಿರತೆಗಳ ಬಗ್ಗೆ ಅಧ್ಯಯನ ನಡೆಸುತ್ತಿರುವ ವನ್ಯಜೀವಿ ತಜ್ಞ ಸಂಜಯ್ ಗುಬ್ಬಿ ಮತ್ತು ತಂಡ ಅಳವಡಿಸಿದ್ದ ಕ್ಯಾಮೆರಾ ಟ್ರ್ಯಾಪ್‌ನಲ್ಲಿ ಹೆಣ್ಣು ಕಡವೆಯ ಚಿತ್ರ ಸೆರೆಯಾಗಿದೆ.

‘2014ರಲ್ಲಿ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಬಿಳಿ ಕಡವೆ ಇರುವುದು ದಾಖಲಾಗಿತ್ತು’ ಎಂದು ಗುಬ್ಬಿಯವರ ತಂಡ ಮಾಹಿತಿ ನೀಡಿದೆ.

‘ಬಿಳಿ ಮೈಬಣ್ಣದ ಸ್ಥಿತಿಯನ್ನು ಲ್ಯೂಸಿಸ್ಟಿಕ್ ಎಂದು ಗುರುತಿಸಲಾಗಿದೆ. ಪ್ರಾಣಿಗಳ ಚರ್ಮದಲ್ಲಿ ವರ್ಣದ್ರವ್ಯದ ಕೊರತೆ ಉಂಟಾಗಿ, ಚರ್ಮ ಬಿಳಿ ಅಥವಾ ಮಂದ ಬಣ್ಣಕ್ಕೆ ಬದಲಾಗುವ ವಿರಳ ಪ್ರಕ್ರಿಯೆಯನ್ನು ಲ್ಯೂಸಿಸಮ್ ಎಂದು ಕರೆಯಲಾಗುತ್ತದೆ. ಇದು, ಪ್ರಾಣಿಗಳ ಚರ್ಮದಲ್ಲಿ ಮೆಲನಿನ್ ಕೊರತೆಯಿಂದಾಗಿ ಉಂಟಾಗುವ ಅಲ್ಬಿನಿಸಂ ಸ್ಥಿತಿಗಿಂತ ಭಿನ್ನ. ಅಲ್ಬಿನಿಸಂ ಸ್ಥಿತಿಯಲ್ಲಿ ಪ್ರಾಣಿಗಳ ಕಣ್ಣು ಗುಲಾಬಿ ಅಥವಾ ಕೆಂಪು ಬಣ್ಣದಿಂದ ಕೂಡಿರುತ್ತದೆ. ಆದರೆ, ಲ್ಯೂಸಿಸಮ್‌ನಲ್ಲಿ ಪ್ರಾಣಿಗಳ ಕಣ್ಣುಗಳು ಸಹಜ ಬಣ್ಣ ಹೊಂದಿರುತ್ತವೆ’ ಎಂದು ತಂಡ ವಿವರಿಸಿದೆ.

‘ಕಡವೆಗಳ ಸಂಖ್ಯೆ ಕ್ಷೀಣಿಸುತ್ತಿದ್ದು, ಇಂತಹ ವಿಶೇಷ ಲಕ್ಷಣಗಳು ಕಂಡು ಬಂದಾಗ ಹೆಚ್ಚಿನ ಅಧ್ಯಯನ ಅಗತ್ಯ’ ಎಂದು ತಂಡ ಪ್ರತಿಪಾದಿಸಿದೆ.

‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಸಂಜಯ್ ಗುಬ್ಬಿ, ‘ಕಾವೇರಿ ವನ್ಯಜೀವಿಧಾಮ ಇತ್ತೀಚಿನವರೆಗೂ ಬಚ್ಚಿಟ್ಟ ಮುಕುಟವಾಗಿತ್ತು. ಇದೊಂದೇ ವನ್ಯಜೀವಿಧಾಮದಲ್ಲಿ ಹಲವು ವಿಶೇಷಗಳು ಕಂಡುಬಂದಿವೆ. ರಾಜ್ಯದಲ್ಲಿ ಮೊದಲ ಬಾರಿಗೆ ಜೇನ್ ಹೀರ್ಕ ಅಥವಾ ತರಕರಡಿ ದಾಖಲಾದದ್ದು ಇಲ್ಲಿಯೇ. ಭಾರತಕ್ಕೆ ತೋಳಗಳ ದಕ್ಷಿಣ ಗಡಿ ಪತ್ತೆಯಾದದ್ದು ಇಲ್ಲಿಯೇ. ಹಿಂದಿನ ವರ್ಷ ಬಿಳಿ ಬಣ್ಣದ ಕೆನ್ನಾಯಿ ಕಂಡು ಬಂದಿತ್ತು. ಇತ್ತೀಚೆಗೆ ಅರಣ್ಯ ಸಿಬ್ಬಂದಿ ಬಿಳಿ ನವಿಲನ್ನೂ ನೋಡಿದ್ದಾರೆ. ಇಂಥ ವಿಶೇಷ ಕಾಡನ್ನು ಸಂರಕ್ಷಿಸಲು ಎಲ್ಲರೂ ಶ್ರಮ ವಹಿಸಬೇಕು’ ಎಂದರು.



ಕ್ಯಾಮೆರಾ ಟ್ರ್ಯಾಪ್‌ನಲ್ಲಿ ಸೆರೆಯಾದ ಬಿಳಿ ಕಡವೆ

ಆತಂಕ ಮೂಡಿಸಿದ್ದ ಕಾಡಾನೆ ಸೆರೆ

ಸುಂಟಿಕೊಪ್ಪ (ಕೊಡಗು ಜಿಲ್ಲೆ): ಒಂದು ವಾರದಿಂದ ಈ ಭಾಗದಲ್ಲಿ ಆತಂಕ ಮೂಡಿಸಿದ್ದ ಕಾಡಾನೆಯನ್ನು ಅರಣ್ಯ ಇಲಾಖೆ ಸಿಬ್ಬಂದಿ ಬುಧವಾರ ಸೆರೆ ಹಿಡಿದರು.

ಸುಮಾರು 20 ವರ್ಷದ ಗಂಡಾನೆಯ ದಾಳಿಗೆ ಸಿಲುಕಿ ಈಚೆಗೆ ಅರಣ್ಯ ಇಲಾಖೆ ಸಿಬ್ಬಂದಿ ಗಿರೀಶ್ ಮೃತಪಟ್ಟಿದ್ದರು. ಹಲವು ವಾಹನಗಳನ್ನು ಧ್ವಂಸಗೊಳಿಸಿದ್ದ ಆನೆ ತೋಟಗಳ ಬೆಳೆಗಳನ್ನು ನಾಶಪಡಿಸಿತ್ತು. ವಾಹನ ಸವಾರರ ಮೇಲೆ ಎರಗಿ ಗಾಯಗೊಳಿಸುತ್ತಿತ್ತು. ಕೆದಕಲ್ ವ್ಯಾಪ್ತಿಯ ಜನ ಓಡಾಡಲು ಭಯಪಡುತ್ತಿದ್ದರು.

‘ದುಬಾರೆ ಆನೆ ಶಿಬಿರದ ಹರ್ಷ, ಪ್ರಶಾಂತ, ಅಜಯ್, ಲಕ್ಷ್ಮಣ, ವಿಕ್ರಮ ಸಾಕಾನೆಗಳ ನೆರವಿನಿಂದ ಇಲಾಖೆಯ ಸುಮಾರು 100 ಸಿಬ್ಬಂದಿ ಹರಸಾಹಸಪಟ್ಟು ಆನೆಯನ್ನು ಸೆರೆ ಹಿಡಿದರು’ ಎಂದು ಆನೆ ಕಾರ್ಯಪಡೆ ಡಿಸಿಎಫ್ ಪೂವಯ್ಯ ‘ಪ್ರಜಾವಾಣಿ’ಗೆ ತಿಳಿಸಿದರು.



ಕೊಡಗು ಜಿಲ್ಲೆಯ ಸುಂಟಿಕೊಪ್ಪ ಸಮೀಪ ಆತಂಕ ಸೃಷ್ಟಿಸಿದ್ದ ಕಾಡಾನೆಯನ್ನು ಬುಧವಾರ ಅರಣ್ಯ ಇಲಾಖೆ ಸಿಬ್ಬಂದಿ ಸೆರೆ ಹಿಡಿದರು

‘ಕಾರ್ಯಾಚರಣೆ ವೇಳೆ ನಿರ್ಲಕ್ಷ್ಯವಾಗಿದ್ದರೆ ಕ್ರಮ’

ಹಾಸನ: ‘ಆನೆ ಸೆರೆ ಕಾರ್ಯಾಚರಣೆ ವೇಳೆ ಶಾರ್ಪ್‌ಶೂಟರ್ ವೆಂಕಟೇಶ್ ಅವರ ಸಾವಿನ ಪ್ರಕರಣಕ್ಕೆ ಸಂಬಂಧಿಸಿ ಅರಣ್ಯ ಇಲಾಖೆ ತನಿಖೆ ನಡೆಸುತ್ತಿದ್ದು, ನಿರ್ಲಕ್ಷ್ಯ ಸಾಬೀತಾದರೆ ಅಧಿಕಾರಿಗಳ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸಲಾಗುವುದು’ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದರು.

ವೆಂಕಟೇಶ್ ಅವರ ಆಲೂರು ತಾಲ್ಲೂಕಿನ ಹೊನ್ನವಳ್ಳಿಯ ಮನೆಗೆ ಭೇಟಿ ನೀಡಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ವೆಂಕಟೇಶ್ ಕುಟುಂಬಕ್ಕೆ ₹ 15 ಲಕ್ಷ ಪರಿಹಾರ ನೀಡಲಾಗಿದೆ. ವಿಶೇಷ ಪ್ರಕರಣವೆಂದು ಪರಿಗಣಿಸಿ ಹೆಚ್ಚುವರಿಯಾಗಿ ₹10 ಲಕ್ಷ ಪರಿಹಾರ ನೀಡಲಾಗುವುದು. ಕುಟುಂಬದ ಒಬ್ಬರಿಗೆ ಉದ್ಯೋಗ ನೀಡಲಾಗುವುದು’ ಎಂದರು.

‘ಇಂದಿರಾ ಕ್ಯಾಂಟೀನ್‌ಗೆ ಜಿಲ್ಲಾವಾರು ಮೆನು’

ಪ್ರಜಾವಾಣಿ ವಾರ್ತೆ

ಮಂಗಳೂರು: ‘ಇಂದಿರಾ ಕ್ಯಾಂಟೀನ್‌ಗಳಲ್ಲಿ ಸ್ಥಳೀಯರ ಬೇಡಿಕೆಯಂತೆ ಆಹಾರ ಒದಗಿಸುವ ಉದ್ದೇಶದಿಂದ ಜಿಲ್ಲಾವಾರು ಮೆನು (ಆಹಾರ ಪಟ್ಟಿ) ಸಿದ್ಧಪಡಿಸಲಿದ್ದೇವೆ’ ಎಂದು ಪೌರಾಡಳಿತ ಸಚಿವ ರಹೀಂ ಖಾನ್ ತಿಳಿಸಿದರು.

‘ಉಳ್ಳಾಲದ ಇಂದಿರಾ ಕ್ಯಾಂಟೀನ್‌ಗೆ ದಿಢೀರ್ ಭೇಟಿ ನೀಡಿ ಪರಿಶೀಲಿಸಿದ್ದೇನೆ. ಇಲ್ಲಿ ನೀಡುವ ಆಹಾರ ನಮಗೆ ಒಗ್ಗುವುದಿಲ್ಲ ಎಂದು ಸ್ಥಳೀಯರು ದೂರಿದ್ದಾರೆ. ಬೇರೆ ಕಡೆಯೂ ಇಂತಹದ್ದೇ ದೂರುಗಳು ಬಂದಿವೆ. ಹಾಗಾಗಿ ಈ ನಿರ್ಧಾರ ಕೈಗೊಳ್ಳಲಿದ್ದೇವೆ’ ಎಂದರು.

‘ರಾಜ್ಯದಲ್ಲಿ ಒಟ್ಟು 188 ಹೊಸ ಇಂದಿರಾ ಕ್ಯಾಂಟೀನ್ ಅನ್ನು ಆರಂಭಿಸಲಿದ್ದೇವೆ. ಇದು ನಮ್ಮ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆ. ಇದರ ಪ್ರಯೋಜನ ಬಡವರಿಗೆ ಸಿಗಬೇಕು. ಕೆಲವೆಡೆ ಇಂದಿರಾ ಕ್ಯಾಂಟೀನ್ ಇರುವ ಜಾಗ ಸೂಕ್ತವಾಗಿಲ್ಲ. ಹೊಸ ಕ್ಯಾಂಟೀನ್‌ಗಳನ್ನು ಹೆಚ್ಚು ಜನರಿಗೆ ಅನುಕೂಲವಾಗುವಂತಹ ಬಸ್‌ನಿಲ್ದಾಣ, ಸರ್ಕಾರಿ ಆಸ್ಪತ್ರೆ, ಮಾರುಕಟ್ಟೆ ಇರುವಂತಹ ಪ್ರದೇಶದಲ್ಲೇ ಸ್ಥಾಪಿಸಲಿದ್ದೇವೆ. ಇಂದಿರಾ ಕ್ಯಾಂಟೀನ್‌ಗಳ ಮೆನು ಬದಲಾಗಲಿರುವುದರಿಂದ, ಆಹಾರ ಪೂರೈಕೆಯ ಹಿಂದಿನ ಗುತ್ತಿಗೆಯನ್ನೂ ರದ್ದುಪಡಿಸಲಿದ್ದೇವೆ. ಆದರೆ ಹೊಸತಾಗಿ ಟೆಂಡರ್ ಕರೆಯುವವರೆಗೆ ಹಿಂದಿನ ಗುತ್ತಿಗೆದಾರರನ್ನೇ ಮುಂದುವರಿಸುತ್ತೇವೆ’ ಎಂದರು.

‘ಹೆಬ್ಬುಲಿ ಕೇಶ ವಿನ್ಯಾಸ ಬೇಡ’

ಪ್ರಜಾವಾಣಿ ವಾರ್ತೆ

ಕೊಳ್ಳೇಗಾಲ (ಚಾಮರಾಜನಗರ ಜಿಲ್ಲೆ): ‘ಹೆಬ್ಬುಲಿ ಚಿತ್ರದಲ್ಲಿ ನಾಯಕ ನಟ ಸುದೀಪ್ ಅವರು ಮಾಡಿಸಿಕೊಂಡಿದ್ದ ಕೇಶ ವಿನ್ಯಾಸವನ್ನು ಶಾಲಾ ಮಕ್ಕಳಿಗೆ ಮಾಡಬೇಡಿ’ ಎಂದು ನಗರದ ಸರ್ಕಾರಿ ಪ್ರೌಢಶಾಲೆಯ ಕನ್ನಡ ಭಾಷಾ ಶಿಕ್ಷಕ ಎಂ.ಶಾಂತರಾಜು ಅವರು ತಾಲ್ಲೂಕಿನ ಸವಿತಾ ಸಮಾಜದ ಅಧ್ಯಕ್ಷ ರಾಚಶೆಟ್ಟಿಯವರಿಗೆ ಪತ್ರ ಬರೆದಿದ್ದಾರೆ.

‘ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ತಮ್ಮ ಸಂಘದ ಸದಸ್ಯರ ಕಟಿಂಗ್ ಶಾಪ್‌ಗಳಲ್ಲಿ ಶಾಲಾ ಮಕ್ಕಳು ಹೆಬ್ಬುಲಿ ಕಟಿಂಗ್ ಮಾಡಿಸಲು ಕೇಳಿದರೆ ದಯವಿಟ್ಟು ಮಾಡಬೇಡಿ. ಈ ರೀತಿ ಕಟಿಂಗ್ ಮಾಡಿಸಬೇಡಿ ಎಂದು ವಿದ್ಯಾರ್ಥಿಗಳಿಗೆ, ಪೋಷಕರಿಗೆ ತಿಳಿಸಿದ್ದರೂ ಪ್ರಯೋಜನವಾಗಿಲ್ಲ. ವಿದ್ಯಾರ್ಥಿಗಳು ಈ ರೀತಿ ಕಟಿಂಗ್ ಮಾಡಿಸಿಕೊಂಡು ಬರುವುದು ನಮ್ಮನ್ನು ಅಪಹಾಸ್ಯ ಮಾಡುವಂತಿದೆ. ಅಣಕಿಸುವಂತಿದೆ’ ಎಂದಿದ್ದಾರೆ.

‘ಮಕ್ಕಳು ಸಮವಸ್ತ್ರ ಧರಿಸಿ, ಅತ್ಯಂತ ಶಿಸ್ತಿನಿಂದ ಶಾಲೆಗೆ ಬರಬೇಕೆಂಬುದು ಶಿಕ್ಷಣ ಇಲಾಖೆಯ ನಿಯಮ. ಇತ್ತೀಚೆಗೆ ಮಕ್ಕಳು ಹೆಬ್ಬುಲಿ, ಸ್ಪೈಕ್, ಮಾಡೆಲ್ ಕ್ಷೌರ ಸೇರಿದಂತೆ ವಿಚಿತ್ರವಾದ ಕೇಶ ವಿನ್ಯಾಸ ಮಾಡಿಸಿಕೊಂಡು ಬರುತ್ತಿದ್ದಾರೆ. ಮಕ್ಕಳನ್ನು ಗುರುತು ಹಿಡಿಯುವುದೇ ಕಷ್ಟವಾಗಿದೆ’ ಎಂದು ಶಾಂತರಾಜು ’ಪ್ರಜಾವಾಣಿ’ಗೆ ತಿಳಿಸಿದರು.

‘ಗದಗ–ವಾಡಿ ರೈಲು ಮಾರ್ಗ 2026ರ ಮಾರ್ಚ್ ಗಡುವು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗದಗ- ವಾಡಿ ನಡುವೆ 257 ಕಿ.ಮೀ. ರೈಲು ಮಾರ್ಗವನ್ನು 2026ರ ಮಾರ್ಚ್ ಹಾಗೂ ಬಾಗಲಕೋಟೆ- ಕುಡಚಿ ಮಾರ್ಗವನ್ನು 2025ರ ಡಿಸೆಂಬರ್ ಒಳಗೆ ಪೂರ್ಣಗೊಳಿಸಲು ಕಾಲಮಿತಿ ನಿಗದಿಪಡಿಸಲಾಗಿದೆ’ ಎಂದು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲ ತಿಳಿಸಿದರು.

ಉತ್ತರ ಕರ್ನಾಟಕ ಭಾಗದ ಮಹತ್ವದ ರೈಲ್ವೆ ಯೋಜನೆಗಳ ಪ್ರಗತಿ ಪರಿಶೀಲನೆಯನ್ನು ಸಚಿವರು ಬುಧವಾರ ನಡೆಸಿದರು.

‘₹ 1,922 ಕೋಟಿ ಅಂದಾಜು ವೆಚ್ಚದ ಗದಗ- ವಾಡಿ ಯೋಜನೆಯು ರಾಜ್ಯ ಸರ್ಕಾರ ಮತ್ತು ರೈಲ್ವೆ ಇಲಾಖೆಗಳ ತಲಾ ಶೇ 50ರಷ್ಟು ವೆಚ್ಚ ಹಂಚಿಕೆಯಲ್ಲಿ ನಡೆಯುತ್ತಿದೆ. ಈ ಕಾಮಗಾರಿಗೆ 4,002 ಎಕರೆ ಭೂಮಿ ಅಗತ್ಯವಿದ್ದು, ಈಗಾಗಲೇ 3,945 ಎಕರೆ ಭೂಮಿಯನ್ನು ಕಾಮಗಾರಿಗಾಗಿ ಬಿಟ್ಟುಕೊಡಲಾಗಿದೆ. ಉಳಿದ 57 ಎಕರೆಯನ್ನು ತಿಂಗಳೊಳಗೆ ಕೊಡಲಾಗುವುದು’ ಎಂದರು.

‘ಗದಗದಿಂದ ತಳಕಲ್‌ವರೆಗೆ ಈಗಾಗಲೇ ರೈಲ್ವೆ ಹಳಿ ಇದೆ. ತಳಕಲ್‌ನಿಂದ ಕುಷ್ಟಗಿವರೆಗಿನ 57 ಕಿ.ಮೀ. ಪೈಕಿ ಹನುಮಪುರದವರೆಗೆ ಕೆಲಸ ಮುಗಿದಿದೆ. ಕುಷ್ಟಗಿವರೆಗಿನ ಮಾರ್ಗ ಮಾರ್ಚ್ 24ರೊಳಗೆ ಮುಗಿಯಲಿದೆ. ನಂತರ ಇಲ್ಲಿ ಪ್ರಾಯೋಗಿಕ ರೈಲು ಸಂಚಾರ ಆರಂಭವಾಗಲಿದೆ’ ಎಂದರು.

ಬಾಗಲಕೋಟೆ- ಕುಡಚಿ ನಡುವಿನ 142 ಕಿ.ಮೀ. ಉದ್ದದ ಮಾರ್ಗಕ್ಕೆ ₹ 1,530 ಕೋಟಿ ವೆಚ್ಚ ಅಂದಾಜಿಸಲಾಗಿದೆ. ಈ ಯೋಜನೆಗೆ ಅಗತ್ಯವಾದ 2,496 ಎಕರೆ ಭೂಮಿಯ ಪೈಕಿ 2,476 ಎಕರೆ ಹಸ್ತಾಂತರವಾಗಿದೆ. ಉಳಿದ 20 ಎಕರೆಯನ್ನು ಶೀಘ್ರದಲ್ಲಿ ಬಿಟ್ಟುಕೊಡಲಾಗುವುದು’ ಎಂದರು.

‘ಬಾಗಲಕೋಟೆ- ಖಜ್ಜಿದೋಣಿ- ಲೋಕಾಪುರದವರೆಗಿನ 60 ಕಿ.ಮೀ. ಕಾಮಗಾರಿ 2024ರ ಮಾರ್ಚ್ ವೇಳೆಗೆ ಮುಗಿಯಲಿದೆ. ಆನಂತರ, ಈ ಭಾಗದಲ್ಲಿ ರೈಲು ಸಂಚಾರ ಆರಂಭವಾಗಲಿದೆ. ಕುಡಚಿ ಭಾಗದಿಂದ ಕಾಮಗಾರಿ ಆರಂಭಿಸಲು ಟೆಂಡರ್ ಪ್ರಕ್ರಿಯೆ ಮುಗಿದಿದೆ. ಕುಡಚಿಯಿಂದ ಜಗದಾಳ್ ವರೆಗಿನ ಕೆಲಸ ಶುರುವಾಗಲಿದೆ’ ಎಂದರು.

ಅರೆಬೆಂದ ಆಹಾರ ಸೇವನೆ • ಮಾಯಕೊಂಡದ ಹಾಸ್ಟೆಲ್‌ನಲ್ಲಿ ಘಟನೆ

38 ವಿದ್ಯಾರ್ಥಿನಿಯರು ಅಸ್ವಸ್ಥ

ಪ್ರಜಾವಾಣಿ ವಾರ್ತೆ

ಮಾಯಕೊಂಡ (ದಾವಣಗೆರೆ): ಇಲ್ಲಿನ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಸರ್ಕಾರಿ ಪ್ರತಿಭಾನ್ವಿತ ಬಾಲಕಿಯರ ವಸತಿ ನಿಲಯದಲ್ಲಿ ಮಂಗಳವಾರ ರಾತ್ರಿ ಅರೆಬೆಂದ ಆಹಾರ ಸೇವಿಸಿದ್ದ 38 ವಿದ್ಯಾರ್ಥಿನಿಯರು ಅಸ್ವಸ್ಥರಾಗಿದ್ದಾರೆ.

ವಿದ್ಯಾರ್ಥಿನಿಯರಿಗೆ ಮಂಗಳವಾರ ರಾತ್ರಿ ರಾಗಿ ಮುದ್ದೆ, ಅನ್ನ ಮತ್ತು ಬೇಳೆ ಸಾರು ಪೂರೈಸಲಾಗಿತ್ತು. ಬುಧವಾರ ಬೆಳಿಗ್ಗೆ ಪುಳಿಯೋಗರೆ ಬಡಿಸಲಾಗಿತ್ತು. ಇದನ್ನು ತಿಂದ ನಂತರ ಏಕಾಏಕಿ ಹೊಟ್ಟೆನೋವು, ಭೇದಿ ಕಾಣಿಸಿಕೊಂಡಿದೆ.

‘ತೀವ್ರವಾಗಿ ಅಸ್ವಸ್ಥರಾಗಿದ್ದ 16 ವಿದ್ಯಾರ್ಥಿನಿಯರನ್ನು ದಾವಣಗೆರೆ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ಪೈಕಿ ವಿದ್ಯಾರ್ಥಿನಿಯೊಬ್ಬರಲ್ಲಿ ವಾಂತಿ, ಭೇದಿ ಜಾಸ್ತಿಯಾಗಿದ್ದು, ಆಕೆಯ ಆರೋಗ್ಯದ ಮೇಲೆ ನಿಗಾ ಇರಿಸಲಾಗಿದೆ. ಉಳಿದ ವಿದ್ಯಾರ್ಥಿನಿಯರ ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿದ್ದು, ಗುರುವಾರ ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಗುವುದು. 22 ವಿದ್ಯಾರ್ಥಿನಿಯರಿಗೆ ಮಾಯಕೊಂಡದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ನೀಡಲಾಗಿದ್ದು, ಅವರೆಲ್ಲರೂ ಗುಣಮುಖರಾಗಿದ್ದಾರೆ’ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಎಸ್.ಷಣ್ಮುಖಪ್ಪ ತಿಳಿಸಿದರು.



ಅಸ್ವಸ್ಥ ವಿದ್ಯಾರ್ಥಿನಿಯರು ದಾವಣಗೆರೆಯ ಚಿಗಟೇರಿ ಜಿಲ್ಲಾ ಆಸ್ಪತ್ರೆಯ ಮಕ್ಕಳ ವಿಭಾಗದಲ್ಲಿ ಚಿಕಿತ್ಸೆ ಪಡೆಯುತ್ತಿರುವುದು —ಪ್ರಜಾವಾಣಿ ಚಿತ್ರ

‘ವಿದ್ಯಾರ್ಥಿನಿಯರಿಗೆ ಪೂರೈಸಲಾಗಿದ್ದ ಆಹಾರ ಸರಿಯಾಗಿ ಬೆಂದಿರಲಿಲ್ಲ. ಆದ್ದರಿಂದ ಅಜೀರ್ಣ ಸಮಸ್ಯೆ ಕಂಡುಬಂದಿದೆ. ಆಹಾರ ಹಾಗೂ ನೀರಿನ ಮಾದರಿಯನ್ನು ಪರೀಕ್ಷೆಗಾಗಿ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಕಳೆದ ವಾರವೂ ನೀರಿನ ಮಾದರಿಯನ್ನು ಪರೀಕ್ಷೆಗೆ ಕಳುಹಿಸಲಾಗಿತ್ತು. ಅದರ ವರದಿ ಬಂದಿದ್ದು, ನೀರು ಕುಡಿಯಲು ಯೋಗ್ಯ ಎಂದು ಉಲ್ಲೇಖಿಸಲಾಗಿದೆ’ ಎಂದು ಜಿಲ್ಲಾ ಸರ್ವೇಕ್ಷಣಾಧಿಕಾರಿ ಜಿ.ಡಿ. ರಾಘವನ್ ಮಾಹಿತಿ ನೀಡಿದರು.

ಜಿಲ್ಲಾಧಿಕಾರಿ ಡಾ.ಎಂ.ವಿ. ವೆಂಕಟೇಶ್ ಹಾಗೂ ಜಿಲ್ಲಾ ಪಂಚಾಯಿತಿ ಸಿಇಒ ಸುರೇಶ್ ಇಟ್ನಾಳ್ ವಸತಿ ಶಾಲೆಗೆ ಭೇಟಿ ನೀಡಿ ಪರಿಶೀಲಿಸಿದ್ದು ತಕ್ಷಣ ವಾರ್ಡನ್ ಬದಲಾಯಿಸುವಂತೆ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರಿಗೆ ಸೂಚಿಸಿದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	98.40	2,406	6,266
ಹಾರಂಗಿ	2,859	2,855.07	291	550
ಕಬಿನಿ	2284.00	2,273.65	788	500
ಹೇಮಾವತಿ	2,922	2,903.76	700	5,900
ಲಿಂಗನಮಕ್ಕಿ	1,819	1,787.30	2,415	4,545.20
ಸೂಪಾ (ಮೀ)	564	545.43	1,462	1,118
ಮಾಣಿ	595	579.24	1,164	369
ತುಂಗಭದ್ರಾ	1,633	1,623.84	1,050	6,469
ಮಲಪ್ರಭಾ	2079.50	2,065.83	00	760
ಘಟಪ್ರಭಾ	2175	2,162.70	445	167
ಭದ್ರಾ	186	162.9	434	3,223
ಆಲಮಟ್ಟಿ (ಮೀ)	519.60	519.34	784	12,908
ನಾರಾಯಣಪುರ (ಮೀ)	492.25	490.45	7,500	7,000

* ನೆಲಮಟ್ಟದಿಂದ

ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮತ್ತೊಂದು ಎಂ.ಆರ್‌ಐ ಯಂತ್ರ ಅಳವಡಿಕೆ

ನೋವು ನಿರ್ವಹಣಾ ಕ್ಲಿನಿಕ್ ಪ್ರಾರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (ಬಿಎಂಸಿಆರ್‌ಐ) ಅಡಿ ಕಾರ್ಯನಿರ್ವಹಿಸುತ್ತಿರುವ ವಿಕ್ಟೋರಿಯಾ ಆಸ್ಪತ್ರೆಯಲ್ಲಿ 'ನೋವು ನಿರ್ವಹಣಾ ಕ್ಲಿನಿಕ್' ಪ್ರಾರಂಭಿಸಲಾಗಿದ್ದು, ಬೆಳಿಗ್ಗೆ 9ರಿಂದ ಸಂಜೆ 4 ಗಂಟೆಯವರೆಗೆ ಕಾರ್ಯನಿರ್ವಹಿಸಲಿದೆ.

ವೈದ್ಯಕೀಯ ಶಿಕ್ಷಣ ಇಲಾಖೆ ಹಾಗೂ ಬಿಎಂಸಿಆರ್‌ಐ ಜಂಟಿಯಾಗಿ ನಗರದಲ್ಲಿ ಹಮ್ಮಿಕೊಂಡ ಶಿಕ್ಷಕರ ಹಾಗೂ ವೈದ್ಯರ ದಿನಾಚರಣೆ ಕಾರ್ಯಕ್ರಮದಲ್ಲಿ ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಆರ್. ಪಾಟೀಲ ಅವರು ಕ್ಲಿನಿಕ್‌ಗೆ ಚಾಲನೆ ನೀಡಿದರು. ಸಂಸ್ಥೆಗೆ ಅಳವಡಿಸಿರುವ ನೂತನ ನಾಮಫಲಕ, ವಿಕ್ಟೋರಿಯಾ ಆಸ್ಪತ್ರೆಯಲ್ಲಿನ ಎರಡನೇ ಎಂ.ಆರ್.ಐ. ಯಂತ್ರ, ಬಿಎಂಸಿಆರ್‌ಐ ಆಟದ ಮೈದಾನದ ಫ್ಲಡ್ ಲೈಟ್ ಸೇರಿ ವಿವಿಧ ಸೌಲಭ್ಯಗಳನ್ನು ಉದ್ಘಾಟಿಸಿದ ಅವರು, ಶಿಕ್ಷಕರು ಹಾಗೂ ವೈದ್ಯರಿಗೆ ಶುಭಹಾರೈಸಿದರು.

ನೂತನ ಸೌಲಭ್ಯಗಳ ಬಗ್ಗೆ ವಿವರಿಸಿದ ಬಿಎಂಸಿಆರ್‌ಐ ಡೀನ್ ಡಾ. ರಮೇಶ್ ಕೃಷ್ಣ ಕೆ., 'ನೋವಿಗೆ ಸಂಬಂಧಿಸಿದಂತೆ ಸರ್ಕಾರದ ಮಟ್ಟದಲ್ಲಿ ಪ್ರಾರಂಭಿಸಲಾದ ಮೊದಲ ಕ್ಲಿನಿಕ್ ಇದಾಗಿದೆ. ಕ್ಯಾನ್ಸರ್ ಸೇರಿ ವಿವಿಧ ಕಾಯಿಲೆಗಳಿಂದ ಕಾಣಿಸಿಕೊಳ್ಳುವ ನೋವು, ಬೆನ್ನುಮೂಳೆ, ಕೀಲು ಸೇರಿ ವಿವಿಧ ತೀವ್ರತರ ಹಾಗೂ ದೀರ್ಘಕಾಲಿನ ನೋವಿಗೆ ಇಲ್ಲಿ ಚಿಕಿತ್ಸೆ ಒದಗಿಸಲಾಗುತ್ತದೆ. ಆಸ್ಪತ್ರೆಯ ಅರಿವಳಿಕೆ ವಿಭಾಗ ಇದನ್ನು ನಿರ್ವಹಿಸುತ್ತದೆ. ಪ್ರಾಯೋಗಿಕವಾಗಿ 200ಕ್ಕೂ ಹೆಚ್ಚು ಮಂದಿಗೆ ಚಿಕಿತ್ಸೆ ನೀಡಲಾಗಿದೆ' ಎಂದು ತಿಳಿಸಿದರು.

'ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಅಳವಡಿಸಿರುವ ನೂತನ ಎಂ.ಆರ್.ಐ. ಯಂತ್ರವು ಸುಧಾರಿತ ತಂತ್ರಾಂಶವನ್ನು ಹೊಂದಿದೆ. ಈಗಾಗಲೇ ಒಂದು ಎಂ.ಆರ್.ಐ. ಯಂತ್ರ ಕಾರ್ಯನಿರ್ವಹಿಸುತ್ತಿದೆ. ಈ ಸಂಖ್ಯೆ ಎರಡಕ್ಕೆ ಏರಿಕೆ ಆಗಿರುವುದರಿಂದ ರೋಗಿಗಳು ಎಂ.ಆರ್.ಐ ಮಾಡಿಸಿಕೊಳ್ಳಲು ಕಾಯುವುದು ತಪ್ಪಲಿದೆ' ಎಂದು ಹೇಳಿದರು.

ಅಂತಿಮ ಹಂತದ ಆಯ್ಕೆ

'ಕ್ಯಾನ್ಸರ್, ಸಂಧಿವಾತ ಸೇರಿ ವಿವಿಧ ಅನಾರೋಗ್ಯ ಸಮಸ್ಯೆಗಳಿಗೆ ತಜ್ಞ ವೈದ್ಯರ ಚಿಕಿತ್ಸೆಯ ನಂತರವೂ ನೋವು ಕಡಿಮೆಯಾಗದಿದ್ದಲ್ಲಿ 'ನೋವು ನಿರ್ವಹಣಾ ಕ್ಲಿನಿಕ್'ಗೆ ಶಿಫಾರಸು ಮಾಡಲಾಗುತ್ತದೆ. ಎಲ್ಲ ವಯೋಮಾನದವರಿಗೂ ಈ ಕ್ಲಿನಿಕ್‌ನಲ್ಲಿ ಚಿಕಿತ್ಸೆ ನೀಡಲಾಗುತ್ತದೆ. ನೋವು ಶಮನ ಮಾಡಲು ಇದು ಅಂತಿಮ ಆಯ್ಕೆಯಾಗಿರುತ್ತದೆ. ಸಾಮಾನ್ಯವಾಗಿ 12 ವಾರಗಳು ಇರುವ ನೋವನ್ನು ದೀರ್ಘ ಕಾಲದ ನೋವು ಎಂದು ಕರೆಯಲಾಗುತ್ತದೆ' ಎಂದು ವಿಕ್ಟೋರಿಯಾ ಆಸ್ಪತ್ರೆಯ ವೈದ್ಯರೊಬ್ಬರು ತಿಳಿಸಿದರು.

'ವೈದ್ಯರ ಶಿಫಾರಸು ಇಲ್ಲದೆಯೇ ನೋವು ನಿವಾರಕ ಚಿಕಿತ್ಸೆ ಹಾಗೂ ಔಷಧವನ್ನು ನೀಡುವುದಿಲ್ಲ. ನೋವು ನಿವಾರಕ ಔಷಧದ ಅತಿಯಾದ ಬಳಕೆ ಅಪಾಯ ತಂದೊಡ್ಡುವ ಸಾಧ್ಯತೆ ಇರುತ್ತದೆ' ಎಂದು ಹೇಳಿದರು.



ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಪ್ರಾರಂಭಿಸಲಾಗಿರುವ ನೋವು ನಿರ್ವಹಣಾ ಕ್ಲಿನಿಕ್



ಕಾರ್ಯಕ್ರಮದಲ್ಲಿ (ಕುಳಿತವರು ಎಡದಿಂದ) ಸುಮಾ, ಸಹನಾ ಡಿ., ಗಣೇಶ್ ಮೂರ್ತಿ ಜಿ.ಎಸ್ ಹಾಗೂ ರಾಜೇಶ ಎ. ಅವರಿಗೆ 'ರಾಜ್ಯಸಭಾ ಭೂಷಣ ಶ್ರೀ ಕರ್ಪೂರ ಶ್ರೀನಿವಾಸರಾವ್ ದತ್ತಿ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ಪದ್ಮಿನಿ ನಾಗರಾಜು, ನೇ.ಭ.ರಾಮಲಿಂಗ ಶೆಟ್ಟಿ, ಗೌರವ ಕೋಶಾಧ್ಯಕ್ಷ, ಬಿ.ಎಂ.ಪಟೇಲ್ ಪಾಂಡು, ಜಯಕರ ಎಂ.ಎಸ್, ಮಹೇಶ ಜೋಶಿ ಹಾಗೂ ಎ.ಆರ್ ನಾರಾಯಣಘಟ್ಟ ಇದ್ದಾರೆ.

ಕಸಾಪ: ದತ್ತಿ ಪ್ರಶಸ್ತಿಗಳು ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮವರ ಎದೆಯಲ್ಲಿ ಗುರುಗಳ ಸ್ಥಾನದಲ್ಲಿ ಇದ್ದವರು ಸಮರ್ಥವಾಗಿ ಅಕ್ಷರವನ್ನು ಬಿತ್ತಿರುವುದರಿಂದ ಭಾರತ ಇಂದು ಎಲ್ಲಾ ಕ್ಷೇತ್ರದಲ್ಲಿ ಮುಂದುವರೆದಿದೆ' ಎಂದು ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಜಯಕರ ಎಂ.ಎಸ್. ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ತು ನಗರದಲ್ಲಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಬೆಂಗಳೂರಿನ ಶಿಕ್ಷಕರಾದ ಡಿ.ಕೆ. ಕೋದಂಡರಾಮ, ಧಾರವಾಡ ತಾಲ್ಲೂಕು ಗರಗ ಕ್ಷೇತ್ರೀಯ ಸೇವಾ ಸಂಘ, ತುಮಕೂರಿನ ಎಲ್. ನರಸಿಂಹಯ್ಯ ತೊಂಡೋಟಿ ಹಾಗೂ ಹುಬ್ಬಳ್ಳಿಯ ಬೆಂಗೇರಿಯ ಕರ್ನಾಟಕ ಖಾದಿ ಗ್ರಾಮೋದ್ಯೋಗ ಸಂಯುಕ್ತ ಸಂಘಕ್ಕೆ 'ಡಾ.ಶ್ರೀ.ಎ.ಆರ್. ನಾರಾಯಣಘಟ್ಟ ಮತ್ತು ಸರೋಜಮ್ಮ ಗಾಂಧಿ ಪುರಸ್ಕಾರ ಪುದವಟ್ಟು ದತ್ತಿ ಪ್ರಶಸ್ತಿ', ಸುಮಾ, ಸಹನಾ ಡಿ., ಗಣೇಶ್ ಮೂರ್ತಿ ಜಿ.ಎಸ್. ಹಾಗೂ ರಾಜೇಶ ಎ. ಅವರಿಗೆ 'ರಾಜ್ಯಸಭಾ ಭೂಷಣ ಶ್ರೀ ಕರ್ಪೂರ ಶ್ರೀನಿವಾಸರಾವ್ ದತ್ತಿ ಪ್ರಶಸ್ತಿ' ಹಾಗೂ ಸ್ಫೂರ್ತಿ ಗೋಪಾಲ ಕೊಂಡ್ಲಿ, ಶ್ವೇತಾ ಆರ್. ಮತ್ತು ಅರ್ಪಿತಾ ಕೆ. ಎಸ್. ಅವರಿಗೆ 'ಕರ್ಪೂರ ರಾಮರಾವ್ ಜನ್ಮ ಶತಾಬ್ದಿ ದತ್ತಿ ಪ್ರಶಸ್ತಿ'ಯನ್ನು ಪ್ರದಾನ ಮಾಡಿ, ಮಾತನಾಡಿದರು.

'ದೇಶದಲ್ಲಿ ಭಾಷೆ, ಸಾಹಿತ್ಯ, ಕಲೆ ಆಧಾರದಲ್ಲಿ ಇರುವ ಏಕೈಕ ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್ತು. ನಾಡಿನ ನೆಲ-ಜಲ, ಸಾಹಿತ್ಯ, ಕನ್ನಡ-ಕನ್ನಡಿಗ-ಕರ್ನಾಟಕದ ವಿಷಯ ಬಂದಾಗ ಸಮರ್ಥವಾಗಿ ಹೋರಾಟ ಮಾಡಿ, ಕನ್ನಡದ ಹೆಮ್ಮೆಯನ್ನು ಜಗತ್ತಿಗೆ ಸಾರುತ್ತಿರುವ ಸಂಸ್ಥೆ ಇದು' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ, 'ಹಿಂದೆ ಶಿಕ್ಷಣ ಮೌಲ್ಯಾಧಾರಿತವಾಗಿತ್ತು. ಆದರೆ, ಈಗ ಶಿಕ್ಷಣ ವ್ಯಾಪಾರೀಕರಣವಾಗಿದೆ. ಬಾಳಿಗೆ ದೀಪವಾಗಬೇಕಿದ್ದ ಶಿಕ್ಷಣ, ಇಂದು ಕೆಲವರ ತೋರ್ಪಡಿಕೆಯ ದೀಪದ ಕಂಬದಂತಾಗುತ್ತಿದೆ. ಶಾಲೆಗಳಲ್ಲಿ ಕಲಿಯುವುದಕ್ಕಿಂತ ಕಳೆದುಕೊಳ್ಳುವುದೇ ಜಾಸ್ತಿಯಾಗಿದೆ' ಎಂದು ಬೇಸರ ವ್ಯಕ್ತಪಡಿಸಿದರು.

ಪ್ರಶಸ್ತಿ ಪುರಸ್ಕೃತರ ಪರವಾಗಿ ಮಾತನಾಡಿದ ಧಾರವಾಡ ಜಿಲ್ಲೆಯ ಗರಗದ ಧಾರವಾಡ ತಾಲ್ಲೂಕು ಗರಗ ಕ್ಷೇತ್ರೀಯ ಸೇವಾ ಸಂಘದ ಬಸವ ಪ್ರಭು ಹೊಸಕೆರೆ, 'ಖಾದಿ ಕೇವಲ ಬಟ್ಟೆಯಾಗಿರದೆ ಜೀವನ ಪದ್ಧತಿಯಾಗಿದೆ. ಖಾದಿಗೆ ನೀಡುವ ಪ್ರತಿ ರೂಪಾಯಿಯೂ ಸೂಕ್ತವಾಗಿ ವಿನಿಯೋಗವಾಗುತ್ತದೆ' ಎಂದು ಹೇಳಿದರು.

ಬಿಎಂಟಿಸಿ: ಏಕರೂಪದ ದರ ನಿಗದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ (ಬಿಎಂಟಿಸಿ) ರಾತ್ರಿ ಸೇವೆ ಸಾರಿಗೆಗಳಿಗೆ ಸಾಮಾನ್ಯ ಸೇವೆಗಳ ಪ್ರಯಾಣ ದರವನ್ನೇ ನಿಗದಿಗೊಳಿಸಿ ವ್ಯವಸ್ಥಾಪಕ ನಿರ್ದೇಶಕರ ಆದೇಶ ಹೊರಡಿಸಿದ್ದಾರೆ.

ಬುಧವಾರದಿಂದಲೇ ಈ ಆದೇಶ ಜಾರಿಗೆ ಬಂದಿದೆ. ನಗರದಲ್ಲಿ ತಡರಾತ್ರಿ, ಮುಂಜಾನೆ ಪ್ರಯಾಣಿಸುವ ಪ್ರಯಾಣಿಕರ ಅನುಕೂಲಕ್ಕಾಗಿ ಸಂಸ್ಥೆಯು ರಾತ್ರಿ ಸೇವೆ ಸಾರಿಗೆಗಳ ಕಾರ್ಯಾಚರಣೆ ನಡೆಸುತ್ತಿವೆ. ಸಂಸ್ಥೆಯ ಸಾಮಾನ್ಯ ಸಾರಿಗೆಗಳಲ್ಲಿ ಸಂಚರಿಸುವ ಪ್ರಯಾಣಿಕರಿಗೆ ಏಕರೂಪದ ಪ್ರಯಾಣ ದರ ನಿಗದಿ ಪಡಿಸಲಾಗಿದೆ ಎಂದು ತಿಳಿಸಲಾಗಿದೆ.

100 ಶಿಕ್ಷಕರಿಗೆ ಮಂಡಿಚಿಪ್ಪು ಶಸ್ತ್ರಚಿಕಿತ್ಸೆ

ಶಿಕ್ಷಕರ ದಿನಾಚರಣೆ ಪ್ರಯುಕ್ತ ಸ್ಪರ್ಶ್ ಫೌಂಡೇಷನ್‌ನಿಂದ ಗುರು ನಮನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿಕ್ಷಕರ ದಿನಾಚರಣೆ ಪ್ರಯುಕ್ತ ಇಲ್ಲಿನ ಸ್ಪರ್ಶ ಆಸ್ಪತ್ರೆ ಸಮೂಹದ ದತ್ತಿ ವಿಭಾಗದ ಸ್ಪರ್ಶ ಫೌಂಡೇಷನ್ ನೂರಕ್ಕೂ ಅಧಿಕ ನಿವೃತ್ತ ಶಿಕ್ಷಕರಿಗೆ ಉಚಿತವಾಗಿ ಮಂಡಿ ಚಿಪ್ಪು ಬದಲಾವಣೆ ಶಸ್ತ್ರಚಿಕಿತ್ಸೆ ನಡೆಸಿತು.

ನಗರದಲ್ಲಿ ಹಮ್ಮಿಕೊಂಡ 'ಗುರುನಮನ' ಕಾರ್ಯಕ್ರಮದಡಿ ಈ ಕಾರ್ಯ ಮಾಡಲಾಯಿತು. ಕಾರ್ಯಕ್ರಮಕ್ಕೆ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಪಾಟೀಲ ಚಾಲನೆ ನೀಡಿ ಮಾತನಾಡಿದರು.

'ಮೊಣಕಾಲು ನೋವು ಮತ್ತು ಸಂಧಿವಾತವು ವ್ಯಕ್ತಿಯನ್ನು ದುರ್ಬಲಗೊಳಿಸುತ್ತದೆ. ಇದು ದೈಹಿಕವಾಗಿ ಮತ್ತು ಮಾನಸಿಕವಾಗಿ ಹಿಂಸಿಸುತ್ತದೆ. ಈ ರೀತಿಯ ಉದಾತ್ತ ಯೋಜನೆಗಳು ಶಿಕ್ಷಕರ ಜೀವನದ ಗುಣಮಟ್ಟವನ್ನು ಸುಧಾರಿಸುತ್ತವೆ. ಗುರು ನಮನದಂತಹ ಸಾಮಾಜಿಕ ಬದಲಾವಣೆಯ ಕ್ರಮಗಳನ್ನು ಅಳವಡಿಸಿಕೊಳ್ಳಲು ಮುಂದೆ ಬರುವ ವೈದ್ಯರು ಮತ್ತು ಆರೋಗ್ಯ ಸೇವಾ ಸಂಸ್ಥೆಗಳಿಗೆ ಸರ್ಕಾರದ ವತಿಯಿಂದ ಉತ್ತೇಜನ ನೀಡಲಾಗುವುದು' ಎಂದು ಹೇಳಿದರು.

ಸ್ಪರ್ಶ್ ಆಸ್ಪತ್ರೆಯ ಅಧ್ಯಕ್ಷ ಡಾ.ಶರಣ್ ಶಿವರಾಜ್ ಪಾಟೀಲ, 'ವ್ಯಕ್ತಿಯನ್ನು ಉತ್ತಮ ನಾಗರಿಕನನ್ನಾಗಿ ರೂಪಿಸುವಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದಾಗಿದೆ. ಯುವ ಮನಸ್ಸುಗಳನ್ನು ಮತ್ತು ನಮ್ಮ ದೇಶದ ಭವಿಷ್ಯವನ್ನು ರೂಪಿಸುವಲ್ಲಿ ಅವರ ಕೊಡುಗೆ ಅಪಾರ. ಹಾಗಾಗಿ, ಈ ಕಾರ್ಯಕ್ರಮವನ್ನು 2010ರಲ್ಲಿ ಪ್ರಾರಂಭಿಸಲಾಯಿತು' ಎಂದು ತಿಳಿಸಿದರು.

'ಸಂಧಿವಾತ ಸಮಸ್ಯೆಯಿಂದ ಅಂಗವಿಕಲತೆಗೆ ಒಳಗಾಗುವ ಸಾಧ್ಯತೆ ಇರುತ್ತದೆ. ದೇಶದಲ್ಲಿ 1.8 ಕೋಟಿಗೂ ಹೆಚ್ಚು ಜನರು ಸಂಧಿವಾತ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಅಸ್ಥಿಸಂಧಿವಾತವನ್ನು ಗುಣಪಡಿಸಲಾಗದು. ಆದರೆ, ಮಂಡಿ ಚಿಪ್ಪು ಬದಲಾವಣೆ ಶಸ್ತ್ರಚಿಕಿತ್ಸೆ ದುಬಾರಿಯಾಗಿರುವುದರಿಂದ ಇದು ಎಲ್ಲರಿಗೂ ಸಾಧ್ಯವಾಗುತ್ತಿಲ್ಲ' ಎಂದು ಹೇಳಿದರು.

ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ್ ವಿ. ಪಾಟೀಲ ಅವರು ಸ್ಪರ್ಶ್ ಫೌಂಡೇಶನ್‌ನ ನೂತನ ವೆಬ್‌ಸೈಟ್‌ಗೆ ಚಾಲನೆ ನೀಡಿದರು.


ನಿವೃತ್ತ ಶಿಕ್ಷಕರಿಗೆ ಡಾ.ಶರಣಪ್ರಕಾಶ್ ಪಾಟೀಲ ಶುಭಹಾರೈಸಿದರು. ಡಾ.ಶರಣ್ ಶಿವರಾಜ್ ಪಾಟೀಲ ಇದ್ದಾರೆ.

ಸೆ.15ರ ಬಳಿಕ ವಿಸ್ತರಿತ ಮಾರ್ಗದಲ್ಲಿ 'ಮೆಟ್ರೊ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಸ್ತರಿತ ನೇರಳೆ ಮಾರ್ಗದಲ್ಲಿ ಬಿಎಂಆರ್‌ಸಿಎಲ್ ಕೈಗೊಂಡಿದ್ದ ಸುರಕ್ಷತಾ ಪರಿಶೀಲನಾ ಕಾರ್ಯಗಳು ಬಹುತೇಕ ಮುಕ್ತಾಯಗೊಂಡಿದ್ದು ಸೆ.15ರ ಬಳಿಕ 'ಮೆಟ್ರೊ' ಸಂಚಾರ ಆರಂಭವಾಗಲಿದೆ.

ಮುಂದಿನ ವಾರವೇ ರೈಲ್ವೆ ಸುರಕ್ಷಿತ ಆಯುಕ್ತರು ಭೇಟಿ ನೀಡಲಿದ್ದು, ಸುರಕ್ಷಿತ ಕ್ರಮಗಳ ಪರಿಶೀಲನೆ ನಡೆಸಿದ್ದಾರೆ. ಅದಾದ ಎರಡರಿಂದ ಮೂರು ದಿನಗಳಲ್ಲಿ ಮೆಟ್ರೊ ಸಂಚಾರ ಆರಂಭವಾಗಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ನೇರಳೆ ಮಾರ್ಗದ ಬೈಯಪ್ಪನಹಳ್ಳಿ–ಕೆ.ಆರ್.ಪುರ ನಡುವೆ 2.5 ಕಿ.ಮೀ ಹಾಗೂ ಕೆಂಗೇರಿ–ಚಲ್ಲಘಟ್ಟದ ನಡುವೆ 1.9 ಕಿ.ಮೀ ವಿಸ್ತರಿತ ಕಾಮಗಾರಿ ಮುಕ್ತಾಯವಾಗಿದೆ.

ಕೆ.ಆರ್.ಪುರ–ವೈಟ್‌ಫೀಲ್ಡ್ (13.71 ಕಿ.ಮೀ) ನಡುವೆ ಮೆಟ್ರೊ ವಾಣಿಜ್ಯ ಸಂಚಾರ ಮಾರ್ಚ್‌ನಲ್ಲೇ ಆರಂಭಗೊಂಡಿತ್ತು. ಆದರೆ, ಬೈಯಪ್ಪನಹಳ್ಳಿ–ಕೆ.ಆರ್.ಪುರದ ನಡುವೆ ಮೆಟ್ರೊ ಸಂಚರಿಸದ ಕಾರಣಕ್ಕೆ ನೇರಳೆ ಮಾರ್ಗದ ಪ್ರಯಾಣಿಕರು ತೊಂದರೆ ಅನುಭವಿಸಿದ್ದರು. ವೈಟ್‌ಫೀಲ್ಡ್‌ಗೆ ತೆರಳಬೇಕಾದವರು ಬೈಯಪ್ಪನಹಳ್ಳಿಯಲ್ಲೇ ಇಳಿಯಬೇಕಿತ್ತು. ವಿಸ್ತರಿತ ಮಾರ್ಗದಲ್ಲಿ ಸಂಚಾರ ಆರಂಭವಾದರೆ ನೇರವಾಗಿ ಪ್ರಯಾಣಿಕರು ವೈಟ್‌ಫೀಲ್ಡ್‌ನತ್ತ ತೆರಳಬಹುದು.

ಕೆಂಗೇರಿ– ಚಲ್ಲಘಟ್ಟ ನಡುವೆ ಮೆಟ್ರೊ ಆರಂಭದಿಂದ ಮೈಸೂರು ಕಡೆಗೆ ತೆರಳುವ ಪ್ರಯಾಣಿಕರಿಗೂ ಅನುಕೂಲವಾಗಲಿದೆ ಎಂದು ಅಧಿಕಾರಿಗಳು ಹೇಳುತ್ತಾರೆ.

ಬಿಬಿಎಂಪಿ ಗುತ್ತಿಗೆದಾರರಿಗೆ ಬಿಲ್ ಪಾವತಿ ವಿಳಂಬ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಪೂರ್ಣಗೊಂಡಿರುವ ಕಾಮಗಾರಿಗಳ ಬಿಲ್‌ನಲ್ಲಿ ಶೇ 50ರಷ್ಟು ಪಾವತಿ ಮಾಡುವ ಪ್ರಕ್ರಿಯೆ ಆರಂಭವಾಗಲು ಇನ್ನೂ ನಾಲ್ಕೈದು ದಿನಗಳು ಬೇಕಿವೆ.

ಪೂರ್ಣಗೊಂಡಿರುವ ಕಾಮಗಾರಿಗಳ ಬಿಲ್‌ಗಳ ಪೂರ್ಣ ಮೊತ್ತಕ್ಕೆ ಸಾಫ್ಟ್‌ವೇರ್‌ನಲ್ಲಿ ಎಲ್ಲ ಪ್ರಕ್ರಿಯೆ ಪೂರ್ಣಗೊಂಡಿದೆ. ಒಟ್ಟು ₹6,077 ಕೋಟಿ ಮೊತ್ತದ ಬಿಲ್ ಬಾಕಿ ಉಳಿಸಿದೆ. ಇದರಲ್ಲಿ ಬಿಬಿಎಂಪಿ, ರಾಜ್ಯ, ಕೇಂದ್ರ ಸರ್ಕಾರದ ಅನುದಾನಗಳ ಕಾಮಗಾರಿಗಳಿವೆ. ಇದಕ್ಕೆ ಬಿಲ್ ಆಗಿ, ಎಲ್ಲವೂ ಸಿದ್ಧವಾಗಿವೆ.

ಆದರೆ, ಇದೀಗ ಸಾಫ್ಟ್‌ವೇರ್‌ನಲ್ಲಿ ಬದಲಾವಣೆ ಆಗಬೇಕಿದೆ. ರಾಜ್ಯ ಸರ್ಕಾರದ ಅನುದಾನದಲ್ಲಿ ₹2,753 ಕೋಟಿ ಬಾಕಿ ಉಳಿದಿದ್ದು ಇದರಲ್ಲಿ ಅರ್ಧದಷ್ಟು ಪಾವತಿ ಮಾಡಬೇಕಿದೆ. ಕೇಂದ್ರ ಸರ್ಕಾರದ ಅನುದಾನದಲ್ಲಿ ₹67.48 ಕೋಟಿ ಬಾಕಿ ಇದ್ದು ಅದರಲ್ಲಿಯೂ ಅರ್ಧ ಪಾವತಿ ಮಾಡಬಹುದು. ಇದರಲ್ಲಿ ಬಿಲ್‌ಗಳನ್ನು ಕಡಿತಗೊಳಿಸಿ, ಬಾಕಿ ಉಳಿಸಿಕೊಳ್ಳಬೇಕು. ದ್ವಿಪಾವತಿ ಆಗದಂತೆಯೂ ನೋಡಿಕೊಳ್ಳಬೇಕು. ಹೀಗಾಗಿ ಸಾಫ್ಟ್‌ವೇರ್‌ನಲ್ಲಿ ಹೆಚ್ಚಿನ ಬದಲಾವಣೆ ಅಗತ್ಯವಿದೆ.

ಇನ್ನು ಬಿಬಿಎಂಪಿ ಅನುದಾನದಲ್ಲಿ ₹3,256 ಕೋಟಿ ಬಾಕಿ ಉಳಿದಿದ್ದು, 24 ತಿಂಗಳ ಹಿಂದಿನ ಬಾಕಿಯನ್ನು ಪಾವತಿಸುತ್ತಾ ಬರಲಾಗುತ್ತಿದೆ. ಆದರೆ, ಇದನ್ನು ಹೇಗೆ ಹೊಂದಾಣಿಕೆ ಮಾಡಬೇಕು ಎಂಬ ಲೆಕ್ಕಾಚಾರ ನಡೆಯುತ್ತಿದೆ.

ಇದೀಗ 28 ತಿಂಗಳ ಬಾಕಿ ಉಳಿದಿದ್ದು, ನಾಲ್ಕು ತಿಂಗಳ ಹಣ ಪಾವತಿಯಲ್ಲಿ ಶೇ 50ರಷ್ಟು ನೀಡಬೇಕೇ ಅಥವಾ 28 ತಿಂಗಳ ಬಾಕಿಯಲ್ಲಿ ಅರ್ಧದಷ್ಟು ಬಿಡುಗಡೆ ಮಾಡಬೇಕೇ ಎಂಬ ಬಗ್ಗೆ ಗೊಂದಲ ಉಂಟಾಗಿದೆ. ಗೊಂದಲ ನಿವಾರಣೆಯಾಗಿ, ಸಾಫ್ಟ್‌ವೇರ್ ಬದಲಾವಣೆ ಆಗಬೇಕಿದ್ದು, ಒಂದಷ್ಟು ಸಮಯ ಬೇಕಾಗಿದೆ ಎಂದು ಹಣಕಾಸು ವಿಭಾಗದ ಅಧಿಕಾರಿಗಳು ತಿಳಿಸಿದರು.

'ಪೂರ್ಣಗೊಂಡಿರುವ ಕಾಮಗಾರಿಗಳ ಬಿಲ್ ಸಾವಿರಾರು ಕೋಟಿ ಬಾಕಿ ಇದ್ದು, ಪೂರ್ಣ ಪಾವತಿ ಮಾಡಬೇಕು ಎಂಬುದು ನಮ್ಮ ವಾದ. ಆದರೆ ಶೇ 50ರಷ್ಟು ಪಾವತಿಸುತ್ತೇವೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಹೇಳಿದ್ದಾರೆ. ಒಟ್ಟಾರೆ ಬಾಕಿ ಇರುವ ಬಿಲ್‌ಗಳಲ್ಲಿ ಕೂಡಲೇ ಅರ್ಧದಷ್ಟು ಪಾವತಿ ಮಾಡಿದರೆ ಗುತ್ತಿಗೆದಾರರು ಉಸಿರಾಡಬಹುದು' ಎಂದು ಬಿಬಿಎಂಪಿ ಗುತ್ತಿಗೆದಾರರು ಹೇಳಿದರು.

ಅರ್ಜಿ ಆಹ್ವಾನ

ಬೆಂಗಳೂರು: ಕೃಷಿಕ್ ಸರ್ವೋದಯ ಫೌಂಡೇಷನ್‌ನಿಂದ 2023–24ನೇ ಸಾಲಿನ 'ಕೃಷಿಕ್ ಎಂಡೋಮೆಂಟ್ ವಿದ್ಯಾರ್ಥಿವೇತನ'ಕ್ಕೆ ಅರ್ಜಿ ಆಹ್ವಾನಿಸಿದೆ.

ಪಿ.ಯು.ಸಿ., ಸ್ನಾತಕ, ವೃತ್ತಿಪರ ಪದವಿ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿರುವ ಗ್ರಾಮೀಣ ಪ್ರದೇಶದ ಆರ್ಥಿಕವಾಗಿ ಹಿಂದುಳಿದ ಅರ್ಹ ಬಡವಿದ್ಯಾರ್ಥಿಗಳು www.ksfkarnataka.com ವೈಬ್‌ಸೈಟ್‌ನಲ್ಲಿ ಅರ್ಜಿ ಅಕ್ಟೋಬರ್ 31ರೊಳಗೆ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ. ಮಾಹಿತಿಗೆ: 080–25202299ಗೆ ಸಂಪರ್ಕಿಸಿ.

ನ್ಯಾಯಾಧೀಶರ ಹುದ್ದೆ ಪರೀಕ್ಷೆ: ತರಬೇತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿರಾಟ್ ವಿಶ್ವ ಗ್ಲೋಬಲ್ ಫೌಂಡೇಷನ್ ಮತ್ತು ಕರ್ನಾಟಕ ರಾಜ್ಯ ವಕೀಲರ ಪರಿಷತ್ ವತಿಯಿಂದ ನ್ಯಾಯಾಧೀಶರ ಹುದ್ದೆ ಮುಖ್ಯ ಪರೀಕ್ಷೆಗೆ ತಯಾರಾಗಲು ವಕೀಲರಿಗೆ ತರಬೇತಿ ನೀಡಲಾಗುತ್ತಿದೆ.

ನಗರದ ಅಕ್ಷಯ ಹೌರ ಹೋಟೆಲ್ ಸಭಾಂಗಣದಲ್ಲಿ ಎಂಟು ದಿನಗಳ ತರಬೇತಿ ಕಾರ್ಯಾಗಾರಕ್ಕೆ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎ.ವಿ. ಚಂದ್ರಶೇಖರ್ ಚಾಲನೆ ನೀಡಿದರು.

'ಯುವ ವಕೀಲರಿಗೆ ಇಂತಹ ಕಾರ್ಯಾಗಾರ ಅತ್ಯಂತ ಮುಖ್ಯ. ಮುಂದಿನ ದಿನಗಳಲ್ಲಿ ಅವರು ಯಾವ ರೀತಿ ಸಜ್ಜಾಗಬೇಕು ಎಂಬುದನ್ನು ಅರಿತುಕೊಳ್ಳಬಹುದು. ಅಲ್ಲದೆ, ಪರೀಕ್ಷೆಗೆ ಹೇಗೆ ತಯಾರಾಗಬೇಕು ಎಂಬ ಮಾಹಿತಿಯೂ ಇಲ್ಲಿ ಲಭ್ಯವಾಗಲಿದೆ' ಎಂದು ಚಂದ್ರಶೇಖರ್ ಹೇಳಿದರು.

ರಾಜ್ಯ ವಕೀಲರ ಪರಿಷತ್ತಿನ ಅಧ್ಯಕ್ಷ ವಿಶಾಲ್ ರಘು ಮತ್ತು ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರಾದ ಶಶಿಕಲಾ ವರುಣಕರ್ ಅವರು ವಕೀಲರಿಗೆ ಶುಭ ಕೋರಿ, ಪರೀಕ್ಷೆಗೆ ತಯಾರಾಗುವ ಪ್ರಕ್ರಿಯೆಗಳನ್ನು ತಿಳಿಸಿದರು.

ವಿರಾಟ್ ವಿಶ್ವ ಗ್ಲೋಬಲ್ ಫೌಂಡೇಷನ್ ಎಸ್. ಮಳಿಗಾಚಾರ್ ಅಧ್ಯಕ್ಷತೆ ವಹಿಸಿದ್ದರು. ರಾಜ್ಯದ ವಿವಿಧೆಡೆಗಳಿಂದ ಸುಮಾರು 70 ಯುವ ವಕೀಲರು ಕಾರ್ಯಾಗಾರದಲ್ಲಿ ಭಾಗವಹಿಸಿದ್ದಾರೆ ಎಂದು ವಕೀಲ ಶ್ರೀಧರ್ ಹೇಳಿದರು.



ನ್ಯಾಯಾಧೀಶರ ಹುದ್ದೆ ಮುಖ್ಯ ಪರೀಕ್ಷೆಗೆ ತಯಾರಾಗಲು ವಕೀಲರಿಗೆ ಆಯೋಜಿಸಿದ್ದ ತರಬೇತಿ ಕಾರ್ಯಾಗಾರದಲ್ಲಿ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎ.ವಿ. ಚಂದ್ರಶೇಖರ್ ಮಾತನಾಡಿದರು. ನಿವೃತ್ತ ನ್ಯಾಯಾಧೀಶರಾದ ಶಶಿಕಲಾ ವರುಣಕರ್, ವಿರಾಟ್ ವಿಶ್ವ ಗ್ಲೋಬಲ್ ಫೌಂಡೇಷನ್ ಎಸ್ ಮಳಿಗಾಚಾರ್ ಇದ್ದರು

ನಗರದಲ್ಲಿ ಇಂದು

ವಾರ್ಷಿಕ ಅಥ್ಲೆಟಿಕ್ ಕೂಟ: ಚಾಲನೆ: ಜಯಪ್ರಕಾಶ್ ಶೆಟ್ಟಿ, ಅತಿಥಿ: ಡಾ. ಭರತ್ ಕುಮಾರ್ ಬಿ., ಆಯೋಜನೆ ಮತ್ತು ಸ್ಥಳ: ಸೇಂಟ್ ಜೋಸೆಫ್ಸ್ ಇಂಡಿಯನ್ ಪ್ರಾಥಮಿಕ ಶಾಲೆ, ವಿಠಲ್ ಮಲ್ಯ ರಸ್ತೆ, ಬೆಳಿಗ್ಗೆ 8.30

ವಚನ ಶ್ರಾವಣ–2023: ವಚನ ಗಾಯನ: ಶಕುಂತಲ ಬಾಗಲಕೋಟ, ವಚನ ಚಿಂತನ: ಎಸ್. ಪಿನಾಕಪಾಣಿ, ಅಧ್ಯಕ್ಷತೆ: ರಾಜಶ್ರೀ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಅಕ್ಷಯ ಪ್ಲೇ ಹೋಂ, ಮಲ್ಲತ್ತಹಳ್ಳಿ, ಬೆಳಿಗ್ಗೆ 10ರಿಂದ

'ಡಿ.ಜಿ. ಇಮೇಜ್' ಅಂತರರಾಷ್ಟ್ರೀಯ ವಸ್ತು ಪ್ರದರ್ಶನ: ಉದ್ಘಾಟನೆ: ಡಿ.ಕೆ. ಶಿವಕುಮಾರ್, ಅತಿಥಿಗಳು: ನಜೀರ್ ಅಹಮದ್, ಎಂ. ಕೃಷ್ಣಪ್ಪ, ತೇಜಸ್ವಿನಿ ಅನಂತ್ ಕುಮಾರ್, ಲಗ್ಗೆರೆ ನಾರಾಯಣ ಸ್ವಾಮಿ, ಅಧ್ಯಕ್ಷತೆ: ಪರಮೇಶ್ ಸುಬ್ಬಯ್ಯ, ಆಯೋಜನೆ: ಕರ್ನಾಟಕ ಛಾಯಾಚಿತ್ರಗ್ರಾಹಕರ ಸಂಘ, ಸ್ಥಳ: ಪ್ರಿನ್ಸೆಸ್ ಶ್ರೈನ್, ಗೇಟ್ ನಂ. 9, ಅರಮನೆ ಮೈದಾನ, ಬೆಳಿಗ್ಗೆ 10

'ಮುಕ್ತ ವ್ಯಾಪಾರ ಮತ್ತು ಭಾರತೀಯ ಕೃಷಿ ಹಾಗೂ ರೈತರ ಮೇಲಾಗುವ ಪರಿಣಾಮಗಳು' ಕುರಿತು ದುಂಡ ಮೇಜಿನ ಸಭೆ: ರಾಕೇಶ್ ಟಿಕಾಯತ್, ಯುದ್ಧವೀರ್ ಸಿಂಗ್, ಆಯೋಜನೆ: ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ, ಸ್ಥಳ: ಗಾಂಧಿಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11ರಿಂದ

'ಕನ್ನಡ ಶಾಸನ ಸಾಹಿತ್ಯ'ದ ಕುರಿತು ಎರಡು ದಿನದ ರಾಷ್ಟ್ರೀಯ ಕಾರ್ಯಾಗಾರ: ಉದ್ಘಾಟನೆ: ತಮಿಳ್ ಸೆಲ್ವಿ, ಅಧ್ಯಕ್ಷತೆ: ಲಿಂಗರಾಜ ಗಾಂಧಿ, ಅತಿಥಿಗಳು: ಟಿ. ಜವರೇಗೌಡ, ವಿ. ಲೋಕೇಶ್, ಜಲಜಾ ಕೆ.ಆರ್., ಡಿ.ಕೆ. ಚಿತ್ತಯ್ಯ ಪೂಜಾರ್, ಪ್ರಾಸ್ತಾವಿಕ ನುಡಿ: ತಾಂಡವಗೌಡ ಟಿ.ಎನ್., ಆಯೋಜನೆ: ಬೆಂಗಳೂರು ನಗರ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ವಿಭಾಗ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜು ಆವರಣ, ಅರಮನೆ ರಸ್ತೆ, ಬೆಳಿಗ್ಗೆ 10.30

ಗಮಕ ಕಲಾ ಸಂಭ್ರಮ: ಉದ್ಘಾಟನೆ: ಎಂ.ಆರ್. ಸತ್ಯನಾರಾಯಣ, ಅಧ್ಯಕ್ಷತೆ: ಎಂ.ಕೆ. ಚವ್ಹಾಣ್, ಬಹುಮಾನ ವಿತರಣೆ: ಕುದೂರು ದಯಾನಂದ, ಅತಿಥಿ: ಅಂಬುಜಾ ಪ್ರಕಾಶ್, ಪ್ರಾಸ್ತಾವಿಕ ನುಡಿ: ಎಚ್.ಎಸ್. ಬಾಲಸುಬ್ರಹ್ಮಣ್ಯ, ಆಯೋಜನೆ: ವಿದ್ಯಾಗಣಪತಿ ಗಮಕ ಶಿಕ್ಷಣಾಲಯ, ಸ್ಥಳ: ಶೇಷಾದ್ರಿಪುರ ಪ್ರೌಢಶಾಲೆ ಸಭಾಂಗಣ, ಬೆಳಿಗ್ಗೆ 11.45

'ಪಾರಿಜಾತ-ನರಕಾಸುರ-ಮೈಂದ ದ್ವಿವಿದ' ಯಕ್ಷಗಾನ ಪ್ರದರ್ಶನ: ಆಯೋಜನೆ: ಮಹಾಗಣಪತಿ ಯಕ್ಷಗಾನ ಮಂಡಳಿ, ಸ್ಥಳ: ಮ್ಯಾಜಿಸ್ಟ್ರೇಟ್ ಕೋರ್ಟ್ ಸಭಾಂಗಣ, ನೃಪತುಂಗ ರಸ್ತೆ, ಮಧ್ಯಾಹ್ನ 1.30ರಿಂದ

ದಾಸವಾಣಿ ಕಾರ್ಯಕ್ರಮ: ಗಾಯನ: ರಮ್ಯ ಸುಧೀರ್, ಅನುಷಾ ಪವನ್, ರೂಪಾ ಪ್ರಭಂಜನ್, ಆಯೋಜನೆ ಮತ್ತು ಸ್ಥಳ: ಶ್ರೀಪಾದರಾಜ ಮಠ, ಚಾಮರಾಜಪೇಟೆ, ಮಧ್ಯಾಹ್ನ 3ರಿಂದ

'ಚೆಕಾವ್ ಟು ಶಾಂಪೇನ್' ನಾಟಕ ಪ್ರದರ್ಶನ: ರಚನೆ: ಹೇಮಾ ಪಟ್ಟಣಶೆಟ್ಟಿ, ವಿನ್ಯಾಸ ಮತ್ತು ನಿರ್ದೇಶನ: ಅಭಿಮನ್ಯು ಭೂಪತಿ, ಆಯೋಜನೆ: ಬೆಂಗಳೂರು ಥಿಯೇಟರ್ ಅನ್ಸಂಬಲ್, ಸ್ಥಳ: ರಂಗ ಶಂಕರ, ಜೆ.ಪಿ. ನಗರ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
ಇ-ಮೇಲ್ ವಿಳಾಸ: nagaradalli_indu@prajavani.co.in

ಹೆಸರಘಟ್ಟ ಕೆರೆ ಅರ್ಕಾವತಿ ನದಿಗೆ ಸಂಪರ್ಕ: ಹರಿಯದ ನೀರು

ದುಸ್ಥಿತಿಯಲ್ಲಿ ಕಾಲುವೆ, ತ್ಯಾಜ್ಯ ಭರ್ತಿ

• ಬೈಲಮೂರ್ತಿ ಜೆ.

ಹೆಸರಘಟ್ಟ: ಅರ್ಕಾವತಿ ನದಿ ಮತ್ತು ಹೆಸರಘಟ್ಟ ಕೆರೆಯನ್ನು ಸಂಪರ್ಕಿಸುವ ಕೆರೆಕೋಡಿ ಕಾಲುವೆಯು ತ್ಯಾಜ್ಯ, ಗಿಡಗಂಟಿಗಳಿಂದ ಆವೃತವಾಗಿದೆ. ಇದರಿಂದ ಸ್ಥಳೀಯವಾಗಿ ಕುಡಿಯುವ ನೀರಿನ ಸಮಸ್ಯೆ ಎದುರಾಗಿದ್ದು, ಇನ್ನೊಂದೆಡೆ ಅರ್ಕಾವತಿ ನದಿಯ ನೀರಿನ ಮೂಲ ಸೆಲೆಗೆ ಅಪಾಯ ಎದುರಾಗಿದೆ.

ಕೋಡಿ ಬೀಳುವ ಹೆಸರಘಟ್ಟ ಕೆರೆ ನೀರು ಇದೇ ಕಾಲುವೆಯ ಮೂಲಕ ಹಾದು ಮುಂದೆ ತೊರೆನಾಗಸಂದ್ರದ ಬಳಿ ಅರ್ಕಾವತಿ ನದಿಗೆ ಸೇರುತ್ತದೆ.

ಈ ಮಧ್ಯದ ಕಾಲುವೆ ಈಗ ದುಸ್ಥಿತಿಯಲ್ಲಿದ್ದು, ತ್ಯಾಜ್ಯ ಸುರಿಯಲಾಗುತ್ತಿದೆ. ಬೀದಿಬದಿ ವ್ಯಾಪಾರಿಗಳು ನಿತ್ಯವೂ ಕಾಫಿ, ಟೀ, ಪಾನಿಪುರಿ ಲೋಟಗಳನ್ನು ತಂದು ಎಸೆಯುತ್ತಿದ್ದಾರೆ. ಗಿಡಗಂಟಿಗಳು ಬೆಳೆದು ನಿಂತು ಕಾಲುವೆಯ ಅಸ್ತಿತ್ವವೇ ಕಾಣದಾಗಿದೆ. ಸ್ವಚ್ಛಗೊಳಿಸಿ ವರ್ಷಗಳೇ ಕಳೆದಿರುವುದರಿಂದ ಕಾಲುವೆಯಲ್ಲಿ ನೀರು ಹರಿಯದೇ ನಿಂತಲ್ಲೇ ನಿಲ್ಲುತ್ತಿದೆ. ನೀರು ಮಲಿನಗೊಂಡು, ಸೊಳ್ಳೆ ಮತ್ತು ಕ್ರಿಮಿ-ಕೀಟಗಳ ಆವಾಸವಾಗುತ್ತಿದೆ. ತ್ಯಾಜ್ಯ ಕೊಳೆತು ವಾಸನೆ ಬರುತ್ತಿದೆ.

ಹೆಸರಘಟ್ಟ ಗ್ರಾಮದ ಒಳಚರಂಡಿ ನೀರನ್ನು ಇದೇ ಕಾಲುವೆಗೆ ಬಿಡಲಾಗುತ್ತಿದ್ದು, ಪರಿಸ್ಥಿತಿ ಮತ್ತಷ್ಟು ಹದಗೆಟ್ಟಿದೆ. ಕೊಳಚೆ ನೀರನ್ನು ಸಂಸ್ಕರಿಸಿ ಬಿಡುವಂತಾಗಬೇಕು ಎಂದು ಸ್ಥಳೀಯರು ಮನವಿ ಮಾಡಿದ್ದಾರೆ.

'ಕಾಲುವೆಯು ಜಲ ಮಂಡಳಿ ಸುಪರ್ದಿಗೆ ಬರುತ್ತದೆ. ಈ ಹಿಂದೆ ಕಾಲುವೆಯನ್ನು ಒಮ್ಮೆ ಸ್ವಚ್ಛಗೊಳಿಸಿ ಅಧಿಕಾರಿಗಳು ಕೈ ತೊಳೆದುಕೊಂಡಿದ್ದಾರೆ. ಗಿಡ-ಗಂಟಿಗಳು ಬೆಳೆದು, ತ್ಯಾಜ್ಯದಿಂದ ತುಂಬಿರುವ ಕಾಲುವೆಯನ್ನು ಗ್ರಾಮ ಪಂಚಾಯಿತಿ ಅಥವಾ ಜಲಮಂಡಳಿಯಾಗಲೀ ಸ್ವಚ್ಛಗೊಳಿಸಬೇಕು' ಎಂದು ಸ್ಥಳೀಯ ನರಸಿಂಹಯ್ಯ ಒತ್ತಾಯಿಸಿದ್ದಾರೆ.

'ಅಧಿಕಾರಿಗಳು ಏನು ಮಾಡಿದರೂ ಪ್ರಯೋಜನವಿಲ್ಲ. ಜಲಮೂಲ ಉಳಿಸಿಕೊಳ್ಳುವ ಬಗ್ಗೆ ಜನರಿಗೆ ಅರಿವಾಗಬೇಕು. ತ್ಯಾಜ್ಯವನ್ನು ನಿಗದಿತ ಜಾಗದಲ್ಲಿ ಹಾಕಬೇಕು' ಎಂದು ಸ್ಥಳೀಯ ನಿವಾಸಿ ಜನಾರ್ದನ್ ಹೇಳಿದರು.



ಗಿಡ ಗಂಟಿಗಳಿಂದ ಆವೃತವಾಗಿರುವ ಕೆರೆ ಕೋಡಿ ಕಾಲುವೆ

ಕಾಲುವೆಯಲ್ಲಿನ ಗಿಡಗಂಟಿ ತೆಗೆದು ಸ್ವಚ್ಛಗೊಳಿಸಿ ಸೊಳ್ಳೆಗಳ ಉತ್ಪತ್ತಿ ತಡೆಯಲು ಔಷಧ ಸಿಂಪಡಿಸುತ್ತೇವೆ. ಬೀದಿ ಬದಿ ವ್ಯಾಪಾರಿಗಳು ತ್ಯಾಜ್ಯ ಹಾಕಲು ತೊಟ್ಟಿ ನಿರ್ಮಿಸಲು ಕ್ರಮ ಕೈಗೊಳ್ಳುತ್ತೇವೆ.
ರಘು, ಮುಖ್ಯ ಎಂಜಿನಿಯರ್, ಬೆಂಗಳೂರು ಜಲ ಮಂಡಳಿ

ಪೂರ್ಣಿಮಾ ಶ್ರೀನಿವಾಸ್, ಡಿಕೆಶಿ ಭೇಟಿ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಬಿಜೆಪಿ ಮಾಜಿ ಶಾಸಕಿ ಪೂರ್ಣಿಮಾ ಶ್ರೀನಿವಾಸ್ ಅವರ ಮನೆಗೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭೇಟಿ ನೀಡಿ ಚರ್ಚೆ ನಡೆಸಿರುವುದು ರಾಜಕೀಯ ವಲಯದಲ್ಲಿ ಕುತೂಹಲಕ್ಕೆ ಕಾರಣವಾಗಿದೆ.

ಪೂರ್ಣಿಮಾ ಶ್ರೀನಿವಾಸ್ ಕಾಂಗ್ರೆಸ್ ಸೇರುತ್ತಾರೆ ಎನ್ನುವ ಊಹಾಪೋಹಗಳ ನಡುವೆಯೇ ಕೆ.ಆರ್. ಪುರ ಕ್ಷೇತ್ರದ ದೇವಸಂದ್ರದಲ್ಲಿರುವ ಅವರ ನಿವಾಸಕ್ಕೆ ಶ್ರೀಕೃಷ್ಣ ಜನ್ಮಾಷ್ಟಮಿ ಹಬ್ಬದ ನೆಪದಲ್ಲಿ ಬುಧವಾರ ಭೇಟಿ ನೀಡಿರುವುದು ಚರ್ಚೆ ಹುಟ್ಟುಹಾಕಿದೆ.

ಈ ವೇಳೆ ಮಾತನಾಡಿದ ಡಿ.ಕೆ. ಶಿವಕುಮಾರ್, 'ಮಾಜಿ ಸಚಿವ ಎ. ಕೃಷ್ಣಪ್ಪ ಅವರು ನಮ್ಮ ನಾಯಕರಾಗಿದ್ದರು. ಅವರ ಸುಪುತ್ರಿ ಪೂರ್ಣಿಮಾ ನನಗೆ ಸಹೋದರಿ ಇದ್ದಂತೆ. ಅವರ ಪತಿ ನನ್ನ ಸ್ನೇಹಿತರು. ಕೃಷ್ಣಜನ್ಮಾಷ್ಟಮಿ ಕಾರ್ಯಕ್ರಮಕ್ಕೆ ಆಹ್ವಾನಿಸಿದ್ದರು. ಹೀಗಾಗಿ, ಇಲ್ಲಿಗೆ ಬಂದು ಭಗವಂತನ ಆಶೀರ್ವಾದ ಪಡೆದು ಊಟ ಮಾಡಿದ್ದೇನೆ. ಇದಕ್ಕೆ ಬೇರೆ ಯಾವುದೇ ಅರ್ಥ ಕಲ್ಪಿಸುವುದು ಬೇಡ' ಎಂದರು.

'ಯಾವುದೇ ರೀತಿಯ ಆಪರೇಷನ್ ಹಸ್ತ ಮಾಡುವುದಕ್ಕೆ ನಾವು ಹೋಗುವುದಿಲ್ಲ. ನಮ್ಮದು ಕೋ-ಆಪರೇಷನ್ ಸರ್ಕಾರ. ಯಾರು ಸಹಕಾರ ನೀಡುತ್ತಾರೋ ಅವರಿಗೆ ಸಹಕಾರ ನೀಡುತ್ತೇವೆ' ಎಂದೂ ಹೇಳಿದರು.

ಪೂರ್ಣಿಮಾ ಶ್ರೀನಿವಾಸ್ ಮಾತನಾಡಿ, 'ಕಾಂಗ್ರೆಸ್ ಪಕ್ಷದಿಂದ ಆಹ್ವಾನ ಬಂದಿರುವುದು ನಿಜ. ಆದರೆ, ಆ ಪಕ್ಷಕ್ಕೆ ಹೋಗುತ್ತೇನೆ ಎನ್ನುವುದು ಸತ್ಯಕ್ಕೆ ದೂರವಾದ ಮಾತು. ಬಿಜೆಪಿ ಬಗ್ಗೆ ಯಾವುದೇ ಅಸಮಾಧಾನ ಇಲ್ಲ' ಎಂದರು.

'ಒಂದು ವೇಳೆ ನಾನು ಕಾಂಗ್ರೆಸ್ ಸೇರುವುದಾದರೆ ಕದ್ದುಮುಚ್ಚಿ ಹೋಗುವುದಿಲ್ಲ. ಎಲ್ಲರಿಗೂ ತಿಳಿಸಿ ಹೋಗುತ್ತೇನೆ. ಹಿಂದುಳಿದ ನಾಯಕರಾಗಿದ್ದ ನನ್ನ ತಂದೆ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದಾರೆ. ಹೀಗಾಗಿ, ನಮ್ಮ ಕುಟುಂಬ ಎಲ್ಲ ಪಕ್ಷಗಳಿಗೆ ಅಗತ್ಯ ಇದೆ. ಕಾಂಗ್ರೆಸ್ ಪಕ್ಷಕ್ಕೂ ಇರಬಹುದು' ಎಂದರು.



ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬುಧವಾರ ಮಾಜಿ ಶಾಸಕಿ ಪೂರ್ಣಿಮಾ ಶ್ರೀನಿವಾಸ್ ಅವರನ್ನು ಭೇಟಿಯಾಗಿ ಚರ್ಚಿಸಿದರು

'ಅಧ್ಯಕ್ಷ ಸ್ಥಾನಕ್ಕೆ ಪಟ್ಟು ಹಿಡಿದಿಲ್ಲ'

ಬೆಂಗಳೂರು: 'ನನ್ನನ್ನು ಪಕ್ಷದ ಅಧ್ಯಕ್ಷ ಮಾಡಿ ಎಂದು ಯಡಿಯೂರಪ್ಪ ಪಟ್ಟು ಹಿಡಿದಿದ್ದಾರೆ ಎನ್ನುವ ವಿಚಾರದಲ್ಲಿ ಹುರುಳಿಲ್ಲ. ಆ ಪ್ರಶ್ನೆ ಉದ್ಭವಿಸುವುದೂ ಇಲ್ಲ' ಎಂದು ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಹಾಗೂ ಶಾಸಕ ಬಿ.ವೈ.ವಿಜಯೇಂದ್ರ ಹೇಳಿದ್ದಾರೆ.

ಪಕ್ಷದ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈ ಬಗ್ಗೆ ವರಿಷ್ಠರ ಜತೆ ಅವರು ಮಾತನಾಡಿಲ್ಲ. ಒಂದು ವೇಳೆ ಮಾತನಾಡಿದ್ದರೂ ಪಕ್ಷಕ್ಕೆ ಕೆಲಸ ಮಾಡಿದ ಯಾವುದೇ ಕಾರ್ಯಕರ್ತನನ್ನಾದರೂ ಅಧ್ಯಕ್ಷ ಮಾಡಿ ಎಂದು ಯಡಿಯೂರಪ್ಪ ಹೇಳುತ್ತಾರೆಯೇ ಹೊರತು, ಮಗನಿಗೆ ಕೊಡಿ ಎಂದು ಹೇಳುವುದಿಲ್ಲ' ಎಂದರು.


'ಲಿಂಗಾಯತರನ್ನು ಪಕ್ಷ ಕಡೆಗಣಿಸಿದೆ ಎಂಬುದು ಸತ್ಯಾಂಶಕ್ಕೆ ದೂರವಾದ ಮಾತು. ನನಗೆ ಶಿಕಾರಿಪುರದಲ್ಲಿ ಟಿಕೆಟ್ ನೀಡಿ ಗೆಲ್ಲಿಸಿದೆ. ಇಷ್ಟರ ಮೇಲೂ ನನಗೆ ಅನ್ಯಾಯ ಆಗಿದೆ ಎಂದು ಹೇಳಿದರೆ ಅದಕ್ಕೆ ಅರ್ಥವಿಲ್ಲ. ಪಕ್ಷದ ಅಧ್ಯಕ್ಷರು ಯಾರಾಗಬೇಕು ಎನ್ನುವುದನ್ನು ಪಕ್ಷದ ವರಿಷ್ಠರು ತೀರ್ಮಾನಿಸುತ್ತಾರೆ' ಎಂದು ವಿಜಯೇಂದ್ರ ಹೇಳಿದರು.

'ರಾಮ, ಕೃಷ್ಣನ ಬಿಟ್ಟರು, ಈಗ ದೇಶದ ಹೆಸರು ಮುನ್ನೆಲೆಗೆ'

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: 'ಬಿಜೆಪಿಯವರು ರಾಮನನ್ನು ಬಿಟ್ಟರು, ಕೃಷ್ಣನನ್ನೂ ಬಿಟ್ಟರು. ಈಗ ದೇಶದ ಹೆಸರು ಮುಂದಿಟ್ಟುಕೊಂಡು ಚುನಾವಣೆಗೆ ಹೊರಟಿದ್ದಾರೆ' ಎಂದು ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ಲೇವಡಿ ಮಾಡಿದರು.

ಬುಧವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, '2024ರ ಚುನಾವಣೆಗೆ ಬಿಜೆಪಿಯವರು ಭಾವನಾತ್ಮಕ ಸಂಗತಿಗಳನ್ನು ಮುಂದಿಟ್ಟುಕೊಂಡು ಹೊರಟಿದ್ದಾರೆ. ಹಿಂದಿನ ಚುನಾವಣೆಯಲ್ಲೂ ಇದನ್ನೇ ಮಾಡಿದ್ದರು. ಈಗ ಅದರಿಂದ ಏನೂ ಉಪಯೋಗ ಇಲ್ಲ. ಇಷ್ಟು ದಿನ ದೇಶದ ಜನ ಇಂಡಿಯಾ ಎಂದು ಕರೆಯುತ್ತಲೇ ಸುಖವಾಗಿ ಇದ್ದರು. ಈಗ ಹೆಸರು ಬದಲಾಯಿಸಿದರೆ ಅವರಿಗೆ ಏನು ಸಿಗುತ್ತದೆ' ಎಂದು ಪ್ರಶ್ನಿಸಿದರು.



ಮಧು ಬಂಗಾರಪ್ಪ

'ಚುನಾವಣೆಗೆ ಹೋಗುವಾಗ ಐದು ವರ್ಷಗಳಲ್ಲಿ ಏನೇನು ಒಳ್ಳೆಯ ಕೆಲಸ ಮಾಡಿದ್ದೇವೆ ಎಂಬುದನ್ನು ಬಿಜೆಪಿಯವರು ಜನರಿಗೆ ಹೇಳಲಿ. ಹೀಗೆ ಭಾವನಾತ್ಮಕ ಆಟಗಳನ್ನು ಆಡಿಸುವುದು ನಿಲ್ಲಿಸಲಿ. ಇಲ್ಲದಿದ್ದರೆ ಜನರೇ ಪಾಠ ಕಲಿಸಲಿದ್ದಾರೆ' ಎಂದು ಅವರು ಹೇಳಿದರು.



ಕಾರ್ಯಕ್ರಮದಲ್ಲಿ ಬಿಎಸ್‌ಪಿ ರಾಜ್ಯ ಉಸ್ತುವಾರಿ ಅಶೋಕ್ ಸಿದ್ಧಾರ್ಥ್ ಮತ್ತು ಬಿಎಸ್‌ಪಿ ರಾಜ್ಯಾಧ್ಯಕ್ಷ ಮಾರಸಂದ್ರ ಮುನಿಯಪ್ಪ ಅವರನ್ನು ಬುಧವಾರ ಸನ್ಮಾನಿಸಲಾಯಿತು —ಪ್ರಜಾವಾಣಿ ಚಿತ್ರ

'ಒಂದು ದೇಶ, ಒಂದು ಚುನಾವಣೆ ದೇಶಕ್ಕೆ ಮಾರಕ'

ಬೆಂಗಳೂರು: 'ಕೇಂದ್ರ ಸರ್ಕಾರ ಜಾರಿಗೊಳಿಸಲು ಮುಂದಾಗಿರುವ ಒಂದು ದೇಶ, ಒಂದು ಚುನಾವಣೆ ದೇಶಕ್ಕೆ ಮಾರಕವಾಗಿದೆ' ಎಂದು ಬಹುಜನ ಸಮಾಜ ಪಕ್ಷದ (ಬಿಎಸ್‌ಪಿ) ರಾಜ್ಯ ಉಸ್ತುವಾರಿ ಅಶೋಕ ಸಿದ್ಧಾರ್ಥ ಹೇಳಿದರು.

ನಗರದಲ್ಲಿ ಬುಧವಾರ ನಡೆದ ಪದಾಧಿಕಾರಿಗಳ ಸಭೆ ಉದ್ಘಾಟಿಸಿ ಮಾತನಾಡಿದ ಅವರು, 'ಕೇಂದ್ರ ಸರ್ಕಾರದ ಜಾರಿಗೊಳಿಸುವ ನೀತಿಗೆ ಬಿಎಸ್‌ಪಿ ವಿರೋಧ ವ್ಯಕ್ತಪಡಿಸಲಿದೆ. ಮುಂಬರುವ ಲೋಕಸಭೆ ಚುನಾವಣೆಗೆ ಕಾರ್ಯಕರ್ತರು ತಳಮಟ್ಟದಿಂದ ಪಕ್ಷವನ್ನು ಬಲಪಡಿಸಬೇಕು' ಎಂದರು.

ಬಿಎಸ್‌ಪಿ ರಾಜ್ಯಾಧ್ಯಕ್ಷ ಮಾರಸಂದ್ರ ಮುನಿಯಪ್ಪ, 'ಮುಂಬರುವ ಲೋಕಸಭೆ ಚುನಾವಣೆ ದೃಷ್ಟಿಯಿಂದ ಪಕ್ಷವನ್ನು ಸಂಘಟಿಸುವ ಉದ್ದೇಶದಿಂದಲೇ ಪದಾಧಿಕಾರಿಗಳ ಸಭೆ ಕರೆಯಲಾಗಿದೆ. ಬಿಜೆಪಿ ಮತ್ತು ಕಾಂಗ್ರೆಸ್ ಒಂದೇ ನಾಣ್ಯದ ಎರಡು ಮುಖಗಳು ಇದ್ದಂತೆ ಆ ಪಕ್ಷಗಳಿಂದ ಅಂತರ ಕಾಯ್ದುಕೊಳ್ಳಬೇಕು' ಎಂದು ಸಲಹೆ ನೀಡಿದರು.

ರಾಜ್ಯ ಪ್ರಧಾನ ಕಾರ್ಯದರ್ಶಿ ಜಾಕೀರ್ ಹುಸೇನ್, ರಾಜ್ಯ ಸಂಯೋಜಕ ಎಂ. ಕೃಷ್ಣಮೂರ್ತಿ, ಪ್ರಧಾನ ಕಾರ್ಯದರ್ಶಿ ಆರ್. ಮುನಿಯಪ್ಪ ಇದ್ದರು.

ಮೈಸೂರು ರೇಸ್

ಫಾರೆಸ್ಟ್ ಫ್ಲೇಮ್ ಗೆಲ್ಲುವ ನಿರೀಕ್ಷೆ

ಹೆಚ್.ಹೆಚ್.ಶ್ರೀ ಕೃಷ್ಣರಾಜ ಒಡೆಯರ್ ಮೆಮೋರಿಯಲ್ ಟ್ರೋಫಿ ಗುರುವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಫಾರೆಸ್ಟ್ ಫ್ಲೇಮ್ ಈ ರೇಸ್ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಹುರ್ರೆಮ್ 7, ಇಕೊ ಸಿಸ್ಟಮ್ 8, ಟಾಪ್ ಯರ್ಾಂಕ್ 10
2ನೇ ರೇಸ್: ರೆಡ್ ಹಿಲ್ಸ್ 2, ಮೆರಾಕಿ 11, ಮಿಸ್ಟಿಕಲ್ ಮರ್ಲಿನ್ 10
3ನೇ ರೇಸ್: ಎಂಬೊಸಮ್ 4, ಬ್ಯೂಟಿಫುಲ್ ಒಬ್ಲಿವಿಯನ್ 3, ಅಸ್ಟ್ರಾಲಜರ್ 6
4ನೇ ರೇಸ್: ಐರಿಷ್ ಕಾಫಿ 3, ಲಾಕ್ ಲೊಮಂಡ್ 6, ಸಾಂತೊರಿನಿ 4
5ನೇ ರೇಸ್: ಒನ್ ಡೈಮಂಡ್ 3, ಅನುಶ್ಟುಬಾ 6, ಜನ್ಯೆರೊ 10
6ನೇ ರೇಸ್: ಫಾರೆಸ್ಟ್ ಫ್ಲೇಮ್ 4, ಎವಾಲ್ಡೊ 1, ಅಗ್ನಾಸ್ಟಿಕ್ 5
7ನೇ ರೇಸ್: ಶಬೆಲ್ 12, ಅಮ್ರೆಲಿ 6, ವಿನ್ ಮೈ ಲುವ್ 8
8ನೇ ರೇಸ್: ಬರ್ಮಿಸಿ 5, ರಿವರ್ ಆಫ್ ಗೋಲ್ಡ್ 6, ಸಿರಾಯ್ 4

ಉತ್ತಮ ಬೆಟ್: ರೆಡ್ ಹಿಲ್ಸ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
4,5,6,7,8	1,2,3	3,4,5	6,7,8

MYSORE RACE CLUB LIMITED
P.B. No. 11, Race Course Road, Mysore - 570 010
Tel: 0821-2521675; Email: secretary@mysoreraceclub.com

ANNUAL GENERAL MEETING

Notice is hereby given that the **FIFTY-FIFTH ANNUAL GENERAL MEETING** of the Members of the Mysore Race Club Limited, Mysuru, will be held at the Registered Office of the Club, Mysuru-570 010, on **Friday, 29th September 2023 at 11.00 a.m.**

By authority of the Committee
Y. B. Ganesh, Chairman
Mysore Race Club Limited

ಭಾರತ ಸರ್ಕಾರ
ಭಾರತೀಯ ವಿಮಾನ ನಿಲ್ದಾಣಗಳ ಆರ್ಥಿಕ ನಿಯಂತ್ರಣಾ ಪ್ರಾಧಿಕಾರ
ಎಇಆರ್‌ಎ ಬಿಲ್ಡಿಂಗ್, ಆಡಳಿತ ಸಮುಚ್ಚಯ,
ಸಫ್ದರಜಂಗ್ ಏರ್‌ಪೋರ್ಟ್, ನವದೆಹಲಿ

ಭಾರತೀಯ ವಿಮಾನ ನಿಲ್ದಾಣಗಳ ಆರ್ಥಿಕ ನಿಯಂತ್ರಣಾ ಪ್ರಾಧಿಕಾರದಲ್ಲಿ ನಿವೃತ್ತ ಸರ್ಕಾರಿ ಉದ್ಯೋಗಿಗಳನ್ನು ಗುತ್ತಿಗೆ ಆಧಾರದಲ್ಲಿ ಸಮಾಲೋಚಕರನ್ನಾಗಿ (ಪಿಪಿಎಸ್/ಪಿಎಸ್ ಹಂತದಲ್ಲಿ) ತೊಡಗಿಸಿಕೊಳ್ಳಲು ಅರ್ಜಿಗಳಿಗೆ ಆಹ್ವಾನ

ಭಾರತೀಯ ವಿಮಾನ ನಿಲ್ದಾಣಗಳ ಆರ್ಥಿಕ ನಿಯಂತ್ರಣಾ ಪ್ರಾಧಿಕಾರವು ಮೂರು (03) ನಿವೃತ್ತ ಸರ್ಕಾರಿ ಉದ್ಯೋಗಿಗಳನ್ನು ಸಮಾಲೋಚಕರು (01 – ಪಿಆರ್. ಖಾಸಗಿ ಕಾರ್ಯದರ್ಶಿ, 02 – ಖಾಸಗಿ ಕಾರ್ಯದರ್ಶಿ) ಎಂಬುದಾಗಿ ಗುತ್ತಿಗೆ ಆಧಾರದಲ್ಲಿ ಪಡೆದುಕೊಳ್ಳಲು ಉದ್ದೇಶಿಸಿರುತ್ತದೆ. ಅವಶ್ಯಕತೆಗೆ ಅನುಗುಣವಾಗಿ ಸಮಾಲೋಚಕರ ಸಂಖ್ಯೆಗಳಲ್ಲಿ ಬದಲಾವಣೆ ಉಂಟಾಗುತ್ತದೆ. ಅಗತ್ಯ ವಿದ್ಯಾರ್ಹತೆ ಮತ್ತು ನಿಗದಿತ ಅನುಭವ ಹೊಂದಿರುವ ಅಭ್ಯರ್ಥಿಯನ್ನು ಸಮಾಲೋಚಕರನ್ನಾಗಿ ನಿಯೋಜಿಸಿಕೊಳ್ಳಲಾಗುತ್ತದೆ. ಆಸಕ್ತಿಯುಳ್ಳ ಅಭ್ಯರ್ಥಿಗಳು, ಕಡ್ಡಾಯವಾಗಿ ತಾವು ಅರ್ಜಿ ಸಲ್ಲಿಸಲು ಬಯಸುವ ಹುದ್ದೆ ಹೆಸರನ್ನು ನಮೂದಿಸತಕ್ಕದ್ದು.

2. ಭಾರತೀಯ ವಿಮಾನ ನಿಲ್ದಾಣಗಳ ಆರ್ಥಿಕ ನಿಯಂತ್ರಣಾ ಪ್ರಾಧಿಕಾರವು ಸಮಾಲೋಚಕರನ್ನು ನಿಯೋಜಿಸಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಅರ್ಹತಾ ಮಾನದಂಡ, ಷರತ್ತು ಮತ್ತು ನಿಬಂಧನೆ ಇತ್ಯಾದಿಗಳನ್ನು ಒಳಗೊಂಡಿರುವ ವಿವರಗಳು ಪ್ರಾಧಿಕಾರದ **www.aera.gov.in** ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ. ಅರ್ಜಿಗಳನ್ನು ಸ್ವೀಕರಿಸುವ ಕೊನೆಯ **ದಿನಾಂಕ 05.10.2023 ರಂದು ಸಂಜೆ 5.30 ಗಂಟೆ.** ಕೊನೆಯ ದಿನಾಂಕ ಮತ್ತು ಸಮಯದ ಬಳಿಕ ಸಂದಾಯವಾಗುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಉಪ ಮುಖ್ಯಸ್ಥರು
ಭಾರತೀಯ ವಿಮಾನ ನಿಲ್ದಾಣಗಳ ಆರ್ಥಿಕ ನಿಯಂತ್ರಣಾ ಪ್ರಾಧಿಕಾರ
ಎಇಆರ್‌ಎ ಬಿಲ್ಡಿಂಗ್, ಆಡಳಿತ ಸಮುಚ್ಚಯ,
ಸಫ್ದರಜಂಗ್ ಏರ್‌ಪೋರ್ಟ್, ನವದೆಹಲಿ – 110003
CBC 03112/12/0015/2324

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

CONNECT ಕ್ಲಾಸಿಫೈಡ್ಸ್

PUBLIC NOTICE

PUBLIC NOTICE

1) **Sajjad Khan.** S/o liameed Khan Aged about 54 years, 2) **Sahira Sultan.** S/o Sajjad khan Aged about 45 years **3) Ummarkhan** S/o Sajjad Khan Aged about 22 years **4) Facha Afreen.** S/o Sajjad Khan Aged about 20 years, **5) Mohammed Farooq Khan** S/o Sajjad Khan Aged about 17 years **6) Zainab.** S/o Sajjad Khan Aged about 16 years No.5 & 6 are minors represented by their Father Sazad khan as natural guardian All are r/at:No.12-126/1, Rivers Side, Thamse West, Udupi, Karnataka -576155

I had issued notice dated:3/6/2023 to all of you under the instruction of my client namely Namathulla Shareef S/o Noorulla Shareef, aged about 34 years, r/at:no.74, 4th main, Muniramanna Block, Ganganagar, Bengaluru-560032, whereby I called upon all of you to execute the regsitered sale deed in favour of my client by reciving the balance of sale consideration as per the agreement of sale dated:5/9/2022 executed by you in favour of my client in respect of land owned by you in Sy.no.78/1B measuring 2-13 guntas, in Sy.no.78/1A measuring 4 Acre 09 guntas, in Sy.no.78/3 measuring 31 guntas, in total measuring 7Acre 13 guntas, situated at Seethahalli village, Tekal Hobli, Malur Taluk, Kolar District. The said notice issued to all of you by RPAD on the address given by you has been returned with an postal shara as **'no such person in the address.'** Since you are now avoiding to contact my client on the matter and not providing your current address, my client by way of this paper publication called upon all of you to execute registered sale deed in favour of my client or his nominee in respect of above said lands by receiving the balance of sale consideration as shown in the agreement of sale dt:5/9/2022, within 10 days from the date of publication of this legal notice, failing which my client will initiate legal proceedings against you before the competent court of law for Specific Performance of Contract under the said Agreement of Sale, holding you are all liable for all costs and consequences arising thereon, which please note.

Mailappa.K Advocate
No: 2, 1st floor, Kathriguppe main road Near Vidyapeeta Circle Opp: to AIRD School, B.S.K.1st stage, Kathriguppe, Bengaluru-50.

BUSINESS

Business to Business

Business

SPECIAL INVITATION for all above 20 years most trusted MNC invites you to business opportunity presentation at Chancery Pavilion Residency RD Bangalore 10 a.m 8th September 2023 registration must on 8310821541

Business Offers

Finance

NRI'S INVESTMENT And Finance Available On Low Interest Against Properties, Land& Building,Sites,Flats,Converted& Agriculture Lands Call:7204995189

REAL ESTATE SELLING

Flat

Sahakarnagar

2BHK READY to Move-In flat available for sale in Sahakarnagar, near ShriramShreyas Apartments. Contact: 7022106263

PERSONAL

Change of Name

CHANGE OF NAME
I, **NEEKSHITHA. S** Residing at #208, 1st Floor, Vardhini And Madku D Homes, Begur Main Road, Opp. SNN Raj Serenity, Yelenahalli, Bengaluru-560068 have changed my name to **NEEKSHITHA RAJATH** vide affidavit dated 6.9.2023 before notary R. Basavaraja, Bengaluru. Henceforth I shall be called **NEEKSHITHA RAJATH** only.

CHANGE OF NAME
I, **INDIRABAI MENON**, W/o Late Rabindra Nath Menon Aged about 67 years, C/o Vikram Menon, No 149, Confident Bellatrix, Billapura Cross, Near Indus International School, Sarjapura, Hobli Anekal Taluk, Bangalore- 562125. have changed my name to **INDIRA MENON** vide affidavit dated 02.09.2023 sworn before notary Roopa G Bhandare Bengaluru. Henceforth I shall be called **INDIRA MENON** only.

I ASHWIN Kumar S/O, Pundalik Chalkapure R/o H No 1-891/76/20, Karuneshwar Nagar, Jewargi Road, Gulbarga, 585102 have changed my name to Ashwin Kumar Chalkapure vide affidavit dt: 05/09/2023 sworn before notary Ravi B. Chavan, Kalaburagi.

ARTI DWARKANATH, Wife/o 14819580M, HAV/DVRSPLVEH, BHASKAR SANTOSH ASARAM, Vill-Khirdi Ganesh, Yesgaon, Kopargaon, Ahmednagar, Maharashtra changed name from ARTI DWARKANATH to ARTI SANTOSH BHASKAR, 06/09/2023, Notary K.V. Mani, Bangalore

C SANTHA, Mother/o JC675048M, SUB/MT, SIVA KUMAR C, Vill-Vannankuttai, Puthagaram, Tirupathur, Vellore, Tamil Nadu changed name C SANTHA to SANTHA CHINNATHAMBI, 05/09/2023, Notary K.V. Mani, Bangalore

WE M.RADHIKA and K.Murali both R/a Gangadara Nellor,Chittoor, Andhra Pradesh-517421 we declare that our child in Birth Certificate mentioned as MURARI GOTHAM. M.instead of MOKSHITH GOWTHAM. M.(DOB: 15-09-2020) vide affidavit dated 4-9-2023 sworn before Notary M.S.Satish, Bangalore.

I,RADHA MEDAPPA,W/O Medappa K.M.R/a No.532, #PH1,4th Floor,G.R.R. Residency,8th Main Road,Near Venkateshwara Temple,BEML Layout, Thubarahalli,Ramagondanahalli,Whitefield, Bengaluru-560066 after marriage I have changed my name from RADHA B.M.to RADHA MEDAPPA vide affidavit dated 6-9-2023 Sworn before Notary B.K.R. Krishnamurthy, Bangalore.Henceforth,I shall be called as RADHA MEDAPPA only

CHINNA THAMBI, Father/o JC675048M, SUB/MT, SIVA KUMAR C, Vill-Vannankuttai, Puthagaram, Tirupathur, Vellore, Tamil Nadu changed name CHINNA THAMBI to CHINNATHAMBI EAGAMBARAM, 05/09/2023, Notary K.V. Mani, Bangalore

Lost

DOCUMENT LOST
I, Krishnmurthy R/at No.426/B, BDA Layout, 4th Block, Anjanapura, Bengaluru city, Karnataka do hereby declare that, I have lost Khata Certificate bearing No. 426/B BDA/RO/AP 4/12-13 of Anjanapura 4th Block and hence a complaint is lodged in concerned Police station.
Finders Please contact: 8884044330

DOCUMENT LOST
I, **M. KUMARA VELU,** S/o. K. Masilamani have lost my Original Sale Deed document No. **BNS-1-02961- 2014-15, CD No. BNSD314,** of DS- Max Solitaire, Hormavu Agara village, K.R. Puram Hobli, Bengaluru. while shifting the house.
Finders please Contact: 8197002745

ಸ್ಪಂದನ ಕ್ರೆಡಿಟ್ ಸೌಹಾರ್ದ ಸಹಕಾರ ಸಂಘ ನಿಯಮಿತ
Spandana Credit Souharda Sahakara Sangha Niyamitha
ನೋಂದಣಿ 37/ಸೌಕೋ ನೋಂದಣಿ 2297/2010-11
"ಪುಣ್ಯಕೋಟಿ, ನಂ.1587, 3ನೇ ಮುಖ್ಯರಸ್ತೆ, ಚಂದ್ರಬಡಾವಣೆ, ಬೆಂಗಳೂರು-56010, ದೂರವಾಣಿ : 080-23185584

3ನೇ ಸರ್ವಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯ ಆಹ್ವಾನ ಪತ್ರಿಕೆ

ಮೇಲ್ಕಂಡ ಸಹಕಾರಿಯ 2022-23ನೇ ಸಾಲಿನ 3ನೇ ವಾರ್ಷಿಕ ಸಾಮಾನ್ಯ ಸರ್ವ ಸದಸ್ಯರ ಸಭೆಯನ್ನು ದಿನಾಂಕ : 24-09-2023 ರಂದು ಭಾನುವಾರ ಮಧ್ಯಾಹ್ನ 12-30 ಗಂಟೆಗೆ ಸರಿಯಾಗಿ ಕಾಸಿಯಾ ಸಭಾಂಗಣ, ನಂ.2/106, 17ನೇ ಅಡ್ಡರಸ್ತೆ, ಮಾಗಡಿ ಕಾರ್ಡ್‌ರೋಡ್, ವಿಜಯನಗರ, ಬೆಂಗಳೂರು-560040, ಇದರಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಸಹಕಾರಿಯ ಸದಸ್ಯರೆಲ್ಲರೂ ದಯಮಾಡಿ ಸಕಾಲಕ್ಕೆ ಸಭೆಗೆ ಆಗಮಿಸಿ ಭಾಗವಹಿಸಬೇಕಾಗಿ ಈ ಮೂಲಕ ಕೋರಿದೆ.

ಸ್ಥಳ : ಬೆಂಗಳೂರು
ದಿನಾಂಕ: 07-09-2023

ಶ್ರೀಮತಿ ಚಂದ್ರಕಲಾ.ಪಿ.
ಪ್ರಭಾರ ಕಾರ್ಯದರ್ಶಿ

ಸಿರಿಗಂಧ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ
Sirigandha House Building Co-operative Society Ltd.
(ನೋಂದಣಿ ಕ್ರಮಾಂಕ : HSG.1/28/HHS/38527/2009-10)
"ಪುಣ್ಯಕೋಟಿ, ನಂ.1587, 3ನೇ ಮುಖ್ಯರಸ್ತೆ, ಚಂದ್ರಬಡಾವಣೆ, ಬೆಂಗಳೂರು-56010, ದೂರವಾಣಿ : 080-23184471

14ನೇ ಸರ್ವಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯ ಆಹ್ವಾನ ಪತ್ರಿಕೆ

ಮೇಲ್ಕಂಡ ಸಹಕಾರ ಸಂಘದ 2022-23ನೇ ಸಾಲಿನ 14ನೇ ವಾರ್ಷಿಕ ಸಾಮಾನ್ಯ ಸರ್ವ ಸದಸ್ಯರ ಸಭೆಯನ್ನು ದಿನಾಂಕ : 24-09-2023 ರಂದು ಭಾನುವಾರ ಬೆಳಗ್ಗೆ 11.00 ಗಂಟೆಗೆ ಸರಿಯಾಗಿ ಕಾಸಿಯಾ, ಸಭಾಂಗಣ, ನಂ.2/16, 17ನೇ ಅಡ್ಡರಸ್ತೆ, ಮಾಗಡಿ ಕಾರ್ಡ್‌ರೋಡ್, ವಿಜಯನಗರ, ಬೆಂಗಳೂರು-560040, ಇದರಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಸಹಕಾರಿಯ ಸದಸ್ಯರೆಲ್ಲರೂ ದಯಮಾಡಿ ಸಕಾಲಕ್ಕೆ ಸಭೆಗೆ ಆಗಮಿಸಿ ಭಾಗವಹಿಸಬೇಕಾಗಿ ಈ ಮೂಲಕ ಕೋರಿದೆ.

ಸ್ಥಳ : ಬೆಂಗಳೂರು
ದಿನಾಂಕ: 07-09-2023

ಶ್ರೀಮತಿ ದೀಪಾ ಬಿ.ಎ.
ಕಾರ್ಯದರ್ಶಿ

ಚಾರ್ಟರ್ಡ್ ಸಹಕಾರಿ ಬ್ಯಾಂಕ್ ನಿಯಮಿತ
ನಂ. 1, 1ನೇ ಮುಖ್ಯ ರಸ್ತೆ, 1ನೇ ಬ್ಲಾಕ್, ಕೋರಮಂಗಲ, ಬೆಂಗಳೂರು – 560034
Ph.: 080 - 25526266 / 25526288, Website : www.csbank.in

ಸರ್ವ ಸದಸ್ಯರ ಸಭೆಯ ಸೂಚನಾ ಪ್ರಕಟಣೆ

ನಮ್ಮ ಬ್ಯಾಂಕಿನ 23ನೇ ವಾರ್ಷಿಕ ಅಂದರೆ 2022-23 ರ ಸಾಲಿನ ಸರ್ವ ಸದಸ್ಯರ ಸಭೆಯನ್ನು ದಿನಾಂಕ 10ನೇ ಸೆಪ್ಟೆಂಬರ್ 2023ರ ಭಾನುವಾರ ಬೆಳಗ್ಗೆ 10.30 ಘಂಟೆಗೆ ಸೈಂಟ್ ಜಾನ್ಸ್ ಆಡಿಟೋರಿಯಂ, ಮಹಾಯೋಗಿ ವೇಮನ ರಸ್ತೆ, ಬಿಡಿಎ ಕಾಂಪ್ಲೆಕ್ಸ್ ಎದುರು, ಕೋರಮಂಗಲ, ಬೆಂಗಳೂರು-560034 ಇಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಸದಸ್ಯರು ಈ ಸಭೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ. ಸೂಚನಾ ಪತ್ರವನ್ನು ಸದಸ್ಯರಿಗೆ ಅಂಚೆ ಮೂಲಕ ಕಳುಹಿಸಲಾಗಿದ್ದು, ತಲುಪದಿದ್ದಲ್ಲಿ ಈ ಪ್ರಕಟಣೆಯನ್ನು ಸೂಚನಾ ಪತ್ರವೆಂದು ತಿಳಿದು ಸರ್ವಸದಸ್ಯರ ಸಭೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ. ವಾರ್ಷಿಕ ವರದಿಯನ್ನು ಬ್ಯಾಂಕಿನ ವೆಬ್‌ಸೈಟ್: (www.csbank.in) ನಲ್ಲಿ ಪ್ರಕಟಿಸಿದ್ದು ತಾವುಗಳು ವೀಕ್ಷಿಸಬಹುದು.

ದಿನಾಂಕ : 06-09-2023
ಸ್ಥಳ : ಬೆಂಗಳೂರು

ಆಡಳಿತ ಮಂಡಳಿಯ ಪರವಾಗಿ
ಸಹಿ/- (ಶಿವಣ್ಣ ಕೆ.ಬಿ.)
ಮುಖ್ಯ ಕಾರ್ಯನಿರ್ವಹಣಾಧಿಕಾರಿ

ದಿನಾಂಕ 30-12-2022 ರಂದು ಕರ್ನಾಟಕ ಸರ್ಕಾರದ ಸಹಕಾರ ಇಲಾಖೆಯವರು ನಮ್ಮ ಬ್ಯಾಂಕ್‌ನ್ನು "ಉತ್ತಮ ಸಹಕಾರಿ ಬ್ಯಾಂಕ್ " (Best Co - Operative Bank) ಎಂದು ಗುರುತಿಸಿ ಪ್ರಶಸ್ತಿ ಪತ್ರ ನೀಡಿ ಗೌರವಿಸಿರುತ್ತಾರೆ ಎಂದು ತಿಳಿಸಲು ಹರ್ಷಿಸುತ್ತೇವೆ.

RATE OF INTEREST ON DEPOSITS		INTEREST RATES ON LOANS	
PERIOD	R.O.I.	TYPE OF LOAN	INTEREST RATE
31 Days to 90 Days	4.25%	Housing Loan	8.75%
91 Days to 179 Days	4.75%	Education Loan	9.00%
6 Months to 11 Months	5.75%	Vehicle Loan	9.00%
12 Months to 24 Months	7.25%	Mortgage Loan	10.25%
25 Months to 120 Months	7.00%	Overdraft	10.25%

(Senior citizen 0.50% extra for deposits held for one year and above)

ಬಿಜಿಎಸ್‌ಇ ಫೈನಾನ್ಷ್ಯಲ್ಸ್ ಲಿಮಿಟೆಡ್
CIN: U67120KA1999PLC025860
ಸ್ಟಾಕ್ ಎಕ್ಸ್‌ಚೇಂಜ್ ಟವರ್ಸ್, 51, 4ನೇ ಕ್ರಾಸ್, ಜೆ.ಸಿ. ರಸ್ತೆ, ಬೆಂಗಳೂರು 560027
ಫೋನ್: 080–66677325; ಇಮೇಲ್: cs@bfsl.co.in; ವೆಬ್‌ಸೈಟ್: www.bfsl.co.in

24ನೇ ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನೆ

ಎಜಿಎಮ್ ಸೂಚನೆ: ಬಿಜಿಎಸ್‌ಇ ಫೈನಾನ್ಷ್ಯಲ್ ಲಿಮಿಟೆಡ್, ತನ್ನ **24ನೇ ವಾರ್ಷಿಕ ಸರ್ವಸದಸ್ಯರ ಸಭೆಯನ್ನು (AGM) ಶನಿವಾರ, 30ನೇ ಸೆಪ್ಟೆಂಬರ್, 2023 ರಂದು ಬೆಳಗ್ಗೆ 09.30 ಗಂಟೆಗೆ** (ಭಾ.ಕಾ.) ಒಂದು ಸಾಮಾನ್ಯ ಸ್ಥಳದಲ್ಲಿ ಸದಸ್ಯರ ಭೌತಿಕ ಉಪಸ್ಥಿತಿ ಇಲ್ಲದೆಯೇ, ಕಂಪನಿಗಳ ಅಧಿನಿಯಮ, 2013ರ ಅನ್ವಯವಾಗುವ ನಿಬಂಧನೆಗಳನ್ನು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು (MCA) ಹೊರಡಿಸಿರುವ ಸಂ. 14/2020 ದಿ.08ನೇ ಏಪ್ರಿಲ್ 2020, 17/2020 ದಿ.13ನೇ ಏಪ್ರಿಲ್ 2020, 22/2020 ದಿ.15ನೇ ಜೂನ್, 2020, 33/2020 ದಿ.28ನೇ ಸೆಪ್ಟೆಂಬರ್ 2020, 39/2020 ದಿ.31ನೇ ಡಿಸೆಂಬರ್ 2020, 10/2021 ದಿ.23ನೇ ಜೂನ್, 2021, ಮತ್ತು 19/2021 ದಿ.08ನೇ ಡಿಸೆಂಬರ್ 2021 ಮತ್ತು 02/2022 ದಿ.05ನೇ ಮೇ, 2022 ಸಾಮಾನ್ಯ ಸುತ್ತೋಲೆಗಳ ಜೊತೆ ಮತ್ತು 2013ರ ಅನ್ವಯವಾಗುವ ನಿಬಂಧನೆಗಳನ್ನು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು (MCA) 'ಕೋವಿಡ್–19 ಬೆದರಿಕೆಯ ಕಾರಣದಿಂದಾಗಿ ಕಂಪನಿಗಳು ಸಾಮಾನ್ಯ ಮತ್ತು ವಿಶೇಷ ನಿರ್ಣಯಗಳನ್ನು ಅಂಗೀಕರಿಸುವ ಬಗ್ಗೆ ಸ್ಪಷ್ಟೀಕರಣ ನೀಡುವ ಸಲುವಾಗಿ ಕಂಪನಿಗಳ ಕಾಯಿದೆ, 2013 ಮತ್ತು ಅದರ ಅಡಿಯಲ್ಲಿ ಮಾಡಿದ ನಿಯಮಗಳು' ಕುರಿತಂತೆ ಹೊರಡಿಸಿರುವ 28.12.2022 ದಿನಾಂಕದ ಸಾಮಾನ್ಯ ಸುತ್ತೋಲೆ ಸಂಖ್ಯೆ 11/2022 ಮತ್ತು ಜನವರಿ 13, 2021 ದಿನಾಂಕದ ಸಾಮಾನ್ಯ ಸುತ್ತೋಲೆ 02/2021 (ಒಟ್ಟಾಗಿ ಇವುಗಳನ್ನು 'ಎಂಸಿಎ ಸುತ್ತೋಲೆಗಳು' ಎಂದು ಉಲ್ಲೇಖಿಸಲಾಗುತ್ತದೆ) ಜೊತೆ ಓದಿಕೊಂಡ ಪ್ರಕಾರ ವಿಡಿಯೊ ಕಾನ್ಫರೆನ್ಸ್ (VC) ಅಥವಾ ಇತರೆ ಶ್ರವಣ–ದೃಶ್ಯ ಮಾಧ್ಯಮಗಳ (OAVM) ಮೂಲಕ ನಡೆಸಲು ಉದ್ದೇಶಿಸಿದೆ ಎಂದು ಈ ಮೂಲಕ ಕಂಪನಿಯ ಸದಸ್ಯರೆಲ್ಲರಿಗೂ ಸೂಚನೆಯನ್ನು ನೀಡಲಾಗುತ್ತಿದೆ.

ದಾಖಲೆಗಳ ಲಭ್ಯತೆ: ಯಾರೆಲ್ಲ ಸದಸ್ಯರು ತಮ್ಮ ಇಮೇಲ್ ವಿಳಾಸಗಳನ್ನು ಡಿಪಾಸಿಟರಿ ಪಾರ್ಟಿಸಿಪೆಂಟರು (DPs) ಮತ್ತು ಕಂಪನಿಯೊಂದಿಗೆ/ರಿಜಿಸ್ಟ್ರಾರ್ ಮತ್ತು ಟ್ರಾನ್ಸ್ಫರ್ ಏಜೆಂಟರೊಂದಿಗೆ (RTA) ನೋಂದಾಯಿಸಿಕೊಂಡಿದ್ದಾರೋ ಅಂತಹ ಸದಸ್ಯರೆಲ್ಲರಿಗೂ ಕಂಪನಿಯು 24ನೇ ಎಜಿಎಮ್ ಸೂಚನೆಯ ಮತ್ತು 2022–23 ಸಾಲಿನ ವಾರ್ಷಿಕ ವರದಿಯ ಪ್ರತಿಗಳನ್ನು ಕಳುಹಿಸಲಾಗಿದೆ. ಜೊತೆಗೆ, ಈ ದಾಖಲೆಗಳು ಕಂಪನಿಯ ವೆಬ್‌ಸೈಟ್ www.bfsl.co.in ನಲ್ಲೂ ಲಭ್ಯವಿರುವಂತೆ ವ್ಯವಸ್ಥೆ ಮಾಡಲಾಗಿದೆ.

ಇ–ಮತದಾನ: ಸದಸ್ಯರು ಬುಧವಾರ, 27ನೇ ಸೆಪ್ಟೆಂಬರ್ 2023 ಬೆಳಗ್ಗೆ 09:00 (ಭಾ.ಕಾ) ರಿಂದ ಶುಕ್ರವಾರ, 29ನೇ ಸೆಪ್ಟೆಂಬರ್ 2023 ಸಂಜೆ 5:00 (ಭಾ.ಕಾ) ವರೆಗೆ ಆನ್‌ಲೈನ್‌ನಲ್ಲಿ ಮತ ಚಲಾಯಿಸಬಹುದು; ರಿಮೋಟ್ ಇ–ವೋಟಿಂಗ್ ಅವಧಿ ಮುಗಿದೊಡನೆ ಸದರಿ ಸೌಲಭ್ಯವನ್ನು ಸ್ಥಗಿತಗೊಳಿಸಲಾಗುತ್ತದೆ. ಅಂತಿಮ ದಿನವಾದ ಶುಕ್ರವಾರ, 22ನೇ ಸೆಪ್ಟೆಂಬರ್ 2023 ನಂತರ ಕಂಪನಿಯ ಸದಸ್ಯರಾದ ವ್ಯಕ್ತಿಗಳು ಈ ಎಜಿಎಮ್ ಸೂಚನೆಯನ್ನು ತಮ್ಮ ಮಾಹಿತಿಗಾಗಿ ಮಾತ್ರವೇ ಎಂದು ಪರಿಗಣಿಸಬೇಕು.

ಯಾವ ಸದಸ್ಯರು ಡೀಮ್ಯಾಟ್ ಅಥವಾ ಭೌತಿಕ ರೂಪದಲ್ಲಿ ತಮ್ಮ ಷೇರುಗಳನ್ನು ಹೊದಿರುವರೋ, ಅಥವಾ ಯಾರು ತಮ್ಮ ಇಮೇಲ್ ವಿಳಾಸಗಳನ್ನು ಕಂಪನಿಯೊಂದಿಗೆ ನೋಂದಾಯಿಸಿಕೊಂಡಿಲ್ಲವೋ, ಅಂತಹ ಸದಸ್ಯರು ಸಭೆಯು ನಡೆಯುವ ಅವಧಿಯಲ್ಲಿ ರಿಮೋಟ್ ಇ–ಮತದಾನ ಅಥವಾ ಇ–ಮತದಾನದ ಮೂಲಕ ತಮ್ಮ ಮತಗಳನ್ನು ಚಲಾಯಿಸಬಹುದು. ಭೌತಿಕ ರೂಪದಲ್ಲಿ ಷೇರು(ಗಳನ್ನು) ಹೊಂದಿರುವ ಸದಸ್ಯರು ಕಂಪನಿಯ **enquiry@bfsl.co.in** ಅಥವಾ **cs@bfsl.co.in** ಇಮೇಲ್ ವಿಳಾಸಕ್ಕೆ ಬರೆದು ತಾವು ಹೊಂದಿರುವ ಷೇರುಗಳ ಕುರಿತಾದ ಅಗತ್ಯ ವಿವರಗಳನ್ನು ಮತ್ತು ದಾಖಲೆಗಳನ್ನು ನೀಡಿ ತಮ್ಮ ಇಮೇಲ್ ಐಡಿಗಳನ್ನು ಕಂಪನಿಯೊಂದಿಗೆ ನೋಂದಾಯಿಸಿಕೊಳ್ಳಬಹುದು; ವಿದ್ಯುನ್ಮಾನ ರೂಪದಲ್ಲಿ ಷೇರು(ಗಳನ್ನು) ಹೊಂದಿರುವ ಸದಸ್ಯರು ಕಂಪನಿಯಿಂದ ಬರುವ ಎಲ್ಲ ಸಂವಹನವನ್ನೂ ವಿದ್ಯುನ್ಮಾನ ರೂಪದಲ್ಲಿ ಸ್ವೀಕರಿಸಲು ಸಾಧ್ಯವಾಗುವಂತೆ ತಮಗೆ ಸಂಬಂಧಪಟ್ಟ ಡಿಪಾಸಿಟರಿ ಪಾರ್ಟಿಸಿಪೆಂಟರೊಂದಿಗೆ (DPs) ತಮ್ಮ ಇಮೇಲ್ ವಿಳಾಸಗಳನ್ನು ದಾಖಲಿಸಿಕೊಳ್ಳಬೇಕಾಗಿ / ನವೀಕರಿಸಬೇಕಾಗಿ ಕೋರುತ್ತೇವೆ.

ವಿಸಿ ಮೂಲಕ ಸಭೆಯನ್ನು ಪ್ರವೇಶಿಸಲು ಮತ್ತು ಭಾಗವಹಿಸಲು ತಾಂತ್ರಿಕ ನೆರವು ಅಗತ್ಯವಿರುವ ಸದಸ್ಯರು ಇಮೇಲ್–ಐಡಿ helpdesk.evoting@cdslindia.com ಗೆ ವಿನಂತಿಯನ್ನು ಕಳುಹಿಸುವ ಮೂಲಕ ಸಹಾಯವಾಣಿಯನ್ನು ಸಂಪರ್ಕಿಸಬಹುದು ಅಥವಾ 022– 23058738 ಮತ್ತು 022–23058542–43 ಮೂಲಕ ಇ–ಮತದಾನ ಸೇವೆ ಒದಗಿಸುವ ಸೆಂಟ್ರಲ್ ಡಿಪಾಸಿಟರಿ ಸರ್ವೀಸಸ್ (ಇಂಡಿಯಾ) ಲಿಮಿಟೆಡ್ (ಸಿಡಿಎಸ್‌ಎಲ್) ಅನ್ನು ಸಂಪರ್ಕಿಸಬಹುದು.

ಪುಸ್ತಕ ಮುಚ್ಚಿರುವ ದಿನಾಂಕ: ವಾರ್ಷಿಕ ಸಾಮಾನ್ಯ ಸಭೆಯ ಉದ್ದೇಶಕ್ಕಾಗಿ ಸದಸ್ಯರ ನೋಂದಣಿ ಮತ್ತು ಷೇರು ವರ್ಗಾವಣೆ ಪುಸ್ತಕವನ್ನು 23–09–2023 ರಿಂದ 30–09–2023 ವರೆಗೆ (ಎರಡು ದಿನಗಳೂ ಸೇರಿವೆ) ಮುಚ್ಚಲಾಗುತ್ತದೆ.

ಅಂತಿಮ ದಿನಾಂಕ: ಸದಸ್ಯರ ಮತದಾನದ ಹಕ್ಕುಗಳು ಅಂತಿಮ ದಿನಾಂಕ ದಿನಾಂಕದಂದು ಅಂದರೆ ಶುಕ್ರವಾರ, 22ನೇ ಸೆಪ್ಟೆಂಬರ್ 2023 ರಂದು ಕಂಪನಿಯ ಪಾವತಿಸಿದ ಇಕ್ವಿಟಿ ಷೇರು ಬಂಡವಾಳದಲ್ಲಿನ ಅವರ ಷೇರುಗಳ ಅನುಪಾತದಲ್ಲಿರುತ್ತದೆ.

ಸ್ಥಳ: ಬೆಂಗಳೂರು
ದಿನಾಂಕ: 05/09/2023

ನಿರ್ದೇಶಕರ ಮಂಡಲಿಯ ಆದೇಶದ ಮೇರೆಗೆ
ಸಹಿ/– (ಪ್ರಮೋದ್ ಗೌತಮಚಂದ್ ಜೈನ್)
ಪೂರ್ಣಾವಧಿ ನಿರ್ದೇಶಕರು




ಉಡುಪಿಯ ಕೃಷ್ಣಮಠದಲ್ಲಿ ಬುಧವಾರ ಕೃಷ್ಣ ಜನ್ಮಾಷ್ಟಮಿ ಅಂಗವಾಗಿ ಕಡೆಗೋಲು ಕೃಷ್ಣನಿಗೆ ಬೆಣ್ಣೆ ಕೃಷ್ಣನ ಅಲಂಕಾರ ಮಾಡಲಾಗಿತ್ತು (ಎಡಚಿತ್ರ), ಮಂಗಳೂರಿನ ಕದ್ರಿ ದೇವಸ್ಥಾನದಲ್ಲಿ ಕಲ್ಕೂರ ಪ್ರತಿಷ್ಠಾನದ ಆಶ್ರಯದಲ್ಲಿ ನಡೆದ ಕೃಷ್ಣವೇಷ ಸ್ಪರ್ಧೆಯಲ್ಲಿ ರಾಧಾ ಮಾಧವ ವೇಷದಲ್ಲಿ ಮೋಕ್ಷ ಮತ್ತು ಅದಿತಿ ಗಮನ ಸೆಳೆದರು
– ಪ್ರಜಾವಾಣಿ ಚಿತ್ರ / ಫಕ್ರುದ್ದೀನ್ ಎಚ್‌

ಉಡುಪಿ ಕೃಷ್ಣಮಠದಲ್ಲಿ ಕೃಷ್ಣ ಜನ್ಮಾಷ್ಟಮಿ ಸಂಭ್ರಮ: ಇಂದು ವಿಟ್ಲಪಿಂಡಿ ಉತ್ಸವ

ಬೆಣ್ಣೆ ಕೃಷ್ಣನಾಗಿ ಕಂಗೊಳಿಸಿದ ಗೋಪಾಲ

ಪ್ರಜಾವಾಣಿ ವಾರ್ತೆ

ಉಡುಪಿ: ಇಲ್ಲಿಯ ಕೃಷ್ಣಮಠದಲ್ಲಿ ಬುಧವಾರ ಶ್ರದ್ಧಾಭಕ್ತಿಯಿಂದ ಕೃಷ್ಣ ಜನ್ಮಾಷ್ಟಮಿ ಆಚರಿಸಲಾಯಿತು. ಅಷ್ಟಮಿಯ ಅಂಗವಾಗಿ ಕಡೆಗೋಲು ಕೃಷ್ಣನಿಗೆ ಬೆಣ್ಣೆ ಕೃಷ್ಣನ ಅಲಂಕಾರ ಮಾಡಲಾಗಿತ್ತು.

ಪರ್ಯಾಯ ಕೃಷ್ಣಾಪುರ ಮಠದ ವಿದ್ಯಾಸಾಗರ ತೀರ್ಥ ಸ್ವಾಮೀಜಿ ಕಡೆಗೋಲು ಕೃಷ್ಣನಿಗೆ ಮಹಾಪೂಜೆ ನೆರವೇರಿಸಿದರು. ಹೆಚ್ಚಿನ ಸಂಖ್ಯೆಯ ಭಕ್ತರು ಆಗಮಿಸಿ ಕೃಷ್ಣನ ದರ್ಶನ ಪಡೆದರು. ರಥಬಿದಿಯ ಪರಿಸರದಲ್ಲಿ ಭಕ್ತ ಸಾಗರವೇ ನೆರೆದಿತ್ತು. ಕೃಷ್ಣಮಠಕ್ಕೆ ಹಲವು ಬಗೆಯ ಹೂಗಳಿಂದ ವಿಶೇಷ ಅಲಂಕಾರ ಮಾಡಲಾಗಿತ್ತು.

ಕೃಷ್ಣಮಠದಲ್ಲಿ ಮುದ್ದು ಕೃಷ್ಣ ವೇಷ ಸ್ಪರ್ಧೆಗಳು ನಡೆದವು. ನೂರಾರು ಹುಲಿ ಕುಣಿತ ತಂಡಗಳು ಹಾಗೂ ವೇಷಧಾರಿಗಳು ಪ್ರದರ್ಶನ ನೀಡಿ ಸಾರ್ವಜನಿಕರನ್ನು ರಂಜಿಸಿದರು.

ಗುರುವಾರ ಮಧ್ಯಾಹ್ನ ವಿಟ್ಲಪಿಂಡಿ ಉತ್ಸವ ನಡೆಯಲಿದ್ದು ಕೃಷ್ಣನನ್ನು ಚಿನ್ನದ ರಥದಲ್ಲಿ ಪ್ರತಿಷ್ಠಾಪಿಸಿ ಮೆರವಣಿಗೆ ಮಾಡಲಾಗುವುದು. ಈ ಸಂದರ್ಭ ಮೊಸರು ಕುಡಿಕೆ ಒಡೆಯುವ ಆಚರಣೆ ನಡೆಯಲಿದೆ.

ಸಿ.ಎಂ ಕರೆದಿದ್ದ ಸಭೆಗೆ ಚಾಲಕರು, ಮಾಲೀಕರು ಬಂದಿಲ್ಲ: ಸಾರಿಗೆ ಸಚಿವ ರಾಮಲಿಂಗಾರೆಡ್ಡಿ

‘ಚಾಲಕರ ಬೇಡಿಕೆ ಈಡೇರಿಕೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಾರಿಗೆ ಒಕ್ಕೂಟ ಹಾಗೂ ಇತರೆ ಸರಕು ಸಾಗಣೆ, ಆಟೊ, ಟ್ಯಾಕ್ಸಿ, ಮ್ಯಾಕ್ಸಿ ಕ್ಯಾಬ್, ಖಾಸಗಿ ಬಸ್‌ಗಳ ಮಾಲೀಕರು/ ಚಾಲಕರ ಬೇಡಿಕೆಗಳನ್ನು ಬಹುತೇಕ ಈಡೇರಿಸಲಾಗಿದೆ. ಹಣಕಾಸು ಇಲಾಖೆಗೆ ಸಂಬಂಧಿಸಿದ ಬೇಡಿಕೆಗಳನ್ನು ಮುಖ್ಯಮಂತ್ರಿಯವರ ಜತೆ ಚರ್ಚಿಸಲು ಅವರೇ ಬಂದಿಲ್ಲ’ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, ‘ಆಟೊ ಚಾಲಕರಿಗೆ ತಿಂಗಳ ಪರಿಹಾರ, ವಾಹನಗಳ ಜೀವಾವಧಿ ತೆರಿಗೆಯನ್ನು ಕಂತಿನಲ್ಲಿ ಪಾವತಿಸುವುದು, ಶಕ್ತಿ ಯೋಜನೆಯಿಂದ ಕೆಎಸ್‌ಆರ್‌ಟಿಸಿಗೆ ಸರ್ಕಾರ ನೀಡುತ್ತಿರುವ ರೀತಿಯಲ್ಲಿ ಖಾಸಗಿ ವಾಹನಗಳಿಗೆ ಮರುಪಾವತಿ ಅಥವಾ ರಸ್ತೆ ತೆರಿಗೆ ಸಂಪೂರ್ಣ ರದ್ದು, ರಸ್ತೆ ತೆರಿಗೆ ಕಡಿತಗೊಳಿಸುವ ಬೇಡಿಕೆಗಳ ಬಗ್ಗೆ ಹಣಕಾಸು ಖಾತೆ ಹೊಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಿರ್ಧಾರ ಕೈಗೊಳ್ಳಬೇಕು. ಅವರು ಕರೆದಿದ್ದ ಸಭೆಗೆ ಬಾರದೆ ಒಕ್ಕೂಟ ಸದಸ್ಯರು ಇದೀಗ ಮುಷ್ಕರ ಮಾಡುತ್ತೇವೆ ಎನ್ನುತ್ತಿದ್ದಾರೆ’ ಎಂದು ದೂರಿದರು.

‘ಸಾರಿಗೆ ಇಲಾಖೆಯ ಸಾರಥಿ ದತ್ತಾಂಶದಲ್ಲಿ 3.64 ಲಕ್ಷ ಚಾಲಕರಿದ್ದಾರೆ. ಇವರಿಗೆ ಪ್ರತಿ ತಿಂಗಳು ₹10 ಸಾವಿರ ಪರಿಹಾರ ನೀಡಲು ₹4,370 ಕೋಟಿ ಬೇಕಾಗುತ್ತದೆ. ಇದನ್ನು ಮುಖ್ಯಮಂತ್ರಿಯವರು ನಿರ್ಧರಿಸಬೇಕು. ಒಕ್ಕೂಟ ಮಾಡಿಕೊಂಡಿರುವವರು 10 ಜನರನ್ನು ಸಭೆಗೆ ಕಳುಹಿಸಿ ಮುಖ್ಯಮಂತ್ರಿಯವರೊಂದಿಗೆ ಚರ್ಚಿಸಬೇಕಿತ್ತು. ಆಗ ಬರಲಿಲ್ಲ, ಇದೀಗ ಸರ್ಕಾರ ಅವರ ಬಳಿ ಬರಬೇಕು ಎನ್ನುವುದು ಸರಿಯಲ್ಲ’ ಎಂದು ಹೇಳಿದರು.

ನಿಗಮ ಸ್ಥಾಪನೆ: ಅಸಂಘಟಿತ ವಾಣಿಜ್ಯ ಚಾಲಕರು ಮತ್ತು ಸಾರಿಗೆ ಅಭಿವೃದ್ಧಿ ನಿಗಮ ಸ್ಥಾಪನೆಯಾಗಲಿದೆ. ಪ್ರಯಾಣಿಕರಿಗೆ, ಚಾಲಕರಿಗೆ ಅನುಕೂಲ ಮಾಡಿಕೊಡಲು ಇ–ಆಡಳಿತದಿಂದ ಮೂರ್ನಾಲ್ಕು ತಿಂಗಳಲ್ಲಿ ಆ್ಯಪ್ ಅಭಿವೃದ್ಧಿಯಾಗಲಿದೆ. ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇಂದಿರಾ ಕ್ಯಾಂಟೀನ್ ತೆರೆಯಲಾಗುವುದು. ಚಾಲಕರಿಗೆ ಜಾತಿವಾರು ನಿಗಮಗಳಲ್ಲಿ ₹2 ಲಕ್ಷ ಸಾಲ ನೀಡುವ ಬೇಡಿಕೆಗಳನ್ನು ಈಡೇರಿಸಲಾಗಿದೆ ಎಂದು ಅವರು ಮಾಹಿತಿ ನೀಡಿದರು.

ಚಾಲಕರಿಗೆ ವಸತಿ ವ್ಯವಸ್ಥೆ ಕಲ್ಪಿಸಲು ವಸತಿ ಸಚಿವರೊಂದಿಗೆ ಮಾತುಕತೆ ನಡೆಸಲಾಗಿದೆ, ಕಾರು ಖರೀದಿಗೆ ಸಬ್ಸಿಡಿ ನೀಡಲು ನಿಗಮ ಮಂಡಳಿಗಳಲ್ಲಿ ಯೋಜನೆ ಜಾರಿಯಲ್ಲಿದೆ. ಚಾಲಕ ಮಕ್ಕಳಿಗೆ ‘ವಿದ್ಯಾನಿಧಿ’ ಯೋಜನೆ ಹಾಗೂ ಆರೋಗ್ಯ ಸೌಲಭ್ಯಕ್ಕೆ ವಿಶೇಷ ಯೋಜನೆ ಆನ್‌ಲೈನ್ ‘ಸೇವಾಸಿಂಧು’ ಮೂಲಕ ಪ್ರಾರಂಭಿಸಲಾಗಿದೆ. 2023ರ ಮಾರ್ಚ್ 30ರ ಅಂತ್ಯಕ್ಕೆ 6,991 ಬ್ಯಾಂಕ್ ಖಾತೆಗಳಿಗೆ ₹4.07 ಕೋಟಿ ಪಾವತಿಸಲಾಗಿದೆ. 2023–24ನೇ ಸಾಲಿಗೆ ₹17 ಕೋಟಿ ಅನುದಾನ ಮೀಸಲಿಡಲಾಗಿದೆ ಎಂದು ವಿವರಿಸಿದರು.

ಎಲೆಕ್ಟ್ರಿಕ್ ವಾಹನಗಳಿಗೆ ರಹದಾರಿ (ಪರ್ಮಿಟ್) ನೀಡುವುದು ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿದ್ದು, ಈ ಬಗ್ಗೆ ಪತ್ರ ಬರೆಯಲಾಗಿದೆ. ಹೊರ ರಾಜ್ಯಗಳಿಗೆ ವಿಶೇಷ ರಹದಾರಿ ಪಡೆದುಕೊಳ್ಳಲು ಗಡಿಭಾಗಗಳಲ್ಲಿ ತನಿಖಾ ಠಾಣೆ ವ್ಯವಸ್ಥೆ ಮಾಡಲಾಗಿದೆ. 30 ದಿನಗಳಲ್ಲಿ ಆನ್‌ಲೈನ್ ಮೂಲಕ ರಹದಾರಿ ನೀಡಲಾಗುತ್ತದೆ ಎಂದರು.

ರಾಪಿಡೊ ಬೈಕ್ ಟ್ಯಾಕ್ಸಿ ನಿಷೇಧ, ಓಲಾ ಮತ್ತು ಉಬರ್, ರೆಡ್ ಬಸ್ ಕಮಿಷನ್ ವಿಷಯ ನ್ಯಾಯಾಲಯದಲ್ಲಿದೆ. ಅಲ್ಲಿನ ತೀರ್ಪಿನಂತೆ ಮುಂದುವರಿಯಲಾಗುವುದು ಎಂದು ರಾಮಲಿಂಗಾರೆಡ್ಡಿ ಹೇಳಿದರು.

ಜೊಮ್ಯಾಟೊ, ಸ್ವಿಗ್ಗಿ ಆ್ಯಪ್ ಆಧಾರಿತ ಅನಧಿಕೃತ ಸಂಚಾರ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ. 50ಕ್ಕೂ ಹೆಚ್ಚು ಪ್ರಕರಣಗಳಲ್ಲಿ ವಾಹನಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಲೈಸೆನ್ಸ್ ಪಡೆಯದೆ ಪೋರ್ಟರ್ ಸಂಸ್ಥೆ ಸರಕು ಸಾಗಣೆ ವಾಹನಗಳ ಆಚರಣೆ ಮಾಡುತ್ತಿದ್ದು, 2 ಸಾವಿರಕ್ಕೂ ಹೆಚ್ಚು ಪ್ರಕರಣಗಳನ್ನು ದಾಖಲಿಸಲಾಗಿದೆ ಎಂದು ಮಾಹಿತಿ ನೀಡಿದರು.

ಜನರಿಗೆ ತೊಂದರೆ ಇಲ್ಲ!



ರಾಮಲಿಂಗಾರೆಡ್ಡಿ

‘ಸೆ.11ರಂದು ಖಾಸಗಿ ವಾಹನಗಳ ಮಾಲೀಕರು ಯಾವುದೇ ರೀತಿಯ ಮುಷ್ಕರ ಮಾಡಿದರೂ ಅದರಿಂದ ನಾಗರಿಕರಿಗೆ ತೊಂದರೆಯಾಗದಂತೆ ಎಲ್ಲ ರೀತಿಯ ಕ್ರಮವನ್ನು ಸರ್ಕಾರ ಕೈಗೊಳ್ಳಲಿದೆ’ ಎಂದು ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

‘ವೈಯಕ್ತಿಕವಾಗಿ ನಾನು ಆಟೊ, ಟ್ಯಾಕ್ಸ್ ಚಾಲಕರೊಂದಿಗಿದ್ದೇನೆ. ಅವರ ಸಮಸ್ಯೆಗಳಿಗೆ ಸ್ಪಂದಿಸುತ್ತೇನೆ. ಅವರು ಯಾವಾಗ ಬೇಕಾದರೂ ನಮ್ಮೊಂದಿಗೆ ಮಾತುಕತೆ ನಡೆಸಬಹುದು. ನಮ್ಮ ಕಚೇರಿ 24 ಗಂಟೆಯೂ ತೆರೆದಿರುತ್ತದೆ’ ಎಂದರು.

ರಾಮದಾಸ್ ಅರ್ಜಿ ವಜಾ

ನವದೆಹಲಿ: ಮದುವೆಯಾಗುವುದಾಗಿ ನಂಬಿಸಿ ಮಹಿಳೆಯೊಬ್ಬರನ್ನು ವಂಚಿಸಿದ ಆರೋಪದ ಪ್ರಕರಣದಲ್ಲಿ ಜನಪ್ರತಿನಿಧಿಗಳ ನ್ಯಾಯಾಲಯದ ಆದೇಶ ಪ್ರಶ್ನಿಸಿ ಮೈಸೂರಿನ ಬಿಜೆಪಿ ಮುಖಂಡ ಎಸ್.ಎ.ರಾಮದಾಸ್ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ.

ರಾಮದಾಸ್ ವಿರುದ್ಧ ವಿಚಾರಣಾ ನ್ಯಾಯಾಲಯಕ್ಕೆ ಪೊಲೀಸರು ಸಲ್ಲಿಸಿದ್ದ ‘ಬಿ’ ರಿಪೋರ್ಟ್ ಅನ್ನು ಜನಪ್ರತಿನಿಧಿಗಳ ನ್ಯಾಯಾಲಯ ವಜಾಗೊಳಿಸಿತ್ತು. ವಿಚಾರಣೆಗೆ ಅನುಮತಿ ನೀಡಿದ್ದ ಆದೇಶ ಪ್ರಶ್ನಿಸಿ ರಾಮದಾಸ್ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ನ್ಯಾಯಮೂರ್ತಿ ಬೇಲಾ ತ್ರಿವೇದಿ ನೇತೃತ್ವದ ದ್ವಿಸದಸ್ಯ ಪೀಠ ಈ ಅರ್ಜಿಯನ್ನು ವಜಾಗೊಳಿಸಿದೆ. ಇದೀಗ, ವಿಶೇಷ ನ್ಯಾಯಾಲಯದ ವಿಚಾರಣೆಗೆ ಹಾದಿ ಸುಗಮವಾಗಿದೆ. ಪ್ರಕರಣದ ತನಿಖೆ ನಡೆಸಿದ್ದ ಸಿಐಡಿ ‘ಬಿ’ ರಿಪೋರ್ಟ್ ಸಲ್ಲಿಸಿತ್ತು. ತಮ್ಮನ್ನು ಪ್ರಶ್ನೆ ಮಾಡದೇ ಸಿಐಡಿ ‘ಬಿ’ ರಿಪೋರ್ಟ್ ಸಲ್ಲಿಸಿತ್ತು ಎಂದು ಆರೋಪಿಸಿ ದೂರುದಾರೆ ಪ್ರೇಮಾ ಕುಮಾರಿ ಅವರು ಜನಪ್ರತಿನಿಧಿಗಳ ನ್ಯಾಯಾಲಯದ ಮೊರೆ ಹೋಗಿದ್ದರು.

‘ವಿಕ್ರಮ್’ ಚಿತ್ರ ಸೆರೆ ಹಿಡಿದ ‘ನಾಸಾ’


ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಂದ್ರನ ಅಂಗಳದಲ್ಲಿ ಬೀಡು ಬಿಟ್ಟಿರುವ ಚಂದ್ರಯಾನ–3ರ ಲ್ಯಾಂಡರ್ ‘ವಿಕ್ರಮ್’ನ ಚಿತ್ರವನ್ನು ಅಮೆರಿಕದ ಬಾಹ್ಯಾಕಾಶ ಸಂಸ್ಥೆ ‘ನಾಸಾ’ ಬಿಡುಗಡೆ ಮಾಡಿದೆ.

‘ನಮ್ಮ ಚಂದ್ರ ವೀಕ್ಷಣಾ ಕಕ್ಷೆಗಾಮಿ ನೌಕೆಯು (ಎಲ್‌ಆರ್‌ಒಸಿ) ‘ವಿಕ್ರಮ್’ ಚಿತ್ರವನ್ನು ಸೆರೆ ಹಿಡಿದಿದೆ. ಲ್ಯಾಂಡರ್ ಇರುವ ಸುತ್ತ ದಟ್ಟ ನೆರಳು, ಅದರ ಸುತ್ತಲೂ ಪ್ರಕಾಶಮಾನ ಪ್ರಭಾವಲಯವೂ ಚಿತ್ರದಲ್ಲಿ ಕಾಣುತ್ತದೆ. ದಕ್ಷಿಣ ಧ್ರುವದಿಂದ 600 ಕಿ.ಮೀ ದೂರದಲ್ಲಿ ಲ್ಯಾಂಡರ್ ಇದೆ’ ಎಂದು ನಾಸಾ ‘ಎಕ್ಸ್’ನಲ್ಲಿ ಹೇಳಿದೆ.

‘ಕಕ್ಷೆಗಾಮಿ ನೌಕೆಯು ಲ್ಯಾಂಡರ್‌ನ ಓರೆನೋಟವನ್ನು ಸೆರೆ ಹಿಡಿದಿದೆ. ‘ವಿಕ್ರಮ್’ ಲ್ಯಾಂಡಿಂಗ್ ಆದ ನಾಲ್ಕು ದಿನಗಳ ಬಳಿಕ ಈ ದೃಶ್ಯ ಸೆರೆ ಹಿಡಿಯಲಾಗಿದೆ. ಲ್ಯಾಂಡರ್‌ನ ಸುತ್ತ ಪ್ರಭಾವಲಯ ಗೋಚರಿಸಲು ಲ್ಯಾಂಡರ್‌ನ ರಾಕೆಟ್ ಉರಿದಾಗ ಹೊರಹೊಮ್ಮುವ ದಟ್ಟ ಬೆಳಕು ಮತ್ತು ಹೊಗೆಯಿಂದ ನೆಲದ ಮೇಲಿನ ಸಣ್ಣ ಧೂಳು ಮೇಲಕ್ಕೇಳುವುದು ಮುಖ್ಯ ಕಾರಣ’ ಎಂದು ತಿಳಿಸಿದೆ.

ತ್ರಿಡಿ ಚಿತ್ರ ಬಿಡುಗಡೆ: ಅಲ್ಲದೇ, ರೋವರ್ ಪ್ರಜ್ಞಾನ್‌ನಲ್ಲಿರುವ ನಾವ್‌ಕ್ಯಾಮ್ ಸ್ಟಿರಿಯೊ ಇಮೇಜಸ್ ಉಪಕರಣದ ಮೂಲಕ ಲ್ಯಾಂಡರ್ ಮತ್ತು ಚಂದ್ರನ ನೆಲದ ಉಬ್ಬು–ತಗ್ಗುಗಳನ್ನು ತ್ರಿಡಿ ಚಿತ್ರವನ್ನು ಸೆರೆ ಹಿಡಿದಿದೆ. ಈ ಚಿತ್ರವನ್ನೂ ಇಸ್ರೊ ‘ಎಕ್ಸ್’ನಲ್ಲಿ ಹಂಚಿಕೊಂಡಿದೆ. ಎರಡು ಪ್ರತ್ಯೇಕ ಚಿತ್ರಗಳನ್ನು ಸೆರೆ ಹಿಡಿದು ಮೂರು ಚಾನೆಲ್‌ಗಳ ಮೂಲಕ ಚಿತ್ರಗಳನ್ನು ಜೋಡಿಸಲಾಗಿದೆ.



‘ನಾಸಾ’ದ ನೌಕೆಯು ಸೆರೆಹಿಡಿದಿರುವ ‘ವಿಕ್ರಮ್’ ಚಿತ್ರ
ಚಿತ್ರಕೃಪೆ: ‘ಎಕ್ಸ್’

ಆದಿತ್ಯ ಎಲ್‌–1 ಕಕ್ಷೆ ಬದಲಾವಣೆ: ಭೂಕಕ್ಷೆಯಲ್ಲಿರುವ ಸೂರ್ಯ ಅಧ್ಯಯನದ ಆದಿತ್ಯ ಎಲ್‌–1 ರ ಎರಡನೇ ಹಂತದ ಕಕ್ಷೆಯ ಬದಲಾವಣೆ ಮಂಗಳವಾರ ಯಶಸ್ವಿಯಾಗಿ ನಡೆದಿದೆ. ಈಗ 282 ಕಿ.ಮೀ x 40225 ಕಿ.ಮೀ ಕಕ್ಷೆಯಲ್ಲಿದೆ. ಮುಂದಿನ ಹಂತದ ಕಕ್ಷೆ ಬದಲಾವಣೆ ಸೆ.10 ಮಧ್ಯಾಹ್ನ 2.30ಕ್ಕೆ ನಡೆಯಲಿದೆ ಎಂದು ಇಸ್ರೊ ತಿಳಿಸಿದೆ.

ಬಾಂಬ್ ಸ್ಫೋಟ: ಎಸ್‌ಪಿಪಿ ನೇಮಿಸದ ಸರ್ಕಾರ

ಮುಂಬೈ (ಪಿಟಿಐ): 2006ರಲ್ಲಿ ನಡೆದಿದ್ದ ಮುಂಬೈ ಸರಣಿ ಬಾಂಬ್ ಸ್ಫೋಟಕ್ಕೆ ಸಂಬಂಧಿಸಿ ಸಲ್ಲಿಕೆಯಾಗಿರುವ ಅರ್ಜಿಗಳ ವಿರುದ್ಧ ಸರ್ಕಾರವನ್ನು ಪ್ರತಿನಿಧಿಸಲು ಸರ್ಕಾರ ಪರ ವಿಶೇಷ ವಕೀಲರನ್ನು (ಎಸ್‌ಪಿಪಿ) ನೇಮಿಸದಿರುವ ಕುರಿತು ಬಾಂಬೆ ಹೈಕೋರ್ಟ್ ಮಹಾರಾಷ್ಟ್ರ ಸರ್ಕಾರದ ವಿರುದ್ಧ ಬುಧವಾರ ಹರಿಹಾಯ್ದಿದೆ.

ಸರ್ಕಾರವು ಈ ಮೊಕದ್ದಮೆಯನ್ನು ಗಂಭೀರವಾಗಿ ನಡೆಸುತ್ತಿಲ್ಲ ಎಂದು ನ್ಯಾಯಮೂರ್ತಿಗಳಾದ ನಿತಿನ್ ಸಾಂಬ್ರೆ ಮತ್ತು ರಾಜೇಶ್ ಪಾಟೀಲ್ ಅವರಿದ್ದ ವಿಭಾಗೀಯ ಪೀಠವು ಅಸಮಾಧಾನ ವ್ಯಕ್ತಪಡಿಸಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣಾ ನ್ಯಾಯಾಲಯವು ಐವರು ಆರೋಪಿಗಳಿಗೆ 2015ರಲ್ಲಿ ಗಲ್ಲುಶಿಕ್ಷೆ ವಿಧಿಸಿತ್ತು.

ಏಜೆನ್ಸಿಯಿಂದ ಅಧಿಕ ಸಂಬಳ, ಉತ್ತಮ ಕೆಲಸದ ಆಮಿಷ; ಯುವಕರ ರಕ್ಷಣೆ

ಕುವೈತ್‌ಗೆ ಕರೆದೊಯ್ದು ಒಂಟೆ ಕಾಯಲು ಬಿಟ್ಟರು!

ಪ್ರಜಾವಾಣಿ ವಾರ್ತೆ

ವಿಜಯಪುರ: ‘ಅಧಿಕ ಸಂಬಳ, ಉತ್ತಮ ಕೆಲಸ’ ಎಂದು ಮುಂಬೈಯ ಏಜೆಂಟ್ ಮಾತು ನಂಬಿ ಕುವೈತ್‌ಗೆ ತೆರಳಿ ಸಂಕಷ್ಟಕ್ಕೆ ಸಿಲುಕಿದ್ದ ಬಬಲೇಶ್ವರ ತಾಲ್ಲೂಕಿನ ಅಡವಿ ಸಂಗಾಪುರದ ಸಚಿನ್ ಜಂಗಮಶೆಟ್ಟಿ (21) ಮತ್ತು ವಿಶಾಲ ಸೇಲಾರ (22) ಎಂಬುವರನ್ನು ವಾಪಸ್ ಕರೆ ತರಲಾಗಿದೆ’ ಎಂದು ಬಿಜೆಪಿ ನಾಯಕ ಉಮೇಶ ಕೋಳಕೂರ ತಿಳಿಸಿದರು.

‘ಕುವೈತ್‌ನಲ್ಲಿ ತರಕಾರಿ ಪ್ಯಾಕ್ ಮಾಡುವ ಕೆಲಸವಿದ್ದು, ತಿಂಗಳಿಗೆ ₹32 ಸಾವಿರ ಸಂಬಳ ಕೊಡಿಸುವುದಾಗಿ ಇಬ್ಬರು ಯುವಕರನ್ನು ಮುಂಬೈಯ ಏಜೆಂಟ್ ನಂಬಿಸಿದ್ದ. ಪಾಸ್‌ಪೋರ್ಟ್, ವೀಸಾ, ವಿಮಾನಯಾನದ ಖರ್ಚು ಮತ್ತು ಕಮಿಷನ್ ಸೇರಿ ತಲಾ ₹1 ಲಕ್ಷ ಹಣ ವಸೂಲಿ ಮಾಡಿದ್ದ’ ಎಂದು ಅವರು ಬುಧವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.



ಸಚಿನ್ ಜಂಗಮಶೆಟ್ಟಿ ಮತ್ತುವಿಶಾಲ ಸೇಲಾರ


‘ಕುವೈತ್‌ನಲ್ಲಿ ತರಕಾರಿ ಪ್ಯಾಕ್ ಮಾಡುವ ಕೆಲಸದ ಬದಲು ಒಂಟೆಗಳನ್ನು ಮೇಯಿಸುವ ಕೆಲಸ ನೀಡಿದ್ದಾರೆ. ಸಂಬಳ ಕೊಡದೇ, ಸರಿಯಾದ ಊಟ, ವಸತಿ ವ್ಯವಸ್ಥೆ ಕಲ್ಪಿಸದೇ ತೊಂದರೆ ನೀಡಲಾಗಿದೆ. ಇದನ್ನು ಪ್ರಶ್ನಿಸಿದ ಯುವಕರಿಗೆ ಹಿಂಸೆ ನೀಡಿ, ಫೋನ್‌ನಲ್ಲಿ ಮಾತನಾಡಲು ಸಹ ಅವಕಾಶ ನೀಡಿಲ್ಲ’ ಎಂದರು.

‘ಕೊನೆಗೂ ಯುವಕರು ತಮ್ಮ ಪೋಷಕರನ್ನು ದೂರವಾಣಿ ಮೂಲಕ ಸಂಪರ್ಕಿಸಿ, ವಿಷಯ ತಿಳಿಸಿದರು. ಪೋಷಕರು ತಿಳಿಸಿದ ವಿಷಯ ಆಧರಿಸಿ ಸಂಸದ ರಮೇಶ ಜಿಗಜಿಣಗಿ ಅವರು ಕೇಂದ್ರ ವಿದೇಶಾಂಗ ಸಚಿವರ ಮೂಲಕ ಕುವೈತ್‌ನಲ್ಲಿರುವ ಭಾರತೀಯ ರಾಯಬಾರಿ ಕಚೇರಿ ಸಂಪರ್ಕಿಸಿದರು. ಅವರ ನೆರವಿನಿಂದ ಯುವಕರನ್ನು ಸುರಕ್ಷಿತವಾಗಿ ಕರೆ ತರಲಾಯಿತು. ಅಡವಿ ಸಂಗಾಪುರ ಗ್ರಾಮದ ಇನ್ನೂ ಇಬ್ಬರು ಯುವಕರು ಕುವೈತ್‌ನಲ್ಲಿ ಸಿಲುಕಿದ್ದಾರೆ. ಅವರ ಸಂಪರ್ಕ ಇನ್ನೂ ಸಾಧ್ಯವಾಗಿಲ್ಲ. ಮುಂಬೈ ಏಜೆನ್ಸಿ ವಿರುದ್ಧ ದೂರು ದಾಖಲಿಸಲಾಗುವುದು’ ಎಂದು ತಿಳಿಸಿದರು.

ಪಕ್ಷ ಸಂಘಟನೆ, ಲೋಕಸಭೆ ಚುನಾವಣೆ ಸಿದ್ಧತೆ ಕುರಿತು ಚರ್ಚೆ

ಶಾಸಕರ ಸಭೆ ನಡೆಸಿದ ಎಚ್‌ಡಿಕೆ

ಪ್ರಜಾವಾಣಿ ವಾರ್ತೆ


ಎಚ್‌.ಡಿ. ಕುಮಾರಸ್ವಾಮಿ

ಬೆಂಗಳೂರು: ಲಘು ಪಾರ್ಶ್ವ-ವಾಯುವಿನಿಂದ ಗುಣಮುಖರಾಗಿ ನಾಲ್ಕು ದಿನಗಳ ಹಿಂದಷ್ಟೇ ಆಸ್ಪತ್ರೆಯಿಂದ ಮನೆಗೆ ಮರಳಿರುವ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ, ಪಕ್ಷದ ಶಾಸಕರು ಹಾಗೂ ಮುಖಂಡರ ಜತೆ ಬುಧವಾರ ಸಭೆ ನಡೆಸಿದರು.

ಜೆ.ಪಿ. ನಗರದ ಕುಮಾರಸ್ವಾಮಿ ಅವರ ಮನೆಯಲ್ಲೇ ನಡೆದ ಸಭೆಯಲ್ಲಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಎಚ್‌.ಡಿ. ದೇವೇಗೌಡ ಕೂಡ ಪಾಲ್ಗೊಂಡಿದ್ದರು. ಪಕ್ಷ ಸಂಘಟನೆ, ಲೋಕಸಭೆ ಮತ್ತು ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸಿದ್ಧತೆ ಆರಂಭಿಸುವ ಕುರಿತು ಚರ್ಚೆ ನಡೆಸಿದರು.

ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ, ಪ್ರಮುಖ ನಾಯಕರ ಸಮಿತಿ (ಕೋರ್ ಕಮಿಟಿ) ಅಧ್ಯಕ್ಷ ಜಿ.ಟಿ. ದೇವೇಗೌಡ, ಶಾಸಕ ಎಚ್‌.ಡಿ.ರೇವಣ್ಣ, ಮುಖಂಡರಾದ ಸಿ.ಎಸ್‌.ಪುಟ್ಟರಾಜು, ಸಾ.ರಾ.ಮಹೇಶ್, ಬಂಡೆಪ್ಪ ಕಾಶೆಂಪೂರ, ಕುಪೇಂದ್ರ ರೆಡ್ಡಿ, ಎಚ್‌.ಕೆ.ಕುಮಾರಸ್ವಾಮಿ ಸೇರಿದಂತೆ ಹಲವು ಪ್ರಮುಖರು ಸಭೆಯಲ್ಲಿದ್ದರು.

ಕಾವೇರಿ ನದಿ ನೀರಿನ ಸಮಸ್ಯೆ, ಬರ ಪರಿಸ್ಥಿತಿ, ವಿದ್ಯುತ್ ಅಘೋಷಿತ ಲೋಡ್ ಶೆಡ್ಡಿಂಗ್ ಕುರಿತು ಸಭೆಯಲ್ಲಿ ಚರ್ಚೆ ನಡೆಸಲಾಗಿದೆ. ರಾಜ್ಯ ಸರ್ಕಾರದ ವೈಫಲ್ಯಗಳ ವಿರುದ್ಧ ಹೋರಾಟ ಆರಂಭಿಸುವ ಕುರಿತೂ ಸಮಾಲೋಚನೆ ನಡೆಸಲಾಗಿದೆ ಎಂದು ಪಕ್ಷದ ಮುಖಂಡರು ತಿಳಿಸಿದ್ದಾರೆ.

ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಸಿ.ಎಂ. ಇಬ್ರಾಹಿಂ, 'ಕಾವೇರಿ ನದಿ ನೀರನ್ನು ತಮಿಳುನಾಡಿಗೆ ಹರಿಸುತ್ತಿರುವುದನ್ನು ವಿರೋಧಿಸಿ ನಡೆಯುತ್ತಿರುವ ಹೋರಾಟವನ್ನು ರಾಜ್ಯದಾದ್ಯಂತ ವಿಸ್ತರಿಸಲು ನಿರ್ಧರಿಸ-ಲಾಗಿದೆ' ಎಂದರು.

ಚುನಾವಣಾ ತಯಾರಿ: 10ಕ್ಕೆ ಸಭೆ

ಬೆಂಗಳೂರು: ಲೋಕಸಭೆ ಹಾಗೂ ಸ್ಥಳೀಯ ಸಂಸ್ಥೆಗಳ ಚುನಾವಣಾ ತಯಾರಿಗಾಗಿ ಪಕ್ಷದ ವರಿಷ್ಠ ಎಚ್‌.ಡಿ. ದೇವೇಗೌಡರ ನೇತೃತ್ವದಲ್ಲಿ ನಗರದ ಅರಮನೆ ಮೈದಾನದಲ್ಲಿ ಸೆ. 10ರಂದು ಭಾನುವಾರ ಜೆಡಿಎಸ್ ಪದಾಧಿಕಾರಿಗಳು ಮತ್ತು ಕಾರ್ಯಕರ್ತರ ನಡೆಯಲಿದೆ.

ಅರಮನೆ ಮೈದಾನದ ನಲಪಾಡ್ ಪೆವಿಲಿಯನ್‌ನಲ್ಲಿ ಭಾನುವಾರ ಬೆಳಿಗ್ಗೆ 10 ಗಂಟೆಯಿಂದ ಸಭೆ ಆರಂಭವಾಗಲಿದೆ. ಲೋಕಸಭೆ ಚುನಾವಣೆಯ ಜತೆಯಲ್ಲಿ ಬಿಬಿಎಂಪಿ, ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣಾ ತಯಾರಿ ಕುರಿತು ಸಭೆಯಲ್ಲಿ ಚರ್ಚೆ ನಡೆಯಲಿದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಮತ್ತು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ ತಿಳಿಸಿದ್ದಾರೆ.

ಶಾಸಕರು, ಸಂಸದರು, ಮಾಜಿ ಸಚಿವರು, ಮಾಜಿ ಶಾಸಕರು, ವಿಧಾನಸಭೆ ಮತ್ತು ಲೋಕಸಭೆ ಚುನಾವಣೆಯಲ್ಲಿ ಪರಾಜಿತರಾದ ಪಕ್ಷದ ಅಭ್ಯರ್ಥಿಗಳು ಹಾಗೂ ರಾಜ್ಯ ಘಟಕದಿಂದ ತಾಲ್ಲೂಕು ಘಟಕಗಳವರೆಗಿನ ಪ್ರಮುಖ ಪದಾಧಿ-ಕಾರಿಗಳಿಗೆ ಸಭೆಗೆ ಆಹ್ವಾನ ನೀಡಲಾಗಿದೆ.

ಆತ್ಮಹತ್ಯೆ ಮಾಡಿಕೊಂಡ ಎಲ್ಲರನ್ನೂ ರೈತರು ಎನ್ನಲಾಗುತ್ತದೆಯೇ?: ಡಿಸಿಎಂ

ಪ್ರಜಾವಾಣಿ ವಾರ್ತೆ


ಡಿ.ಕೆ. ಶಿವಕುಮಾರ್


ಬೆಂಗಳೂರು: 'ಎಲ್ಲಿದೆ ಹೇಳಿ ಆತ್ಮಹತ್ಯೆ? ವೈಯಕ್ತಿಕ ಕಾರಣದಿಂದ ಆತ್ಮಹತ್ಯೆ ಮಾಡಿಕೊಂಡ ಎಲ್ಲರನ್ನೂ ರೈತರು ಎನ್ನಲಾಗುತ್ತದೆಯೇ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದ್ದಾರೆ.

ರೈತರ ಆತ್ಮಹತ್ಯೆಗೆ ಸಂಬಂಧಿಸಿದಂತೆ ಸುದ್ದಿಗಾರರು ಕೇಳಿದ ಪ್ರಶ್ನೆಗೆ ಶಿವಕುಮಾರ್ ನೀಡಿರುವ ಈ ಹೇಳಿಕೆಯ ವಿಡಿಯೊ ತುಣುಕನ್ನು 'ಇಂಡಿಯಾ ಟುಡೆ' ಹಂಚಿಕೊಂಡಿದೆ. ಅದನ್ನು ಬಿಜೆಪಿಯ ಐ.ಟಿ ಸೆಲ್ ಮುಖ್ಯಸ್ಥ ಅಮಿತ್ ಮಾಳವೀಯ ತಮ್ಮ 'X' ಖಾತೆಯಲ್ಲಿ (ಟ್ವಿಟರ್) ಪೋಸ್ಟ್ ಮಾಡಿದ್ದಾರೆ.

'ಕರ್ನಾಟಕದ ಸಚಿವರೊಬ್ಬರ ಹೇಳಿಕೆಯ ಬಳಿಕ ಇದೀಗ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ರೈತರ ಆತ್ಮಹತ್ಯೆಯನ್ನು 'ನಕಲಿ' ಎಂದು ಆರೋಪಿಸಿದ್ದಾರೆ! ನಕಲಿ ಆತ್ಮಹತ್ಯೆಯ ನಂತರ ಪರಿಹಾರ ಪಡೆಯಲು ಬದುಕುವುದು ಹೇಗೆ? ಇದು ಕೇವಲ ವಿಲಕ್ಷಣ ಹೇಳಿಕೆಯಲ್ಲ, ರೈತರ ಬಗ್ಗೆ ಭಾರಿ ಅವಹೇಳನಕಾರಿ ಹೇಳಿಕೆ. ಗ್ರಾಮೀಣ ಭಾಗದಲ್ಲಿನ ಸಂಕಷ್ಟ ಮತ್ತು ರೈತರ ಆತ್ಮಹತ್ಯೆಯನ್ನು ಕಾಂಗ್ರೆಸ್ ನಿರಾಕರಿಸುತ್ತಿರುವುದು ಸರಿಯಲ್ಲ' ಎಂದು ತಮ್ಮ ಪೋಸ್ಟ್‌ನಲ್ಲಿ ಮಾಳವೀಯ ಹೇಳಿದ್ದಾರೆ.

'ರೈತರ ಆತ್ಮಹತ್ಯೆ ಪ್ರಕರಣಗಳು 2015ಕ್ಕೂ ಮೊದಲು ಕಡಿಮೆ ಇದ್ದವು. ₹ 5 ಲಕ್ಷ ಪರಿಹಾರ ಕೊಡಲು ಆರಂಭವಾದ ಬಳಿಕ ಪ್ರಕರಣಗಳು ವರದಿಯಾಗುವುದು ಜಾಸ್ತಿಯಾಯಿತು' ಎಂದು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಹೇಳಿಕೆ ನೀಡಿದ ಬೆನ್ನಲ್ಲೆ, ಡಿ.ಕೆ ಶಿವಕುಮಾರ್ ನೀಡಿರುವ ಈ ಹೇಳಿಕೆಗೆ ಬಿಜೆಪಿ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ.

ಸರ್ಕಾರದ್ದು ರೈತ ವಿರೋಧಿ ಮನಃಸ್ಥಿತಿ: ಬೊಮ್ಮಾಯಿ


ಬಸವರಾಜ ಬೊಮ್ಮಾಯಿ

ಬೆಂಗಳೂರು: 'ಆತ್ಮಹತ್ಯೆ ಮಾಡಿಕೊಂಡ ರೈತರಿಗೆ ಪರಿಹಾರ ಹೆಚ್ಚಿಗೆ ಮಾಡಿರುವುದರಿಂದ ಹೆಚ್ಚಿನ ಪ್ರಮಾಣದಲ್ಲಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ ಎಂಬುದಾಗಿ ಸಚಿವ ಶಿವಾನಂದ ಪಾಟೀಲ ಹೇಳಿರುವುದು ರೈತ ವಿರೋಧಿ ಮನಃಸ್ಥಿತಿ ತೋರಿಸುತ್ತದೆ' ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಟೀಕಿಸಿದ್ದಾರೆ.

ಈ ಕುರಿತು ಸುದ್ದಿಗಾರರ ಜತೆ ಮಾತನಾಡಿದ ಅವರು, 'ಯಾರೇ ತೀರಿಕೊಂಡರೂ ಎಲ್ಲ ಆಯಾಮಗಳಿಂದ ಪರಿಶೀಲನೆ ಮಾಡಿದ ನಂತರವೇ ಹಣ ಬಿಡುಗಡೆ ಆಗುತ್ತದೆ. ಹಣಕ್ಕಾಗಿಯೇ ರೈತರು ಸಾಯುತ್ತಾರೆ ಎಂಬುದು ಸರಿಯಲ್ಲ' ಎಂದರು.

'ರಾಜ್ಯದಲ್ಲಿ ಮೂರು ತಿಂಗಳಲ್ಲಿ 172 ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕೂಡಲೇ ಅವರಿಗೆ ಪರಿಹಾರ ಕೊಡಬೇಕು. ಕೃಷಿ ಇಲಾಖೆ ರೈತರಿಗೆ ಕೌನ್ಸಿಲಿಂಗ್ ಮಾಡಬೇಕು. ರೈತ ದುಡ್ಡಿಗಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾನೆ ಎನ್ನುವುದು ಅಮಾನವೀಯ. ಯಾರೂ ಕೂಡ ದುಡ್ಡಿಗಾಗಿ ತಮ್ಮ ಜೀವ ತ್ಯಾಗ ಮಾಡುವುದಿಲ್ಲ' ಎಂದರು.

ಕ್ಷಮೆ ಕೇಳಲು ವಿಜಯೇಂದ್ರ ಆಗ್ರಹ: 'ರೈತರು ಪರಿಹಾರದ ಆಸೆಗಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ ಎಂದು ಶಿವಾನಂದ ಪಾಟೀಲ ಹೇಳಿದ್ದಾರೆ. ಆ ಸಚಿವರಿಗೆ ಅಧಿಕಾರದ ಮದ ಏರಿದೆ. ಅವರು ರೈತರ ಕ್ಷಮೆ ಕೇಳಬೇಕು' ಎಂದು ಬಿಜೆಪಿ ಶಾಸಕ ಬಿ.ವೈ.ವಿಜಯೇಂದ್ರ ಆಗ್ರಹಿಸಿದ್ದಾರೆ.

'ಸಚಿವರು ಬರ ಪರಿಸ್ಥಿತಿಯನ್ನು ಹಗುರವಾಗಿ ತೆಗೆದು-ಕೊಂಡಿದ್ದಾರೆ. ಮಳೆ ಕೊರತೆ, ವಿದ್ಯುತ್ ಅಭಾವದಿಂದ ರೈತರು ಪರದಾಡುತ್ತಿದ್ದಾರೆ. 196ಕ್ಕೂ ಹೆಚ್ಚು ತಾಲ್ಲೂಕುಗಳಲ್ಲಿ ಬರದ ವಾತಾವರಣವಿದೆ. ಮಾಧ್ಯಮಗಳು ಈ ಕುರಿತು ನಿರಂತರವಾಗಿ ಬರೆಯುತ್ತಿದ್ದರೂ ಸರ್ಕಾರ ಮಲಗಿದೆ' ಎಂದು ಟೀಕಿಸಿದರು.

ಜಿ.ಪಂ., ತಾ.ಪಂ. ಕ್ಷೇತ್ರ ವಿಂಗಡಣೆ ಪರಿಷ್ಕೃತ ಕರಡು ಪಟ್ಟಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಎಲ್ಲ ಜಿಲ್ಲಾ ಪಂಚಾಯಿತಿಗಳು ಮತ್ತು ತಾಲ್ಲೂಕು ಪಂಚಾಯಿತಿಗಳ ಕ್ಷೇತ್ರ ಪುನರ್ ವಿಂಗಡಣೆಯ ಪರಿಷ್ಕೃತ ಕರಡು ಪಟ್ಟಿಯನ್ನು ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗವು ಮಂಗಳವಾರ ಪ್ರಕಟಿಸಿದೆ.

ನಿವೃತ್ತ ಐಎಎಸ್ ಅಧಿಕಾರಿ ಎಂ. ಲಕ್ಷ್ಮೀನಾರಾಯಣ ನೇತೃತ್ವದ ಆಯೋಗವು ಸಿದ್ಧಪಡಿಸಿದ್ದ ಕ್ಷೇತ್ರಗಳ ಪುನರ್ ವಿಂಗಡಣೆ ಪಟ್ಟಿಯನ್ನು ಜನವರಿಯಲ್ಲಿ ಪ್ರಕಟಿಸಲಾಗಿತ್ತು. ಕಾಂಗ್ರೆಸ್ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ನಿವೃತ್ತ ಐಎಎಸ್ ಅಧಿಕಾರಿ ಎಂ.ಆರ್. ಕಾಂಬ್ಳೆ ನೇತೃತ್ವದಲ್ಲಿ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗವನ್ನು ನೇಮಿಸಲಾಗಿತ್ತು.

ಹೊಸ ಆಯೋಗವು ಸಿದ್ಧಪ-ಡಿಸಿರುವ ಪರಿಷ್ಕೃತ ಕ್ಷೇತ್ರ ಪುನರ್ ವಿಂಗಡಣೆ ಪಟ್ಟಿಯನ್ನು ಪ್ರಕಟಿಸಲಾ-ಗಿದೆ. ಕ್ಷೇತ್ರಗಳ ಒಟ್ಟು ಸಂಖ್ಯೆಯಲ್ಲಿ ಬದಲಾವಣೆ ಆಗಿಲ್ಲ.

ಇದೇ 19ರವರೆಗೂ ಆಕ್ಷೇಪಣೆ ಸಲ್ಲಿಸಲು ಅವಕಾಶವಿದೆ. ಹೆಚ್ಚಿನ ಮಾಹಿತಿಗಾಗಿ ಆಯೋಗದ ವೆಬ್‌ಸೈಟ್ https://rdpr.karnataka.gov.in/rdc/public/ ಸಂಪರ್ಕಿಸಬಹುದು ಎಂದು ಆಯೋಗದ ಪ್ರಕಟಣೆ ತಿಳಿಸಿದೆ.

ಡಿಕೆಶಿ ಭೇಟಿ ಮಾಡಿದ ಶಿವರಾಮೇಗೌಡ, ಹೆಬ್ಬಾರ್

ಪ್ರಜಾವಾಣಿ ವಾರ್ತೆ


ಶಿವರಾಮ ಹೆಬ್ಬಾರ್


ಎಲ್‌.ಆರ್‌. ಶಿವರಾಮೇಗೌಡ

ಬೆಂಗಳೂರು: ಯಲ್ಲಾಪುರ ಬಿಜೆಪಿ ಶಾಸಕ ಶಿವರಾಮ ಹೆಬ್ಬಾರ್ ಮತ್ತು ಮಂಡ್ಯದ ಮಾಜಿ ಸಂಸದ ಎಲ್‌.ಆರ್‌. ಶಿವರಾಮೇಗೌಡ ಅವರು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಬುಧವಾರ ಭೇಟಿಯಾದರು.

'ಆಪರೇಷನ್ ಹಸ್ತ'ದ ವದಂತಿ ಹೆಚ್ಚುತ್ತಿರುವ ಸಂದರ್ಭದಲ್ಲೇ ಕುಮಾರಕೃಪಾ ಅತಿಥಿಗೃಹದಲ್ಲಿ ನಡೆದ ಈ ಭೇಟಿ ತೀವ್ರ ಕುತೂಹಲ ಮೂಡಿಸಿದೆ.

ಭೇಟಿ ಬಗ್ಗೆ ಪ್ರತಿಕ್ರಿಯಿಸಿದ ಶಿವರಾಮೇಗೌಡ, 'ನಾನು ಮತ್ತು ಡಿ.ಕೆ. ಶಿವಕುಮಾರ್ ಸಂಬಂಧಿಕರು. ಕಷ್ಟ ಸುಖ ಮಾತನಾಡಲು ಬಂದಿದ್ದೆ. ರಾಜಕೀಯ ವಿಚಾರ ಚರ್ಚಿಸಿಲ್ಲ. ಸಂಬಂಧಿಕನಾಗಿ ಕೆಲವು ವಿಚಾರಗಳನ್ನು ಮಾತನಾಡಿದ್ದೇನೆ' ಎಂದರು. ಶಿವರಾಮ್ ಹೆಬ್ಬಾರ್ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ.

ಡಿ.ಕೆ. ಶಿವಕುಮಾರ್ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಶಿವರಾಮ ಹೆಬ್ಬಾರ್, ಎಸ್‌.ಟಿ. ಸೋಮಶೇಖರ್ ಈ ಹಿಂದೆಯೂ ಭೇಟಿಯಾಗಿದ್ದು ಸಾಕಷ್ಟು ಚರ್ಚೆಗೆ ಗ್ರಾಸವಾಗಿತ್ತು.

ನೈಜ ಅಂಕಿಅಂಶ ಮುಚ್ಚಿಡುತ್ತಿರುವ ರಾಜ್ಯ ಸರ್ಕಾರ– ತೇಜಸ್ವಿ ಸೂರ್ಯ

ಪ್ರಜಾವಾಣಿ ವಾರ್ತೆ


ತೇಜಸ್ವಿ ಸೂರ್ಯ

ಬೆಂಗಳೂರು: 'ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಅನುದಾನ ಬಾರದಿರುವ ವಿಷಯದಲ್ಲಿ ರಾಜ್ಯದ ಸಚಿವರು ತಮ್ಮ ವಿಫಲತೆಯನ್ನು ಮುಚ್ಚಿಕೊಳ್ಳಲು ನೈಜ ಅಂಕಿಅಂಶ-ಗಳನ್ನು ಮುಚ್ಚಿಡುತ್ತಿದ್ದಾರೆ' ಎಂದು ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಆರೋಪಿಸಿದ್ದಾರೆ.

'ಕೇಂದ್ರ ಪುರಸ್ಕೃತ ಯೋಜನೆಯ 'ಸಿಂಗಲ್ ನೋಡಲ್ ಏಜೆನ್ಸಿ'ಗಳು (ಎಸ್‌ಎನ್‌ಎ) ತಮ್ಮ ರಾಜ್ಯಗಳಲ್ಲಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ ಹಣವನ್ನು ಪಡೆಯುತ್ತವೆ. ಈ ಪಾರದರ್ಶಕ ಮಾದರಿಯು ಕಾಂಗ್ರೆಸ್‌ಗೆ ಗಂಭೀರವಾದ ಸಮಸ್ಯೆಗಳನ್ನು ತಂದೊಡ್ಡಿವೆ' ಎಂದೂ ಹೇಳಿದ್ದಾರೆ.

'ಕರ್ನಾಟಕದ ಪ್ರತಿಯೊಂದು ಯೋಜನೆಗಳಿಗೆ ಕೇಂದ್ರ ಸರ್ಕಾರ ಸಮರ್ಪಕವಾಗಿ ಅನುದಾನ ಬಿಡುಗಡೆ ಮಾಡಿದೆ. ಆದರೆ, ರಾಜ್ಯ ಸರ್ಕಾರವು ಅದನ್ನು ಬಳಸಿಕೊಳ್ಳಲು ಸಂಪೂರ್ಣ ವಿಫಲವಾಗಿದೆ. ಈ ಮೊತ್ತವು ಸಿಂಗಲ್ ನೋಡಲ್ ಏಜೆನ್ಸಿ ಬಳಿ ಬಾಕಿಯಿದೆ. ನರೇಗಾ ಅಡಿಯಲ್ಲಿ ಖರ್ಚು ಮಾಡದ ಮೊತ್ತ ₹ 1333.87 ಕೋಟಿ ಬಾಕಿಯಿದೆ. ಗ್ರಾಮ ಸಡಕ್ ಯೋಜನೆಯಲ್ಲಿ ₹ 382.74 ಕೋಟಿ, ಪಿಎಂ ಆವಾಸ್ ಯೋಜನೆಯಲ್ಲಿ (ನಗರ) ₹ 493.07 ಕೋಟಿ ಬಾಕಿಯಿದೆ. ಹೀಗೆ ಬಹುತೇಕ ಯೋಜನೆಗಳಲ್ಲಿ ಹಣ ವೆಚ್ಚವಾಗದೆ ಉಳಿದಿದೆ. ಅಲ್ಲದೆ, ಹಲವು ಯೋಜನೆಗಳಿಗೆ ರಾಜ್ಯದಿಂದ ಯಾವುದೇ ಪ್ರಸ್ತಾವನೆಗಳು ಕೇಂದ್ರಕ್ಕೆ ಕಳುಹಿಸಿಯೇ ಇಲ್ಲ' ಎಂದು ವಿವರಿಸಿದ್ದಾರೆ.

'ಡಿಸಿಎಂ ಘನತೆಗೆ ತಕ್ಕಂತೆ ಮಾತಾಡಲಿ'

ಬೆಂಗಳೂರು: 'ರೌಡಿ ಕೊತ್ವಾಲ್ ರಾಮಚಂದ್ರನಿಗೆ ಚಾಕರಿ ಮಾಡಿದವರು, ಕಾಫಿ–ಟೀ ಸಪ್ಲೈ ಮಾಡಿದವರೆಲ್ಲ ನನ್ನ ಬಗ್ಗೆ ಮಾತನಾಡುತ್ತಾರೆ. ಈಗ ಅವರು ಹೊಂದಿರುವ ಸ್ಥಾನದ ಘನತೆಗೆ ತಕ್ಕಂತೆ ಮಾತನಾಡುವುದು ಸೂಕ್ತ' ಎಂದು ಬಿಜೆಪಿ ಶಾಸಕ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರು ಹೇಳಿದ್ದಾರೆ.

'ದೇವರು ಅವರಿಗೆ ಒಳ್ಳೆಯ ಸ್ಥಾನವನ್ನು ಕೊಟ್ಟಿದ್ದಾನೆ. ಅದನ್ನು ಜನರ ಒಳಿತಿಗಾಗಿ ಬಳಸಿಕೊಳ್ಳಲಿ. ಅದನ್ನು ಬಿಟ್ಟು ಬೇರೆಯವರ ಬಗ್ಗೆ ಲಘುವಾಗಿ ಟೀಕೆ ಮಾಡುವುದು ಅವರಿಗೆ ಶೋಭಿಸುವುದಿಲ್ಲ' ಎಂದು ಅವರು ಬುಧವಾರ ಪರೋಕ್ಷವಾಗಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಕುಟುಕಿದರು.

ನವರಂಗಿ ನಾರಾಯಣ ಎಂಬ ಪದ ಬಳಕೆಯನ್ನು ಕಟುವಾಗಿ ಟೀಕಿಸಿದ ಅವರು, 'ಅಹಂಕಾರ ಮತ್ತು ದುರಹಂಕಾರದ ಮಾತಿಗೆ ಜನರೇ ಪಾಠ ಕಲಿಸುತ್ತಾರೆ. ಆಲೂಗಡ್ಡೆ ಹಾಕಿ ಬಂಗಾರ ತೆಗೆಯುವ ಇತಿಹಾಸ ಇರುವವರಿಗೆ ನನ್ನ ಬಗ್ಗೆ ಮಾತನಾಡುವ ಅರ್ಹತೆ ಇಲ್ಲ' ಎಂದರು.

'ರಾಮನಗರದಲ್ಲಿ ಕೆಂಗಲ್ ಹನುಮಂತಯ್ಯ ಹೆಸರಿನಲ್ಲಿ ವೈದ್ಯಕೀಯ ಕಾಲೇಜು ಆರಂಭ-ವಾಗಬೇಕಿತ್ತು. ಆದರೆ ಅದನ್ನು ಕನಕಪುರಕ್ಕೆ ಒಯ್ದಿದ್ದಾರೆ. ಕಳ್ಳತನ ಮಾಡಿಕೊಂಡು ಹೋಗುವುದನ್ನು ಜನ ಒಪ್ಪುವುದಿಲ್ಲ. ಈ ಮೂಲಕ ರಾಮನಗರದ ಜನರಿಗೆ ಅಗೌರವ ತೋರಿಸಿದ್ದಾರೆ' ಎಂದು ಅಶ್ವತ್ಥ ನಾರಾಯಣ ಹೇಳಿದರು.

'ಸನಾತನ ಧರ್ಮಕ್ಕೆ ಅಪಮಾನ ಸಹಿಸಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜಾತ್ಯತೀತತೆ ಹೆಸರಿನಲ್ಲಿ ಸನಾತನ ಧರ್ಮಕ್ಕೆ ಅಪಮಾನ ಮಾಡುವುದನ್ನು ಸಹಿಸಲು ಸಾಧ್ಯವಿಲ್ಲ' ಎಂದು ಬಿಜೆಪಿ ನಾಯಕ ಸಿ.ಟಿ.ರವಿ ಹೇಳಿದ್ದಾರೆ.

'ಧರ್ಮದಲ್ಲಿ ಅನಿಷ್ಟಗಳಿದ್ದರೆ ಹೋಗಲೇಬೇಕು. ತಾರತಮ್ಯ ಹೋಗಲಾಡಿಸಲು ನಮ್ಮ ಬದ್ಧತೆ ಇದೆ. ನನ್ನ ದೇಶ, ನನ್ನ ಪರಂಪರೆ ಜಗತ್ತಿನ ಎಲ್ಲ ಮತಗಳಿಗೂ ಅವಕಾಶ ನೀಡಿದೆ' ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ವಿಶ್ವವೇ ಒಂದು ಕುಟುಂಬ ಎನ್ನುವುದು ಸನಾತನ ಧರ್ಮದ ಮೌಲ್ಯ. ಅಣುರೇಣು ತೃಣಕಾಷ್ಠಗಳಲ್ಲಿ ದೇವರನ್ನು ಕಾಣುವುದು ಸನಾತನ ಧರ್ಮದ ಮೌಲ್ಯ. ತಾರತಮ್ಯ ಈ ಧರ್ಮದ ಭಾಗವಲ್ಲ. ಅಂತಹ ಮಾನಸಿಕತೆ ಇದ್ದರೆ ಅದನ್ನು ದೂರ ಮಾಡಬೇಕು' ಎಂದರು.

'ಶೂದ್ರರಿಗೆ ಶಿಕ್ಷಣ ಸಿಕ್ಕಿದ್ದು ಮೆಕಾಲೆ ಬಂದ ನಂತರ ಎಂಬ ಹೇಳಿಕೆ ಸರಿಯಲ್ಲ. ಈ ಮೂಲಕ ರಾಮಾಯಣ ಬರೆದ ವಾಲ್ಮೀಕಿಗೆ ಅಪಮಾನ ಮಾಡುತ್ತಿದ್ದೀರಿ. ಅವರು ಅನಕ್ಷರ ಕುಕ್ಷಿಯೇ? ವೇದವ್ಯಾಸರು, ತಿರುವಳ್ಳುವರ್, ಸರ್ವಜ್ಞ ಮತ್ತು ಹಲವು ಋಷಿ–ಮುನಿಗಳು ವಿವಿಧ ಜಾತಿಗಳಲ್ಲಿ ಜನಿಸಿದವರು. ಅಗಾಧ ಪಾಂಡಿತ್ಯವನ್ನು ಹೊಂದಿವರಾಗಿದ್ದರು. ಸಿದ್ದರಾಮಯ್ಯ ಚಾತುರ್ವರ್ಣದ ಕುರಿತು ಮಾತನಾಡಿದ್ದಾರೆ. ಶೂದ್ರರು ಕಾಲಿನಿಂದ ಹುಟ್ಟಿದರು ಎಂದಿದ್ದಾರೆ, ಭಗವಾನ್ ಶ್ರೀಕೃಷ್ಣ ಹುಟ್ಟಿದ್ದು ಶೂದ್ರನಾಗಿಯೇ. ಚಾತುರ್ವರ್ಣ ನಮ್ಮ ಸೃಷ್ಟಿ, ಹುಟ್ಟಿನಿಂದ ಅಲ್ಲ ಎಂದು ಕೃಷ್ಣ ಹೇಳಿದ್ದಾನೆ' ಎಂದರು.

'ಜನರ ಜೀವನದಲ್ಲಿ ಬದಲಾವಣೆ ಮುಖ್ಯ'

ಬೆಂಗಳೂರು: 'ದೇಶದ ಹೆಸರು ಬದಲಾವಣೆ ಮಾಡಿದರೆ ಏನು ಲಾಭ? ಜನರ ಜೀವನದಲ್ಲಿ ಬದಲಾವಣೆ ಆಗುವುದು ಮುಖ್ಯ' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, 'ಜನರ ಕಲ್ಯಾಣ ಮಾಡುವ ಹೊಸ ಕಾನೂನುಗಳನ್ನು ಕೇಂದ್ರ ಸರ್ಕಾರ ತರಬೇಕು. ನಮ್ಮ ಯುಪಿಎ ಸರ್ಕಾರ ಇದ್ದಾಗ ಮಾಹಿತಿ ಹಕ್ಕು, ಆರ್‌ಟಿಐ, ನರೇಗಾ, ಆಹಾರ ಭದ್ರತಾ ಕಾಯ್ದೆಗಳನ್ನು ಜಾರಿಗೆ ತಂದೆವು. ಇಂತಹ ಆಲೋಚನೆಗಳು ಬಿಜೆಪಿಯವರಿಗೆ ಬರುವುದಿಲ್ಲವೇ' ಎಂದು ಪ್ರಶ್ನಿಸಿದರು.

ವರದಿ ನೀಡಲು 'ಸುಪ್ರೀಂ' ಸೂಚನೆ

ಮಣಿಪುರ: ಕಾನೂನುಬಾಹಿರವಾಗಿ ಸಂಗ್ರಹಿಸಲಾಗಿದ್ದ ಶಸ್ತ್ರಾಸ್ತ್ರಗಳ ಮರುವಶ

ನವದೆಹಲಿ (ಪಿಟಿಐ): ಜನಾಂಗೀಯ ಹಿಂಸಾಚಾರದಿಂದ ನಲುಗಿದ್ದ ಮಣಿಪುರದಲ್ಲಿ ಕಾನೂನುಬಾಹಿರವಾಗಿ ಸಂಗ್ರಹಿಸಲಾಗಿದ್ದ ಶಸ್ತ್ರಾಸ್ತ್ರಗಳನ್ನು ಮತ್ತೆ ವಶಪಡಿಸಿಕೊಂಡಿರುವುದಕ್ಕೆ ಸಂಬಂಧಿಸಿ ವರದಿ ಸಲ್ಲಿಸುವಂತೆ ರಾಜ್ಯ ಸರ್ಕಾರ ಹಾಗೂ ಸಂಬಂಧಪಟ್ಟ ಇಲಾಖೆಗಳಿಗೆ ಸುಪ್ರೀಂಕೋರ್ಟ್ ಬುಧವಾರ ಸೂಚನೆ ನೀಡಿದೆ.



ಶಸ್ತ್ರಾಸ್ತ್ರಗಳನ್ನು ಮತ್ತೆ ವಶಪಡಿಕೊಂಡಿರುವುದಕ್ಕೆ ಸಂಬಂಧಿಸಿದ ವರದಿಯನ್ನು ಸುಪ್ರೀಂಕೋರ್ಟ್‌ಗೆ ಮಾತ್ರ ಸಲ್ಲಿಸತಕ್ಕದ್ದು ಎಂದು ಮುಖ್ಯನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದೀವಾಲಾ ಹಾಗೂ ಮನೋಜ್ ಮಿಶ್ರಾ ಅವರಿದ್ದ ನ್ಯಾಯಪೀಠ ಕಟ್ಟುನಿಟ್ಟಿನ ಸೂಚನೆ ನೀಡಿತು.

ರಾಜ್ಯದಲ್ಲಿ ಆಹಾರ ಪದಾರ್ಥಗಳು, ಔಷಧಗಳು ಸೇರಿದಂತೆ ಅಗತ್ಯ ವಸ್ತುಗಳ ಕೊರತೆ ಇಲ್ಲ. ಅರ್ಜಿದಾರರು ಆರೋಪಿಸಿರುವಂತೆ, ಪರಿಹಾರ ಕೇಂದ್ರಗಳಲ್ಲಿ ಚಿಕನ್ ಪಾಕ್ಸ್ ಮತ್ತು ದಡಾರ ರೋಗಗಳ ಪ್ರಸರಣ ಇಲ್ಲ ಎಂಬುದಾಗಿ ಮಣಿಪುರ ಮುಖ್ಯ ಕಾರ್ಯದರ್ಶಿ ಸಲ್ಲಿಸಿದ ಪ್ರಮಾಣಪತ್ರವನ್ನು ನ್ಯಾಯಪೀಠ ಪರಿಗಣಿಸಿತು.

'ಒಂಬತ್ತು ಪರಿಹಾರ ಕೇಂದ್ರಗಳಲ್ಲಿ ಪಡಿತರ ವಿತರಣೆಗೆ ಕೈಗೊಂಡ ಕ್ರಮಗಳ ಕುರಿತು ಮುಖ್ಯಕಾರ್ಯದರ್ಶಿ ಮಾಹಿತಿ ನೀಡಿದ್ದಾರೆ. ಈ ವಿಚಾರವಾಗಿ ನಿರ್ದಿಷ್ಟ ದೂರುಗಳಿದ್ದಲ್ಲಿ ಜಿಲ್ಲಾಡಳಿತಕ್ಕೆ ತಿಳಿಸಬೇಕು. ಅಂತಹ ದೂರುಗಳೇನಾದರೂ ಇದ್ದಲ್ಲಿ, ಅವುಗಳನ್ನು ತ್ವರಿತವಾಗಿ ಪರಿಹರಿಸಬೇಕು' ಎಂದು ನ್ಯಾಯಪೀಠ ಸೂಚಿಸಿತು.

ಹಿಂಸಾಚಾರಬಾಧಿತರ ಪುನರ್ವಸತಿ ಹಾಗೂ ಪರಿಹಾರ ಕಾರ್ಯದ ಮೇಲ್ವಿಚಾರಣೆಗಾಗಿ, ಸುಪ್ರೀಂಕೋರ್ಟ್ ರಚಿಸಿರುವ ನಿವೃತ್ತ ನ್ಯಾಯಮೂರ್ತಿ ಗೀತಾ ಮಿತ್ತಲ್ ನೇತೃತ್ವದ ಮೂವರು ಸದಸ್ಯರ ಸಮಿತಿಗೆ ನೆರವಾಗಲು ತಜ್ಞರ ಹೆಸರುಗಳನ್ನು ಅಂತಿಮಗೊಳಿಸಬೇಕು. ಈ ಕುರಿತು ಸಮಿತಿಯೊಂದಿಗೆ ಸಮಾಲೋಚನೆ ನಡೆಸುವಂತೆ ಕೇಂದ್ರ ಗೃಹ ಸಚಿವಾಲಯ ಕಾರ್ಯದರ್ಶಿಗೆ ನ್ಯಾಯಪೀಠ ಸೂಚಿಸಿತು.

ಯುಜಿಸಿಯ ಶಿಕ್ಷಕರ ತರಬೇತಿ ಕೇಂದ್ರಕ್ಕೆ ಮಾಳವೀಯ ಹೆಸರು

ನವದೆಹಲಿ (ಪಿಟಿಐ): ಶಿಕ್ಷಕರ ತರಬೇತಿ ಮತ್ತು ಸಾಮರ್ಥ್ಯ ವೃದ್ಧಿಗಾಗಿ ವಿಶ್ವವಿದ್ಯಾಲಯ ಅನುದಾನ ಆಯೋಗವು (ಯುಜಿಸಿ) ನಿರ್ವಹಿಸುತ್ತಿರುವ ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರಗಳನ್ನು ಇನ್ನು ಮುಂದೆ 'ಮದನ್ ಮೋಹನ್ ಮಾಳವೀಯ ಶಿಕ್ಷಕರ ತರಬೇತಿ ಕೇಂದ್ರ' ಎಂದು ಕರೆಯಲಾಗುವುದು ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಹೇಳಿದ್ದಾರೆ.

ಮಂಗಳವಾರ ಇಲ್ಲಿ ನಡೆದ 'ಮಾಳವೀಯ ಮಿಷನ್– ಶಿಕ್ಷಕರ ತರಬೇತಿ ಕಾರ್ಯಕ್ರಮ' ಉದ್ಘಾಟಿಸಿ ಮಾತನಾಡಿದ ಧರ್ಮೇಂದ್ರ ಪ್ರಧಾನ್ ಅವರು ಈ ವಿಷಯ ತಿಳಿಸಿದ್ದಾರೆ.

ಕೋವಿಂದ್ ಭೇಟಿ ಮಾಡಿದ ಅಮಿತ್ ಶಾ

ನವದೆಹಲಿ (ಪಿಟಿಐ): 'ಒಂದು ರಾಷ್ಟ್ರ, ಒಂದು ಚುನಾವಣೆ' ಕಾರ್ಯಸಾಧ್ಯತೆ ಬಗ್ಗೆ ಪರಿಶೀಲಿಸಲು ರಚಿಸಲಾಗಿರುವ ಉನ್ನತಮಟ್ಟದ ಸಮಿತಿಯ ಅಧ್ಯಕ್ಷರಾಗಿರುವ ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರನ್ನು ಬುಧವಾರ ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್ ಅವರು ಭೇಟಿಯಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸುಮಾರು ಒಂದು ತಾಸಿನ ಈ ಭೇಟಿಯನ್ನು 'ಸೌಜನ್ಯದ ಭೇಟಿ' ಎಂದು ಶಾ ಹಾಗೂ ಮೇಘವಾಲ್ ಹೇಳಿದ್ದಾರೆ.

'ಮುಂದಿನ ದಿನಗಳಲ್ಲಿ ಉನ್ನತ ಮಟ್ಟದ ಸಮಿತಿಯ ಮೊದಲ ಸಭೆ ನಡೆಸಲು ಪ್ರಯತ್ನ ನಡೆಯುತ್ತಿದ್ದು, ಸ್ಥಳವನ್ನು ಅಂತಿಮಗೊಳಿಸಲಾಗುತ್ತಿದೆ. ಭವಿಷ್ಯದಲ್ಲಿ ಸಭೆಗಳನ್ನು ಹೈಬ್ರಿಡ್ ರೂಪದಲ್ಲಿಯೂ ನಡೆಸಬಹುದು' ಎಂದೂ ಅವರು ತಿಳಿಸಿದ್ದಾರೆ.

ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್ ಅವರು ಈ ಸಮಿತಿಗೆ ವಿಶೇಷ ಆಹ್ವಾನಿತರಾಗಿದ್ದಾರೆ. ಕಾನೂನು ಕಾರ್ಯದರ್ಶಿಯನ್ನು ಸಮಿತಿಯ ಕಾರ್ಯದರ್ಶಿ ಎಂದು ಹೆಸರಿಸಲಾಗಿದೆ. ಗೃಹಸಚಿವ ಅಮಿತ್ ಶಾ ಅವರು ಸೇರಿದಂತೆ ಇತರರು ಸದಸ್ಯರಾಗಿದ್ದಾರೆ.

ಸಮಿತಿಗೆ ನೆರವು ನೀಡುವ ಮತ್ತು ಕಾರ್ಯದರ್ಶಿಗೆ ಸಹಾಯ ನೀಡುವ ನಿಟ್ಟಿನಲ್ಲಿ ಅಧಿಕಾರಿಗಳನ್ನು ನಾಮನಿರ್ದೇಶನ ಮಾಡುವ ಪ್ರಕ್ರಿಯೆಯಲ್ಲಿ ಕಾನೂನು ಸಚಿವಾಲಯವು ತೊಡಗಿದೆ ಎಂಬುದಾಗಿ ತಿಳಿದುಬಂದಿದೆ.

ಲೋಕಸಭೆ, ರಾಜ್ಯಸಭೆ ಮತ್ತು ಸ್ಥಳೀಯ ಸಂಸ್ಥೆಗಳಿಗೆ ಏಕಕಾಲಕ್ಕೆ 'ಒಂದು ರಾಷ್ಟ್ರ, ಒಂದು ಚುನಾವಣೆ' ಕಾರ್ಯಸಾಧ್ಯತೆ ಬಗ್ಗೆ ಪರಿಶೀಲಿಸಲು ಶನಿವಾರವಷ್ಟೇ ರಾಮನಾಥ ಕೋವಿಂದ್ ಅವರ ನೇತೃತ್ವದಲ್ಲಿ ಉನ್ನತಮಟ್ಟದ ಸಮಿತಿಯನ್ನು ರಚಿಸಲಾಗಿದೆ. ಸಮಿತಿಯ ಭಾಗವಾಗಲು ಲೋಕಸಭೆಯಲ್ಲಿ ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ಅವರು ನಿರಾಕರಿಸಿದ್ದರು.

ಮೈತೇಯಿ ಮೆರವಣಿಗೆ: ಹಲವರಿಗೆ ಗಾಯ

ಪ್ರಜಾವಾಣಿ ವಾರ್ತೆ

ಗುವಾಹಟಿ: ಮಣಿಪುರದ ಜನಾಂಗೀಯ ಸಂಘರ್ಷ ಪೀಡಿತ ಎರಡು ಜಿಲ್ಲೆಗಳ ಉದ್ದಕ್ಕೂ ಭದ್ರತಾ ಪಡೆಗಳು ಹಾಕಿದ್ದ ಬ್ಯಾರಿಕೇಡ್‌ಗಳನ್ನು ತೆರವುಗೊಳಿಸಲು ಮೈತೇಯಿ ಸಮುದಾಯದ ಸಾವಿರಾರು ಮಂದಿ ಬುಧವಾರ ಪ್ರಯತ್ನಿಸಿದಾಗ ಭದ್ರತಾ ಪಡೆಗಳು ಪ್ರಯೋಗಿಸಿದ ಅಶ್ರುವಾಯು ಶೆಲ್‌ಗಳು ಮತ್ತು ರಬ್ಬರ್ ಗುಂಡುಗಳಿಂದ ಹಲವು ಮಂದಿ ಗಾಯಗೊಂಡಿದ್ದಾರೆ.

ಮೈತೇಯಿ ಸಮುದಾಯದ ಪ್ರಾಬಲ್ಯದ ಕಣಿವೆ ಜಿಲ್ಲೆಗಳಲ್ಲಿ ಆಡಳಿತವು ಹೇರಿದ್ದ ಕರ್ಫ್ಯೂ ಧಿಕ್ಕರಿಸಿ ಸಾವಿರಾರು ಜನರು ಬಿಷ್ಣುಪುರ್ ಜಿಲ್ಲೆಯ ಫೌಗಕ್ಚಾವೊ ಇಖಾಯ್‌ಗೆ ಮೆರವಣಿಗೆ ನಡೆಸಿದರು. ಅಲ್ಲಿ ಭದ್ರತಾ ಪಡೆಗಳು ಅವರನ್ನು ಬ್ಯಾರಿಕೇಡ್‌ಗಳನ್ನು ಹಾಕಿ ತಡೆದರು. ಮುಂದುವರಿಯದಂತೆ ಭದ್ರತಾ ಪಡೆಗಳು ಮನವಿ ಮಾಡಿದರೂ ಸಾವಿರಾರು ಸಂಖ್ಯೆಯಲ್ಲಿದ್ದ ಜನರು ಭದ್ರತಾ ಪಡೆಗಳ ಮನವಿಗೆ ಕಿವಿಗೊಡದೆ, ಘರ್ಷಣೆಗೆ ಇಳಿದರು. ಆಗ, ಭದ್ರತಾ ಪಡೆಗಳು ಅಶ್ರುವಾಯು ಶೆಲ್ ಮತ್ತು ರಬ್ಬರ್ ಗುಂಡುಗಳನ್ನು ಹಾರಿಸಿದರು. ಇದರಿಂದ ಹಲವು ಮಂದಿ ಪ್ರತಿಭಟನಕಾರರಿಗೆ ಗಾಯಗಳಾಗಿವೆ.

ಭದ್ರತಾ ಪಡೆಗಳು ಹಾಕಿದ್ದ ಉಕ್ಕಿನ ಬ್ಯಾರಿಕೇಡ್‌ಗಳನ್ನು ಮೈತೇಯಿ ಸಮುದಾಯದ ಮಹಿಳೆಯರು ಸೇರಿ ಜನರ ಗುಂಪು ತಳ್ಳುತ್ತಿರುವ ಮತ್ತು ಅದನ್ನು ಮುರಿಯಲು ಪ್ರಯತ್ನಿಸುತ್ತಿರುವ, ಕೇಂದ್ರ ಪಡೆಗಳ ವಿರುದ್ಧ ಘೋಷಣೆಗಳನ್ನು ಕೂಗುತ್ತಿರುವ ದೃಶ್ಯಗಳ ವಿಡಿಯೊಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿವೆ.

ಮೈತೇಯಿಗಳ ನಾಗರಿಕ ಸಮಾಜದ ಗುಂಪುಗಳ ಒಂದೇ ವೇದಿಕೆಯಾದ ಮಣಿಪುರ ಒಗ್ಗಟ್ಟಿನ ಸಮನ್ವಯ ಸಮಿತಿ (ಸಿಒಸಿಒಎಂಐ) ಮೆರವಣಿಗೆಗೆ ಕರೆ ನೀಡಿತ್ತು. ಬ್ಯಾರಿಕೇಡ್‌ನ ಆಚೆಗಿರುವ ಜಾಗದಲ್ಲಿ ವಾಸಿಸುತ್ತಿದ್ದ ಮೈತೇಯಿಗಳು ತಮ್ಮ ಜಾಗದಲ್ಲಿ ಪುನಃ ನೆಲೆ ನಿಲ್ಲಲು ಬಯಸಿದ್ದರಿಂದ ಬ್ಯಾರಿಕೇಡ್ ತೆಗೆದುಹಾಕಲು ಪ್ರತಿಭಟನಕಾರರು ಟೋರ್ಬಂಗ್ ಮತ್ತು ಕಾಂಗ್ವೈವರೆಗೆ ಮೆರವಣಿಗೆ ನಡೆಸಿದರು. ಆದರೆ, ಹಿಂಸಾಚಾರದಿಂದಾಗಿ ಪ್ರತಿಭಟನಕಾರರು ಓಡಿಹೋದರು. ಜನಾಂಗೀಯ ಹಿಂಸಾಚಾರ ಭುಗಿಲೇಳುವವರೆಗೂ ಇದು ಮೈತೇಯಿ ಸಮುದಾಯದವರ ಜನವಸತಿ ಪ್ರದೇಶವಾಗಿತ್ತು ಎಂದು ಸಿಒಸಿಒಎಂಐ ಹೇಳಿದೆ.

ಮೈತೇಯಿ ಪ್ರಾಬಲ್ಯದ ಕಣಿವೆ ಜಿಲ್ಲೆಯಾದ ಬಿಷ್ಣುಪುರ್ ಮತ್ತು ಕುಕಿ ಪ್ರಾಬಲ್ಯದ ಚುರಾಚಂದ್‌ಪುರ ಜಿಲ್ಲೆ ವಿಭಜಿಸುವ 'ಬಫರ್ ವಲಯ' ರಚಿಸುವ ಸಲುವಾಗಿ ಭದ್ರತಾ ಪಡೆಗಳು, ಅದರಲ್ಲೂ ಮುಖ್ಯವಾಗಿ ಅಸ್ಸಾಂ ರೈಫಲ್ಸ್‌ನವರು ಬ್ಯಾರಿಕೇಡ್ ಹಾಕಿದ್ದರು. ಈಗಾಗಲೇ 170 ಕ್ಕೂ ಹೆಚ್ಚು ಜನರನ್ನು ಬಲಿ ಪಡೆದಿರುವ ಜನಾಂಗೀಯ ಹಿಂಸಾಚಾರವು ಮತ್ತಷ್ಟು ಉಲ್ಬಣಿಸುವುದನ್ನು ತಡೆಯುವ ಸಲುವಾಗಿ ಈ ಬಫರ್ ವಲಯ ರಚಿಸಲಾಗಿದೆ.

ಭೇಟಿ: ಮಣಿಪುರದ ಹತ್ತು ಕುಕಿ ಶಾಸಕರು, ಸಿವಿಲ್ ಸೊಸೈಟಿ ಆರ್ಗನೇಜೇಷನ್ಸ್ ಮತ್ತು ಸಸ್ಪೆನ್ಷನ್ ಆಫ್ ಆಪರೇಷನ್ಸ್ ಗುಂಪು ಮಿಜೋರಾಂ ಮುಖ್ಯಮಂತ್ರಿ ಝೊರಾಂಥಾಂಗ ಅವರನ್ನು ಬುಧವಾರ ಭೇಟಿ ಮಾಡಿತು ಎಂದು ಅಧಿಕಾರಿಗಳು ತಿಳಿಸಿದರು.

ಹಿಂಸಾಚಾರದಿಂದಾಗಿ ಮಣಿಪುರದ ಜನ ಸಂಕಟಪಡುತ್ತಿರುವುದು ತಿಳಿದು ದುಃಖವಾಗಿದೆ. ನೆರವು ನೀಡಲು ಮಿಜೋರಾಂ ಜನರು ಸಿದ್ಧರಿದ್ದಾರೆ. ಜನರು ಮತ್ತು ವಿವಿಧ ಸಂಸ್ಥೆಗಳೊಂದಿಗೆ ಸಮಾಲೋಚನೆ ನಡೆಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿರುವುದಾಗಿ ಹೇಳಿದರು.

ಉದಯನಿಧಿಗೆ ಬೆದರಿಕೆ: ಅಯೋಧ್ಯೆ ಸ್ವಾಮೀಜಿ ಮೇಲೆ ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಚೆನ್ನೈ: ತಮಿಳುನಾಡು ಕ್ರೀಡಾ ಸಚಿವ ಉದಯನಿಧಿ ಸ್ಟಾಲಿನ್ ತಲೆಗೆ ₹10 ಕೋಟಿ ಇನಾಮು ಘೋಷಿಸಿರುವ ಅಯೋಧ್ಯೆ ಮೂಲದ ಸ್ವಾಮೀಜಿ ರಾಮಚಂದ್ರ ದಾಸ್ ಪರಮಹಂಸ ಆಚಾರ್ಯರ ಮೇಲೆ ತಮಿಳುನಾಡು ಪೊಲೀಸರು ಬುಧವಾರ ಪ್ರಕರಣ ದಾಖಲಿಸಿದ್ದಾರೆ.

ಅಲ್ಲದೆ, ಉದಯನಿಧಿ ಪೋಸ್ಟರ್‌ನಲ್ಲಿನ ಅವರ ಶಿರವನ್ನು ಅಯೋಧ್ಯೆ ಸ್ವಾಮೀಜಿ ಸಾಂಕೇತಿಕವಾಗಿ ಕತ್ತಿಯಿಂದ ಕತ್ತರಿಸಿ, ಬೆಂಕಿ ಹಚ್ಚುತ್ತಿರುವ ವಿಡಿಯೋ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದಕ್ಕಾಗಿ ಉತ್ತರ ಪ್ರದೇಶ ಮೂಲದ ಪತ್ರಕರ್ತ ಪೀಯೂಷ್ ರೈ ವಿರುದ್ಧವೂ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

'ಪತ್ರಕರ್ತ ಪೋಸ್ಟ್ ಮಾಡಿದ ವಿಡಿಯೊ ತಮಿಳುನಾಡಿನ ಜನರಲ್ಲಿ ಭೀತಿ ಉಂಟುಮಾಡುವ ಸಾಮರ್ಥ್ಯ ಹೊಂದಿದೆ. ಇದು ಕಾನೂನು ಮತ್ತು ಸುವ್ಯವಸ್ಥೆ ಹದಗೆಡಲು ಹಾಗೂ ಗಲಭೆಗೆ ಕಾರಣವಾಗಬಹುದು' ಎಂದು ಪೊಲೀಸರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಡಿಎಂಕೆ ವಕೀಲರ ವಿಭಾಗದ ಕಾರ್ಯಾಧ್ಯಕ್ಷ ಜೆ.ದೇವನೇಶನ್ ಅವರು ನೀಡಿದ ದೂರು ಆಧರಿಸಿ ಮಧುರೈ ಪೊಲೀಸ್ ಸೈಬರ್ ಕ್ರೈಂ ವಿಭಾಗವು ಪ್ರಕರಣ ದಾಖಲಿಸಿಕೊಂಡಿದೆ.

'ಹೇಳಿಕೆ ಕೊಡುವವರೇ ನಿರ್ಮೂಲನೆ ಆಗುತ್ತಾರೆ'

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ಸನಾತನ ಧರ್ಮವನ್ನು ನಿರ್ಮೂಲನೆ ಮಾಡಬೇಕು ಎಂಬ ಹೇಳಿಕೆ ನೀಡುವವರೇ ನಿರ್ಮೂಲನೆ ಆಗುವುದನ್ನು ನಾವೆಲ್ಲರೂ ನೋಡುತ್ತೇವೆ' ಎಂದು ಇಸ್ಕಾನ್ ಸಂಸ್ಥೆಯ ದಾವಣಗೆರೆ ಘಟಕದ ಮುಖ್ಯಸ್ಥ ಅವಧೂತ ಚಂದ್ರದಾಸ್ ಆಕ್ರೋಶ ವ್ಯಕ್ತಪಡಿಸಿದರು.

'ಸನಾತನ ಧರ್ಮ ನಿರ್ಮೂಲನೆ ಬಗ್ಗೆ ಈಗ ಹೇಳಿಕೆ ಕೊಟ್ಟಿರುವವರ ಅಜ್ಜನೋ, ಅಪ್ಪನೋ ಈ ಹಿಂದೆ ಹೇಳಿಕೆ ಕೊಟ್ಟು ಹೋಗಿರಬಹುದು. ಅದಕ್ಕೇ ಅವರು ನಿರ್ಮೂಲನೆಯಾಗಿದ್ದಾರೆ. ಇವು ಚುನಾವಣೆ ಸಮೀಪಿಸಿದಾಗ ರಾಜಕೀಯ ಪ್ರಚಾರಕ್ಕೋಸ್ಕರ ಕೊಡುವಂಥ ಹೇಳಿಕೆಗಳಾಗಿದ್ದು, 5 ವರ್ಷಕ್ಕಷ್ಟೇ ಸೀಮಿತ' ಎಂದು ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಟೀಕಿಸಿದರು.

'ಸನಾತನ ಧರ್ಮ ಈಗ ಹಿಂದೂ ಧರ್ಮ ಎಂದು ಹೆಸರಾಗಿದೆ. ಇದನ್ನು ಮುಗಿಸುವುದು ಅಷ್ಟು ಸುಲಭವಲ್ಲ. ಧರ್ಮ ಹಾಗೂ ರಿಲಿಜನ್ ಸಮನಾರ್ಥಕ ಪದಗಳಲ್ಲ. ಧರ್ಮಕ್ಕೆ ಪರ್ಯಾಯ ಶಬ್ದ ಇಂಗ್ಲಿಷ್‌ನಲ್ಲಿ ಇಲ್ಲ. ಧರ್ಮ ಎಂದರೆ ಗುಣ ಧರ್ಮ ಎಂದು ಅರ್ಥ. ಗುಣಧರ್ಮ ಎಂದರೆ ಒಂದು ವಸ್ತುವಿನಿಂದ ಮತ್ತೊಂದು ವಸ್ತುವನ್ನು ಬೇರ್ಪಡಿಸಲು ಆಗದೇ ಇರುವುದು. ಸಕ್ಕರೆಯ ಗುಣ ಧರ್ಮ ಸಿಹಿ. ಅಗ್ನಿಯ ಗುಣಧರ್ಮ ಶಾಖ. ಅದು ಬೆಳಕನ್ನು ನೀಡುವಂತೆ, ಪ್ರತಿಯೊಬ್ಬರ ಗುಣಧರ್ಮ ಸೇವೆ ಸಲ್ಲಿಸುವುದು. ಇದು ನಿಜವಾದ ಸನಾತನ ಧರ್ಮ. ಇದನ್ನು ಬೇರ್ಪಡಿಸಲು ಆಗುವುದಿಲ್ಲ' ಎಂದು ವ್ಯಾಖ್ಯಾನಿಸಿದರು.

'ತಕ್ಕ ಉತ್ತರ' ಅಗತ್ಯ: ಮೋದಿ

ಒಂದನೇ ಪುಟದಿಂದ...

ಶಿಕ್ಷಕರ ದಿನಾಚರಣೆ ಹಿನ್ನೆಲೆಯಲ್ಲಿ ಸಾಮಾಜಿಕ ಮಾಧ್ಯಮ 'ಎಕ್ಸ್'ನಲ್ಲಿ ಮಂಗಳವಾರ ಪೋಸ್ಟ್ ಹಾಕಿದ್ದ ಉದಯನಿಧಿ, ಮಹಾಭಾರತದ ದ್ರೋಣಾಚಾರ್ಯರಿಗೆ ಸಂಬಂಧಿಸಿದ ಸಂಗತಿಯನ್ನು ಹಂಚಿಕೊಂಡಿದ್ದರು.

'ಯಾವಾಗಲೂ ಭವಿಷ್ಯದ ಪೀಳಿಗೆ ಕುರಿತು ಚಿಂತನೆ ನಡೆಸುವವರೇ ನಿಜವಾದ ಶಿಕ್ಷಕರು. ಶಿಷ್ಯನ ಹೆಬ್ಬೆರಳನ್ನು ಕೇಳದೇ ಜ್ಞಾನವನ್ನು ಧಾರೆ ಎರೆಯುವಂತಹ ಶಿಕ್ಷಕರೊಂದಿಗೆ ನಮ್ಮ ದ್ರಾವಿಡ ಚಳವಳಿ ಬಾಂಧವ್ಯ ಹೊಂದಿದೆ' ಎಂದು ಪೋಸ್ಟ್ ಮಾಡುವ ಮೂಲಕ ಉದಯನಿಧಿ ಅವರು ಬಿಜೆಪಿ ವಿರುದ್ಧ ತಮ್ಮ ವಾಗ್ದಾಳಿಯನ್ನು ಮತ್ತಷ್ಟು ಹರಿತಗೊಳಿಸಿದ್ದಾರೆ ಎಂದು ವಿಶ್ಲೇಷಿಸಲಾಗುತ್ತಿದೆ.

ಎಚ್ಚರಿಕೆ ಹೆಜ್ಜೆ: ಭಾರತ ಮತ್ತು ಇಂಡಿಯಾ ಎಂಬ ವಿಚಾರವಾಗಿ ಎಚ್ಚರಿಕೆಯ ಪ್ರತಿಕ್ರಿಯೆ ನೀಡಲು ಬಿಜೆಪಿ ಪಾಳೆಯ ತೀರ್ಮಾನಿಸಿದೆ.

ಈ ವಿಷಯವಾಗಿ ಪಕ್ಷದ ವಕ್ತಾರರು ಮಾತ್ರ ಮಾತನಾಡಬೇಕು. ಅಲ್ಲದೆ, ವಿಷಯಾಂತರಕ್ಕೆ ಆಸ್ಪದ ನೀಡದೇ ಪ್ರತಿಕ್ರಿಯೆ ನೀಡಬೇಕು ಎಂದು ಪಕ್ಷದ ನಾಯಕರಿಗೆ ಸೂಚಿಸಲಾಗಿದೆ ಎಂದು ಮೂಲಗಳು ಹೇಳಿವೆ.

ಸರ್ಕಾರಿ ಆಸ್ಪತ್ರೆಗಳ ಚಿಕಿತ್ಸೆಗೆ ನಿರಾಸಕ್ತಿ • 'ಜ್ಯೋತಿ ಸಂಜೀವಿನಿ'ಯಡಿ ಖಾಸಗಿ ಆಸ್ಪತ್ರೆಗಳಿಗೆ ಹಣ ಪಾವತಿ

ನೌಕರರ 'ಖಾಸಗಿ' ಚಿಕಿತ್ಸೆಗೆ ₹82.72 ಕೋಟಿ

• ವರುಣ ಹೆಗಡೆ

ಬೆಂಗಳೂರು: ನಗದು ರಹಿತ ಉಚಿತ ವೈದ್ಯಕೀಯ ಸೌಲಭ್ಯ ಒದಗಿಸುವ 'ಜ್ಯೋತಿ ಸಂಜೀವಿನಿ' ಯೋಜನೆಯಡಿ ಬಹುತೇಕ ಸರ್ಕಾರಿ ನೌಕರರು ಹಾಗೂ ಅವರ ಕುಟುಂಬದವರು ಖಾಸಗಿ ಆಸ್ಪತ್ರೆಗಳಲ್ಲಿಯೇ ಚಿಕಿತ್ಸೆ ಪಡೆದುಕೊಂಡಿದ್ದಾರೆ. ಖಾಸಗಿ ಚಿಕಿತ್ಸೆಗೆ ಸರ್ಕಾರವು ಐದು ವರ್ಷಗಳಲ್ಲಿ ₹ 82.72 ಕೋಟಿ ವೆಚ್ಚ ಮಾಡಿದೆ.

'ಜ್ಯೋತಿ ಸಂಜೀವಿನಿ' ಯೋಜನೆಯನ್ನು 2014-15ರಲ್ಲಿ ಸರ್ಕಾರ ಜಾರಿಗೊಳಿಸಿದೆ. ಈ ಯೋಜನೆಯಡಿ ಫಲಾನುಭವಿಗಳು ನೇರವಾಗಿ ನೋಂದಾಯಿತ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದುಕೊಳ್ಳಬಹುದು. ಕಳೆದ ಐದು ವರ್ಷಗಳಲ್ಲಿ 13,183 ಮಂದಿ ಚಿಕಿತ್ಸೆ ಪಡೆದಿದ್ದಾರೆ. ಇವರಲ್ಲಿ 10,517 ಮಂದಿ ಖಾಸಗಿ ಆಸ್ಪತ್ರೆಗಳಲ್ಲಿಯೇ ಚಿಕಿತ್ಸೆ ಪಡೆದಿದ್ದಾರೆ. ಅವರ ಚಿಕಿತ್ಸಾ ವೆಚ್ಚವನ್ನು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಆಸ್ಪತ್ರೆಗಳಿಗೆ ಪಾವತಿಸಿದೆ.

> **ಯೋಜನೆಯಡಿ ನಗದು ರಹಿತ ಚಿಕಿತ್ಸೆ ಒದಗಿಸಲಾಗುತ್ತಿದೆ. ಇದರಿಂದಾಗಿ ಫಲಾನುಭವಿಗಳು ನೋಂದಾಯಿತ ಆಸ್ಪತ್ರೆಗೆ ನೇರವಾಗಿ ತೆರಳಿ, ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.**
>
> **ಡಿ. ರಂದೀಪ್,** ಆರೋಗ್ಯ ಇಲಾಖೆ ಆಯುಕ್ತ

ಸರ್ಕಾರಿ ಆಸ್ಪತ್ರೆಗಳ ಬಲವರ್ಧನೆ ಹಾಗೂ ರೋಗಿಗಳನ್ನು ಸರ್ಕಾರಿ ಆಸ್ಪತ್ರೆಗಳತ್ತ ಸೆಳೆಯಲು ಸರ್ಕಾರವು 2018ರಲ್ಲಿ 'ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ' ಯೋಜನೆ (ಎಬಿ–ಎಆರ್‌ಕೆ) ಪ್ರಾರಂಭಿಸಿದೆ. ಈ ಯೋಜನೆಯಡಿ ಬಿಪಿಎಲ್ ಕುಟುಂಬದವರಿಗೆ ವರ್ಷಕ್ಕೆ ₹ 5 ಲಕ್ಷದವರೆಗೆ ಆರೋಗ್ಯ ವಿಮೆಗೆ ಅವಕಾಶವಿದ್ದರೂ ಫಲಾನುಭವಿಗಳು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಲಭ್ಯವಿರದಿದ್ದರೆ ಮಾತ್ರ ಶಿಫಾರಸು ಆಧಾರದಲ್ಲಿ ಖಾಸಗಿ ಆಸ್ಪತ್ರೆಗಳಿಗೆ ತೆರಳಲು ಅವಕಾಶವಿದೆ. ಆದರೆ, 'ಜ್ಯೋತಿ ಸಂಜೀವಿನಿ' ಯೋಜನೆಯಡಿ ಈ ನಿರ್ಬಂಧವಿಲ್ಲ. ಇದರಿಂದಾಗಿ ಸರ್ಕಾರಿ ನೌಕರರು ಹಾಗೂ ಅವರ ಕುಟುಂಬದ ಸದಸ್ಯರು ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಲು ನಿರಾಸಕ್ತಿ ತಾಳಿದ್ದಾರೆ. ಕಳೆದ ಐದು ವರ್ಷಗಳಲ್ಲಿ 2,666 ಮಂದಿ ಮಾತ್ರ ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಿದ್ದಾರೆ.

ಚಿಕಿತ್ಸಾ ವೆಚ್ಚ ಹೆಚ್ಚಳ: ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಒದಗಿಸುವ ಅನುದಾನದಡಿ, ಆರೋಗ್ಯ ಇಲಾಖೆಯ ವ್ಯಾಪ್ತಿಯಲ್ಲಿನ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಈ ಯೋಜನೆಯನ್ನು ಕಾರ್ಯಗತಗೊಳಿಸುತ್ತಿದೆ. ಯೋಜನೆಯಡಿ ಚಿಕಿತ್ಸೆ ಪಡೆದುಕೊಳ್ಳುವವರು ಹಾಗೂ ಚಿಕಿತ್ಸಾ ವೆಚ್ಚ ವರ್ಷದಿಂದ ವರ್ಷಕ್ಕೆ ಹೆಚ್ಚಳವಾಗುತ್ತಿದೆ. 2019–20ನೇ ಸಾಲಿನಲ್ಲಿ ಒಟ್ಟು 2,765 ಮಂದಿ ಚಿಕಿತ್ಸೆ ಪಡೆದುಕೊಂಡಿದ್ದು, ಟ್ರಸ್ಟ್ 1,731 ಪ್ರಕರಣಗಳಲ್ಲಿ ₹ 11.42 ಕೋಟಿ ಪಾವತಿಸಿದೆ. 2022–23ರಲ್ಲಿ ಚಿಕಿತ್ಸೆ ಪಡೆದವರ ಒಟ್ಟು ಸಂಖ್ಯೆ 3,746ಕ್ಕೆ ಏರಿಕೆಯಾಗಿದೆ. 3,585 ಪ್ರಕರಣಗಳಲ್ಲಿ ₹ 23.92 ಕೋಟಿ ಪಾವತಿಸಲಾಗಿದೆ.

ಯೋಜನೆಯಡಿ 272 ಆಸ್ಪತ್ರೆಗಳು ನೋಂದಾಯಿಸಲ್ಪಟ್ಟಿವೆ. ಇವುಗಳಲ್ಲಿ ಹೊರರಾಜ್ಯದ 27 ಆಸ್ಪತ್ರೆಗಳು ಸೇರಿವೆ. 2019ರಲ್ಲಿ 'ಜ್ಯೋತಿ ಸಂಜೀವಿನಿ' ಯೋಜನೆಯನ್ನು 'ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ' ಯೋಜನೆ ಜತೆಗೆ ಸಂಯೋಜನೆಗೊಳಿಸಿ, ಆದೇಶ ಹೊರಡಿಸಲಾಗಿತ್ತು. ಇದರಿಂದಾಗಿ ಸರ್ಕಾರಿ ನೌಕರರು ಹಾಗೂ ಅವರ ಕುಟುಂಬದ ಸದಸ್ಯರಿಗೆ ಸಾವಿರಕ್ಕೂ ಅಧಿಕ ಚಿಕಿತ್ಸಾ ವಿಧಾನಗಳು ಹೆಚ್ಚುವರಿಯಾಗಿ ಸಿಗುತ್ತಿವೆ.

'ಗಂಭೀರ ಕಾಯಿಲೆಗಳಿಗೆ ಬಹುತೇಕ ಸರ್ಕಾರಿ ಆಸ್ಪತ್ರೆಗಳಲ್ಲಿ ಅತ್ಯಾಧುನಿಕ ಚಿಕಿತ್ಸಾ ಸೌಲಭ್ಯಗಳಿಲ್ಲ. ಶಸ್ತ್ರಚಿಕಿತ್ಸೆಗಳಿಗೆ ಹಲವು ದಿನಗಳು ಕಾಯಬೇಕಾಗುತ್ತದೆ. ತಜ್ಞ ವೈದ್ಯರ ಕೊರತೆ ಸೇರಿ ವಿವಿಧ ಸಮಸ್ಯೆಗಳಿವೆ. ಸರ್ಕಾರವೇ ನೇರವಾಗಿ ಚಿಕಿತ್ಸಾ ವೆಚ್ಚ ಪಾವತಿಸುವುದರಿಂದ ಸಹಜವಾಗಿ ಫಲಾನುಭವಿಗಳು ಖಾಸಗಿ ಆಸ್ಪತ್ರೆಗಳತ್ತ ಮುಖಮಾಡುತ್ತಿದ್ದಾರೆ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ವಿಕ್ಟೋರಿಯಾ ಆಸ್ಪತ್ರೆಯ ವೈದ್ಯರೊಬ್ಬರು ತಿಳಿಸಿದರು.

ಜ್ಯೋತಿ ಸಂಜೀವಿನಿಯಡಿ ಚಿಕಿತ್ಸೆ ಪಡೆದವರು

ವರ್ಷ	ಸರ್ಕಾರಿ (ಆಸ್ಪತ್ರೆಯಲ್ಲಿ ಚಿಕಿತ್ಸೆ)	ಖಾಸಗಿ (ಆಸ್ಪತ್ರೆಯಲ್ಲಿ ಚಿಕಿತ್ಸೆ)
2018-19	243	842
2019-20	604	2,161
2020-21	479	2,002
2021-22	598	2,508
2022-23	742	3,004

ಜ್ಯೋತಿ ಸಂಜೀವಿನಿಯಡಿ ಪಾವತಿಸಿದ ವೆಚ್ಚ (ಕೋಟಿ ₹ಗಳಲ್ಲಿ)

ವರ್ಷ	ವೆಚ್ಚ
2018-19	15.27
2019-20	11.42
2020-21	16.19
2021-22	15.90
2022-23	23.92

ಮಾರಣಾಂತಿಕ ಕಾಯಿಲೆಗೆ ಚಿಕಿತ್ಸೆ

'ಜ್ಯೋತಿ ಸಂಜೀವಿನಿ' ಯೋಜನೆಯಡಿ ಹೃದ್ರೋಗ, ಕ್ಯಾನ್ಸರ್, ಮೂತ್ರಪಿಂಡ ಸಮಸ್ಯೆ, ನರರೋಗ, ಸುಟ್ಟಗಾಯ, ಅಪಘಾತ ಹಾಗೂ ಮಕ್ಕಳ ಕಾಯಿಲೆಗಳಿಗೆ ಚಿಕಿತ್ಸೆ ಒದಗಿಸಲಾಗುತ್ತಿದೆ. ಈ ಕಾಯಿಲೆಗಳಿಗೆ ಸಂಬಂಧಿಸಿದಂತೆ 450 ಚಿಕಿತ್ಸಾ ವಿಧಾನ ಹಾಗೂ 50 ಮುಂದುವರಿದ ಚಿಕಿತ್ಸಾ ಸೌಲಭ್ಯಗಳು ಮೊದಲು ದೊರೆಯುತ್ತಿದ್ದವು. 'ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ' ಯೋಜನೆ ಜತೆಗೆ ಸಂಯೋಜಿಸಿದ ಬಳಿಕ 900 ತೃತೀಯ ಹಂತದ ಚಿಕಿತ್ಸಾ ವಿಧಾನ ಹಾಗೂ 169 ತುರ್ತು ಚಿಕಿತ್ಸಾ ವಿಧಾನಗಳು ಹೆಚ್ಚುವರಿಯಾಗಿ ಸಿಗುತ್ತಿವೆ. ವೈದ್ಯರ ಸಮಾಲೋಚನೆ, ಔಷಧವೂ ಯೋಜನೆಯಡಿ ಬರಲಿದೆ.

ಸುದ್ದಿ 2 ನಿಮಿಷ

ಬೈಕ್‌ಗೆ ಕಾರು ಡಿಕ್ಕಿ: ಹಾಸ್ಯನಟನ ವಿರುದ್ಧ ಪ್ರಕರಣ

ಚಿಕ್ಕಮಗಳೂರು: ಹಾಸ್ಯನಟ ಚಂದ್ರಪ್ರಭ ಪ್ರಯಾಣಿಸಿದ್ದ ಕಾರು ಬೈಕ್‌ಗೆ ಡಿಕ್ಕಿಯಾಗಿ ಸವಾರ ಗಂಭೀರವಾಗಿ ಗಾಯಗೊಂಡಿದ್ದು, ಚಂದ್ರಪ್ರಭ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಬಸ್ ನಿಲ್ದಾಣದ ಎದುರಿನ ರಸ್ತೆಯಲ್ಲಿ ಮಂಗಳವಾರ ದ್ವಿಚಕ್ರ ವಾಹನಕ್ಕೆ ಕಾರು ತಗುಲಿದೆ. ಬೈಕ್ ಸವಾರ ಚಿಕ್ಕಮಗಳೂರು ತಾಲ್ಲೂಕಿನ ನಾಗೇನಹಳ್ಳಿ ನಿವಾಸಿ ಮಲತೇಶ್ ರಸ್ತೆಗೆ ಬಿದ್ದು ಗಂಭೀರವಾಗಿ ಗಾಯಗೊಂಡಿದ್ದಾರೆ. ಹೆಚ್ಚಿನ ಚಿಕಿತ್ಸೆಗಾಗಿ ಹಾಸನದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.



'ನಾನೇ ಕಾರು ಚಾಲನೆ ಮಾಡುತ್ತಿದ್ದೆ. ಕಾರಿನ ಎಡಭಾಗಕ್ಕೆ ಬೈಕ್ ತಗುಲಿತು. ಇಳಿದು ನೋಡಿದಾಗ ಸವಾರ ಬಿದ್ದಿದ್ದರು. ಅವರನ್ನು ಸ್ನೇಹಿತನ ಆಟೊ ರಿಕ್ಷಾದಲ್ಲಿ ಆಸ್ಪತ್ರೆಗೆ ಕಳುಹಿಸಿದೆವು. ಪೊಲೀಸರು ಮತ್ತು ನಾವು ಎತ್ತಿಕೊಂಡಾಗ ಅವರು ಪಾನ ಮತ್ತರಾಗಿರುವುದು ಗೊತ್ತಾಯಿತು. ಸ್ಥಳದಲ್ಲಿ ಇದ್ದವರು ನಿಮ್ಮ ತಪ್ಪಿಲ್ಲ ಹೋಗಿ ಎಂದು ಹೇಳಿದರು. ಚಿತ್ರೀಕರಣಕ್ಕೆ ಹೋಗಲೇಬೇಕಿದ್ದ ಕಾರಣ ಹೊರಟೆ' ಎಂದು ಚಂದ್ರಪ್ರಭ ಹೇಳಿದ್ದಾರೆ.

'ಪೊಲೀಸರು ಕರೆ ಮಾಡಿ ಠಾಣೆಗೆ ಬರಲು ತಿಳಿಸಿದ್ದಾರೆ. ಕಾನೂನು ಪ್ರಕಾರ ಪೊಲೀಸರು ಹೇಳಿದಂತೆ ಕೇಳುತ್ತೇನೆ. ಕಾರು ನಿಲ್ಲಿಸದೆ ಪರಾರಿಯಾಗಿರುವುದಾಗಿ ಸುಳ್ಳು ಹರಡಬಾರದು' ಎಂದು ಮನವಿ ಮಾಡಿದ್ದಾರೆ.

ಆನೆ ತುಳಿದು ಕೂಲಿ ಕಾರ್ಮಿಕ ಸಾವು

ಕನಕಪುರ: ಕೂಲಿ ಕಾರ್ಮಿಕರೊಬ್ಬರನ್ನು ಕಾಡಾನೆ ತುಳಿದು ಸಾಯಿಸಿರುವ ಘಟನೆ ತಾಲ್ಲೂಕಿನ ಕೊಳಗೊಂಡನಹಳ್ಳಿ ಸಮೀಪದ ಕಾಡಿನಲ್ಲಿ ಬುಧವಾರ ನಡೆದಿದೆ.

ಗಟ್ಟಿಗುಂದ ಗ್ರಾಮದ ಕೂಲಿ ಕಾರ್ಮಿಕ ಚಿಕ್ಕರಾಮಯ್ಯ (60) ಮೃತರು. ಗ್ರಾಮದ ಸಮೀಪ ಕಾಡಿನಲ್ಲಿರುವ ದೇವಸ್ಥಾನಕ್ಕೆ ಹೋಗಿ ಪೂಜೆ ಮುಗಿಸಿ ವಾಪಸ್ ಬರುವಾಗ ಒಂಟಿ ಆನೆ ದಾಳಿ ನಡೆಸಿದೆ. ಅವರಿಗೆ ಪತ್ನಿ ಹಾಗೂ ಮೂವರು ಪುತ್ರಿಯರು ಇದ್ದಾರೆ. ಕೋಡಿಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಾಳೆಯಿಂದ 'ತೇಜಸ್ವಿ ಚಿಟ್ಟೆಲೋಕ' ಪ್ರದರ್ಶನ

ಬೆಂಗಳೂರು: ಕೆ.ಪಿ. ಪೂರ್ಣ ಚಂದ್ರ ತೇಜಸ್ವಿಯವರ ಜನ್ಮದಿನದ ಪ್ರಯುಕ್ತ 'ತೇಜಸ್ವಿ ಲೋಕ–11 ಏರೋಪ್ಲೇನ್ ಚಿಟ್ಟೆಲೋಕ'ಎಂಬ ಕಾರ್ಯಕ್ರಮವನ್ನು ಸೆಪ್ಟೆಂಬರ್ 8ರಿಂದ 14ರ ವರೆಗೆ ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ಆಯೋಜಿಸಲಾಗಿದೆ.

ಪ್ರತಿವರ್ಷ ಸೆಪ್ಟೆಂಬರ್ 8 ರಂದು 'ತೇಜಸ್ವಿ ಲೋಕ' ಹೆಸರಿನ ಛಾಯಾಚಿತ್ರ, ಸಾಕ್ಷ್ಯಚಿತ್ರ, ಸಚಿತ್ರ ಪ್ರದರ್ಶನ ಮತ್ತು ಸಂವಾದಗಳಿರುವ ಸರಣಿ ಆಯೋಜಿಸಲಾಗಿದೆ. ಈ ವರ್ಷ ಏರೋಪ್ಲೇನ್ ಚಿಟ್ಟೆಲೋಕ ಎಂಬ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸೊಳ್ಳೆ, ನೊಣಗಳಂತಹ ಕೀಟಗಳನ್ನು ಭಕ್ಷಿಸುವ ಮೂಲಕ ಮನುಕುಲಕ್ಕೆ ರಕ್ಷಣೆ ನೀಡುತ್ತಿರುವ ಏರೋಪ್ಲೇನ್ ಚಿಟ್ಟೆ (ಕೊಡತಿಕೀಟ) ಮತ್ತು ಹೆಲಿಕಾಪ್ಟರ್ ಚಿಟ್ಟೆಗಳ (ಕನ್ಯಾಕೀಟ) ಚರಿತ್ರೆ, ವರ್ತಮಾನದ ಸ್ಥಿತಿಗತಿ ಬಗ್ಗೆ ಪ್ರದರ್ಶನ ಏರ್ಪಡಿಸಲಾಗಿದೆ ಎಂದು ಪರಿಸರ ನಿಸರ್ಗ ಸಂರಕ್ಷಣಾ ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ.

ಮನೆಗಳಲ್ಲಿ ಕಳ್ಳತನ: ನಾಲ್ಕು ಮಂದಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಗಲಗುಂಟೆ ಹಾಗೂ ಸಂಜಯನಗರ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಪ್ರತ್ಯೇಕ ಕಳ್ಳತನ ಪ್ರಕರಣಗಳಲ್ಲಿ ನಾಲ್ವರನ್ನು ಪೊಲೀಸರು ಬಂಧಿಸಿದ್ದಾರೆ.

'ಬಾಗಲಗುಂಟೆಯ ಶೆಟ್ಟಿಹಳ್ಳಿಯಲ್ಲಿರುವ ಮನೆಯಲ್ಲಿ ಕಳ್ಳತನ ಮಾಡಿದ್ದ ರವಿಕುಮಾರ್, ಇಮ್ರಾನ್ ಹಾಗೂ ಜೈಕುಮಾರ್‌ನನ್ನು ಬಂಧಿಸಲಾಗಿದೆ. ₹ 6.45 ಲಕ್ಷ ಮೌಲ್ಯದ 129 ಗ್ರಾಂ ತೂಕದ ಚಿನ್ನಾಭರಣ, ₹ 1.08 ಲಕ್ಷ ನಗದು ಹಾಗೂ 2 ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ' ಎಂದು ಹೇಳಿದರು.

'ಶೆಟ್ಟಿಹಳ್ಳಿಯಲ್ಲಿ ವಾಸವಿರುವ ಕುಟುಂಬದ ಸದಸ್ಯರು, ಇತ್ತೀಚೆಗೆ ಧರ್ಮಸ್ಥಳಕ್ಕೆ ಹೋಗಿದ್ದರು. ಮನೆಯಲ್ಲಿ ಯಾರೂ ಇಲ್ಲದ್ದನ್ನು ಗಮನಿಸಿದ್ದ ಆರೋಪಿಗಳು, ಕಳ್ಳತನ ಮಾಡಿ ಪರಾರಿಯಾಗಿದ್ದರು' ಎಂದು ತಿಳಿಸಿದರು.

'ಬಂಧಿತ ಆರೋಪಿಯೊಬ್ಬ, ಅಪರಾಧ ಹಿನ್ನೆಲೆಯುಳ್ಳವ. ಮೊಬೈಲ್ ಕಳವು ಪ್ರಕರಣದಲ್ಲಿ ಜೈಲಿಗೆ ಹೋಗಿ ಜಾಮೀನು ಮೇಲೆ ಹೊರಬಂದಿದ್ದ. ಸಹಚರರ ಜೊತೆ ಸೇರಿ ಕಳ್ಳತನ ಮಾಡಿದ್ದ. ಇದೇ ಆರೋಪಿಗಳು, ವಾಹನ ಕಳ್ಳತನ ಪ್ರಕರಣದಲ್ಲೂ ಭಾಗಿಯಾಗಿದ್ದರು' ಎಂದು ಹೇಳಿದರು.



ಬಂಧಿತ ಆರೋಪಿಗಳಿಂದ ಜಪ್ತಿ ಮಾಡಿರುವ ಚಿನ್ನಾಭರಣವನ್ನು ಉತ್ತರ ವಿಭಾಗದ ಡಿಸಿಪಿ ಶಿವಪ್ರಕಾಶ್ ದೇವರಾಜ್ ವೀಕ್ಷಿಸಿದರು. ಎಸಿಪಿ ಮನೋಜ್‌ಕುಮಾರ್ ಇದ್ದರು – ಪ್ರಜಾವಾಣಿ ಚಿತ್ರ

ಪಶ್ಚಿಮ ಬಂಗಾಳದ ಆರೋಪಿ ಬಂಧನ: 'ಸಂಜಯನಗರದ ಪಟೇಲಪ್ಪ ಬಡಾವಣೆಯಲ್ಲಿರುವ ಮನೆಯೊಂದರಲ್ಲಿ ಇತ್ತೀಚೆಗೆ ಕಳ್ಳತನ ನಡೆದಿತ್ತು. ಕೃತ್ಯ ಎಸಗಿದ್ದ ಆರೋಪಿ ಸುಬ್ರತ್ ಮಂಡಲ್‌ನನ್ನು (28) ಬಂಧಿಸಲಾಗಿದೆ' ಎಂದು ಪೊಲೀಸರು ತಿಳಿಸಿದರು.

'ಪಶ್ಚಿಮ ಬಂಗಾಳದ ಸುಬ್ರತ್, ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದ. ಹಣ ಸಂಪಾದಿಸಲು ಕಳ್ಳತನ ಮಾಡಲಾರಂಭಿಸಿದ್ದ. ಈ ಹಿಂದೆ ಪ್ರಕರಣವೊಂದರಲ್ಲಿ ಜೈಲಿಗೆ ಹೋಗಿ, ಜಾಮೀನು ಮೇಲೆ ಹೊರಬಂದಿದ್ದ. ಈತನಿಂದ ₹ 10.50 ಲಕ್ಷ ಮೌಲ್ಯದ 211 ಗ್ರಾಂ ಚಿನ್ನಾಭರಣ ಹಾಗೂ ₹ 75 ಸಾವಿರ ನಗದು ಜಪ್ತಿ ಮಾಡಲಾಗಿದೆ' ಎಂದರು.

ಬಸ್ ಕ್ಯಾಮೆರಾ ನೀಡಿದ್ದ ಸುಳಿವು: 'ಆರೋಪಿ ಸುಬ್ರತ್, ಕಳ್ಳತನದ ನಂತರ ಬಿಎಂಟಿಸಿ ಬಸ್‌ನಲ್ಲಿ ಸಂಚರಿಸಿದ್ದ. ಮನೆ ಸುತ್ತಮುತ್ತಲಿನ ಸಿ.ಸಿ.ಟಿ.ವಿ ಕ್ಯಾಮೆರಾ ಪರಿಶೀಲನೆ ನಡೆಸಲಾಗಿತ್ತು. ಆರೋಪಿ ಮುಖಚಹರೆ ಕಂಡಿರಲಿಲ್ಲ. ಹೀಗಾಗಿ, ಬಿಎಂಟಿಸಿ ಬಸ್ ನೋಂದಣಿ ಸಂಖ್ಯೆ ಪತ್ತೆ ಮಾಡಲಾಗಿತ್ತು. ಅದರಲ್ಲಿದ್ದ ಕ್ಯಾಮೆರಾ ಪರಿಶೀಲಿಸಿದಾಗ, ಆರೋಪಿ ಮುಖ ಕಂಡಿತ್ತು' ಎಂದು ಪೊಲೀಸರು ತಿಳಿಸಿದರು.

ಮನೆಗೆ ನುಗ್ಗಿ ಮಹಿಳೆ ಕೊಲೆ

ಬೆಂಗಳೂರು: ಜ್ಞಾನಭಾರತಿ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ರೇಷ್ಮಾ ಬಾನು (48) ಅವರನ್ನು ಕತ್ತು ಹಿಸುಕಿ ಕೊಲೆ ಮಾಡಲಾಗಿದ್ದು, ಪರಿಚಯಸ್ಥರೇ ಕೃತ್ಯ ಎಸಗಿ ಪರಾರಿಯಾಗಿರುವ ಶಂಕೆ ವ್ಯಕ್ತವಾಗಿದೆ.

'ಭುವನೇಶ್ವರಿನಗರ 2ನೇ ಹಂತದ ನಿವಾಸಿ ರೇಷ್ಮಾ ಬಾನು, ಅಗರಬತ್ತಿ ತಯಾರಿಕೆ ಕೆಲಸ ಮಾಡುತ್ತಿದ್ದರು. ಮನೆಯಲ್ಲಿ ಒಬ್ಬರೇ ಇರುತ್ತಿದ್ದರು. ಮಂಗಳವಾರ ರಾತ್ರಿ ಅವರನ್ನು ಕೊಲೆ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ರೇಷ್ಮಾ ಅವರ ಪತಿ ತೀರಿಕೊಂಡಿದ್ದರು. ಒಬ್ಬರೇ ಮಗಳಿದ್ದು, ಅವರನ್ನು ಮದುವೆ ಮಾಡಿಕೊಡಲಾಗಿದೆ. ಸದ್ಯ ಮಗಳು ಮೈಸೂರಿನಲ್ಲಿದ್ದಾರೆ. ಹೀಗಾಗಿ, ರೇಷ್ಮಾ ಒಬ್ಬರೇ ಮನೆಯಲ್ಲಿ ವಾಸವಿದ್ದರು. ಮಗಳು, ಆಗಾಗ ಮನೆಗೆ ಬಂದು ಹೋಗುತ್ತಿದ್ದರು' ಎಂದು ತಿಳಿಸಿವೆ.

ಜೋರು ಮಳೆಯಲ್ಲಿ ಕೊಲೆ: 'ಮಂಗಳವಾರ ರಾತ್ರಿ ಭುವನೇಶ್ವರಿನಗರ ಹಾಗೂ ಸುತ್ತಮುತ್ತ ಜೋರು ಮಳೆ ಇತ್ತು. ಇದೇ ಸಂದರ್ಭದಲ್ಲಿ ಮನೆಗೆ ನುಗ್ಗಿದ್ದ ದುಷ್ಕರ್ಮಿಗಳು, ರೇಷ್ಮಾ ಅವರನ್ನು ಕತ್ತು ಹಿಸುಕಿ ಕೊಂದು ಪರಾರಿಯಾಗಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಬಾಗಲಗುಂಟೆ: ತಾಯಿ- ಮಗನ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಗಲಗುಂಟೆ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ನವನೀತಾ (33) ಹಾಗೂ ಅವರ ಮಗ ಸೃಜನ್‌ನನ್ನು (11) ಕೊಲೆ ಮಾಡಲಾಗಿದ್ದು, ನವನೀತಾ ಅವರ ಪತಿಯೇ ಕೃತ್ಯ ಎಸಗಿರುವ ಶಂಕೆ ವ್ಯಕ್ತವಾಗಿದೆ.

'ಕಾಲ್ ಸೆಂಟರ್ ಉದ್ಯೋಗಿ ನವನೀತಾ ಅವರು ಮಗನ ಜೊತೆ ವಾಸವಿದ್ದರು. ಮಂಗಳವಾರ ರಾತ್ರಿ ತಾಯಿ-ಮಗನ ಕೊಲೆ ಆಗಿದೆ. ನವನೀತಾ ತಾಯಿ ನೀಡಿರುವ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆಂಧ್ರಪ್ರದೇಶದ ನವನೀತಾ ಹಾಗೂ ಚಂದ್ರು ಹಲವು ವರ್ಷಗಳ ಹಿಂದೆ ಮದುವೆಯಾಗಿದ್ದರು. ಮದುವೆ ಬಳಿಕ ದಂಪತಿ ಆಂಧ್ರಪ್ರದೇಶದಲ್ಲಿ ನೆಲೆಸಿದ್ದರು. ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ಆರಂಭದಲ್ಲಿ ಅನ್ಯೋನ್ಯವಾಗಿದ್ದ ದಂಪತಿ ನಡುವೆ ಕೆಲ ವರ್ಷಗಳಿಂದ ಜಗಳ ಶುರುವಾಗಿತ್ತು.'

'ಪತಿಯು ನಿತ್ಯವೂ ನವನೀತಾ ಅವರಿಗೆ ಕಿರುಕುಳ ನೀಡುತ್ತಿದ್ದರು. ಇದರಿಂದ ಬೇಸತ್ತ ನವನೀತಾ, ಎರಡು ವರ್ಷಗಳ ಹಿಂದೆ ಪತಿ ಮನೆ ತೊರೆದು ಮಕ್ಕಳಿಬ್ಬರ ಸಮೇತ ಬೆಂಗಳೂರಿಗೆ ಬಂದಿದ್ದರು. ಕಾಲ್ ಸೆಂಟರ್‌ನಲ್ಲಿ ಕೆಲಸಕ್ಕೆ ಸೇರಿದ್ದರು. ಪ್ರತ್ಯೇಕ ಮನೆ ಮಾಡಿಕೊಂಡು ವಾಸವಿದ್ದರು. ಒಬ್ಬ ಮಗ ಮನೆಯಲ್ಲಿದ್ದ. ಮತ್ತೊಬ್ಬ, ಹಾಸ್ಟೆಲ್‌ನಲ್ಲಿದ್ದುಕೊಂಡು ಓದುತ್ತಿದ್ದ. ನವನೀತಾ ತಾಯಿ ಆಗಾಗ ಮನೆಗೆ ಬಂದು ಹೋಗುತ್ತಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಚಾಕುವಿನಿಂದ ಇರಿದು ಕೊಲೆ: 'ಮದ್ಯವ್ಯಸನಿಯಾಗಿದ್ದ ಚಂದ್ರು, ಪತ್ನಿಗೆ ಆಗಾಗ ಕರೆ ಮಾಡಿ ಬೈಯುತ್ತಿದ್ದ. ಕೊಲೆ ಮಾಡುವುದಾಗಿಯೂ ಬೆದರಿಕೆಯೊಡ್ಡುತ್ತಿದ್ದ. ಮಂಗಳವಾರ ಸಂಜೆ ಬೆಂಗಳೂರಿಗೆ ಬಂದಿದ್ದ ಆರೋಪಿ ಚಂದ್ರು, ಪಾನಮತ್ತನಾಗಿ ಪತ್ನಿ ಮನೆಗೆ ನುಗ್ಗಿ ಗಲಾಟೆ ಮಾಡಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಪತ್ನಿ ಮೇಲೆ ಹಲ್ಲೆ ಮಾಡಿದ್ದ ಚಂದ್ರು, ಚಾಕುವಿನಿಂದ ಇರಿದು ಕೊಂದಿದ್ದ. ತಾಯಿಯ ಕೊಲೆ ಕಂಡು ಮಗ ಸೃಜನ್ ಚೀರಾಡಿದ್ದ. ಹೊರಗೆ ಓಡಲು ಯತ್ನಿಸಿದ್ದ. ಆತನನ್ನೂ ಹಿಡಿದುಕೊಂಡಿದ್ದ ಆರೋಪಿ, ಉಸಿರುಗಟ್ಟಿಸಿ ಹತ್ಯೆ ಮಾಡಿ ಸ್ಥಳದಿಂದ ಪರಾರಿಯಾಗಿದ್ದಾನೆ' ಎಂದಿವೆ.

'ನವನೀತಾ ಅವರ ತಾಯಿ ಕೊಲೆ ಬಗ್ಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಹೋದಾಗ, ತಾಯಿ–ಮಗನ ಮೃತದೇಹಗಳಿದ್ದವು. ಅವುಗಳನ್ನು ಆಸ್ಪತ್ರೆಗೆ ಸಾಗಿಸಲಾಯಿತು. ಚಂದ್ರುನೇ ಕೃತ್ಯ ಎಸಗಿರುವ ಅನುಮಾನವಿರುವುದರಿಂದ ಆತನ ಪತ್ತೆಗಾಗಿ ಶೋಧ ಮುಂದುವರಿಸಲಾಗಿದೆ' ಎಂದು ಮೂಲಗಳು ಹೇಳಿವೆ.

'ಒಬ್ಬ ಮಗ ಹಾಸ್ಟೆಲ್‌ನಲ್ಲಿದ್ದರಿಂದ, ಪಾರಾಗಿದ್ದಾನೆ. ಮನೆಯಲ್ಲಿ ಇದ್ದಿದ್ದರೆ, ಆತನನ್ನೂ ಆರೋಪಿ ಕೊಲೆ ಮಾಡುವ ಸಾಧ್ಯತೆ ಇತ್ತು' ಎಂದು ತಿಳಿಸಿವೆ.

ಅಪರಾಧ ಸುದ್ದಿ

ಜಗಳ: ಸ್ನೇಹಿತನ ಕೊಂದ ಯುವತಿ

ಬೆಂಗಳೂರು: ಹುಳಿಮಾವು ಠಾಣೆ ವ್ಯಾಪ್ತಿಯ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರ ಫ್ಲ್ಯಾಟ್‌ನಲ್ಲಿ ಜಾವೀದ್ (24) ಅವರನ್ನು ಕೊಲೆ ಮಾಡಲಾಗಿದ್ದು, ಕೃತ್ಯ ಎಸಗಿರುವ ಆರೋಪದಡಿ ರೇಣುಕಾ (34) ಅವರನ್ನು ಪೊಲೀಸರು ಬಂಧಿಸಿದ್ದಾರೆ.

'ಕೇರಳದ ಜಾವೀದ್, ಮೊಬೈಲ್ ದುರಸ್ತಿ ಮಳಿಗೆಯಲ್ಲಿ ಕೆಲಸ ಮಾಡುತ್ತಿದ್ದರು. ಅಕ್ಷಯನಗರದಲ್ಲಿರುವ ಸರ್ವೀಸ್ ಅಪಾರ್ಟ್‌ಮೆಂಟ್ ಸಮುಚ್ಚಯದ ಫ್ಲ್ಯಾಟ್‌ನಲ್ಲಿ ಮಂಗಳವಾರ ಮಧ್ಯಾಹ್ನ ಅವರನ್ನು ಕೊಲೆ ಮಾಡಲಾಗಿದೆ. ಈ ಸಂಬಂಧ ರೇಣುಕಾ ಅವರನ್ನು ಸೆರೆ ಹಿಡಿಯಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಮೂರು ವರ್ಷಗಳ ಸ್ನೇಹ: 'ಬೆಳಗಾವಿಯ ರೇಣುಕಾ ಅವರು ಕೆಲಸ ಹುಡುಕಿಕೊಂಡು ಹಲವು ವರ್ಷಗಳ ಹಿಂದೆಯೇ ನಗರಕ್ಕೆ ಬಂದಿದ್ದರು. ಕೆಲ ಕಂಪನಿಗಳಲ್ಲಿ ಕೆಲಸ ಮಾಡಿದ್ದರು. ಕೆಲ ತಿಂಗಳ ಹಿಂದೆಯಷ್ಟೇ ಕೆಲಸ ಬಿಟ್ಟಿದ್ದರು' ಎಂದಿವೆ.

'ರೇಣುಕಾ ಅವರು ಮಡಿವಾಳದಲ್ಲಿ ನೆಲೆಸಿದ್ದರು. ಅದೇ ಪ್ರದೇಶದಲ್ಲಿ ಜಾವೀದ್, ವಾಸವಿದ್ದರು. ಮೂರು ವರ್ಷಗಳ ಹಿಂದೆ ಇಬ್ಬರಿಗೂ ಪರಿಚಯವಾಗಿತ್ತು. ಸಲುಗೆಯೇ ಬೆಳೆದಿತ್ತು' ಎಂದು ಹೇಳಿವೆ.

ಚಾಕುವಿನಿಂದ ಇರಿದಿದ್ದ ಯುವತಿ: 'ಜಾವೀದ್ ಹಾಗೂ ರೇಣುಕಾ, ಮಡಿವಾಳದಲ್ಲಿ ಭೇಟಿಯಾಗಿದ್ದರು. ನಂತರ, ಅಕ್ಷಯನಗರದ ಸರ್ವೀಸ್ ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿರುವ ಫ್ಲ್ಯಾಟ್ ಬುಕ್ಕಿಂಗ್ ಮಾಡಿದ್ದರು. ನಿಗದಿಯಂತೆ ಮೂರು ದಿನಗಳ ಹಿಂದೆಯಷ್ಟೇ ಫ್ಲ್ಯಾಟ್‌ಗೆ ಬಂದು ಉಳಿದುಕೊಂಡಿದ್ದರು' ಎಂದು ತಿಳಿಸಿವೆ.

'ಮಂಗಳವಾರ ಮಧ್ಯಾಹ್ನ ಇಬ್ಬರ ನಡುವೆ ಜಗಳ ಶುರುವಾಗಿತ್ತು. ಆರೋಪಿ ರೇಣುಕಾ, ಚಾಕುವಿನಿಂದ ಜಾವೀದ್‌ನ ಎದೆಗೆ ಇರಿದಿದ್ದರು. ತೀವ್ರ ರಕ್ತಸ್ರಾವದಿಂದ ಕುಸಿದು ಬಿದ್ದಿದ್ದ ಜಾವೀದ್‌ನನ್ನು ಅಪಾರ್ಟ್‌ಮೆಂಟ್ ಸಮುಚ್ಚಯದ ಸಿಬ್ಬಂದಿ ಆಸ್ಪತ್ರೆಗೆ ಕರೆದೊಯ್ದಿದ್ದರು. ಮಾರ್ಗಮಧ್ಯೆಯೇ ಅವರು ಮೃತಪಟ್ಟಿರುವುದಾಗಿ ವೈದ್ಯರು ತಿಳಿಸಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

ಆಗಾಗ ಭೇಟಿ: 'ರೇಣುಕಾ ಹಾಗೂ ಜಾವೀದ್, ಪ್ರತ್ಯೇಕವಾಗಿ ವಾಸವಿದ್ದರು. ಆಗಾಗ, ಪರಸ್ಪರ ಭೇಟಿಯಾಗುತ್ತಿದ್ದರು. ವಸತಿಗೃಹ ಹಾಗೂ ಸರ್ವೀಸ್ ಅಪಾರ್ಟ್‌ಮೆಂಟ್‌ನಲ್ಲಿ ಉಳಿದುಕೊಳ್ಳುತ್ತಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಇಬ್ಬರ ನಡುವೆ ಹಣಕಾಸು ವ್ಯವಹಾರವಿತ್ತು. ಜೊತೆಗೆ, ರೇಣುಕಾ ಅವರ ಮೇಲೆ ಆರೋಪಿ ಅನುಮಾನಪಡುತ್ತಿದ್ದ. ಇದೇ ವಿಚಾರವಾಗಿ ಜಗಳ ನಡೆದಿರುವ ಶಂಕೆ ಇದೆ' ಎಂದು ಹೇಳಿವೆ.

ಅಪಘಾತ: ಮೂವರ ಸಾವು

ಕಡೂರು (ಚಿಕ್ಕಮಗಳೂರು): ಕಡೂರು - ಸಖರಾಯಪಟ್ಟಣ ನಡುವೆ ಬುಧವಾರ ಸಂಜೆ ಕಾರು ಸೇತುವೆಗೆ ಗುದ್ದಿದ ಪರಿಣಾಮ ಮೂವರು ಮೃತಪಟ್ಟಿದ್ದಾರೆ.

ಚಿಕ್ಕಮಗಳೂರು ಜಯನಗರ ನಿವಾಸಿಗಳಾದ ನಿರಂಜನಮೂರ್ತಿ (50), ಚೆನ್ನಮ್ಮ(70), ರತ್ನಮ್ಮ(61) ಮೃತಪಟ್ಟವರು. ವಾಹನ ಚಾಲಕ ನಿರಂಜನಮೂರ್ತಿ ಸ್ಥಳದಲ್ಲಿ ಮೃತಪಟ್ಟಿದ್ದು, ಮತ್ತಿಬ್ಬರು ಶಿವಮೊಗ್ಗ ಆಸ್ಪತೆಗೆ ಕೊಂಡೊಯ್ಯುವಾಗ ಮೃತಪಟ್ಟಿದ್ದಾರೆ.

ಸಖರಾಯಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸೌಜನ್ಯಾ ಪ್ರಕರಣ: ನಾಳೆ ಬೆಂಗಳೂರಿಗೆ ಪಾದಯಾತ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತ್ಯಾಚಾರಕ್ಕೆ ಒಳಗಾಗಿ ಕೊಲೆಯಾದ ಸೌಜನ್ಯ ಪ್ರಕರಣ ಪ್ರಮುಖ ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಬೆಳ್ತಂಗಡಿಯಿಂದ ಕೈಗೊಂಡಿರುವ ಪಾದಯಾತ್ರೆಯು ಇದೇ 8ರಂದು ಬೆಂಗಳೂರಿಗೆ ತಲುಪಲಿದೆ ಎಂದು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ (ಕೆಆರ್‌ಎಸ್) ತಿಳಿಸಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕೆಆರ್‌ಎಸ್ ರಾಜ್ಯ ಕಾರ್ಯದರ್ಶಿ ಮಂಜುನಾಥ ಎಸ್., 'ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ಈ ಪ್ರಕರಣದ ನ್ಯಾಯಾಂಗ ತನಿಖೆ ನಡೆಸಿ, ಆರೋಪಿಗಳಿಗೆ ಶಿಕ್ಷೆ ನೀಡಬೇಕು ಎಂದು ಒತ್ತಾಯಿಸಿ ಆಗಸ್ಟ್ 26ರಿಂದ ಬೆಳ್ತಂಗಡಿಯಿಂದ ಬೆಂಗಳೂರಿಗೆ ಕೆಆರ್‌ಎಸ್ ಪಕ್ಷ ಪಾದಯಾತ್ರೆ ಕೈಗೊಂಡಿದೆ' ಎಂದು ಮಾಹಿತಿ ನೀಡದರು.

'14 ದಿನಗಳಲ್ಲಿ ಸುಮಾರು 330 ಕಿ.ಮೀ ಪಾದಯಾತ್ರೆಯು ಧರ್ಮಸ್ಥಳ– ಉಜಿರೆ– ಚಾರ್ಮಾಡಿ– ಕೊಟ್ಟಿಗೆಹಾರ– ಮೂಡಿಗೆರೆ– ಬೇಲೂರು– ಹಾಸನ ಮಾರ್ಗವಾಗಿ ಶುಕ್ರವಾರ ಬೆಂಗಳೂರು ತಲುಪಲಿದೆ. ಅಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಯಲಿದೆ' ಎಂದು ತಿಳಿಸಿದರು.

'ರಾಜ್ಯದಲ್ಲಿ ಕಳೆದ 10 ವರ್ಷಗಳಿಂದ ಈಚೆಗೆ ನಡೆದ ಮಹಿಳಾ ದೌರ್ಜನ್ಯ ಮತ್ತು ಅತ್ಯಾಚಾರ ಪ್ರಕರಣಗಳಲ್ಲಿ ಶೇ 1.18ರಷ್ಟು ಅಪರಾಧಿಗಳಿಗೆ ಮಾತ್ರ ಶಿಕ್ಷೆಯಾಗಿದೆ. ಇಂತಹ ಪ್ರಕರಣಗಳ ವಿಚಾರಣೆಗೆ ತ್ವರಿತಗತಿ ನ್ಯಾಯಾಲಯ ಸ್ಥಾಪಿಸಬೇಕು' ಎಂದು ಒತ್ತಾಯಿಸಿದರು.

'ರಾಜ್ಯದಲ್ಲಿ ಮಕ್ಕಳ ಮತ್ತು ಮಹಿಳೆಯರ ಮೇಲೆ ನಡೆಯುತ್ತಿರುವ ಅತ್ಯಾಚಾರ ಮತ್ತು ಕೊಲೆ ಪ್ರಕರಣಗಳನ್ನು ಶೀಘ್ರ ವಿಲೇವಾರಿಗೆ ವಿಶೇಷ ತ್ವರಿತ ನ್ಯಾಯಾಲಯಗಳನ್ನು ಸ್ಥಾಪಿಸಬೇಕು. ಸೌಜನ್ಯ ಸುರಕ್ಷಾ ಆಯೋಗವನ್ನು ಸ್ಥಾಪಿಸಬೇಕು. ರಾಜ್ಯದಲ್ಲಿ ಸಕ್ರಿಯವಾಗಿರುವ ಮಾನವ ಕಳ್ಳಸಾಗಣೆಕೆಯನ್ನು ನಿಯಂತ್ರಿಸಬೇಕು. ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ 40 ಸಾವಿರ ಮಹಿಳೆಯರು ನಾಪತ್ತೆಯಾಗಿದ್ದಾರೆ ಎಂದು ಕೇಂದ್ರ ಗೃಹ ಸಚಿವಾಲಯವೇ ಮಾಹಿತಿ ಬಿಡುಗಡೆಗೊಳಿಸಿದೆ' ಎಂದರು.

'ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇತ್ತೀಚೆಗೆ ಆತ್ಮಹತ್ಯೆ ಸೇರಿ ನೂರಾರು ಅಸಹಜ ಸಾವಿನ ಪ್ರಕರಣಗಳು ದಾಖಲಾಗುತ್ತಿವೆ ಎಂಬ ಆರೋಪ ಕೇಳಿ ಬರುತ್ತಿದೆ. ಆದ್ದರಿಂದ, ಸರ್ಕಾರ ಕೂಡಲೇ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ನ್ಯಾಯಾಂಗ ತನಿಖೆ ಕೈಗೊಳ್ಳಬೇಕು' ಎಂದು ಹೇಳಿದರು.

'ಎಕ್ಸ್‌ಪ್ರೆಸ್ ವೇ ಬಾಕಿ ಕಾಮಗಾರಿ ಪೂರ್ಣಗೊಳಿಸಿ'

ಪ್ರಜಾವಾಣಿ ವಾರ್ತೆ

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): 'ಬೆಂಗಳೂರು– ಮೈಸೂರು ಎಕ್ಸ್‌ಪ್ರೆಸ್ ವೇ ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸಿ' ಎಂದು ಶಾಸಕ ರಮೇಶ ಬಂಡಿ ಸಿದ್ದೇಗೌಡ ಅಧಿಕಾರಿಗಳಿಗೆ ಸೂಚಿಸಿದರು.

ತಾಲ್ಲೂಕಿನ ಕೋಡಿಶೆಟ್ಟಿಪುರ, ಗಣಂಗೂರು, ಗೌಡಹಳ್ಳಿ ಬಳಿ ಅಪೂರ್ಣ ಕಾಮಗಾರಿಯನ್ನು ಅಧಿಕಾರಿಗಳ ಜತೆಗೂಡಿ ಮಂಗಳವಾರ ಸಂಜೆ ಪರಿಶೀಲಿಸಿದರು. 'ಕೋಡಿಶೆಟ್ಟಿಪುರ ಮತ್ತು ಗಣಂಗೂರು ಗ್ರಾಮಗಳ ಬಳಿ ಸರ್ವೀಸ್ ರಸ್ತೆಗೆ ಹೊಂದಿಕೊಂಡ ಚರಂಡಿ ಕಾಮಗಾರಿ ಇನ್ನೂ ಮುಗಿದಿಲ್ಲ. ಈ ಎರಡೂ ಗ್ರಾಮಗಳಲ್ಲಿ ರಸ್ತೆ ದಾಟಲು ಸ್ಕೈವಾಕ್ ರೂಪಿಸಬೇಕು' ಎಂದರು.

'ತಾಲ್ಲೂಕಿನ ಗೌಡಹಳ್ಳಿ ಬಳಿ ಹೆದ್ದಾರಿಗೆ ಕೆಳ ಸೇತುವೆ ತೀರಾ ಅಗತ್ಯವಿದೆ.ಇಲ್ಲಿ ಕೆಳ ಸೇತುವೆ ನಿರ್ಮಾಣ ಕಾಮಗಾರಿಯನ್ನು ಆರಂಭಿಸಬೇಕು.' ಎಂದು ಸೂಚಿಸಿದರು.

ಹೆದ್ದಾರಿ ಕಾಮಗಾರಿ ಕೆಲವೆಡೆ ಅವೈಜ್ಞಾನಿಕವಾಗಿದ್ದು, ಅಪಘಾತಗಳು ಸಂಭವಿಸುತ್ತಿವೆ ಎಂದು ಸಾರ್ವಜನಿಕರಿಂದ ದೂರುಗಳು ಬರುತ್ತಿವೆ. ಸಮಸ್ಯೆ ಇರುವೆಡೆ ಲೋಪ ಸರಿಪಡಿಸಬೇಕು ಎಂದು ಅವರು ಹೇಳಿದರು.

ಈಜಿಪುರ ಮೇಲ್ಸೇತುವೆ ಕಾಮಗಾರಿ ವಿಳಂಬ: ಎಂಜಿನಿಯರ್‌ಗಳ ಮೇಲೆ ಕ್ರಮಕ್ಕೆ ಸಿ.ಎಂ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಈಜಿಪುರ ಮೇಲ್ಸೇತುವೆ ಕಾಮಗಾರಿ ನಿಂತುಹೋಗಿರುವುದಕ್ಕೆ, ಅದನ್ನು ಮತ್ತೆ ಬೇಗ ಆರಂಭಿಸಲು ಕಾಳಜಿ ವಹಿಸದ ಎಂಜಿನಿಯರ್‌ಗಳ ಮೇಲೆ ಕ್ರಮ ಕೈಗೊಳ್ಳಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಸೂಚಿಸಿದ್ದಾರೆ.

ನಗರಾಭಿವೃದ್ಧಿ ಇಲಾಖೆಯಿಂದ ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಪತ್ರ ರವಾನೆಯಾಗಿದ್ದು, ಈಜಿಪುರ ಮೇಲ್ಸೇತುವೆ ಕಾಮಗಾರಿ ವಿಳಂಬ, ಟೆಂಡರ್ ಪ್ರಕ್ರಿಯೆ ವಿಳಂಬ, ಸರ್ಕಾರಕ್ಕೆ ತಡವಾಗಿ ಟೆಂಡರ್ ಸಲ್ಲಿಸಿರುವುದಕ್ಕೆ ಕಾರಣ ಕೇಳಿದ್ದಾರೆ. ಅಲ್ಲದೆ ಇದಕ್ಕೆ ಕಾರಣರಾದ ಎಂಜಿನಿಯರ್, ಅಧಿಕಾರಿಗಳ ಮೇಲೆ ಕ್ರಮ ಕೈಗೊಂಡು ವರದಿ ಸಲ್ಲಿಸುವಂತೆ ಸೂಚಿಸಲಾಗಿದೆ.

2017ರಲ್ಲಿ ಆರಂಭವಾಗಿದ್ದ ಈಜಿಪುರ ಮೇಲ್ಸೇತುವೆ ಕಾಮಗಾರಿ ವಿಳಂಬದಿಂದ ಹೈಕೋರ್ಟ್ ಮೆಟ್ಟಿಲೇರಿತ್ತು. ಗುತ್ತಿಗೆಯನ್ನು 2022ರ ಮಾರ್ಚ್ 9ರಂದು ರದ್ದುಪಡಿಸಲಾಗಿತ್ತು. ಹೈಕೋರ್ಟ್ ಮೂರು ತಿಂಗಳಲ್ಲಿ ಮರು ಟೆಂಡರ್ ಕರೆದು ಕಾಮಗಾರಿ ಆರಂಭಿಸಬೇಕು ಎಂದು ಬಿಬಿಎಂಪಿಗೆ ತಾಕೀತು ಮಾಡಿತ್ತಾದರೂ, ಟೆಂಡರ್ ಪ್ರಕ್ರಿಯೆಯೇ ಪೂರ್ಣಗೊಂಡಿರಲಿಲ್ಲ.

ಈಜಿಪುರ ಮೇಲ್ಸೇತುವೆ ಬಾಕಿ ಕಾಮಗಾರಿಗೆ ನಾಲ್ಕನೇ ಬಾರಿಗೆ 2023ರ ಮಾರ್ಚ್ 1ರಂದು ಟೆಂಡರ್ ಆಹ್ವಾನಿಸಲಾಗಿತ್ತು. 17ರಂದು ತಾಂತ್ರಿಕ ಬಿಡ್ ತೆರೆದು, ಏಕೈಕ ಅರ್ಹ ಬಿಡ್‌ದಾರರೊಂದಿಗೆ ಮಾತುಕತೆ ನಡೆಸಲಾಗಿತ್ತು. ಹಿಂದೆ ನೀಡಲಾಗಿದ್ದ ಹೆಚ್ಚು ಮೊತ್ತಕ್ಕೆ ಅಂದರೆ ಶೇ 19.52ರಷ್ಟು ಹೆಚ್ಚಿನ ಮೊತ್ತಕ್ಕೆ ಒಪ್ಪಿಕೊಳ್ಳುವಂತೆ ಗುತ್ತಿಗೆದಾರರಿಗೆ ಜುಲೈ 3ರಂದು ಪತ್ರವನ್ನೂ ಎಂಜಿನಿಯರ್‌ಗಳು ಬರೆದಿದ್ದರು. ಅದಕ್ಕೆ ಗುತ್ತಿಗೆದಾರರು ಸಮ್ಮತಿಸಿದ್ದರೂ ಸರ್ಕಾರಕ್ಕೆ ಟೆಂಡರ್ ಅನುಮೋದನೆ ಕಳುಹಿಸಿರಲಿಲ್ಲ. ಕೊನೆಗೆ ಇದೀಗ ಮುಖ್ಯಮಂತ್ರಿಯವರ ಮುಂದೆ ಟೆಂಡರ್ ಅನುಮೋದನೆಗೆ ಹೋಗಿದ್ದಾಗ, ಸಚಿವ ಸಂಪುಟದ ಮುಂದೆ ತರಲು ಹೇಳಿದ್ದಾರೆ. ಇಷ್ಟು ವಿಳಂಬ ಮಾಡಿದ ಅಧಿಕಾರಿಗಳ ಬಗ್ಗೆ ವರದಿ ನೀಡಲು ಸೂಚಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ದೂರು ನೀಡಿದ ಪದಾಧಿಕಾರಿಗಳು

ಬಿಜೆಪಿ ಕಾರ್ಯಕರ್ತರಿಗೆ ಬೆದರಿಕೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಸೇಡಿನ ರಾಜಕಾರಣ ಮಾಡುತ್ತಿರುವ ಕಾಂಗ್ರೆಸ್: ಆರೋಪ
- 'ಸಿಸಿಬಿ ಸಹ ದುರುಪಯೋಗ'

ಬೆಂಗಳೂರು: 'ಬಿಜೆಪಿ ಕಾರ್ಯಕರ್ತರು ಹಾಗೂ ಮುಖಂಡರ ಬೆಂಬಲಿಗರಿಗೆ ಕಿರುಕುಳ ನೀಡುತ್ತಿರುವ ಪೊಲೀಸರು, ಸುಖಾಸುಮ್ಮನೇ ಪ್ರಕರಣಗಳನ್ನು ದಾಖಲಿಸಿ ದೌರ್ಜನ್ಯ ಎಸಗುತ್ತಿದ್ದಾರೆ' ಎಂದು ಆರೋಪಿಸಿ ಬಿಜೆಪಿ ರಾಜ್ಯ ಘಟಕದ ಪದಾಧಿಕಾರಿಗಳು, ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ (ಡಿಜಿ–ಐಜಿಪಿ) ಬುಧವಾರ ದೂರು ಸಲ್ಲಿಸಿದ್ದಾರೆ.

ನೃಪತುಂಗ ರಸ್ತೆಯಲ್ಲಿರುವ ಪೊಲೀಸ್ ಪ್ರಧಾನ ಕಚೇರಿಯಲ್ಲಿ ಡಿಜಿ–ಐಜಿಪಿ ಅಲೋಕ್ ಮೋಹನ್ ಅವರನ್ನು ಭೇಟಿಯಾದ ಪದಾಧಿಕಾರಿಗಳು, 'ಯಾವುದೇ ರಾಜಕೀಯ ಒತ್ತಡಕ್ಕೆ ಒಳಗಾಗದೇ, ಕಾನೂನುಬದ್ಧವಾಗಿ ಕಾರ್ಯನಿರ್ವಹಿಸುವಂತೆ ಪೊಲೀಸರಿಗೆ ನಿರ್ದೇಶನ ನೀಡಬೇಕು' ಎಂದು ಆಗ್ರಹಿಸಿದ್ದಾರೆ.

'ಕಾಂಗ್ರೆಸ್ ಸರ್ಕಾರ, ಸೇಡಿನ ರಾಜಕಾರಣ ಮಾಡುತ್ತಿದೆ. ಬಿಜೆಪಿ ಕಾರ್ಯಕರ್ತರು ಹಾಗೂ ಬೆಂಬಲಿಗರ ಮೇಲೆ ಪ್ರಕರಣ ದಾಖಲಿಸುವಂತೆ ಪೊಲೀಸರ ಮೇಲೆ ಒತ್ತಡ ಹೇರುತ್ತಿದೆ. ಇದೇ ಕಾರಣಕ್ಕೆ ಪೊಲೀಸರು, ಕಾರ್ಯಕರ್ತರು ಹಾಗೂ ಬೆಂಬಲಿಗರ ಮೇಲೆ ಪ್ರಕರಣ ದಾಖಲಿಸುತ್ತಿದ್ದಾರೆ. ರಾತ್ರೋರಾತ್ರಿ ಮನೆಗಳಿಗೆ ನುಗ್ಗಿ ಕಾರ್ಯಕರ್ತರ ಮೇಲೆ ದೌರ್ಜನ್ಯ ಎಸಗುತ್ತಿದ್ದಾರೆ' ಎಂದು ಪದಾಧಿಕಾರಿಗಳು ದೂರಿದ್ದಾರೆ.



ನಗರದ ನೃಪತುಂಗ ರಸ್ತೆಯಲ್ಲಿರುವ ಪೊಲೀಸ್ ಪ್ರಧಾನ ಕಚೇರಿಯಲ್ಲಿ ರಾಜ್ಯ ಪೊಲೀಸ್ ಮಹಾನಿರ್ದೇಶಕ (ಡಿಜಿ–ಐಜಿಪಿ) ಅಲೋಕ್ ಮೋಹನ್ ಅವರಿಗೆ ಬಿಜೆಪಿ ಪದಾಧಿಕಾರಿಗಳ ನಿಯೋಗ ಬುಧವಾರ ದೂರು ಸಲ್ಲಿಸಿತು

'ಸಾಮಾಜಿಕ ಮಾಧ್ಯಮಗಳಲ್ಲಿರುವ ಪೋಸ್ಟ್‌ಗಳನ್ನು ತಪ್ಪಾಗಿ ಗ್ರಹಿಸಿ, ಪ್ರಚೋದನೆ ಆರೋಪದಡಿ ಪ್ರಕರಣ ದಾಖಲಿಸಲಾಗುತ್ತಿದೆ. ಇದಕ್ಕಾಗಿ ಪೊಲೀಸರು ಹಾಗೂ ಸಿಸಿಬಿಯನ್ನು ದುರುಪಯೋಗಪಡಿಸಿಕೊಳ್ಳಲಾಗುತ್ತಿದೆ' ಎಂದು ಆರೋಪಿಸಿದ್ದಾರೆ.

'ರಾಜಕೀಯ ಪಕ್ಷವಾಗಿರುವ ಬಿಜೆಪಿ, ಸಂವಿಧಾನದ ಅಡಿಯಲ್ಲಿ ಕೆಲಸ ಮಾಡುತ್ತಿದೆ. ಕಾರ್ಯಕರ್ತರು ಹಾಗೂ ಬೆಂಬಲಿಗರ ಮೇಲಾಗುತ್ತಿರುವ ದೌರ್ಜನ್ಯವನ್ನು ತಡೆಯಬೇಕು. ಇಲ್ಲದಿದ್ದರೆ, ರಾಜ್ಯದಾದ್ಯಂತ ಗಂಭೀರ ಸ್ವರೂಪದ ಹೋರಾಟ ನಡೆಸಲಾಗುವುದು' ಎಂದು ಎಚ್ಚರಿಸಿದ್ದಾರೆ.

ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್. ರವಿಕುಮಾರ್, ಕಾರ್ಯದರ್ಶಿ ಜಗದೀಶ್ ಹಿರೇಮನಿ, ಶಾಸಕ ರವಿ ಸುಬ್ರಮಣ್ಯ, ಮುಖಂಡರಾದ ವಿವೇಕ್ ಸುಬ್ಬಾರೆಡ್ಡಿ, ಭಾಸ್ಕರ್ ರಾವ್ ಇದ್ದರು.



ಕೃಷ್ಣ ಜನ್ಮಾಷ್ಟಮಿಯ ಅಂಗವಾಗಿ ಲಗ್ಗೆರೆಯ ಲಿಟ್ಲ್ ಕಿಡ್ಸ್ ಶಾಲೆಯಲ್ಲಿ ಮಕ್ಕಳು ಶ್ರೀಕೃಷ್ಣ ಮತ್ತು ರಾಧೆಯ ವೇಷ–ಭೂಷಣ ಧರಿಸಿ ಸಂಭ್ರಮಿಸಿದರು



ಕೃಷ್ಣ ಮತ್ತು ರಾಧೆಯ ವೇಷದಲ್ಲಿ ವಿಠ್ಠಲನಗರದ ಶ್ರೀನಿಧಿ ರಾಜ್ ಮತ್ತು ವೇದಾಶ್ರೀ



ಪೀಣ್ಯ ದಾಸರಹಳ್ಳಿ ಸಮೀಪದ ಸುಂಕದಕಟ್ಟೆಯ ವಿದ್ಯಾನಿಕೇತನ ಪಬ್ಲಿಕ್ ಶಾಲೆಯಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ಪುಟಾಣಿ ಮಕ್ಕಳು ಶ್ರೀ ಕೃಷ್ಣ, ರಾಧೆಯ ವೇಷ ತೊಟ್ಟು ಸಿಹಿ ಹಂಚಿ ಸಂಭ್ರಮಿಸಿದರು.



ರವೀಂದ್ರ ಕಲಾಕ್ಷೇತ್ರದಲ್ಲಿ ಗಮನ ಸೆಳೆದ ಕೃಷ್ಣ ವೇಷಧಾರಿ





ರಾಜಾಜಿನಗರದ ಇಸ್ಕಾನ್ ದೇವಾಲಯದಲ್ಲಿ ಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ಭಕ್ತಾದಿಗಳು ಭಗವಾನ್ ಶ್ರೀಕೃಷ್ಣನ ದರ್ಶನ ಪಡೆದರು. ಭಕ್ತಾದಿಗಳ ಕಣ್ಮನ ಸೆಳೆದವು



ದೇಗುಲದಲ್ಲಿ ವಿಶೇಷವಾಗಿ ಅಲಂಕರಿಸಿದ್ದ ಕೃಷ್ಣ–ರಾಧೆಯರ ಮೂರ್ತಿಗಳು
–ಪ್ರಜಾವಾಣಿ ಚಿತ್ರಗಳು: ಎಂ.ಎಸ್.ಮಂಜುನಾಥ್



ಕುಂಬಳಗೂಡು ಗ್ರಾಮದ ಶ್ರೀ ಕೃಷ್ಣನ ದೇವಾಲಯದಲ್ಲಿ ನಡೆದ ಶ್ರೀ ಕೃಷ್ಣ ಜನ್ಮಾಷ್ಟಮಿ ಕಾರ್ಯಕ್ರಮದಲ್ಲಿ ಶಾಸಕ ಎಸ್‌.ಟಿ. ಸೋಮಶೇಖರ್, ಕುಂಬಳಗೂಡು ಗ್ರಾಮ ಪಂಚಾಯಿತಿ ಅಧ್ಯಕ್ಷ ರಾಮಕೃಷ್ಣ, ಮಾಜಿ ಅಧ್ಯಕ್ಷ ಚಿಕ್ಕ ರಾಜು, ಜೈಕರ್ನಾಟಕ ಕುಂಬಳಗೂಡು ಶಾಖೆ ಅಧ್ಯಕ್ಷ ಶ್ರೀನಿವಾಸ್, ನರಸಿಂಹಮೂರ್ತಿ ಪಾಲ್ಗೊಂಡಿದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ • ಸಂಸ್ಕೃತಿ ಇಲಾಖೆಯಿಂದ ಕೃಷ್ಣ ಜಯಂತಿ ಆಚರಣೆ

‘ಮೀಸಲಾತಿ ಹೆಚ್ಚಳಕ್ಕೆ ಕೇಂದ್ರಕ್ಕೆ ಆಗ್ರಹ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಯಾದವ ಸಮುದಾಯ ಸೇರಿ ಸಾಮಾಜಿಕ ನ್ಯಾಯದಿಂದ ವಂಚಿತರಾದವರ ಪರವಾಗಿ ನಾವಿದ್ದೇವೆ. ಮೀಸಲಾತಿ ಪ್ರಮಾಣವನ್ನು ಶೇ 50ಕ್ಕಿಂತ ಹೆಚ್ಚಿಸಲು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹಾಕಲಾಗುವುದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಗೊಲ್ಲ (ಯಾದವ) ಸಂಘ ಜಂಟಿಯಾಗಿ ನಗರದಲ್ಲಿ ಬುಧವಾರ ಆಯೋಜಿಸಿದ ಶ್ರೀ ಕೃಷ್ಣ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

‘ಮೀಸಲಾತಿ ಪ್ರಮಾಣವನ್ನು ಶೇ 50ಕ್ಕಿಂತ ಹೆಚ್ಚಿಸಲು ಸುಪ್ರೀಂ ಕೋರ್ಟ್ ಅವಕಾಶ ನೀಡಿಲ್ಲ. ಸಾಮಾಜಿಕ ಮತ್ತು ಶೈಕ್ಷಣಿಕ ಅವಕಾಶ ವಂಚಿತರಿಗೆ ಅವಕಾಶ ಕಲ್ಪಿಸಲು ಮೀಸಲಾತಿ ಹೆಚ್ಚಳ ಅತ್ಯಗತ್ಯ. ಈ ಬಗ್ಗೆ ಕಾನೂನು ಜಾರಿ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಲಾಗುವುದು. ಗೊಲ್ಲ, ಕಾಡುಗೊಲ್ಲ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ (ಎಸ್‌ಟಿ) ಸೇರಿಸುವಂತೆ ಕೇಂದ್ರಕ್ಕೆ ಶಿಫಾರಸ್ಸು ಮಾಡಿದ್ದೇನೆ. ಕೇಂದ್ರ ಸರ್ಕಾರ ಈ ಬಗ್ಗೆ ಕ್ರಮ ಕೈಗೊಂಡಿಲ್ಲ’ ಎಂದು ಹೇಳಿದರು.



ಬೆಂಗಳೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೃಷ್ಣನ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಕೃಷ್ಣ ವೇಷಧಾರಿ ದೇವರಾಜ್ ಅವರಿಗೆ ಹಸ್ತಲಾಘವ ಮಾಡಿದರು. ಶಿವರಾಜ ತಂಗಡಗಿ, ವಿಧಾನ ಪರಿಷತ್ತಿನ ಸದಸ್ಯ ಎಂ. ನಾಗರಾಜ್ ಯಾದವ್ ಇದ್ದಾರೆ –ಪ್ರಜಾವಾಣಿ ಚಿತ್ರ

‘ಹಿಂದುಳಿದ ಸಮುದಾಯದವರಿಗೆ ಭೂಮಿ ಸಿಗಬೇಕು. ಈ ಹಿಂದೆ ಬೆಂಗಳೂರು ನಗರದಲ್ಲಿ ಸುಮಾರು 80 ಎಕರೆ ಭೂಮಿಯನ್ನು ಹಂಚಿಕೆ ಮಾಡಲಾಗಿತ್ತು. ಯಾದವ ಸಮುದಾಯಕ್ಕೆ ಯಶವಂತಪುರದಲ್ಲಿ ಜಾಗ ನೀಡಲಾಗಿತ್ತು. ಇರುವ ಜಾಗದಲ್ಲಿ ಶಿಕ್ಷಣ ಸಂಸ್ಥೆ ನಿರ್ಮಿಸಬೇಕು. ಅಗತ್ಯ ಅನುದಾನವನ್ನೂ ನೀಡಲಾಗುವುದು. ಎಲ್ಲ ಯಾದವ ಜನಾಂಗದವರು ಶಿಕ್ಷಣ ಪಡೆದುಕೊಳ್ಳಬೇಕು’ ಎಂದು ತಿಳಿಸಿದರು.

ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ, ‘ಸಮಾಜ ಸಂಘಟನೆಯಾಗಬೇಕೆಂಬ ಉದ್ದೇಶದಿಂದ ಜಯಂತಿಗಳನ್ನು ಆಚರಿಸಲಾಗುತ್ತಿದೆ. ಮೀಸಲಾತಿ ಹೆಚ್ಚಳ ಸೇರಿ ಯಾದವ ಸಮುದಾಯದ ಬೇಡಿಕೆಗಳ ಈಡೇರಿಕೆಗೆ ಸಂಬಂಧಿಸಿದಂತೆ ಸಮುದಾಯದ ಮುಖಂಡರ ಜತೆಗೆ ಮತ್ತೊಮ್ಮೆ ಸಭೆ ನಡೆಸಲಾಗುವುದು’ ಎಂದು ಹೇಳಿದರು.

ಕರ್ನಾಟಕ ರಾಜ್ಯ ಗೊಲ್ಲ (ಯಾದವ) ಸಂಘದ ಅಧ್ಯಕ್ಷ ಶ್ರೀನಿವಾಸ್ ಯಾದವ್, ‘ಪ್ರವರ್ಗ 1ರಡಿ ಶೇ 4ರಷ್ಟು ಮೀಸಲಾತಿ ನೀಡಲಾಗಿದೆ. ಸಮುದಾಯ 45 ಲಕ್ಷ ಜನರನ್ನು ಹೊಂದಿದ್ದು, ರಾಜ್ಯದ ಎಲ್ಲೆಡೆ ಇದ್ದಾರೆ. ಇದರಿಂದಾಗಿ ಮೀಸಲಾತಿಯನ್ನು ಹೆಚ್ಚಿಸಬೇಕು. ಯಾದವ ಮಠದಲ್ಲಿ ಸಮುದಾಯ ಭವನ ನಿರ್ಮಾಣ ಮಾಡಲಾಗುತ್ತಿದ್ದು, ಅದಕ್ಕೆ ಅನುದಾನ ನೀಡಬೇಕು. ಸರ್ಕಾರ ನೀಡಿದ ನಿವೇಶನದಲ್ಲಿ ಶಾಲೆ ನಿರ್ಮಿಸಲು ಮುಂದಾಗಿದ್ದು, ಅದಕ್ಕೆ ಕೂಡ ಸರ್ಕಾರ ಅನುದಾನ ಒದಗಿಸಬೇಕು’ ಎಂದು ಆಗ್ರಹಿಸಿದರು.

ಚಿತ್ರದುರ್ಗ ಜಿಲ್ಲೆ ಶ್ರೀ ಕೃಷ್ಣ ಯಾದವ ಮಹಾಸಂಸ್ಥಾನ ಮಠದ ಯಾದವಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ವೇಣುಗೋಪಾಲಸ್ವಾಮಿ ದೇಗುಲದಲ್ಲಿ ಅನ್ನಪ್ರಸಾದ



ಕೆ.ಆರ್‌.ಪುರದ ಶ್ರೀವೇಣುಗೋಪಾಲ ಸ್ವಾಮಿ ದೇವಾಲಯದಲ್ಲಿ ಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ಅನ್ನ ಪ್ರಸಾದ ನಡೆಯಿತು.

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಕೆ.ಆರ್.ಪುರ ಸಮೀಪದ ದೇವಸಂದ್ರ ಮುಖ್ಯರಸ್ತೆಯಲ್ಲಿರುವ ಶ್ರೀವೇಣುಗೋಪಾಲಸ್ವಾಮಿ ದೇವಾಲಯದಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿ ವಿಜೃಂಭಣೆಯಿಂದ ಜರುಗಿತು.

ಮುಂಜಾನೆ ದೇವಾಲಯದಲ್ಲಿ ದೇವರಿಗೆ ಅಭಿಷೇಕ, ವಿಶೇಷ ಪೂಜಾ ಕೈಂಕರ್ಯ, ಹೋಮ, ಹವನ ನೆರವೇರಿತು. ದೇವರಿಗೆ ವಿಶೇಷ ಹೂವಿನ ಅಲಂಕಾರ ಮಾಡಲಾಗಿತ್ತು. ದಿನವಿಡೀ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

ದೇವಸಂದ್ರ, ಅಯ್ಯಪ್ಪನಗರ, ರಾಮಮೂರ್ತಿ ನಗರ, ಬಸವನಪುರ, ಹೂಡಿ, ಭಟ್ಟರಹಳ್ಳಿ, ಟಿಸಿ ಪಾಳ್ಯ ಸೇರಿ ಸುತ್ತಮುತ್ತಲಿನ ಗ್ರಾಮಗಳಿಂದ ಸಹಸ್ರಾರು ಸಂಖ್ಯೆಯಲ್ಲಿ ಭಕ್ತಾದಿಗಳು ಆಗಮಿಸಿ ದೇವರ ದರ್ಶನ ಪಡೆದರು.



ಮಾಜಿ ಶಾಸಕಿ ಪೂರ್ಣಿಮಾ ಶ್ರೀನಿವಾಸ್, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಿ.ಕೆ.ಮೋಹನ್ ಬಾಬು, ರಾಜ್ಯ ಹಿಂದುಳಿದ ವರ್ಗಗಳ ವಿಭಾಗದ ಉಪಾಧ್ಯಕ್ಷ ಡಿ.ಎ.ಗೋಪಾಲ್, ಮುಖಂಡರಾದ ಚಲಪತಿ, ದೇವೇಂದ್ರ, ಚನ್ನಕೇಶವಲು, ಅಗರ ಪ್ರಕಾಶ್, ರಮೇಶ್ ಇದ್ದರು.

‘ನನ್ನ ಮಣ್ಣು ನನ್ನ ದೇಶ’ ಕಾರ್ಯಕ್ರಮದಲ್ಲಿ ಸಂಸದ ಡಿ.ವಿ. ಸದಾನಂದಗೌಡ

‘ಇಂಡಿಯಾ’ ವಿದೇಶಿ ಪ್ರೇಮದವರಿಟ್ಟ ಹೆಸರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿದೇಶಿ ಪ್ರೇಮದ ಜನ ಭಾರತಕ್ಕೆ ‘ಇಂಡಿಯಾ’ ಎಂದು ಹೆಸರಿಟ್ಟರು. ಸಾವಿರಾರು ವರ್ಷ ಇತಿಹಾಸ ಇರುವ ಭರತಭೂಮಿಗೆ ಸ್ವಾತಂತ್ರ್ಯ ಪಡೆಯುವ ಸಂದರ್ಭದಲ್ಲೇ ‘ಭಾರತ’ ಎಂಬ ಒಂದೇ ಹೆಸರಿಡಬೇಕಿತ್ತು’ ಎಂದು ಬಿಜೆಪಿ ಸಂಸದ ಡಿ.ವಿ.ಸದಾನಂದಗೌಡ ಹೇಳಿದರು.

ನಗರದ ಕಾಡುಮಲ್ಲೇಶ್ವರ ದೇವಸ್ಥಾನದ ಆವರಣದಲ್ಲಿ ಬಿಜೆಪಿ ಬುಧವಾರ ಹಮ್ಮಿಕೊಂಡಿದ್ದ ‘ನನ್ನ ಮಣ್ಣು ನನ್ನ ದೇಶ’ ಕಾರ್ಯಕ್ರಮದಲ್ಲಿ ಭಾಗವಹಿಸಿ ಬಳಿಕ ಸುದ್ದಿಗಾರರ ಜತೆ ಮಾತನಾಡಿದರು.

‘ಇಂದು ಭಾರತವು ವಿಶ್ವದಲ್ಲಿ ಅತ್ಯಂತ ಯಶಸ್ವಿ ದೇಶವಾಗಿದೆ. ದೇಶಕ್ಕೆ ನಮ್ಮ ಮಣ್ಣಿನ ಆಚಾರ, ವಿಚಾರ, ಸಂಸ್ಕೃತಿ ಮತ್ತು ಪರಂಪರೆ ಎತ್ತಿ ಹಿಡಿಯುವ ‘ಭಾರತ’ ಹೆಸರೇ ಸೂಕ್ತ. ಗರಿಷ್ಠ ದೇಶ ಪ್ರೇಮ ಇರುವ ದೇಶ ಅತಿ ಹೆಚ್ಚು ಅಭಿವೃದ್ಧಿ ಕಾಣುತ್ತದೆ. ಇದಕ್ಕೆ ಇಸ್ರೇಲ್, ಜಪಾನ್ ಉದಾಹರಣೆ. ರಾಜಕೀಯ ಕಾರಣಕ್ಕಾಗಿ ಹಲವರು ಭಾರತ ಹೆಸರನ್ನು ವಿರೋಧಿಸಿ ಇಂಡಿಯಾ ಹೆಸರಿಗೆ ಪ್ರಾಮುಖ್ಯ ನೀಡುತ್ತಿರುವುದು ದುರ್ದೈವ. ಈಗ ಒಳ್ಳೆಯ ದಿನ ಬಂದಿದೆ ಎಂದು ಹೇಳಿದರು.

ಸನಾತನ ಧರ್ಮ ಪುರಾತನವಾದದು. ಅದರ ಬೇರುಗಳು ಆಳವಾಗಿವೆ. ಸಚಿವ ಜಿ.ಪರಮೇಶ್ವರ ಅವರಿಗೂ ಅದರ ಬೇರುಗಳನ್ನು ಕಂಡು ಹಿಡಿಯಲು ಸಾಧ್ಯವಿಲ್ಲ. ಅದೇ ಧರ್ಮದಲ್ಲಿ ಹುಟ್ಟಿದ ವ್ಯಕ್ತಿ ಆ ಧರ್ಮದ ಬಗ್ಗೆ ಮಾತನಾಡುವಾಗ ಸ್ವಲ್ಪ ಪರಿಜ್ಞಾನ ಇಟ್ಟುಕೊಂಡು ಮಾತನಾಡುವುದು ಸೂಕ್ತ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಸನಾತನ ಧರ್ಮಕ್ಕೆ ಹುಟ್ಟಿದವನಲ್ಲ ಎಂದು ನಟ ಪ್ರಕಾಶ್‌ರಾಜ್ ಹೇಳಿರುವುದು ಬಾಲಿಶ ಮನಸ್ಥಿತಿಯನ್ನು ಬಿಂಬಿಸುತ್ತದೆ ಎಂದ ಅವರು, ತಮಿಳುನಾಡಿಗೆ ಕಾವೇರಿ ನೀರು ಬಿಡುವ ವಿಚಾರದಲ್ಲಿ ಕಾಂಗ್ರೆಸ್ ಸರ್ಕಾರ ಇಂಡಿಯಾ ಒಕ್ಕೂಟದ ಪಾಲುದಾರರಂತೆ ವರ್ತಿಸುತ್ತಿರುವುದು ರಾಜ್ಯದ ಜನರಿಗೆ ಮಾಡುತ್ತಿರುವ ದ್ರೋಹ ಎಂದು ಕಿಡಿಕಾರಿದರು.

ಪ್ರಧಾನಿ ನರೇಂದ್ರ ಮೋದಿ ಮತ್ತು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರ ಕರೆಯ ಮೇರೆಗೆ ಪುಣ್ಯಭೂಮಿಯ ಮಣ್ಣು ಶೇಖರಿಸಿ ದೇಶದ ವೀರ ಯೋಧರ ಅಮೃತ ವಾಟಿಕಾ ವನದಲ್ಲಿ ಅದನ್ನು ಸೇರಿಸುವ ಸಂಕಲ್ಪದ ಪುಣ್ಯ ದಿನ ಎಂದು ಬಣ್ಣಿಸಿದರು. ಈ ಕಾರ್ಯಕ್ರಮ ಇಡೀ ರಾಜ್ಯದಲ್ಲಿ ಅಕ್ಟೋಬರ್ 30ರವರೆಗೆ ನಡೆಯಲಿದೆ ಎಂದೂ ಸದಾನಂದಗೌಡ ಹೇಳಿದರು.

ಕಾರ್ಯಕ್ರಮದಲ್ಲಿ ಶಾಸಕ ಡಾ.ಸಿ.ಎನ್.ಅಶ್ವತ್ಥನಾರಾಯಣ್, ಸಂಸದ ಪಿ.ಸಿ.ಮೋಹನ್, ರಾಜ್ಯ ಪ್ರಧಾನ ಕಾರ್ಯದರ್ಶಿ ಸಿದ್ದರಾಜು, ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್. ರವಿಕುಮಾರ್, ನಗರ ಜಿಲ್ಲಾ ಅಧ್ಯಕ್ಷರು ಉಪಸ್ಥಿತರಿದ್ದರು.



ಕಾಡುಮಲ್ಲೇಶ್ವರ ದೇವಸ್ಥಾನದ ಆವರಣದಲ್ಲಿ ಬಿಜೆಪಿ ಬುಧವಾರ ಹಮ್ಮಿಕೊಂಡಿದ್ದ ‘ನನ್ನ ಮಣ್ಣು ನನ್ನ ದೇಶ’ ಕಾರ್ಯಕ್ರಮದಲ್ಲಿ ಸಂಸದರಾದ ಪಿ.ಸಿ.ಮೋಹನ್, ಡಿ.ವಿ.ಸದಾನಂದಗೌಡ, ಶಾಸಕ ಡಾ.ಸಿಎನ್ ಅಶ್ವತ್ಥನಾರಾಯಣ, ವಿಧಾನಪರಿಷತ್ ಸದಸ್ಯ ಎನ್ ರವಿಕುಮಾರ್ ಇದ್ದರು

‘ಭಾರತ ವಿರೋಧಿಸುವುದು ಊಳಿಗಮಾನ್ಯ ಮನಸ್ಥಿತಿ’

‘ಭಾರತವನ್ನು ವಿರೋಧಿಸುವ ಮನಸ್ಥಿತಿ ಊಳಿಗಮಾನ್ಯ ಮನಸ್ಥಿತಿ’ ಎಂದು ಬಿಜೆಪಿಯ ಮಾಜಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಸುದ್ದಿ ಗೋಷ್ಠಿಯಲ್ಲಿ ಹೇಳಿದರು.

‘ಭಾರತ ಹೆಸರನ್ನು ಟೀಕಿಸುವವರು ವಸಾಹತಶಾಹಿ ಮನಸ್ಥಿತಿಯಿಂದ ಇನ್ನೂ ಹೊರಕ್ಕೆ ಬಂದಿಲ್ಲ ಎನ್ನುವುದನ್ನು ತೋರಿಸುತ್ತದೆ. ಮಹಾತ್ಮಗಾಂಧಿಯವರು ಇದೇ ಕಾರಣಕ್ಕೆ ಕಾಂಗ್ರೆಸ್ಸನ್ನು ವಿಸರ್ಜಿಸಿ’ ಎಂದು ಕರೆಕೊಟ್ಟಿದ್ದರು.

‘ಅದೆಷ್ಟೋ ಲಕ್ಷ ಜನ ಕಾಂಗ್ರೆಸ್ ಕಾರ್ಯಕರ್ತರು ಹೆಮ್ಮೆಯಿಂದ ಭಾರತ್ ಮಾತಾಕೀ ಜೈ ಎಂದು ಕೂಗಿ ಲಾಠಿ ಏಟು ತಿಂದಿದ್ದನ್ನು ಇಂದಿನ ಕಾಂಗ್ರೆಸ್ಸಿಗರು ನೆನಪಿಸಿಕೊಳ್ಳಬೇಕು. ಅದನ್ನು ಮರೆತಿರುವುದು ಇವತ್ತಿನ ಕಾಂಗ್ರೆಸ್‌ನ ದುಸ್ಥಿತಿಯನ್ನು ತೋರಿಸುತ್ತದೆ. ಭಾರತ ಮತ್ತು ಸನಾತನ ಧರ್ಮದ ವಿಚಾರಕ್ಕೆ ಸಂಬಂಧಿಸಿದಂತೆ ಚರ್ಚೆ ನಡೆಯುತ್ತಿದೆ. ಭಾರತ ಎಂಬುದನ್ನು ಇವತ್ತು ನಿನ್ನೆ ಇಟ್ಟ ಹೆಸರಲ್ಲ. ಸಾವಿರಾರು ವರ್ಷಗಳಿಂದ ನಮ್ಮ ದೇಶವನ್ನು ಭಾರತವೆಂದು ಗುರುತಿಸಲಾಗುತ್ತಿದೆ’ ಎಂದರು.

ವಿವಿ ಆವರಣದಲ್ಲಿ ಗಣೇಶೋತ್ಸವ: ಕುಲಪತಿ

ಆಚರಣೆ ಸ್ಥಳ ನಿಗದಿ ಮತ್ತು ಆರ್ಥಿಕ ಬೆಂಬಲದ ಬಗ್ಗೆ ರಾಜ್ಯಸರ್ಕಾರಕ್ಕೆ ಪತ್ರ

ಪ್ರಜಾವಾಣಿ ವಾರ್ತೆ

ಮಂಗಳೂರು: ಮಂಗಳೂರು ವಿಶ್ವವಿದ್ಯಾಲಯದಲ್ಲಿ ಗಣೇಶೋತ್ಸವ ಆಚರಿಸುವ ವಿಚಾರ ಚರ್ಚೆಗೆ ಗ್ರಾಸವಾಗಿದೆ.

ಸೆ.2ರಂದು ಮಂಗಳೂರು ದಕ್ಷಿಣ ಕ್ಷೇತ್ರದ ಶಾಸಕ ವೇದವ್ಯಾಸ ಕಾಮತ್ ಅವರು ಬಿಜೆಪಿ ಕಾರ್ಯಕರ್ತರ ಜತೆ ತೆರಳಿ, ಗಣೇಶೋತ್ಸವ ಆಚರಣೆಗೆ ಅವಕಾಶ ನೀಡುವಂತೆ ವಿವಿ ಪ್ರಭಾರಿ ಕುಲಪತಿ ಪ್ರೊ. ಜಯರಾಜ್ ಅಮೀನ್ ಅವರಿಗೆ ಮನವಿ ಸಲ್ಲಿಸಿದ್ದರು.

ಇದರ ಬೆನ್ನಲ್ಲೇ ಪ್ರೊ. ಜಯರಾಜ್ ಅಮೀನ್ ಅವರು ಉನ್ನತ ಶಿಕ್ಷಣ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದು ಗಣೇಶೋತ್ಸವ ಆಚರಣೆ ಬಗ್ಗೆ ನಿರ್ದೇಶನ ನೀಡುವಂತೆ ವಿನಂತಿಸಿದ್ದರು.

‘ವಿವಿಯಲ್ಲಿ 40 ವರ್ಷಕ್ಕಿಂತ ಮೊದಲಿನಿಂದ ಗಣೇಶೋತ್ಸವ ಆಚರಿಸಿಕೊಂಡು ಬರಲಾಗುತ್ತಿದೆ. ಬೇರೆ ಬೇರೆ ಕಡೆಗಳಲ್ಲಿ ಮಾಡುತ್ತಿದ್ದ ಗಣೇಶೋತ್ಸವವನ್ನು ಕೋವಿಡ್ ಸಂದರ್ಭದಲ್ಲಿ 2021ರಲ್ಲಿ ಒಂದೇ ಕಡೆ ಆಚರಿಸಲಾಗಿತ್ತು. ಇದಕ್ಕೆ ವಿವಿಯಿಂದಲೇ ₹1.52 ಲಕ್ಷ ವೆಚ್ಚ ಮಾಡಲಾಗಿದೆ. 2022ರಲ್ಲಿ ವಿದ್ಯಾರ್ಥಿ ಕ್ಷೇಮಪಾಲಾ ನಿರ್ದೇಶನಾಲಯದ ಮೂಲಕ ಆಯೋಜಿಸಿ ₹1.97 ಲಕ್ಷ ವೆಚ್ಚ ಮಾಡಲಾಗಿದೆ. ವಿವಿ ವತಿಯಿಂದ ಮಾಡಿದ ವೆಚ್ಚಕ್ಕೆ ಆಡಿಟ್ ಆಕ್ಷೇಪಣೆ ಬಂದಿದ್ದು, ಗಣೇಶೋತ್ಸವ ಆಚರಣೆಗೆ ಕಚೇರಿ ಕೈಪಿಡಿ ನಿಯಮದಲ್ಲಿ ಅವಕಾಶ ಇಲ್ಲ’ ಎಂದು ಅವರು ಪತ್ರದಲ್ಲಿ ತಿಳಿಸಿದ್ದಾರೆ.

‘ಈ ಬಾರಿ ಗಣೇಶೋತ್ಸವ ಆಚರಣೆಗೆ ₹ 2 ಲಕ್ಷ ಬಿಡುಗಡೆ ಮಾಡುವಂತೆ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯದಿಂದ ಪತ್ರ ಬಂದಿದೆ. ಮಂಗಳಾ ಸಭಾಂಗಣದಲ್ಲಿ ಗಣೇಶೋತ್ಸವ ನಡೆಸಬೇಕೆಂದು ವಿದ್ಯಾರ್ಥಿಗಳು ಎಂದು ಹೆಸರಿಸಿದ ಪತ್ರ ಬಂದಿದೆ. ಈ ನಡುವೆ ಸೆ.2ರಂದು ಶಾಸಕ ವೇದವ್ಯಾಸ ಕಾಮತ್ ಅವರು ಸುಮಾರು ಎಂಟು ಜನರ ಜತೆಗೆ ಬಂದು ವಿವಿ ವತಿಯಿಂದ ಮಂಗಳಾ ಸಭಾಂಗಣದಲ್ಲಿ ಗಣೇಶೋತ್ಸವ ಆಚರಿಸಬೇಕೆಂದು ಆಗ್ರಹಿಸಿ ಸುಮಾರು ಎರಡು ತಾಸು ಚರ್ಚಿಸಿ ನನ್ನ ಮೇಲೆ ಒತ್ತಡ ತಂದಿದ್ದಾರೆ. ಒಪ್ಪಿಗೆ ನೀಡದಿದ್ದಲ್ಲಿ ಪತ್ರಿಭಟನೆ, ಮಾಧ್ಯಮ ಗೋಷ್ಠಿ ನಡೆಸುವುದಾಗಿ ಬೆದರಿಕೆ ಹಾಕಿದ್ದಾರೆ. ಈ ಹಿನ್ನೆಲೆಯಲ್ಲಿ ಸೂಕ್ಷ್ಮ ಪರಿಸ್ಥಿತಿ ಗಮನಿಸಿ, ಯಾವ ಸ್ಥಳದಲ್ಲಿ ನಡೆಸುವ ಬಗ್ಗೆ ಮತ್ತು ಆರ್ಥಿಕ ಬೆಂಬಲದ ಬಗ್ಗೆ ಸೂಚನೆ ನೀಡಬೇಕು’ ಎಂದು ಅವರು ಪತ್ರದಲ್ಲಿ ವಿನಂತಿಸಿದ್ದಾರೆ.

ಬುಧವಾರ ಪ್ರೊ. ಜಯರಾಜ್ ಅಮೀನ್ ಅವರು ಪತ್ರಿಕಾ ಹೇಳಿಕೆ ನೀಡಿ, ‘ವಿವಿ ಆವರಣದಲ್ಲಿ ಗಣೇಶೋತ್ಸವ ನಡೆಸಲು ಯಾವುದೇ ನಿರಾಕರಣೆ, ವಿರೋಧ ಇಲ್ಲ. ಈ ಹಿಂದಿನಂತೆಯೇ ಈ ವರ್ಷವೂ ವಿವಿಯ ಆವರಣದಲ್ಲಿ ಗಣೇಶೋತ್ಸವ ಕಾರ್ಯಕ್ರಮ ನಡೆಯುತ್ತದೆ’ ಎಂದು ತಿಳಿಸಿದ್ದಾರೆ.

‘ಸ್ಥಳೀಯ ಶಾಸಕರು ಬಿಜೆಪಿ ಮುಖಂಡರ ಜತೆ ಸೇರಿ ಗಣೇಶೋತ್ಸವಕ್ಕೆ ಹಣ ಬಿಡುಗಡೆ ಮಾಡುವಂತೆ ಮಂಗಳೂರು ವಿಶ್ವವಿದ್ಯಾಲಯದ ಕುಲಪತಿಗೆ ಮನವಿ ನೀಡಿದ್ದಾರೆ. ಸತತ ಎರಡು ತಾಸು ಕುಲಪತಿ ಅವರನ್ನು ಅವರದೇ ಕಚೇರಿಯಲ್ಲಿ ಕೂಡಿ ಹಾಕಿದ್ದಾರೆ. ಈ ನಡೆ ಸರಿಯಲ್ಲ’ ಎಂದು ಡಿವೈಎಫ್‌ಐ ರಾಜ್ಯ ಘಟಕದ ಅಧ್ಯಕ್ಷ ಮುನೀರ್ ಕಾಟಿಪಳ್ಳ ಆರೋಪಿಸಿದ್ದಾರೆ.

ರೇವಾ ವಿಶ್ವವಿದ್ಯಾಲಯದ ತಾಂತ್ರಿಕ ಶಿಕ್ಷಣ ಕಾರ್ಯಕ್ರಮಗಳಿಗೆ ಚಾಲನೆ

‘ಶಿಕ್ಷಣದ ಜತೆಗೆ ಕೌಶಲ ಬೆಳೆಸಿಕೊಳ್ಳಿ’

ಪ್ರಜಾವಾಣಿ ವಾರ್ತೆ

ಯಲಹಂಕ: ‘ವಿದ್ಯಾರ್ಥಿ ಜೀವನದಲ್ಲಿ ಶಿಕ್ಷಣದ ಜತೆಗೆ ಕೌಶಲಗಳನ್ನು ಬೆಳೆಸಿಕೊಂಡರೆ ಮಾತ್ರ ಸಂಶೋಧನೆ ಮತ್ತು ಅಧ್ಯಯನದಲ್ಲಿ ಹೆಚ್ಚಿನ ಯಶಸ್ಸು ಕಾಣಲು ಸಾಧ್ಯವಾಗುತ್ತದೆ’ ಎಂದು ಕೇಂದ್ರ ಸರ್ಕಾರದ ರಾಷ್ಟ್ರೀಯ ಚಾಲನಾ ಸಮಿತಿಯ(ಎಂ.ಇ.ಐ.ಟಿ.ವೈ) ಅಧ್ಯಕ್ಷ ಡಿ. ಅಲೋಕನಾಥ್ ಹೇಳಿದರು.

ರೇವಾ ವಿಶ್ವವಿದ್ಯಾಲಯದಲ್ಲಿ ಬುಧವಾರ ನಡೆದ 2023ನೇ ಸಾಲಿನ ತಾಂತ್ರಿಕ ಮತ್ತು ಆರ್ಕಿಟೆಕ್ಚರ್ ಕೋರ್ಸ್‌ಗಳನ್ನು ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ವಿದ್ಯಾರ್ಥಿಗಳು ಹೊಸ-ಹೊಸ ಹಂತಗಳನ್ನು ಪ್ರವೇಶಿಸಿದಾಗ ಸಾಕಷ್ಟು ಸ್ವಾತಂತ್ರ್ಯ ಸಿಗುತ್ತದೆ. ಲಭ್ಯವಿರುವ ಎಲ್ಲ ಸಂಪನ್ಮೂಲಗಳನ್ನು ಸಮರ್ಪಕವಾಗಿ ಬಳಸಿಕೊಂಡು ಜೀವನದಲ್ಲಿ ಯಶಸ್ವಿಯಾಗಬೇಕು. ಇಂದಿನ ಯುವಕರು ಸಾಮಾಜಿಕ ಮಾಧ್ಯಮಗಳಲ್ಲಿ ಹೆಚ್ಚು ಸಕ್ರಿಯರಾಗಿರುತ್ತಾರೆ. ಅವುಗಳ ಆಧಾರದ ಮೇಲೆ ದುಡುಕಿನ ತೀರ್ಮಾನಗಳನ್ನು ಕೈಗೊಳ್ಳುತ್ತಾರೆ. ಅವುಗಳನ್ನು ಮಿತವಾಗಿ ಬಳಕೆ ಮಾಡುವುದರ ಜತೆಗೆ ತಮ್ಮಲ್ಲಿರುವ ಸಾಮರ್ಥ್ಯವನ್ನು ಗುರುತಿಸಿಕೊಳ್ಳಲು ಪ್ರಯತ್ನಿಸಬೇಕು’ ಎಂದು ಸಲಹೆ ನೀಡಿದರು.




ರೇವಾ ವಿಶ್ವವಿದ್ಯಾಲಯದಲ್ಲಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ ಕೇಂದ್ರ ಸರ್ಕಾರದ ಎನ್‌ಎಸ್‌ಸಿ, ಎಂಇಐಟಿವೈನ ಅಧ್ಯಕ್ಷ ಡಿ. ಅಲೋಕನಾಥ್ ಅವರನ್ನು ಸನ್ಮಾನಿಸಲಾಯಿತು. (ಎಡದಿಂದ) ವಿಶ್ವವಿದ್ಯಾಲಯದ ಸಮಕುಲಾಧಿಪತಿ ಉಮೇಶ್ ಎಸ್ ರಾಜು, ಕುಲಪತಿ ಪಿ. ಶ್ಯಾಮ ರಾಜು, ಟಿ ಆ್ಯಂಡ್ ಐ, ಕಾಲಿನ್ಸ್ ಏರೋಸ್ಪೇಸ್ ನಿರ್ದೇಶಕ ಆದಿಶೇಷ, ಉಪಕುಲಪತಿ ಎಂ. ಧನಂಜಯ ಇದ್ದರು.

ಟಿ ಆ್ಯಂಡ್ ಐ, ಕಾಲಿನ್ಸ್ ಏರೋಸ್ಪೇಸ್ ನಿರ್ದೇಶಕ ಆದಿಶೇಷ, ‘ಇಂದು ಎಂಜಿನಿಯರ್‌ಗಳ ಪಾತ್ರ ಬಹಳ ಮುಖ್ಯವಾಗಿದೆ. ವಿವಿಧ ಕ್ಷೇತ್ರಗಳಲ್ಲಿ ಅನ್ವೇಷಣೆಗೆ ಸಾಕಷ್ಟು ಅವಕಾಶಗಳಿವೆ’ ಎಂದು ಹೇಳಿದರು.

ವಿವಿಯ ಕುಲಪತಿ ಪಿ. ಶ್ಯಾಮರಾಜು, ‘ಭವಿಷ್ಯದ ನಾಯಕರನ್ನು ರೂಪಿಸಲು ರೇವಾ ವಿಶ್ವವಿದ್ಯಾಲಯವು ಸಮಗ್ರ ಶಿಕ್ಷಣದ ಜತೆಗೆ ಮಾನವೀಯ ಮೌಲ್ಯ ಬೆಳೆಸುವ ಕೆಲಸ ಮಾಡುತ್ತಿದೆ’ ಎಂದರು.

ಚಂದ್ರಯಾನ-3 ಯಶಸ್ವಿ ಉಡಾವಣೆಯ ಭಾಗವಾಗಿದ್ದ ಹಳೆಯ ವಿದ್ಯಾರ್ಥಿಗಳಾದ ಕಿರಣ ದೇಸಾಯಿ, ವೆಂಕಟೇಶ್ವರ ರಾವ್, ಶಿಜಿನ್ ಕೆ.ಪಿ., ರೇಣುವೆಂಕಟ ಸ್ವಾಮಿ, ಬುಕ್ಯ ರಮೇಶ್, ಹರಿಕೃಷ್ಣ, ಲಿಪಿನ್, ವೇಣುಗೋಪಾಲ್ ಎಜ್ಜಗಿರಿ ಮತ್ತು ಮಂಗಲ್ ಮಹಾಪಾತ್ರ ಅವರನ್ನು ಸನ್ಮಾನಿಸಲಾಯಿತು.

ಸ್ಪರ್ಧಾ ವಾಣಿ



ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಸಮಾಜವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

SSLC ENGLISH
Prose : A Hero

R.K.Narayan is widely considered to be one of India's greatest English language novelists known for simple and unpretentious writing style. He is best known for his works set in the fictional South Indian town of Malgudi. His works include Swami and his Friends, The Bachelor of Arts, The English Teacher and The Financial Expert. His novel, The Guide was adapted for film, it won Sahitya Academy Award. He highlights, social content and provides a feel for his characters through everyday life. He was nominated to the Rajya Sabha, the upper house of India's parliament.

Question and Answer

1) Swami's father drew his attention to a report in the newspaper. What was the report about?

Ans:- The report was about the bravery of a village lad who came face to face with a tiger while returning home by jungle path and fought the tiger to climb the tree where he stayed half a day till some people came that way and killed the tiger.

2) The report said that the boy (who fought with the tiger) stayed on the tree for half a day. Why did he do so?

a) He wanted to watch the tiger from the top of tree
b) He wanted someone to kill the tiger
c) He wanted to take rest for some time

Ans:- (b) He wanted someone to kill the tiger

3) Swami said that a very strong and grown up person might have fought with a tiger. Do you think he made this remark out of his

(a) Experience, (b) Wisdom, (c) Belief?
(Choose the most appropriate word)

Ans:- (c) Belief

4) "Can you prove you have courage?" Swami's father said. (Answer the following questions)

a) Was he joking? Or, serious?
b) Was it a challenge? Or, a command

Ans:-(a) Swami's father was serious.
(b) It started as a challenge, but soon became a command when Swami tried to escape from it.

5) The place where Swami usually slept was …………………. (Fill in the blank)

Ans:- Beside his granny in the passage.

6) What is disgraceful, according to Swami's father?

Ans:- According to Swami's father it is disgraceful for a boy in second form (aged 12 years and 8th year of study in school as per classification of students according to their age in England) to sleep beside granny or mother like a baby.

7) What do you think was the practice of granny before she went to bed?

Ans:- Granny used to tell stories to Swami before she went to bed.

8) Was Swami really sleeping? Or was he pretending?

Ans: Swami Was not really sleeping, he was pretending to sleep by covering his face with the blanket and snored under it.

9) To Swami, his father looked like an ………….. (Fill in the blank)

Ans: To Swami, his father looked like an apparition in the semi darkness of the passage.

10) Why do you think Swami looked at his granny and his mother while following his father to the room?

Ans: Swami looked at his granny and mother with an appeal to save him from his father's challenge to make him sleep alone in the office room.

11) "There might be scorpions before your law books", said Swami.

a) Had he seen them earlier? Or were there scorpions really?

b) Was it a trick to escape from his father?

(Answer all the questions)

Ans: a) Swami had not seen any scorpions earlier. There may not be any scorpions really.
b) Yes, absolutely It was a trick to escape from his father.

12) Swami wished that the tiger had not spared the boy, which means………

(Choose the right answer)

(1) He did not want the boy to be alive.
(2) He did not want the tiger to be alive.

Ans: He did not want the boy to be alive.

13) As silence deepened in the room, what was Swami reminded of?

Ans: Swami remembered all the stories of devils and ghosts he had heard in his life. Swami remembered his close friend seeing devil in banyan tree, devil making Muniswami's father spit blood by slapping and many other such stories.

14) Which place in the room did Swami think was safe, compact and reassuring?

Ans: Swami felt that the place under the bench is compact, safe and reassuring.

15) Swami touched…………..in the room instead of granny. (Fill in the blank appropriately)

Ans: the wooden leg of the bench

Expl: Swami saw frightening dream of tiger chasing him and he is unable to escape. Swami put his hand out to touch reassuring granny's presence at his side, as was his habit; instead he touched the wooden leg of the bench as he was alone in office room.

16) Swami saw a moving creature in the room. Was it……………. (Fill in the blank)

(a) his shadow , (b) a scorpion ,
(c) a man. ?

Answer: A man?

17) Who cried, "Aiyo! Something has bitten me?"

Ans: The burglar bitten by Swami cried in agony with a thundering cry, "Aiyo! Something has bitten me"

18) Who did father, cook and a servant stumble upon?

Ans: The father of Swami, their servant and cook stumbled on the burglar who lay with a bleeding ankle amidst the furniture in the office room.

19) Why were congratulations showered on Swami?

Ans: Swami was showered with congratulations as he helped the police to arrest one of the most notorious house breakers of the district by biting into his flesh

20) Do you think Swami really wanted to join the police? If not, what did he want to be?


Answer: No. Swami did not want to join the police force.

(Contd……)

II PUC BIOLOGY
REPRODUCTION


1. Draw a neat diagram of a flower and label its parts.

Ans:- *Diagram of a flower with its parts labelled*



2. Draw a neat diagram of a stamen and carpel of a flower and label its parts.

Ans:- *Diagram of stamen and carpel of a flower with its parts labelled*



ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

3. What is a stamen?

Ans:- The little stalks with swollen tops just indside the ring of the petal in a flower are stamens. They produce pollen grains. Its two parts are filament and anther.

4. What is a carpel?


Ans:- Carpel is the male reproductive organ of the plant. It is flask like structure present in the centre of the flower. Its three parts are stigma, style and ovary.

5. What is pollination?

Ans:- The transfer of the pollen grains from the anther of a stamen to the stigma of a carpel is called pollination.

6. What is Self - pollination?


Ans:- The transfer of the pollen grains from the anther of a stamen of a flower to the stigma of a carpel of the same flower is called self - pollination.



The above figure shows the process of self -pollination.

7. What is Cross – pollination?

Ans:- The transfer of the pollen grains from the anther of a stamen of a flower to the stigma of a carpel of another flower is cross - pollination.



8. What will become to the ovules and the ovary in a flower after fertilization?

Ans:- Ovules become the seeds and the ovary forms the fruit after fertilization.

9. Write a difference between the pollination and fertilization.

Ans:- Pollination is the transfer of the pollen grains from anther to the stigma of a flower and fertilization is the fusion of male and female gametes.

10. Differentiate between the pollen grain and the ovule.

Ans:- Pollen grains are produced by the anthers and they contain male germ cells and ovules are produced by the ovary and they contain female germ cells.

11. State the difference between unisexual and bisexual flowers.

Ans:- Unisexual flowers possess either male or female reproductive organs.
Bisexual flowers possess both male and female reproductive organs.

12. What is receptacle?

Ans:- The base of a flower to which all the parts of a flower are attached is called a receptacle.

13. What are sepals?

Ans:- The green, leaf like parts in the outermost circle of a flower are sepals. All the sepals taken together are called calyx. The function of sepals (or calyx) is to protect the flower in its initial stages when it is in the form of a bud.

Extra informative question:

1. Vegetative propagation is the term given to any asexual means of starting new plants. New plants are obtained from the parts of old plants like stems, roots and leaves, without the help of any reproductive organ. Some plants growers have developed artificial methods of vegetative propagation like cutting, layering and grafting which are used in agriculture and horticulture.

Q: i) Name the method of vegetative propagation in Rose and Jasmine plant.

ii) "Vegetative propagation produces better plants with higher yield in ornamental crops." To justify the statement give four reasons.

Ans:- i) Grafting in Rose and Layering in Jasmine.
ii) a) It is cheaper, easier and more rapid method of propagation.
b) Better quality of plants can be maintained.
c) Produce seeds with prolonged period of dormancy.
d) Traits or characters of the parent plant are preserved.

2. Give the step by step description of the sexual reproduction taking place in plants.

Ans:- The sexual reproduction in plants takes place in the following steps –
(a) The male organ of the flower called 'stamen' makes the male gametes (male sex cells) of the plant. These male gametes are present in pollen grains. *(Contd……)*

ತಿದ್ದುಪಡಿ

ಸೆಪ್ಟೆಂಬರ್ 5ರಂದು ರಸಾಯನ ವಿಜ್ಞಾನ ವಿಷಯಕ್ಕೆ ಸಂಬಂಧಿಸಿದ The Solid State ಪಾಠದ ಪ್ರಶ್ನೋತ್ತರ ನೀಡಲಾಗಿತ್ತು. ಆದರೆ ಈ ಸಲದ ವಾರ್ಷಿಕ ಪರೀಕ್ಷೆಯಲ್ಲಿ ಈ ಪಾಠ ಇರುವುದಿಲ್ಲ, ಆದ್ದರಿಂದ ಆ ಮಾಹಿತಿಯನ್ನು ಸಿಇಟಿ ಹಾಗೂ ಜೆಇಇ ಪರೀಕ್ಷೆಗೆ ತಯಾರಿ ನಡೆಸುವವರು ಬಳಸಿಕೊಳ್ಳಬಹುದು. ಮುಂದಿನ ವಾರ Solutions ಪಾಠದ ಪ್ರಶ್ನೋತ್ತರ ನೀಡಲಾಗುವುದು

ಬಹುಆಯ್ಕೆಯ ಪ್ರಶ್ನೆಗಳು

ಐಎಎಸ್, ಕೆಎಎಸ್, ಕೆಪಿಎಸ್‌ಸಿ ಸೇರಿದಂತೆ ವಿವಿಧ ಹುದ್ದೆಗಳಿಗಾಗಿ ನಡೆಯುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿನ 'ಸಾಮಾನ್ಯ ಜ್ಞಾನ' ವಿಷಯಕ್ಕೆ ಸಂಬಂಧಿಸಿದ ಮಾದರಿ ಪ್ರಶ್ನೋತ್ತರಗಳನ್ನು ಇಲ್ಲಿ ನೀಡಲಾಗಿದೆ.

ಸಾಮಾನ್ಯ ಜ್ಞಾನ

1. ಕೆರೆಗಳನ್ನು ಹಸಿರು ಸರೋವರಗಳನ್ನಾಗಿ ಹೇಗೆ ಪರಿವರ್ತಿಸಲಾಗುತ್ತಿದೆ?

ಎ. ಕಾಂಕ್ರೀಟ್ ಅಳವಡಿಸದೆ ಜೈವಿಕ ತಡೆಗೋಡೆಗಳನ್ನು ನಿರ್ಮಿಸುವುದು.
ಬಿ. ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಅಭಿಯಾನವನ್ನು ಅನುಷ್ಠಾನಗೊಳಿಸಲಾಗುತ್ತಿದೆ.
ಕೋಡ್ ಬಳಸಿ ಸರಿ ಉತ್ತರ ಗುರುತಿಸಿ
ಎ. ಹೇಳಿಕೆ ಎ ಮಾತ್ರ ಸರಿಯಾಗಿದೆ.
ಬಿ. ಹೇಳಿಕೆ ಬಿ ಮಾತ್ರ ಸರಿಯಾಗಿದೆ.
ಸಿ. ಮೇಲಿನ ಎರಡೂ ಹೇಳಿಕೆಗಳು ಸರಿಯಾಗಿವೆ.
ಡಿ. ಮೇಲಿನ ಎರಡೂ ಹೇಳಿಕೆಗಳು ತಪ್ಪಾಗಿವೆ.

ಉತ್ತರ-ಸಿ.

2. ದೊಡ್ಡ ಮದಗದ ಕೆರೆಯನ್ನು ಕುರಿತ ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿರಿ

ಎ. ಈ ಕೆರೆಯು 1500 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಒದಗಿಸುತ್ತದೆ.
ಬಿ. ಈ ಕೆರೆಯು 12ನೇ ಶತಮಾನದಲ್ಲಿ ರುಕ್ಮಾಂಗದ ರಾಯ ಎಂಬುವವರಿಂದ ನಿರ್ಮಿತವಾಗಿದೆ.
ಕೋಡ್ ಬಳಸಿ ಸರಿ ಉತ್ತರ ಗುರುತಿಸಿ
ಎ. ಹೇಳಿಕೆ ಎ ಮಾತ್ರ ಸರಿಯಾಗಿದೆ.
ಬಿ. ಹೇಳಿಕೆ ಬಿ ಮಾತ್ರ ಸರಿಯಾಗಿದೆ.
ಸಿ. ಮೇಲಿನ ಎರಡೂ ಹೇಳಿಕೆಗಳು ಸರಿಯಾಗಿವೆ.
ಡಿ. ಮೇಲಿನ ಎರಡೂ ಹೇಳಿಕೆಗಳು ತಪ್ಪಾಗಿವೆ.

ಉತ್ತರ-ಸಿ.

3. ಕರ್ನಾಟಕದ ಅತಿದೊಡ್ಡ ಕೆರೆ ಯಾವುದು?

ಎ. ತೊಣ್ಣೂರು ಕೆರೆ ಬಿ. ಮದಗ ಕೆರೆ
ಸಿ. ಹೈರಿಗೆ ಕೆರೆಡಿ. ಶಾಂತಿಸಾಗರ

ಉತ್ತರ-ಡಿ

4. ಮಹದಾಯಿ ಯೋಜನೆಯ ಕುರಿತ ಈ ಕೆಳಗಿನ ಯಾವ ಹೇಳಿಕೆಗಳು ಸರಿಯಾಗಿವೆ?

ಎ. ಮಹದಾಯಿ ನದಿಯಿಂದ ಕಳಸ ಮತ್ತು ಬಂಡೂರಿ ಬಳಿ ಒಟ್ಟು 3.9 ಟಿಎಂಸಿ ಅಡಿ ನೀರು ಬಳಸಿಕೊಳ್ಳುವ ಯೋಜನೆ ಇದಾಗಿದೆ.
ಬಿ. ಜಸ್ಟೀಸ್ ಪಾಂಚಾಲ್ ನೇತೃತ್ವದ ನ್ಯಾಯಾಧೀಕರಣವು ಗೋವಾಗೆ 24 ಟಿಎಂಸಿ, ಕರ್ನಾಟಕಕ್ಕೆ 13.92 ಟಿಎಂಸಿ ಮತ್ತು ಮಹಾರಾಷ್ಟ್ರಕ್ಕೆ 1.33 ಟಿಎಂಸಿ ನೀರು ಂಜೂರು ಮಾಡಿದೆ.
ಕೋಡ್ ಬಳಸಿ ಸರಿ ಉತ್ತರ ಗುರುತಿಸಿ
ಎ. ಹೇಳಿಕೆ ಎ ಮಾತ್ರ ಸರಿಯಾಗಿದೆ.
ಬಿ. ಹೇಳಿಕೆ ಬಿ ಮಾತ್ರ ಸರಿಯಾಗಿದೆ.
ಸಿ. ಮೇಲಿನ ಎರಡೂ ಹೇಳಿಕೆಗಳು ಸರಿಯಾಗಿವೆ.
ಡಿ. ಮೇಲಿನ ಎರಡೂ ಹೇಳಿಕೆಗಳು ತಪ್ಪಾಗಿವೆ.

ಉತ್ತರ: ಸಿ

5. ಹಸಿರು ಇಂಧನದ ವಲಯವನ್ನು ಕುರಿತು ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿರಿ

ಎ. ಏಷ್ಯಾ ರಾಷ್ಟ್ರಗಳಲ್ಲಿ ಹಸಿರು ವಲಯದಲ್ಲಿ ಶೇ.63.6 ರಷ್ಟು ಉದ್ಯೋಗಗಳನ್ನು ನೀಡಲಾಗಿದೆ.
ಬಿ. ಮೂರನೇ ಒಂದರಷ್ಟು ಉದ್ಯೋಗಗಳನ್ನು ಅತಿ ವೇಗವಾಗಿ ಬೆಳೆಯುತ್ತಿರುವ ಸೋಲಾರ್ ವಲಯ ಸೃಷ್ಟಿಸಿದೆ.
ಕೋಡ್ ಬಳಸಿ ಸರಿ ಉತ್ತರ ಗುರುತಿಸಿ
ಎ. ಹೇಳಿಕೆ ಎ ಮಾತ್ರ ಸರಿಯಾಗಿದೆ.
ಬಿ. ಹೇಳಿಕೆ ಬಿ ಮಾತ್ರ ಸರಿಯಾಗಿದೆ.
ಸಿ. ಮೇಲಿನ ಎರಡೂ ಹೇಳಿಕೆಗಳು ಸರಿಯಾಗಿವೆ.
ಡಿ. ಮೇಲಿನ ಎರಡೂ ಹೇಳಿಕೆಗಳು ತಪ್ಪಾಗಿವೆ.

ಉತ್ತರ-ಸಿ.

6. ಪಶ್ಚಿಮ ಘಟ್ಟಗಳಲ್ಲಿ ಅತ್ಯಂತ ಎತ್ತರದ ಶಿಖರ ಯಾವುದು?

ಎ. ಮುಳ್ಳಯ್ಯನಗಿರಿ ಬಿ. ದೇವಿರಮ್ಮನ ಗುಡ್ಡ
ಸಿ. ಮೆರ್ತಿಗುಡ್ಡ ಡಿ. ವರಾಹ ಪರ್ವತ

ಉತ್ತರ-ಎ.

ಪ್ರಚಲಿತ ವಿದ್ಯಮಾನಗಳು

ಯುಪಿಎಸ್‌ಸಿ -ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ- 2, ಕೆಪಿಎಸ್‌ಸಿ -ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ-2 ಮತ್ತು ಇತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಿರುವ ರಾಷ್ಟ್ರೀಯ ಪ್ರಚಲಿತ ವಿದ್ಯಮಾನಗಳ ಕುರಿತ ನಾಲ್ಕು ಪ್ರಮುಖ ರಾಷ್ಟ್ರೀಯ ವಿದ್ಯಮಾನಗಳ ಮಾಹಿತಿಗಳು ಇಲ್ಲಿವೆ.

1. ಏರ್ ಇಂಡಿಯಾ ಮತ್ತು ವಿಸ್ತಾರ ವಿಮಾನಯಾನ ಸೇವಾ ಸಂಸ್ಥೆಗಳ ವಿಲೀನ

ಇತ್ತೀಚೆಗೆ ಭಾರತೀಯ ಸ್ಪರ್ಧಾತ್ಮಕ ಆಯೋಗ ಏರ್ ಇಂಡಿಯಾ ಮತ್ತು ವಿಸ್ತಾರ ನಾಗರಿಕ ವಿಮಾನಯಾನ ಸೇವಾ ಸಂಸ್ಥೆಗಳ ವಿಲೀನ ಪ್ರಕ್ರಿಯೆಗೆ ಅನುಮೋದನೆ ನೀಡಿದೆ.

ಟಾಟಾ ಸನ್ಸ್ ಪ್ರೈವೇಟ್ ಸಂಸ್ಥೆಯ ಅಂಗಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿರುವ ಏರ್ ಇಂಡಿಯಾ ಸಂಸ್ಥೆಯು ವಿಸ್ತಾರ ವಿಮಾನಯಾನ ಸೇವಾ ಸಂಸ್ಥೆಯನ್ನು ತನ್ನ ಸಂಸ್ಥೆಯ ಅಡಿಯಲ್ಲಿ ವಿಲೀನ ಮಾಡಿಕೊಳ್ಳಲು ನಿರ್ಧರಿಸಿದೆ ಮತ್ತು ಮುಂದಿನ ದಿನಗಳಲ್ಲಿ ಏರ್ ಇಂಡಿಯಾ ಸಂಸ್ಥೆ ಅಡಿಯಲ್ಲಿಯೇ ಕಾರ್ಯನಿರ್ವಹಿಸಲಿದೆ.

ವಿಸ್ತಾರ ಕಂಪನಿಯು ಸಿಂಗಪುರ ಏರ್‌ಲೈನ್ಸ್ ಸಂಸ್ಥೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಂಸ್ಥೆಯಾಗಿದ್ದು ವಿಲೀನ ಪ್ರಕ್ರಿಯೆ ನಂತರ ಟಾಟಾ ಸಮೂಹದ ಶೇ 51 ರಷ್ಟು ಶೇರುಗಳ ಮಾಲಿಕತ್ವವನ್ನು ಹೊಂದಲಿದೆ. ಸಿಂಗಪುರ ಏರ್‌ಲೈನ್ಸ್ ಸಂಸ್ಥೆಯು ಉಳಿದ ಶೇರುಗಳ ಮಾಲೀಕತ್ವವನ್ನು ಹೊಂದಿರುತ್ತದೆ.



ವಿಶ್ಲೇಷಕರ ಪ್ರಕಾರ ವಿಲೀನ ಪ್ರಕ್ರಿಯೆ ನಂತರ ಭಾರತದ ವಿಮಾನಯಾನ ವಲಯದಲ್ಲಿ ಗಣನೀಯ ಬದಲಾವಣೆಗಳು ಜಾರಿಗೆ ಬರಲಿದ್ದು ಉನ್ನತ ಮಟ್ಟದ ಸೇವೆಗಳು ಲಭ್ಯವಾಗಲಿವೆ ಎಂದು ಅಂದಾಜಿಸಿದ್ದಾರೆ.

ಸೂಚನೆ : ವಿಲೀನ ಪ್ರಕ್ರಿಯೆ ಮಾರ್ಚ್ 2024 ರ ಒಳಗೆ ಪೂರ್ಣಗೊಳ್ಳುವ ಸಾಧ್ಯತೆ ಇದೆ ಎಂದು ಅಂದಾಜಿಸಲಾಗಿದೆ.

2. ಅಖಿಲ ಭಾರತ ವಸತಿ ದರ ಸೂಚ್ಯಂಕ

ಇತ್ತೀಚೆಗೆ ಭಾರತೀಯ ರಿಸರ್ವ್ ಬ್ಯಾಂಕ್ ಅಖಿಲ ಭಾರತ ವಸತಿ ದರ ಸೂಚ್ಯಂಕವನ್ನು ಬಿಡುಗಡೆ ಮಾಡಿದ್ದು ಕಳೆದ ವರ್ಷದಿಂದ ಪ್ರಸ್ತುತ ವರ್ಷದಲ್ಲಿ ಜನವಸತಿಗಳ ದರ ಸರಾಸರಿ ಶೇ 5.1 ರಷ್ಟು ಹೆಚ್ಚಳವಾಗಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ವಸತಿ ವಲಯದ ಬೇಡಿಕೆ ದೆಹಲಿಯಲ್ಲಿ ಗಣನೀಯವಾಗಿ ಹೆಚ್ಚಳವಾಗಿದ್ದು, ವಸತಿ ವಲಯದ ಬೇಡಿಕೆ ಶೇ 14.9 ರಷ್ಟು ಹೆಚ್ಚಳವಾಗಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಭಾರತದ 10 ನಗರಗಳಲ್ಲಿ ವಸತಿ ದರಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಒದಗಿಸಲು ಈ ಸೂಚ್ಯಂಕವನ್ನು ಭಾರತೀಯ ರಿಸರ್ವ್ ಬ್ಯಾಂಕ್ ಮೂರು ತಿಂಗಳಿಗೊಮ್ಮೆ ಬಿಡುಗಡೆ ಮಾಡುತ್ತದೆ. ಹತ್ತು ನಗರಗಳು ಹೀಗಿವೆ; ಅಹಮದಾಬಾದ್, ಬೆಂಗಳೂರು, ಚೆನ್ನೈ, ದೆಹಲಿ, ಜೈಪುರ, ಕಾನ್ಪುರ್, ಕೊಚ್ಚಿ, ಕೊಲ್ಕತ್ತಾ, ಲಖನೌ ಮತ್ತು ಮುಂಬೈ

3. ಉತ್ಕಲ ವಿಮಾನ ನಿಲ್ದಾಣದ ಉದ್ಘಾಟನೆ

ಒಡಿಶಾದಲ್ಲಿ ಉಡಾನ್ ಯೋಜನೆಯ ಅಡಿಯಲ್ಲಿ ನಿರ್ಮಾಣವಾದ ಉತ್ಕಲ ವಿಮಾನ ನಿಲ್ದಾಣವನ್ನು ಇತ್ತೀಚೆಗೆ ವಿಮಾನಯಾನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಉದ್ಘಾಟಿಸಿದರು. ಭುವನೇಶ್ವರದಿಂದ ಉತ್ಕಲಗೆ ವಿಮಾನದಲ್ಲಿ ಪ್ರಯಾಣ ಬೆಳೆಸುವ ಮೂಲಕ ವಿಮಾನ ನಿಲ್ದಾಣಕ್ಕೆ ಚಾಲನೆ ನೀಡಲಾಯಿತು. ಉತ್ಕಲ ವಿಮಾನ ನಿಲ್ದಾಣದ ಸೇರ್ಪಡೆಯೊಂದಿಗೆ, ಒಡಿಶಾ ರಾಜ್ಯದಲ್ಲಿ ಐದು ವಿಮಾನ ನಿಲ್ದಾಣಗಳು ಕಾರ್ಯನಿರ್ವಹಿಸುವಂತಾಗಿದೆ.

4. ಸ್ವತಂತ್ರ ಭಾರತದ ಮೊದಲ ಹಣಕಾಸು ಸಚಿವರ ಪ್ರತಿಮೆಯ ಅನಾವರಣ

ಇತ್ತೀಚೆಗೆ ತಮಿಳುನಾಡಿನ ಕೊಯಮತ್ತೂರಿನಲ್ಲಿ ಸ್ವತಂತ್ರ ಭಾರತದ ಮೊದಲ ಹಣಕಾಸು ಸಚಿವರಾಗಿದ್ದ ಷಣ್ಮುಗಂ ಶೆಟ್ಟಿ ಅವರ ಪ್ರತಿಮೆಯನ್ನು ಕೇಂದ್ರ ಸಚಿವ ಪಿಯುಶ್ ಗೋಯಲ್ ಅನಾವರಣಗೊಳಿಸಿದರು.

ದಕ್ಷಿಣ ಭಾರತದ ಪಂಚಾಯತ್ ಸಂಘಟನೆ ಕಾರ್ಯಕ್ರಮವನ್ನು ಆಯೋಜಿಸಿತ್ತು. ದಕ್ಷಿಣ ಭಾರತದ ಪಂಚಾಯತ್ ಸಂಘಟನೆಯ ಸಂಕೀರ್ಣದಲ್ಲಿ ಈ ಪ್ರತಿಮೆಯನ್ನು ಅನಾವರಣಗೊಳಿಸಲಾಗಿದೆ.

ಷಣ್ಮುಗಂ ಚೆಟ್ಟಿ ಅವರು ಹಣಕಾಸು ಸಚಿವರು ಮಾತ್ರವಲ್ಲದೆ ಪ್ರಖ್ಯಾತ ವಕೀಲರು, ಅರ್ಥಶಾಸ್ತ್ರಜ್ಞರು ಮತ್ತು ರಾಜಕೀಯ ವಿಶ್ಲೇಷಕರು ಎನ್ನುವ ಹೆಗ್ಗಳಿಕೆಯನ್ನು ಹೊಂದಿದ್ದರು.

ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರದ ಹಂತದಲ್ಲಿ ಮೊಟ್ಟಮೊದಲ ಮುಂಗಡಪತ್ರವನ್ನು ಜಾರಿಗೆ ತಂದ ಕೀರ್ತಿ ಇವರದ್ದಾಗಿತ್ತು ಇದಲ್ಲದೆ ಶಿಕ್ಷಣ ವಲಯಕ್ಕೂ ಕೂಡ ಇವರ ಕೊಡುಗೆ ಅಪಾರವಾಗಿದ್ದು ಅಣ್ಣಾಮಲೈ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿ ಕಾರ್ಯನಿರ್ವಹಿಸಿದರು.

ದೆಹಲಿ ಪೊಲೀಸ್ ಇಲಾಖೆ

7547 ಕಾನ್‌ಸ್ಟೆಬಲ್ ಹುದ್ದೆಗಳು


ಆತ್ರೇಯ

ಕೇಂದ್ರ ಸಿಬ್ಬಂದಿ ನೇಮಕಾತಿ ಆಯೋಗದಿಂದ ದೆಹಲಿ ಪೊಲೀಸ್‌ನಲ್ಲಿ ಖಾಲಿಯಿರುವ 7547 ಎಕ್ಸಿಕ್ಯೂಟಿವ್ ಕಾನ್‌ಸ್ಟೆಬಲ್(ಪುರುಷ 5056ಮತ್ತು ಮಹಿಳೆ - 2491) ಹುದ್ದೆಗಳ ನೇಮಕಾತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಿದೆ. ಸೆಪ್ಟಂಬರ್ 30, 2023 ಅರ್ಜಿ ಸಲ್ಲಿಕೆಗೆ ಕೊನೆ ದಿನ. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು. ಅರ್ಜಿ ಸಲ್ಲಿಕೆ, ಅಧಿಸೂಚನೆ ಮತ್ತು ಹೆಚ್ಚಿನ ವಿವರಗಳಿಗೆ www.ssckkr.kar.nic.in ಮತ್ತು www.ssc.nic.in ಜಾಲತಾಣಕ್ಕೆ ಭೇಟಿ ನೀಡಬಹುದು. ಈ ಜಾಲತಾಣದಲ್ಲಿ ಲಭ್ಯವಿರುವ ಅಧಿಸೂಚನೆಯ ಅನುಬಂಧ –I ಮತ್ತು ಅನುಬಂಧ XIV ಅನ್ನು ನೋಡಿ.

ಶೈಕ್ಷಣಿಕ ಅರ್ಹತೆ: ಪಿಯುಸಿ ಅಥವಾ 10 + 2 ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಲಘು ಮೋಟಾರು ವಾಹನಗಳ ಚಾಲನಾ ಪರವಾನಗಿ(LMV Driving Licence) ಹೊಂದಿರಬೇಕು. ಸ್ಪರ್ಧಾತ್ಮಕ ಪರೀಕ್ಷೆ, ದೈಹಿಕ ಕ್ಷಮತೆ ಮತ್ತು ಮಾಪನ ಪರೀಕ್ಷೆಗಳ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ.

ವಯೋಮಿತಿ: ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ಕನಿಷ್ಠ 21 ವರ್ಷಗಳು, ಗರಿಷ್ಠ 25 ವರ್ಷಗಳು (1 ಜುಲೈ 2023ಕ್ಕೆ



ಅನ್ವಯವಾಗುವಂತೆ). ಎಸ್‌ಸಿ/ಎಸ್‌ಟಿ/ಒಬಿಸಿ/ಇಎಸ್‌ಎಂ/ ಇತರೆ ನಿರ್ದಿಷ್ಟ ವರ್ಗಗಳಿಗೆ ವಯೋಮಿತಿ ಸಡಿಲಿಕೆ ಮಾಡಲಾಗಿದೆ. ಈ ಕುರಿತು ವಿವರಕ್ಕಾಗಿ ಅಧಿಸೂಚನೆಯ ಪ್ಯಾರಾ 5.1 ಅನ್ನು ನೋಡಿ.

ಅರ್ಜಿ ಶುಲ್ಕ: ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ₹100. ಮಹಿಳಾ ಅಭ್ಯರ್ಥಿಗಳು ಮತ್ತು ಎಸ್‌ಸಿ/ಎಸ್‌ಟಿ/ ಅಂಗವಿಕಲ ಅಭ್ಯರ್ಥಿ ಮತ್ತು ಮಾಜಿ ಸೈನಿಕ ಅಭ್ಯರ್ಥಿಗಳಿಗೆ ಶುಲ್ಕದಿಂದ ವಿನಾಯಿತಿ ನೀಡಲಾಗಿದೆ.

ಪರೀಕ್ಷಾ ವಿಧಾನ: ಕಂಪ್ಯೂಟರ್ ಆಧಾರಿತ ಪರೀಕ್ಷೆ ನಡೆಸಲಾಗುತ್ತದೆ. 100 ಅಂಕಗಳಿಗೆ ಪರೀಕ್ಷೆ ನಡೆಯಲಿದೆ. ಪರೀಕ್ಷೆಯಲ್ಲಿ ಮೂರು ವಿಷಯಗಳಿರುತ್ತವೆ. ಅವು ಹೀಗಿವೆ; i) ಸಾಮಾನ್ಯ ಜ್ಞಾನ ii)ರೀಸನಿಂಗ್ iii) ಸಂಖ್ಯಾತ್ಮಕ ಸಾಮರ್ಥ್ಯ iv) ಕಂಪ್ಯೂಟರ್ ಫಂಡಮೆಟಲ್ಸ್(ಎಂಎಸ್ ವರ್ಡ್, ಎಕ್ಸೆಲ್, ಇಂಟರ್ನೆಟ್ ಇತ್ಯಾದಿ). ಇದೇ ಡಿಸೆಂಬರ್ ತಿಂಗಳಲ್ಲಿ ಪರೀಕ್ಷೆ ನಡೆಯುವ ಸಾಧ್ಯತೆ ಇದೆ. ನಿಖರ ದಿನಾಂಕವನ್ನು ಸಿಬ್ಬಂದಿ ನೇಮಕಾತಿ ಆಯೋಗದ ಜಾಲತಾಣದಲ್ಲಿ ಪ್ರಕಟಿಸಲಾಗುತ್ತದೆ.

ಪರೀಕ್ಷೆ ನಂತರ ದೈಹಿಕ ಕ್ಷಮತೆ ಮತ್ತು ಮಾಪನ ಪರೀಕ್ಷೆಗಳಿರುತ್ತವೆ. ಹೆಚ್ಚಿನವಿವರಗಳಿಗೆ ಅಧಿಸೂಚನೆಯ ಪ್ಯಾರಾ 12 ಅನ್ನು ನೋಡಿ. ಎನ್‌ಸಿಸಿ ಪ್ರಮಾಣ ಪತ್ರ ಹೊಂದಿರುವವರು ಮತ್ತು ಆರ್ ಆರ್‌ಯು ಪದವಿ /ಪಿಜಿ ಡಿಪ್ಲೊಮಾ ಪ್ರಮಾಣ ಪತ್ರ ಹೊಂದಿರುವವರಿಗೆ ಹೆಚ್ಚುವರಿ ಅಂಕಗಳನ್ನು ನೀಡಲಾಗುತ್ತದೆ ಎಂದು ಅಧಿಸೂಚನೆಯಲ್ಲಿ ತಿಳಿಸಿದೆ.

ಹೆಚ್ಚಿನ ವಿವರಗಳಿಗೆ www.ssckkr.kar.nic.in ಮತ್ತು www.ssc.nic.in ಜಾಲತಾಣಕ್ಕೆ ಭೇಟಿ ನೀಡಿ.
ಮಾಹಿತಿ: ಸಿಬ್ಬಂದಿ ನೇಮಕಾತಿ ಆಯೋಗ (ಕರ್ನಾಟಕ, ಕೇರಳ ಪ್ರದೇಶ), ಬೆಂಗಳೂರು

ಜಿ–20: ಸಚಿವರಿಗೆ ಮೋದಿ ಪಾಠ

ನವದೆಹಲಿ (ಪಿಟಿಐ): ಎರಡು ದಿನಗಳ ಜಿ–20 ಶೃಂಗಸಭೆಯಲ್ಲಿ ಏನು ಮಾತನಾಡಬೇಕು ಮತ್ತು ಏನನ್ನು ಮಾತನಾಡಬಾರದು ಎಂದು ಎಲ್ಲ ಸಚಿವರಿಗೆ ಪ್ರಧಾನಿ ನರೇಂದ್ರ ಮೋದಿ ಬುಧವಾರ ತಿಳಿಸಿದರು ಎಂದು ಮೂಲಗಳು ತಿಳಿಸಿವೆ.

ತಮ್ಮ ಅಧಿಕೃತ ವಾಹನಗಳ ಬದಲಿಗೆ ಸಾರ್ವಜನಿಕ ಸಾರಿಗೆ ಮೂಲಕ ಮೂಲಕ ಭಾರತ ಮಂಟಪಕ್ಕೆ ತಲುಪುವಂತೆ ಮತ್ತು ಇತರ ಸ್ಥಳಗಳಿಗೆ ತೆರಳಬೇಕು ಎಂದು ಸೂಚಿಸಿದ್ದಾರೆ.

ಜಿ–20 'ಇಂಡಿಯಾ ಮೊಬೈಲ್ ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳಬೇಕು. ವಿದೇಶಿ ಗಣ್ಯರ ಜೊತೆ ಸಂವಹನ ನಡೆಸುವಾಗ ಆ್ಯಪ್‌ನಲ್ಲಿರುವ ಭಾಷಾಂತರ ಸೌಲಭ್ಯದ ಪೂರ್ಣ ಸದುಪಯೋಗ ಪಡೆಯಬೇಕು ಎಂದೂ ತಿಳಿಸಿದ್ದಾರೆ.

ಸೆಪ್ಟೆಂಬರ್ 9 ಮತ್ತು 10ರಂದು ನಡೆಯಲಿರುವ ಕಾರ್ಯಕ್ರಮದಲ್ಲಿ 40 ಜಾಗತಿಕ ನಾಯಕರು ಶೃಂಗದಲ್ಲಿ ಭಾಗಿಯಾಗಲಿದ್ದಾರೆ.

ಶೃಂಗದ ಸಿದ್ಧತೆ

- ಜಿ–20 ಶೃಂಗಸಭೆಯ ಅಂಗವಾಗಿ ಶನಿವಾರ ನವದೆಹಲಿಯಲ್ಲಿ ಆಯೋಜಿಸಿರುವ ಭೋಜನಕೂಟದಲ್ಲಿ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಭಾಗಿಯಾಗಲಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.
- ಇಂಡಿಯಾ ಗೇಟ್ ಮತ್ತು ಕರ್ತವ್ಯ ಪಥದ ಬಳಿ ವಾಯುವಿಹಾರ, ಸೈಕ್ಲಿಂಗ್ ಮತ್ತಿತರ ಚಟುವಟಿಕೆ ನಡೆಸದಂತೆ ದೆಹಲಿ ಪೊಲೀಸರು ಜನರಲ್ಲಿ ಮನವಿ ಮಾಡಿದ್ದಾರೆ.
- ಸೆಪ್ಟೆಂಬರ್ 8ರಿಂದ 10ರ ವರೆಗೆ ದೆಹಲಿ ಮೆಟ್ರೊ ಸೇವೆ ಮುಂಜಾನೆ 4 ಗಂಟೆಯಿಂದಲೇ ಆರಂಭವಾಗಲಿದೆ.
- ಶೃಂಗಕ್ಕೆ ಎಲ್ಲ ಸಿದ್ಧತೆಗಳೂ ಪೂರ್ಣಗೊಂಡಿವೆ. ವಿದೇಶಿ ಗಣ್ಯರ ಸ್ವಾಗತಕ್ಕೆ ರಾಷ್ಟ್ರ ರಾಜಧಾನಿ ಸಿದ್ಧವಾಗಿದೆ ಎಂದು ದೆಹಲಿ ಸರ್ಕಾರ ಬುಧವಾರ ತಿಳಿಸಿದೆ.



ಜಿ–20 ಶೃಂಗಸಭೆಯ ಅಂಗವಾಗಿ ಜಾಗತಿಕ ನಾಯಕರನ್ನು ಪ್ರಧಾನಿ ನರೇಂದ್ರ ಮೋದಿ ಅವರು ಭಾರತಕ್ಕೆ ಸ್ವಾಗತಿಸುವಂತ ಫಲಕವನ್ನು ದೆಹಲಿಯ ಇಂದಿರಾ ಗಾಂಧಿ ವಿಮಾನ ನಿಲ್ದಾಣದಲ್ಲಿ ಪ್ರದರ್ಶಿಸಲಾಗಿದೆ –ಪಿಟಿಐ ಚಿತ್ರ

'ನಟರಾಜ ವಿಗ್ರಹ ಭಾರತದ ಪರಂಪರೆಗೆ ಸಾಕ್ಷಿ'

ಜಿ–20 ಶೃಂಗಸಭೆ ನಡೆಯುವ 'ಭಾರತ ಮಂಟಪ'ದ ಬಳಿ ಪ್ರತಿಷ್ಠಾಪಿಸಲಾಗಿರುವ ನಟರಾಜ ವಿಗ್ರಹವು ಭಾರತದ ಪ್ರಾಚೀನ ಕರಕುಶಲ ಕಲೆ ಹಾಗೂ ಪರಂಪರೆಗೆ ಸಾಕ್ಷಿಯಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಬುಧವಾರ ಹೇಳಿದ್ದಾರೆ.

ಈ ವಿಗ್ರಹ ಕುರಿತು ಇಂದಿರಾಗಾಂಧಿ ರಾಷ್ಟ್ರೀಯ ಕಲಾ ಕೇಂದ್ರವು 'ಎಕ್ಸ್'ನಲ್ಲಿ ಮಾಡಿರುವ ಪೋಸ್ಟ್‌ಗೆ ಅವರು ಹೀಗೆ ಪ್ರತಿಕ್ರಿಯಿಸಿದ್ದಾರೆ. ಈ ವಿಗ್ರಹವನ್ನು ಅಷ್ಟಧಾತುಗಳಿಂದ ತಯಾರಿಸಲಾಗಿದೆ.

'18 ಟನ್ ತೂಕದ, 27 ಅಡಿ ಎತ್ತರದ ಈ ವಿಗ್ರಹವನ್ನು ತಮಿಳುನಾಡಿನ ಸ್ವಾಮಿಮಲೈನ ಶಿಲ್ಪಿ ರಾಧಾಕೃಷ್ಣನ್ ಸ್ಥಪತಿ ನೇತೃತ್ವದ ತಂಡವು ದಾಖಲೆಯ ಏಳು ತಿಂಗಳಲ್ಲಿ ತಯಾರಿಸಿದೆ' ಎಂದು ಕೇಂದ್ರವು ಪೋಸ್ಟ್‌ನಲ್ಲಿ ಹೇಳಿದೆ.

'ಚೋಳ ಸಾಮ್ರಾಜ್ಯದ ಅವಧಿಯಿಂದ, ರಾಧಾಕೃಷ್ಣನ್ ಅವರ 34 ತಲೆಮಾರುಗಳು ಇಂತಹ ದೇವತಾ ವಿಗ್ರಹಗಳನ್ನು ತಯಾರಿಕೆಯಲ್ಲಿ ತೊಡಗಿವೆ. ಈ ನಟರಾಜ ವಿಗ್ರಹವು ಬ್ರಹ್ಮಾಂಡ ಶಕ್ತಿ, ಸೃಜನಶೀಲತೆಯ ಸಂಕೇತ. ಈ ವಿಗ್ರಹವು ಜಿ–20 ಶೃಂಗಸಭೆಯ ಪ್ರಮುಖ ಆಕರ್ಷಣೆಯಾಗಲಿದೆ' ಎಂದು ಹೇಳಿದೆ.

'ಭಾರತ ಮೂಲ ಎಂಬುದೇ ಹೆಮ್ಮೆ'


ರಿಷಿ ಸುನಕ್

ನವದೆಹಲಿ (ಪಿಟಿಐ): ಬ್ರಿಟನ್ ಪ್ರಧಾನಿ ರಿಷಿ ಸುನಕ್ ಭಾರತದಲ್ಲಿ ಅತ್ತೆ–ಮಾವ, ಬಂಧುಗಳ ಜೊತೆಗೆ ಊಟಕ್ಕೆ ಕುಳಿತಾಗ ಯಾವ ವಿಷಯದ ಬಗ್ಗೆ ಚರ್ಚಿಸಬಹುದು. ಭಾರತದ ರಾಜಕಾರಣ ಅಥವಾ ಬ್ರಿಟನ್‌ನಲ್ಲಿನ ಆಡಳಿತದ ಸವಾಲು...?

'ಎರಡೂ ಅಲ್ಲ. ಅಲ್ಲಿ ಚರ್ಚೆಯಾಗುವ ವಿಷಯ ಕ್ರಿಕೆಟ್. ಕ್ರಿಕೆಟ್ ವಿಷಯಕ್ಕೆ ಬಂದರೆ ನನ್ನ ಪುತ್ರಿಯರ ಬೆಂಬಲ ಭಾರತ ತಂಡಕ್ಕೆ. ಆದರೆ, ಫುಟ್‌ಬಾಲ್ ಕ್ರೀಡೆಯ ವಿಷಯ ಬಂದರೆ ಅವರು ಇಂಗ್ಲೆಂಡ್ ತಂಡವನ್ನೇ ಬೆಂಬಲಿಸುತ್ತಾರೆ' ಎನ್ನುತ್ತಾರೆ ಸುನಕ್.

ಸುನಕ್ ತಂದೆ–ತಾಯಿ ಭಾರತ ಮೂಲದವರು. ಅವರ ಪತ್ನಿ ಅಕ್ಷತಾ ಮೂರ್ತಿ ಭಾರತದವರು. ಇನ್ಫೋಸಿಸ್ ಸ್ಥಾಪಕ ನಾರಾಯಣಮೂರ್ತಿ–ಸುಧಾಮೂರ್ತಿ ದಂಪತಿಯ ಪುತ್ರಿ.

ಸೆ. 9–10ರಿಂದ ನಡೆಯುವ ಜಿ20 ಶೃಂಗಸಭೆಯಲ್ಲಿ ಭಾಗವಹಿಸಲು ನವದೆಹಲಿಗೆ ಆಗಮಿಸಲಿರುವ ಅವರು ಅದಕ್ಕೆ ಪೂರ್ವಭಾವಿಯಾಗಿ ಇ–ಮೇಲ್ ಮೂಲಕ ಸುದ್ದಿಸಂಸ್ಥೆಗೆ ಸಂದರ್ಶನ ನೀಡಿದ್ದಾರೆ.

'ನನ್ನ ಮೂಲ, ಬೇರು ಭಾರತದಲ್ಲಿದೆ ಎಂಬ ಹೆಮ್ಮೆ ಇದೆ. ಪತ್ನಿ ಭಾರತೀಯಳು. ಭಾರತ ಮತ್ತು ಇಲ್ಲಿನ ಜನರ ಜೊತೆಗೆ ಎಂದಿಗೂ ಸಂಪರ್ಕವಿರುತ್ತದೆ ಎಂಬ ಕಾರಣಕ್ಕೆ ಹಿಂದೂ ಎಂಬುದಕ್ಕೆ ಹೆಮ್ಮೆಯಾಗುತ್ತದೆ ಎಂದು ಹೇಳುತ್ತಾರೆ.

ಕನ್ಸರ್ವೇಟಿವ್ ಪಕ್ಷದ ನಾಯಕ, 43 ವರ್ಷ ವಯಸ್ಸಿನ ರಿಷಿ 2015ರಲ್ಲಿ ಮೊದಲ ಬಾರಿಗೆ ಸಂಸದರಾಗಿ ಆಯ್ಕೆಯಾದರು. ಪ್ರಧಾನಿ ಬೋರಿಸ್ ಜಾನ್ಸನ್ ಅವಧಿಯಲ್ಲಿ ಹಣಕಾಸು ಸಚಿವರಾಗಿದ್ದರು. ಕಳೆದ ವರ್ಷದ ಅಕ್ಟೋಬರ್‌ನಲ್ಲಿ ಪ್ರಧಾನಿಯಾದರು.

'ಪ್ರಧಾನಿಯಾದ ಬಳಿಕ ಮೊದಲು ಮಾಡಿದ ಕೆಲಸಗಳಲ್ಲಿ ಡೌನಿಂಗ್ ಸ್ಟ್ರೀಟ್‌ನಲ್ಲಿ ದೀಪಾವಳಿ ಆಚರಿಸಿದ್ದು ಒಂದು. ಭಾರತ ಮೂಲದ ಬ್ರಿಟಿಷರನ್ನು ಆಹ್ವಾನಿಸಿದ್ದೆ. ಕಟ್ಟಡವನ್ನು ವಿದ್ಯುದ್ದೀಪಗಳಿಂದ ಅಲಂಕರಿಸಲಾಗಿತ್ತು. ಅದು ಭಾವನಾತ್ಮಕ ಗಳಿಗೆ ಎಂದು ಸ್ಮರಿಸಿದರು.

'ಪತ್ನಿ ಜೊತೆ ಭಾರತ ಪ್ರವಾಸ ಕೈಗೊಳ್ಳಲು ಖುಷಿಯಾಗುತ್ತದೆ. ನಾವು ಭೇಟಿ ನೀಡಿದ್ದ ಕೆಲ ಸ್ಥಳಗಳಿಗೆ ಮತ್ತೆ ತೆರಳುವ ವಿಶ್ವಾಸವಿದೆ' ಎಂದರು.

ಜಿ20: ತಕರಾರು ಬೇಡ; ಚೀನಾಗೆ ಅಮೆರಿಕ ಸಲಹೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಜಿ20 ಶೃಂಗಸಭೆಯಲ್ಲಿ ಅಂಗೀಕರಿಸಲು ರಚಿಸಿರುವ ಘೋಷಣೆಯ ಕರಡು ಪ್ರತಿಗೆ ಚೀನಾ ತಕರಾರು ಎತ್ತಿರುವ ಹಿಂದೆಯೇ, ಶೃಂಗಸಭೆಯ ಉದ್ದೇಶಕ್ಕೆ ಧಕ್ಕೆ ತರುವುದರಿಂದ ದೂರ ಉಳಿಯಬೇಕು ಎಂದು ಅಮೆರಿಕವು ಚೀನಾಗೆ ತಿಳಿಸಿದೆ.

'ಭಾರತ ಜೊತೆಗಿನ ಬಾಂಧವ್ಯದಲ್ಲಿ ಇರುವ ಭಿನ್ನಾಭಿಪ್ರಾಯಗಳನ್ನು ಬದಿಗಿಡಬೇಕು, ಈ ವಿಷಯದಲ್ಲಿ ಅನಗತ್ಯ ಪಾತ್ರ ವಹಿಸಬಾರದು' ಎಂದು ಅಮೆರಿಕವು ತಿಳಿಸಿದೆ.

ಶೃಂಗಸಭೆಯಲ್ಲಿ ಭಾಗವಹಿಸುವುದಿಲ್ಲ ಎಂದು ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಈಗಾಗಲೇ ತಿಳಿಸಿದ್ದಾರೆ. ಇದರಿಂದ ಶೃಂಗಸಭೆಯ ಮೇಲೆ ಯಾವುದೇ ಪರಿಣಾಮವಾಗುವುದಿಲ್ಲ ಎಂದು ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರು ಇದಕ್ಕೆ ಪ್ರತಿಕ್ರಿಯಿಸಿದ್ದಾರೆ.

ಅಮೆರಿಕ ಅಧ್ಯಕ್ಷರ ರಾಷ್ಟ್ರೀಯ ಭದ್ರತಾ ಸಲಹೆಗಾರ ಜೇಕ್ ಸಲಿವಾನ್, 'ಶೃಂಗದಲ್ಲಿ ಚೀನಾ ರಚನಾತ್ಮಕ ಪಾತ್ರವಹಿಸಬೇಕು ಎಂದು ಭಾರತ, ಅಮೆರಿಕ ಮತ್ತು ಸದಸ್ಯ ರಾಷ್ಟ್ರಗಳು ಬಯಸಿದ್ದವು' ಎಂದು ಹೇಳಿದರು.

'ಇಂಡಿಯಾ' ಕಂಡರೆ ಬಿಜೆಪಿಗೆ ಹೆದರಿಕೆ: ಖರ್ಗೆ

ಭಿಲ್ವಾರ (ರಾಜಸ್ಥಾನ) (ಪಿಟಿಐ): 'ವಿಪಕ್ಷಗಳ ಮೈತ್ರಿಕೂಟವಾದ 'ಇಂಡಿಯಾ' ಬಗ್ಗೆ ಬಿಜೆಪಿಗೆ ಹೆದರಿಕೆ ಶುರುವಾಗಿದೆ. ಹಾಗಾಗಿಯೇ, 'ಭಾರತ–ಇಂಡಿಯಾ' ವಿಷಯವನ್ನು ಮುನ್ನೆಲೆಗೆ ತಂದು ದೇಶದ ಜನರನ್ನು ದಿಕ್ಕುತಪ್ಪಿಸಲು ಯತ್ನಿಸುತ್ತಿದೆ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಆಪಾದಿಸಿದ್ದಾರೆ.

ರಾಜಸ್ಥಾನದ ವಿಧಾನಸಭೆಗೆ ವರ್ಷಾಂತ್ಯದಲ್ಲಿ ನಡೆಯಲಿರುವ ಚುನಾವಣೆ ಅಂಗವಾಗಿ ಇಲ್ಲಿ ಬುಧವಾರ ನಡೆದ ಕಾಂಗ್ರೆಸ್ ಪ್ರಚಾರ ಸಭೆಯಲ್ಲಿ ಅವರು ಮಾತನಾಡಿದರು.

ಈಗಾಗಲೇ, ಪಕ್ಷವು ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಭಾರತ ಜೋಡೊ ಯಾತ್ರೆ ಹಮ್ಮಿಕೊಳ್ಳುವ ಮೂಲಕ ಭಾರತದ ಜೋಡಣೆಯ ಸಂದೇಶವನ್ನು ಸಾರಿದೆ ಎಂದರು.

'ನಾವು ಭಾರತದ ಒಗ್ಗಟ್ಟಿನ ಮಹತ್ವ ಕುರಿತು ಹೇಳಿದ್ದೇವೆ. ಅದನ್ನೇ ಅವರು (ಬಿಜೆಪಿ) ಹೊಸದಾಗಿ ಹೇಳಲು ಹೊರಟಿದ್ದಾರೆ. ನಾವು ಯಾವುದಾದರೊಂದು ವಿಷಯ ಹೇಳಲು ಹೊರಟಾಗ ಅದನ್ನು ಅಪಖ್ಯಾತಿಗೊಳಿಸಲು ಯತ್ನಿಸುತ್ತಾರೆ' ಎಂದು ಟೀಕಿಸಿದರು.

ದೇಶವು ಜ್ವಲಂತ ಸಮಸ್ಯೆಗಳನ್ನು ಎದುರಿಸುತ್ತಿದೆ. ಇದರಿಂದ ಜನರ ಗಮನ ಬೇರೆಡೆ ಸೆಳೆಯಲು ಕೇಂದ್ರವು 'ಭಾರತ–ಇಂಡಿಯಾ' ವಿಷಯ ಮುನ್ನೆಲೆಗೆ ತಂದಿದೆ

ಪ್ರಿಯಾಂಕ್ ಖರ್ಗೆ, ಸಚಿವ

ಮೈತ್ರಿ ಹೆಸರು 'ಭಾರತ'ವೆಂದು ಬದಲಾಯಿಸಿ: ಶಶಿ ತರೂರ್

ನವದೆಹಲಿ (ಪಿಟಿಐ): 'ಇಂಡಿಯಾ' ಮೈತ್ರಿಕೂಟದ ಹೆಸರನ್ನು 'ಭಾರತ' (ಬಿಎಚ್‌ಎಆರ್‌ಎಟಿ– ಸುಧಾರಣೆ, ಸಾಮರಸ್ಯ ಮತ್ತು ಜವಾಬ್ದಾರಿಯುತ ಪ್ರಗತಿಯ ನಾಳೆಗಾಗಿ ಮೈತ್ರಿ) ಎಂದು ಬದಲಾಯಿಸಿಕೊಂಡರೆ ಹೆಸರು ಮರುನಾಮಕರಣದಲ್ಲಿ ತೊಡಗಿರುವ ಆಡಳಿತರೂಢ ಬಿಜೆಪಿಯ ಬಾಲಿಶ ಆಟ ಕೊನೆಯಾಗಲಿದೆ' ಎಂದು ಕಾಂಗ್ರೆಸ್ ನಾಯಕ ಶಶಿ ತರೂರ್ ಸಲಹೆ ನೀಡಿದ್ದಾರೆ.

ಸರ್ಕಾರ 'ಭಾರತ–ಇಂಡಿಯಾ' ವಿವಾದ ಸೃಷ್ಟಿಸಿದೆ. ಇದಕ್ಕೆ ವಿಪಕ್ಷಗಳು ಮೈತ್ರಿಕೂಟದ ಹೆಸರನ್ನು 'ಭಾರತ' ಎಂದು ಬದಲಾವಣೆ ಮಾಡುವುದು ಉತ್ತಮ. ಆಗಷ್ಟೇ ಬಿಜೆಪಿ ನಾಯಕರು ಸುಮ್ಮನಾಗುತ್ತಾರೆ' ಎಂದು 'ಎಕ್ಸ್'ನಲ್ಲಿ (ಟ್ವಿಟರ್) ಹೇಳಿದ್ದಾರೆ.

ಬಿಜೆಪಿಗೆ ರಾಜೀನಾಮೆ ನೀಡಿದ ನೇತಾಜಿ ಸಂಬಂಧಿ

ಕೋಲ್ಕತ್ತ (ಪಿಟಿಐ): ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಸಂಬಂಧಿ ಚಂದ್ರ ಬೋಸ್ ಅವರು ಬುಧವಾರ ಬಿಜೆಪಿಗೆ ರಾಜೀನಾಮೆ ನೀಡಿದ್ದಾರೆ.

'ಬಿಜೆಪಿ ಸೇರಿದಾಗ ನೇತಾಜಿ ಸುಭಾಷ್ ಚಂದ್ರ ಬೋಸ್ ಹಾಗೂ ಶರತ್ ಚಂದ್ರ ಬೋಸ್ ಅವರ ಸಮಗ್ರ ಸಿದ್ಧಾಂತವನ್ನು ದೇಶದಾದ್ಯಂತ ಪ್ರಚಾರ ಮಾಡಲು ನನಗೆ ಅನುಮತಿ ನೀಡಲಾಗುವುದೆಂದು ಭರವಸೆ ನೀಡಲಾಗಿತ್ತು. ಆದರೆ, ಈವರೆಗೂ ಅಂಥ ಯಾವುದೇ ಅನುಮತಿ ದೊರೆತಿಲ್ಲ. ಹಾಗಾಗಿ ನಾನು ಪಕ್ಷಕ್ಕೆ ರಾಜೀನಾಮೆ ನೀಡಿದ್ದೇನೆ' ಎಂದು ಚಂದ್ರ ಬೋಸ್ ಅವರು ಹೇಳಿದರು.

ಚಂದ್ರ ಬೋಸ್ ಅವರು 2016ರಲ್ಲಿ ಬಿಜೆಪಿ ಸೇರಿದ್ದರು. ಅದೇ ಪಕ್ಷದಿಂದ 2016ರ ವಿಧಾನಸಭಾ ಚುನಾವಣೆ ಮತ್ತು 2019ರ ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧಿಸಿದ್ದರು.

ತಮಿಳುನಾಡು: ಐಎಸ್ ಉಗ್ರನ ಬಂಧನ

ನವದೆಹಲಿ (ಪಿಟಿಐ): ತಲೆಮರೆಸಿಕೊಂಡಿದ್ದ ತಮಿಳುನಾಡಿನ ತ್ರಿಶ್ಶೂರ್ ಘಟಕದ ಐಎಸ್ ಉಗ್ರಗಾಮಿ ಸಂಘಟನೆಯ ಮುಖ್ಯಸ್ಥನನ್ನು ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್‌ಐಎ) ಬುಧವಾರ ಬಂಧಿಸಿದ್ದು, ದೇಶದಿಂದ ಪಲಾಯನಗೈಯುವ ಆತನ ಯೋಜನೆಯನ್ನು ವಿಫಲಗೊಳಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನಿಷೇಧಿತ ಉಗ್ರ ಸಂಘಟನೆಯ ತ್ರಿಶ್ಶೂರ್ ಘಟಕದ ಮುಖ್ಯಸ್ಥ ಸಯ್ಯದ್ ನಬೀಲ್‌ನನ್ನು ಎನ್‌ಐಎ ತಂಡ ಚೆನ್ನೈನಲ್ಲಿ ಬಂಧಿಸಿದೆ ಎಂದು ಸಂಸ್ಥೆಯ ವಕ್ತಾರರು ಹೇಳಿದ್ದಾರೆ.

'ಅಖಂಡ ಭಾರತ ಸಾಕಾರಗೊಳ್ಳಲಿ'

ನಾಗ್ಪುರ (ಪಿಟಿಐ): 'ಇಂದಿನ ಯುವ ಜನಾಂಗಕ್ಕೆ ವಯಸ್ಸಾಗುವುದಕ್ಕೂ ಮೊದಲು ಅಖಂಡ ಭಾರತ (ಅವಿಭಜಿತ ಭಾರತ) ಸಾಕಾರಗೊಳ್ಳಬೇಕಿದೆ' ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಪ್ರತಿಪಾದಿಸಿದ್ದಾರೆ.

ಇಲ್ಲಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಯೊಬ್ಬ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಅಖಂಡ ಭಾರತ ಯಾವಾಗ ಅಸ್ತಿತ್ವ ಬರಲಿದೆ ಎಂಬ ಬಗ್ಗೆ ಅವರು ವಿವರಿಸಲಿಲ್ಲ.

'ಇದನ್ನು ಸಾಕಾರಗೊಳಿಸುವ ಹಾದಿಯಲ್ಲಿ ಸಾಗಿದರೆ ನಿಮಗೆ ವಯಸ್ಸಾಗುವುದರಲ್ಲಿ ಅದನ್ನು ಕಾಣಬಹುದು. ಭಾರತದಿಂದ ಬೇರ್ಪಟ್ಟವರಿಗೂ ತಮ್ಮ ತಪ್ಪಿನ ಅರಿವಾಗಿದೆ. ನಾವು ಮತ್ತೆ ಭಾರತದ ಭಾಗವಾಗಬೇಕು ಎಂದು ಅವರು ಭಾವಿಸಿದ್ದಾರೆ ಎಂದು ಹೇಳಿದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



❦ ಸುಭಾಷಿತ ❦

ವಾದ ಮಾಡುವಾಗ ಎತ್ತರಿಸಬೇಕಾದದ್ದು ಧ್ವನಿಯನ್ನಲ್ಲ, ವಿಷಯದ ಸತ್ವವನ್ನು. ನೆನಪಿರಲಿ, ಪ್ರಕೃತಿ ನಳನಳಿಸುವುದು ಗುಡುಗಿನಿಂದಲ್ಲ, ಮಳೆಯಿಂದ.

-ರೂಮಿ

ಮಣಿಪುರ ಸರ್ಕಾರದ ನಡೆ ತಪ್ಪು ಪ್ರಕರಣಗಳನ್ನು ತಕ್ಷಣ ಕೈಬಿಡಬೇಕು

ಮಣಿಪುರ ಸರ್ಕಾರವು ಎಡಿಟರ್ಸ್ ಗಿಲ್ಡ್ ಆಫ್ ಇಂಡಿಯಾ (ಇಜಿಐ) ವಿರುದ್ಧ ಹಾಗೂ ಅದು ನೇಮಕ ಮಾಡಿದ್ದ ಸತ್ಯಶೋಧನಾ ತಂಡದ ವಿರುದ್ಧ ಕಾನೂನು ಕ್ರಮಕ್ಕೆ ಮುಂದಾಗಿದೆ. [illegible]



ಎಲ್ಲ ಬಗೆಯ ಟೀಕೆಗಳನ್ನು ಅಲ್ಲಗಳೆಯುವುದು ಹಾಗೂ ಟೀಕೆ ಮಾಡಿದವರನ್ನು ಬೆದರಿಸುವುದು ಈಗ ಮಾಮೂಲಾಗಿಬಿಟ್ಟಿದೆ. ಮಣಿಪುರ ಸರ್ಕಾರದ ನಡೆ ತೀರಾ ಅಪ್ರಜಾಸತ್ತಾತ್ಮಕ

[illegible] ಕೂಡ ಈ ಬಗ್ಗೆ ಮಾತನಾಡಿದ್ದಾರೆ. ಇಂತಹ ಟೀಕೆಗಳು ಅನಗತ್ಯವಾದವು ಹಾಗೂ ತಮ್ಮ ಮಿತಿಗಳನ್ನು ಮೀರಿದ ನಡವಳಿಕೆ ಎಂದು ಸರ್ಕಾರ ಹೇಳಿದೆ. ಎಲ್ಲ ಬಗೆಯ ಟೀಕೆಗಳನ್ನು ಅಲ್ಲಗಳೆಯುವುದು ಹಾಗೂ ಟೀಕೆ ಮಾಡಿದವರನ್ನು ಬೆದರಿಸುವುದು ಈಗ ಮಾಮೂಲಾಗಿಬಿಟ್ಟಿದೆ. ಮಣಿಪುರ ಸರ್ಕಾರದ ನಡೆಯು ತೀರಾ ಅಪ್ರಜಾಸತ್ತಾತ್ಮಕ. ಸರ್ಕಾರವು ತಾನು ದಾಖಲಿಸಿರುವ ಪ್ರಕರಣಗಳನ್ನು ಕೈಬಿಡಬೇಕು.

ಮಾತಿಗಿಂತ ಕೃತಿಯಲ್ಲಿ ಗಾಂಧಿ ಮೌಲ್ಯಗಳನ್ನು ಪಾಲಿಸಿದವರು ಈ ನಾಯಕಿ

ದುಡಿವ ಮಹಿಳೆ ಮತ್ತು ಇಳಾ ಸಾರಥ್ಯ



ವಿಶ್ಲೇಷಣೆ

ಸುಮಂಗಲಾ

ಆ ಹೆಣ್ಣುಮಕ್ಕಳು ಅಹಮದಾಬಾದ್ ನಗರದಲ್ಲಿ ಸಗಟು ವ್ಯಾಪಾರಿಗಳಿಂದ ಚಿಲ್ಲರೆ ವ್ಯಾಪಾರಿಗಳ ಅಂಗಡಿಗೆ ಕೈಗಾಡಿಯಲ್ಲಿ ಸಾಮಾನು ಸಾಗಿಸುವವರು. ಬರಿಯ ಸಾಮಾನು ತುಂಬಿದ ಕೈಗಾಡಿಯನ್ನು ಮಾತ್ರವಲ್ಲ ಬದುಕಿನ ಬಂಡಿಯನ್ನೂ ಎಳೆದೆಳೆದು ದಣಿದವರು. 'ಆಗೆಲ್ಲ ಇಡೀ ದಿನ ಗಾಡಿ ಎಳೆದರೂ ಹೊಟ್ಟೆತುಂಬ ಉಣ್ಣುವಷ್ಟು ಹಣವೂ ಸಿಗುತ್ತಿರಲಿಲ್ಲ. ನಾವು ಸಂಘಟಿತ ಪ್ರಯತ್ನ ಮಾಡಿದ ನಂತರ, ದಿನಗೂಲಿಯಲ್ಲಿ ಸ್ವಲ್ಪ ಹೆಚ್ಚಳವಾಯಿತು. ನಂತರ ಪ್ರತಿದಿನ ಸ್ವಲ್ಪ ದುಡ್ಡು ಉಳಿಸಿ, ನಮ್ಮ ಬ್ಯಾಂಕಿನಲ್ಲಿ ತುಂಬಿದೆವು. ಮಕ್ಕಳನ್ನು ಓದಿಸಿದೆವು. ನಮ್ಮ ಬ್ಯಾಂಕಿನಲ್ಲಿ ಸಾಲ ತೆಗೆದುಕೊಂಡು, ಮನೆ ಕಟ್ಟಿಕೊಂಡೆವು. ಈಗ ಮನೆ ನಮ್ಮ ಹೆಸರಿನಲ್ಲಿದೆ!' ಚಿಕ್ಕ ಕೊಠಡಿಯಲ್ಲಿ ಕೂತಿದ್ದ ಆ ಹೆಣ್ಣುಮಕ್ಕಳು ನಾಲ್ಕೈದು ದಶಕದ ಹಿಂದಿನ ಬದುಕನ್ನು ನೆನಪಿಸಿಕೊಳ್ಳುತ್ತಿದ್ದಾಗ, ಹೊರಗೆ ಮಧ್ಯಾಹ್ನದ ಬಿಸಿಲಿನಲ್ಲಿ ರಸ್ತೆ ಸುಡುಕಾವಲಿಯಂತಿತ್ತು.

'ಆಗೆಲ್ಲ ನಮ್ಮ ಬದುಕು ನೆತ್ತಿ ಸುಡುವ ಬಿಸಿಲಿನಲ್ಲಿ ಇದ್ದಂತೆ ಇತ್ತು. ಈಗ ತಲೆ ಮೇಲೆ ತಣ್ಣಗಿನ ಸ್ವಂತ ಸೂರು ಇದೆ!' ಒಬ್ಬಾಕೆ ಉದ್ಗರಿಸಿದಳು. ರಾಧಾನ್‌ಪುರದ ಹೆಣ್ಣುಮಕ್ಕಳು ಕೈಯಲ್ಲಿ ಬಟ್ಟೆ, ದಾರ, ಸೂಜಿ ಹಿಡಿದು ಕುಳಿತರೆಂದರೆ ನೋಡನೋಡುತ್ತಿದ್ದಂತೆ ಕಸೂತಿಯ ಚಿತ್ತಾರಗಳು ಅರಳುತ್ತವೆ. ಕಸೂತಿಯ ನಡುನಡುವೆ ಇರುವ ಕನ್ನಡಿಯ ಚಿಕ್ಕ ತುಣುಕುಗಳಲ್ಲಿ ಕಾಣುವ ಬದುಕಿನ ಪ್ರತಿಬಿಂಬವೂ ಹರುಕುಮುರುಕು. ಬಾಗಿಲಿನ ತೋರಣ, ನೆಲಕ್ಕೆ ಹಾಸಿದ ಕೌದಿ, ಆಕೆ ಹಾಕಿದ್ದ ಲಂಗ, ಕುಪ್ಪಸ, ಕಿಟಕಿಗೆ ನೇತುಬಿಟ್ಟಿದ್ದ ಕೈಚೀಲ ಎಲ್ಲದರ ಮೇಲೂ ವಿವಿಧ ಬಗೆಯ ಕಸೂತಿ. ಹೊರಗೆ ಖುದ್ದು ಸೂರ್ಯನೇ ಬಾಗಿಲು ಕಾಯುತ್ತಿದ್ದಾನೋ ಎಂಬಂತೆ ರಣರಣ ಬಿಸಿಲು. ರಸ್ತೆ ನಡುವೆ ಹರಿಯುವ ಚರಂಡಿನೀರು, ಬದುಕಿನ ಕಟುವಾಸ್ತವ, ಬಿರುಕುಬಿದ್ದ ಹಳೆಮನೆಗಳು, ಇದೆಲ್ಲದಕ್ಕೆ ಸಡ್ಡು ಹೊಡೆಯುವಂತೆ ಸುಕ್ಕುಗಟ್ಟಿದ ಕೈಗಳು ಮೋಹಕವಾದ ಕಸೂತಿಯನ್ನು ಹೆಣೆಯುತ್ತವೆ.

'ಕಸೂತಿ ನಮ್ಮ ರಕ್ತದಲ್ಲಿಯೇ ಸೇರಿಹೋಗಿದೆ. ತಲೆಮಾರುಗಳಿಂದ ಮಾಡ್ತಾನೆ ಇದ್ದೀವಿ. ಆದರೆ ಮಾರಾಟದ ಕೌಶಲ ನಮಗೆ ಗೊತ್ತಿರಲಿಲ್ಲ. ಹಳ್ಳಿಗೆ ಬಂದು ನಮ್ಮಿಂದ ವ್ಯಾಪಾರಿಗಳು ಬಹಳ ಕಡಿಮೆ ದುಡ್ಡಿಗೆ ಕೊಂಡ್ಕೊಂಡು ಹೋಗ್ತಿದ್ದರು. ಈಗ ದೇಶ, ವಿದೇಶಗಳಲ್ಲಿ ನಮ್ಮ ಕಸೂತಿ ಬಟ್ಟೆಗಳ ಪ್ರದರ್ಶನ ಮಾಡ್ತೀವಿ. ಒಬ್ಬೊಬ್ಬರೇ ಹೊರಗೆ ಓಡಾಡ್ತೀವಿ, ಬ್ಯಾಂಕ್ ವ್ಯವಹಾರ ಮಾಡ್ತೀವಿ. ಆಗ ನನ್ನನ್ನು ಬರೀ ಈ ಹಳ್ಳಿಯ ಸೊಸೆ ಅಂತ ಗುರುತಿಸ್ತಾ ಇದ್ದರು, ಈಗ ಪೂರಿಬೆನ್ ಅಂತ ಗೌರವದಿಂದ ಕರೀತಾರೆ' ಪೂರಿಬೆನ್ ಹೆಮ್ಮೆಯಿಂದ ನಗುತ್ತಾಳೆ.

ಮೂರ್ನಾಲ್ಕು ದಶಕಗಳ ಹಿಂದೆ ಅಹಮದಾಬಾದ್ ನಗರದ ಬೀದಿಗಳಲ್ಲಿ ಚಿಂದಿ ಆಯುತ್ತಿದ್ದ ಪಾಲಿಬೆನ್ ಈಗ ಸ್ಟೇಷನರಿ ತಯಾರಿಸುವ ಸಹಕಾರಿ ಸಂಸ್ಥೆ 'ಗೀತಾಂಜಲಿ'ಯಲ್ಲಿ ಮ್ಯಾನೇಜರ್ ಆಗಿದ್ದಾರೆ. ಮನೆಯ ಗಂಡಸರೊಂದಿಗೆ ಮಾತನಾಡುವಾಗಲೂ ತಲೆಯ ಮೇಲೆ 'ಘುಂಘಟ್' ಹೊದ್ದು, ಊರಿನಿಂದ ಹೊರಗೆ ಕಾಲಿಡಲು ಭಯಪಡುತ್ತಿದ್ದ ಗಣೇಶಪುರದ ಮಹಿಳೆಯರು ಈಗ 10 ಎಕರೆ ಬರಡು ಭೂಮಿಯನ್ನು ಹಸಿರಾಗಿಸಿ, ತಮ್ಮ ಸಹಕಾರಿ ಸಂಸ್ಥೆಯಡಿ 'ಇಕೊ ಟೂರಿಸಂ' ಕೇಂದ್ರ ನಡೆಸುತ್ತಿದ್ದಾರೆ.

ಸಾಮುದಾಯಿಕ ನೆಲೆಯಲ್ಲಿ ಹಾಗೂ ವೈಯಕ್ತಿಕ ನೆಲೆಯಲ್ಲಿ ಬದುಕು ಪರಿವರ್ತನೆಗೊಂಡ ನೈಜ ಕಥೆಗಳು ನೂರಾರು. ಈ ಯಾವುವೂ ಕಣ್ಮುಚ್ಚಿ ತೆರೆಯುವಷ್ಟರಲ್ಲಿ ನಡೆದ ಪವಾಡಗಳಲ್ಲ. ಒಂದೊಂದೇ ಚಿಕ್ಕಪುಟ್ಟ ಹೆಜ್ಜೆಗಳು ಸೇರುತ್ತ, ಕೈಹಿಡಿದು ಸಾಗುತ್ತ, ಸಂಘಟಿತ ಪ್ರಯತ್ನ ಮಾಡುತ್ತ, ಕ್ರಮೇಣ ಜರುಗಿದ ಪರಿವರ್ತನೆಗಳು. ಆದರೆ ಈ ಎಲ್ಲ ಪರಿವರ್ತನೆಗಳ ಮೂಲ ಕೇಂದ್ರ ಒಂದೇ. ಅದೆಂದರೆ ಮೌನ ಕ್ರಾಂತಿಕಾರಿಯೆಂದೇ ಹೆಸರಾದ ಇಳಾ ಭಟ್ ಅವರು ಹುಟ್ಟುಹಾಕಿದ ಸಂಸ್ಥೆ 'ಸೇವಾ'.

ವಿವಿಧ ಬಗೆಯ ಸ್ವ ಉದ್ಯೋಗದಲ್ಲಿ ತೊಡಗಿದ ಈ ಹೆಣ್ಣುಮಕ್ಕಳು ಮೊದಲು ಅಸಂಘಟಿತ ವೃತ್ತಿಯಲ್ಲಿ ಎದುರಿಸಿದ ಸಂಕಷ್ಟಗಳು, ಸವಾಲುಗಳು ಮತ್ತು ಅವುಗಳನ್ನೆಲ್ಲ ಮೀರಿ ನಿಂತ ಬಗೆ, ಸ್ವಂತಿಕೆಯಿಲ್ಲದೇ ಬದುಕುತ್ತಿದ್ದ ತಮಗೆ ಈಗ ಸ್ವಂತ ಅಸ್ತಿತ್ವವಿರುವುದು, ತಮ್ಮ ಹೆಸರಿನಲ್ಲಿ ಇರುವ ಆಸ್ತಿ, ಘನತೆ, ಗೌರವ ಎಲ್ಲವನ್ನೂ ಗಳಿಸಿಕೊಳ್ಳಲು ಹೇಗೆ ಸೇವಾ ನೆರವಾಯಿತು ಎಂಬುದನ್ನು ಹೇಳುತ್ತಲೇ ಇಳಾ ಭಟ್ ಅವರ ವ್ಯಕ್ತಿತ್ವ, ದೂರದರ್ಶಿತ್ವ, ನಾಯಕತ್ವ, ಬಡ ಮಹಿಳೆಯರನ್ನು ತಮ್ಮ ಎಲ್ಲಾ ಕೆಲಸಗಳ ಕೇಂದ್ರಬಿಂದುವಾಗಿ ಇರಿಸಿಕೊಂಡು, ಅವಿರತವಾಗಿ ಶ್ರಮಿಸುತ್ತ ಸಾಗಿದ್ದನ್ನು ಚಿತ್ರಿಸುತ್ತಾರೆ.

ಗಾಂಧೀಜಿಯಿಂದ ಪ್ರಭಾವಿತಗೊಂಡಿದ್ದ ಆಕೆ ಮಾತುಗಳಿಗಿಂತ ಕೃತಿಯಲ್ಲಿ ಗಾಂಧಿ ಮೌಲ್ಯಗಳನ್ನು ಪಾಲಿಸಿದವರು. ಸರಳತೆ, ಸರ್ವಧರ್ಮ ಸಮಾನತೆ, ಮಹಿಳೆಯರಿಗೆ ಆರ್ಥಿಕ ಸ್ವಾವಲಂಬನೆ, ಅಹಿಂಸಾತ್ಮಕ ವಿಧಾನದಲ್ಲಿ ಪರಿಹಾರ ಕಂಡುಕೊಳ್ಳುವುದು, ಪ್ರಾಮಾಣಿಕತೆಯಂತಹ ಗಾಂಧಿ ಮೌಲ್ಯಗಳು ಅವರಲ್ಲಿ ಎಷ್ಟರಮಟ್ಟಿಗೆ ರಕ್ತಗತವಾಗಿದ್ದವು ಎಂದರೆ, ದೂರದ ಕಛ್ ಪ್ರಾಂತ್ಯದಲ್ಲಿರುವ 'ಸೇವಾ'ದ ಹೆಣ್ಣುಮಕ್ಕಳೂ ಈ ಮೌಲ್ಯಗಳನ್ನು ತಮ್ಮ ಬದುಕಿನಲ್ಲಿ, ವೃತ್ತಿಯಲ್ಲಿ ಪಾಲಿಸುತ್ತಿರುವುದನ್ನು ಹೆಮ್ಮೆಯಿಂದ ಹೇಳುತ್ತಾರೆ.

ಇಳಾಬೆನ್ ಎಂದೇ ಪ್ರೀತಿಯಿಂದ ಕರೆಸಿಕೊಳ್ಳುತ್ತಿದ್ದ ಅವರು ಇದ್ದಿದ್ದರೆ ಇಂದಿಗೆ ಸರಿಯಾಗಿ 90 ವರ್ಷ ತುಂಬುತ್ತಿತ್ತು (ಅವರು ಹುಟ್ಟಿದ್ದು 7 ಸೆಪ್ಟೆಂಬರ್, 1933). ಸ್ವ ಉದ್ಯೋಗದಲ್ಲಿ ತೊಡಗಿರುವ ಅಸಂಘಟಿತ ವಲಯದ ಮಹಿಳೆಯರಿಗೆ ಅವರ ವಹಿವಾಟನ್ನು ಸುಗಮವಾಗಿ ನಡೆಸಲು ಅನುಕೂಲವಾಗುವಂತೆ ಗುರುತು ಪತ್ರ, ಸ್ವಂತ ಅಸ್ತಿತ್ವ ಮತ್ತು ಸಂಘಟನೆಯ ಅಗತ್ಯವಿದೆ ಎನ್ನುವುದನ್ನು ಮನಗಂಡ ಅವರು 1972ರಲ್ಲಿ ಸೇವಾ (ಸ್ವ-ಉದ್ಯೋಗಿ ಮಹಿಳಾ ಸಂಘ) ಕಾರ್ಮಿಕ ಸಂಘವನ್ನು ಹುಟ್ಟುಹಾಕಿದರು. ತರಕಾರಿ ಮಾರಾಟ, ಬಟ್ಟೆ ಹೊಲೆಯುವುದು, ಚಿಂದಿ ಆಯುವುದು, ಕೃಷಿ, ಹೈನುಗಾರಿಕೆ, ಬೀದಿ ವ್ಯಾಪಾರ, ಬೀಡಿ ಕಟ್ಟುವುದು ಹೀಗೆ ಹಲವಾರು ವೃತ್ತಿಗಳಲ್ಲಿ ತೊಡಗಿದ ಮಹಿಳೆಯರ ಸಹಕಾರಿ ಸಂಸ್ಥೆಯನ್ನು ಕಟ್ಟುತ್ತ, ಅವರ ವ್ಯವಹಾರ ಸುಗಮವಾಗಿ ನಡೆಯಲು ಸಂಘಟಿತ ಪ್ರಯತ್ನದ ಮಹತ್ವವನ್ನು ಮನಗಾಣಿಸಿದರು. ಆದರೆ ವ್ಯವಹಾರ ನಡೆಸಲು ಬಂಡವಾಳ ಬೇಕಲ್ಲ? ಆಗ ಇದೇ ಮಹಿಳೆಯರಿಂದ ಸೇವಾ ಬ್ಯಾಂಕ್ ಶುರು ಮಾಡಿದರು.

ಈ ಬಡಕೈಗಳು ದುಡಿದಿದ್ದರಲ್ಲಿ ಹೆಚ್ಚಿನಂಶ ವೈದ್ಯಕೀಯ ಖರ್ಚಿಗೇ ಹೋಗುತ್ತದೆ ಎಂದು ಮನಗಂಡ ಇಳಾಬೆನ್, ವಿಮೋ ಸೇವಾ ಆರಂಭಿಸಿದರು. ಮಹಿಳೆಯರು ಸಬಲೀಕರಣಗೊಳ್ಳಲು ತರಬೇತಿ ಅಗತ್ಯವೆಂದು ಮನಗಂಡು ಸೇವಾ ಅಕಾಡೆಮಿ ಹುಟ್ಟುಹಾಕಿದರು. ಹೀಗೆ ಹಲವಾರು ಸಂಸ್ಥೆಗಳು ಮೂಲ ಸೇವಾ ಸಂಸ್ಥೆಯಿಂದ ಟಿಸಿಲೊಡೆದವು. ಪ್ರತಿಯೊಂದಕ್ಕೂ ವೃತ್ತಿಪರರನ್ನು ಪ್ರಮುಖರನ್ನಾಗಿ ಮಾಡಿ, ಕ್ರಮೇಣ ಸಂಸ್ಥೆಯ ಚುಕ್ಕಾಣಿಯನ್ನು ಬೇರೆಯವರಿಗೆ ವಹಿಸಿದರು.

ಇಳಾಬೆನ್, ಸಂಸ್ಥೆಯ ಎಲ್ಲ ಹಂತಗಳಲ್ಲಿ ನೂರಾರು ನಾಯಕಿಯರನ್ನು ಹುಟ್ಟುಹಾಕಿದರು. ಒಮ್ಮೆ ಚುಕ್ಕಾಣಿಯನ್ನು ಬೇರೆಯವರಿಗೆ ವಹಿಸಿದ ನಂತರ, ನಿತ್ಯದ ವ್ಯವಹಾರಗಳಲ್ಲಿ ಎಂದೂ ಮೂಗು ತೂರಿಸಲಿಲ್ಲ.

ಹತ್ತುಹಲವು ವಿಚಾರಗಳಲ್ಲಿ ಅವರು ತಮ್ಮ ಕಾಲಕ್ಕಿಂತ ಬಹಳ ಮುಂದೆ ಇದ್ದರು. ಸ್ವಸಹಾಯ ಸಂಘಗಳು, ಮೈಕ್ರೊಫೈನಾನ್ಸ್, ಈ ಪದಗಳು ಚಾಲ್ತಿಗೆ ಬರುವುದಕ್ಕಿಂತ ಬಹಳ ಮೊದಲೇ ಅವರು ಸೇವಾ ಬ್ಯಾಂಕ್ ಹುಟ್ಟುಹಾಕಿದ್ದರು. ವಿತ್ತೀಯ ಸೇರ್ಪಡೆ ಕುರಿತು ಎಲ್ಲರೂ ಮಾತನಾಡುವುದಕ್ಕಿಂತ ಎಷ್ಟೋ ವರ್ಷಗಳ ಮೊದಲೇ ಸಂಘಟನೆಯಲ್ಲಿ ಸೇರಿದ ಮಹಿಳೆಯರು ಬ್ಯಾಂಕ್ ಖಾತೆಗಳನ್ನು ಹೊಂದಿದ್ದರು. ಗಾಂಧಿಯವರ ಗ್ರಾಮ ಸ್ವರಾಜ್ಯದ ಕಲ್ಪನೆಯನ್ನು ತಮ್ಮದೇ ರೀತಿಯಲ್ಲಿ ಕಾರ್ಯರೂಪಕ್ಕಿಳಿಸಿದ ಇಳಾಬೆನ್ ಅದರ ಕೇಂದ್ರ ಬಿಂದುವಿನಲ್ಲಿ ದುಡಿಯುವ ಮಹಿಳೆಯನ್ನು ಇರಿಸಿದ್ದರು.

ದಿನೇದಿನೇ ಹೆಚ್ಚುತ್ತಿರುವ ಹವಾಮಾನ ಬದಲಾವಣೆಯ ದುಷ್ಪರಿಣಾಮಗಳ ಕುರಿತು ಇಳಾಬೆನ್ ಕೊನೆಗಾಲದಲ್ಲಿ ತುಂಬ ಚಿಂತಿತರಾಗಿದ್ದರು. ಹೋದ ವರ್ಷ ಅವರು ತೀರಿಕೊಳ್ಳುವ ಕೆಲವೇ ತಿಂಗಳು ಮೊದಲು ಏಪ್ರಿಲ್ ತಿಂಗಳಿನಲ್ಲಿ 'ಸೇವಾ'ದ ಐವತ್ತನೇ ವರ್ಷದ ಕಾರ್ಯಕ್ರಮ ನಡೆದಿತ್ತು. ಆಗ ಮುಂದಿನ ಐವತ್ತು ವರ್ಷ 'ಸೇವಾ'ದ ಧ್ಯೇಯ 'ಸ್ವಚ್ಛ ಆಕಾಶ'ದ ಕುರಿತು ಕೆಲಸ ಮಾಡುವುದು ಆಗಿರಬೇಕು ಎಂದು ಕರೆ ನೀಡಿದ್ದರು. ಅವರ ಕನಸನ್ನು ನನಸು ಮಾಡುವ ದಿಕ್ಕಿನಲ್ಲಿ 'ಸೇವಾ' ಈಗ ಸಾವಯವ ಕೃಷಿ, ಅಡುಗೆಗೆ ಜೈವಿಕ ಅನಿಲ, ಕೃಷಿಯಲ್ಲಿ ಸೌರಶಕ್ತಿ ಬಳಕೆ... ಹೀಗೆ ಹಲವಾರು ಬಗೆಯ ಹಸಿರು ಉಪಕ್ರಮಗಳನ್ನು ಕೈಗೊಳ್ಳುತ್ತಿದೆ.

ಇಳಾಬೆನ್ ಕಳೆದ ನವೆಂಬರ್‌ನಲ್ಲಿ ಭೌತಿಕವಾಗಿ ನಮ್ಮಿಂದ ಅಗಲಿದರು. ಆದರೆ ಅವರು ಕಟ್ಟಿ ಬೆಳೆಸಿದ ಸಂಸ್ಥೆಗಳಲ್ಲಿರುವ ಮಹಿಳೆಯರು ತಮ್ಮೊಳಗೆ ಇಳಾಬೆನ್ ಅವರ ಚೈತನ್ಯವನ್ನು ಕಾಪಿಟ್ಟಿರುವುದು, ನಿತ್ಯದ ಆಗುಹೋಗುಗಳಲ್ಲಿ ಅವರ ಬದುಕಿನ ಮೌಲ್ಯಗಳನ್ನು ಉಸಿರಿನಷ್ಟೇ ಸಹಜವಾಗಿ ಅಳವಡಿಸಿಕೊಂಡಿರುವುದು ಭರವಸೆಯ ಬೆಳಕಾಗಿ ತೋರುತ್ತದೆ.



ಚುರುಮುರಿ



ಎಲ್ಲ ಬದಲಾಗಲಿ!

• ಗುರು ಪಿ.ಎಸ್.

'ದೇಶದ ಹೆಸರೇ ಬದಲಾಗೋ ಟೈಮ್ ಬಂದ್ರೂ ನೀವ್ ಮಾತ್ರ ಬದಲಾಗಲಿಲ್ಲ' ಹೆಂಡತಿಯ ಸುಪ್ರಭಾತ ಶುರುವಾಯಿತು.

'ನೀನೇನ್ ಮಾರಾಯ್ತಿ, ಒಂದೊಂದು ಸಲ ಒಂದೊಂದು ರೀತಿ ಆಡ್ತೀಯ. ನೀವೀಗ ತುಂಬಾ ಬದಲಾಗಿಬಿಟ್ಟಿದೀರ ಅಂತ ಅನ್ನೋಳೂ ನೀನೆ, ಬದಲಾಗಿಲ್ಲ ಅಂತ ಬೈಯ್ಯೋಳೂ ನೀನೆ...' ನಾನೂ ಜಗಳಕ್ಕೆ ಅಣಿಯಾದೆ.

'ಈಗ ನಾನೇ ಹೇಳ್ತಿದೀನಲ್ಲ, ಫಟ್ ಅಂತ ಚೇಂಜ್ ಆಗಿ, ಇಂಡಿಯಾ ಬದಲು ಭಾರತ್ ಆಗ್ತೀರೋ ಥರ' ಆದೇಶಿಸಿದಳು ಮಡದಿ.

'ಹಂಗಂದ್ರೆ, ಇನ್ಮುಂದೆ ನನ್ನ ಹಸ್ಬಂಡ್ ಅನ್ನೋ ಬದಲು ಪತಿದೇವ ಅಂತ ಕರೀತೀಯಾ?'

'ತಲೆಹರಟೆ ಮಾಡಬೇಡ್ರಿ. ಈ ಸುದ್ದಿ ನೋಡಿ, ಎನ್‌ಆರ್‌ಐ ಒಬ್ಬರು ಚಂದ್ರನ ಮೇಲೆ ಎರಡು ಎಕರೆ ಜಾಗ ಖರೀದಿಸಿ, ಅವರ ಇಬ್ಬರು ಹೆಣ್ಣುಮಕ್ಕಳ ಹೆಸರಿಗೆ ರಿಜಿಸ್ಟರ್ ಮಾಡಿಸಿದ್ದಾರಂತೆ. ನಿಮ್ ಮುಸುಡಿಗೆ ಇಲ್ಲೇ ಚಂದ್ರಾ ಲೇಔಟ್‌ನಲ್ಲಿ ಎರಡು ಸೈಟ್ ತಗೊಳೋಕಾಗ್ತಿಲ್ಲ'.

'ಅವರಿಗೆ ಭೂಲೋಕದಲ್ಲಿ ಹೆಂಡ್ತಿ ಕಾಟ ಜಾಸ್ತಿ ಆಗಿತ್ತು ಅನಿಸುತ್ತೆ, ಅದಕ್ಕೇ ಮಕ್ಕಳಿಗೆ ಚಂದ್ರನ ಮೇಲಿನ ಜಾಗ ಕೊಡಿಸಿ, ಅವರೊಂದಿಗೇ ಹೋಗಿ ಅಲ್ಲೇ ಸೆಟ್ಲ್ ಆಗಬೇಕು ಅಂದ್ಕೊಂಡಿರಬೇಕು' ಕಿಚಾಯಿಸಿದೆ.

'ನಾನ್ ಸೀರಿಯಸ್ ಆಗಿ ಹೇಳ್ತಿದೀನಿ ರೀ' ಪತ್ನಿ ಧ್ವನಿ ಬಿರುಸಾಯಿತು.

'ಅಂದ್ರೆ, ಚಂದ್ರನ ಮೇಲಿನ ಜಾಗ ನಾನೂ ಖರೀದಿಸಬೇಕಾ?' ಕಣ್ಣರಳಿಸಿದೆ.

'ಅಲ್ಲ ರೀ, ಇಲ್ಲೇ ಚಂದ್ರಾ ಲೇಔಟ್‌ನಲ್ಲಾದರೂ ತಗೊಳ್ಳಿ'.

'ಬೆಂಗಳೂರಲ್ಲಿ ಸೈಟ್ ತಗೊಳೋಕಿಂತ ಚಂದ್ರನ ಮೇಲಿನ ಜಾಗ ಖರೀದಿಸೋದೇ ಸುಲಭ. ಒಂದ್ ಕೆಲಸ ಮಾಡೋಣ, ನಮ್ಮೂರಲ್ಲಿರೋ ಸೈಟ್‌ನಲ್ಲೇ ಮನೆ ಕಟ್ಟಿಸಿ ಅದಕ್ಕೆ ಚಂದ್ರಲೋಕ ಅಂತ ಹೆಸರಿಡೋಣ'.

'ಹೆಸರು ಮಾತ್ರ ಬದಲಾದರೆ ಏನ್ ಪ್ರಯೋಜನ ರೀ...'

'ನಂದೂ ಅದೇ ಪ್ರಶ್ನೆ ರೀ...' ನಕ್ಕೆ.

ದಿನದ ಟ್ವೀಟ್

ಸುಳ್ಳು ಸುದ್ದಿಯ ಅತಿರೇಕ

ವ್ಯಕ್ತಿಯ ಸಾವಿನ ಬಗ್ಗೆ ನಾಚಿಕೆಯೇ ಇಲ್ಲದೆ ಯಾರಾದರೂ ಸುಳ್ಳು ಸುದ್ದಿಯನ್ನು ಟ್ವೀಟ್ ಮಾಡುವುದು ಹಾಗೂ ಸುದ್ದಿಮಾಧ್ಯಮಗಳು ಅಂತಹ ಅಸಂಬದ್ಧ ಸುದ್ದಿಯ ಸತ್ಯಾಸತ್ಯತೆಯನ್ನು ಪರಿಶೀಲಿಸದೇ ಪ್ರಕಟಿಸುವುದು ಹೇಗೆ ತಾನೇ ಸಾಧ್ಯ?!



ಅನುಷಾ ರವಿ ಸೂದ್, ಪತ್ರಕರ್ತೆ

ಕಿಡಿನುಡಿ

ದ್ವೇಷ ಭಾಷಣವು ಹಿಂದೂಗಳ ವಿರುದ್ಧವೇ ಆಗಿರಲಿ ಅಥವಾ ಮುಸ್ಲಿಮರ ವಿರುದ್ಧವೇ ಆಗಿರಲಿ, ಅದನ್ನು ಮಾಡುವವರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು.



ಮಾರ್ಕಂಡೇಯ ಕಾಟ್ಜು
ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ

25 ವರ್ಷಗಳ ಹಿಂದೆ

ಸೋಮವಾರ, 7-9-1998

• **ಸಮ್ಮಿಶ್ರ ಸರ್ಕಾರ ರಚನೆಗೆ ಕಾಂಗ್ರೆಸ್ ಒಲವು**

ಪಚಾಮರಿ, ಸೆ. 6– ತನ್ನ ಮೂಲತತ್ವಗಳು ಹಾಗೂ ಆದ್ಯತೆಗಳೊಂದಿಗೆ ರಾಜಿ ಮಾಡಿಕೊಳ್ಳದೆ ಮಧ್ಯಂತರ ಅವಧಿಯಲ್ಲಿ ಸಮ್ಮಿಶ್ರ ಸರ್ಕಾರ ರಚಿಸುವುದಕ್ಕೆ ಸಿದ್ಧ ಎಂದು ಕಾಂಗ್ರೆಸ್ ಪಕ್ಷ ಇಂದು ಇಲ್ಲಿ ಸೂಚನೆ ನೀಡುವುದರೊಂದಿಗೆ, ಮೂರು ದಿನಗಳ ಕಾಲ ಜರುಗಿದ ಪಕ್ಷದ ಹಿರಿಯ ಮುಖಂಡರ ವಿಶೇಷ ಅಧಿವೇಶನವು ಮುಕ್ತಾಯಗೊಂಡಿತು.

ಸಂಘ ಪರಿವಾರದ ಸವಾಲುಗಳನ್ನು ಸ್ವೀಕರಿಸಿ ಎಲ್ಲಾ ವಿಧದ ಕೋಮುವಾದದ ವಿರುದ್ಧ ಹೋರಾಟವನ್ನು ಪ್ರಾರಂಭಿಸುವುದಾಗಿ ಅಧಿವೇಶನವು 'ಪಚಾಮರಿ ಘೋಷಣೆ' ಎಂಬ ಹೆಸರಿನ ನಿರ್ಣಯವನ್ನು ಅಂಗೀಕರಿಸಿತು.

• **ಜಪಾನಿ ನಿರ್ದೇಶಕ ಕುರಸೋವಾ ನಿಧನ**

ಟೋಕಿಯೊ, ಸೆ. 6 (ರಾಯಿಟರ್ಸ್)– 'ಸವೆನ್ ಸಮುರಾಯ್' ಹಾಗೂ 'ರಾಷೊಮಾನ್'ನಂಥ ಅದ್ಭುತ ಚಿತ್ರಗಳನ್ನು ನೀಡಿದ ಪ್ರಖ್ಯಾತ ಚಲನಚಿತ್ರ ನಿರ್ದೇಶಕ ಜಪಾನಿನ ಅಕಿರಾ ಕುರಸೋವಾ (88) ಅವರು ಇಂದು ನಿಧನರಾದರು.

ಜಪಾನೀ ಸಿನಿಮಾ ಪ್ರಪಂಚದ 'ದೊರೆ' ಎಂದೇ ಹೆಸರಿಸಲಾದ ಕುರಸೋವಾ ಜಪಾನೀ ಚಲನಚಿತ್ರಗಳನ್ನು ವಿಶ್ವದ ಸಿನಿಮಾ ಸಾಲಿಗೆ ತಂದರು. ಸ್ಟೀವನ್ ಸ್ಪಿಲ್‌ಬರ್ಗ್, ಜಾರ್ಜ್ ಲೂಕಾಸ್ ಮುಂತಾದವರು ಅವರಿಂದ ಪ್ರಭಾವಿತರಾದರು.

50 ವರ್ಷಗಳ ಹಿಂದೆ

ಶುಕ್ರವಾರ, 7-9-1973

• **ನಿಲುವಳಿ ಪ್ರಯತ್ನ ವಿಫಲ; ವಿರೋಧಿ ಸದಸ್ಯರ ಸಭಾತ್ಯಾಗ**

ಬೆಂಗಳೂರು, ಸೆ. 6– ಹಾಸನದಲ್ಲಿ ನಿನ್ನೆ ನಡೆದ ವಿದ್ಯಾರ್ಥಿಗಳ ಮೇಲಿನ ಲಾಠಿ ಪ್ರಯೋಗ ಪ್ರಕರಣದ ಬಗ್ಗೆ ನ್ಯಾಯಾಂಗ ವಿಚಾರಣೆಗೆ ಆಗ್ರಹಿಸಿ ನಿಲುವಳಿ ಸೂಚನೆ ಮಂಡಿಸುವ ಪ್ರಯತ್ನ ವಿಫಲಗೊಂಡಾಗ, 'ಪೊಲೀಸರ ದೌರ್ಜನ್ಯ ಪ್ರತಿಭಟಿಸಿ' ವಿರೋಧ ಪಕ್ಷದ ಸದಸ್ಯರು ವಿಧಾನಸಭೆಯಿಂದ ಹೊರ ನಡೆದರು.

ಪರಿಸ್ಥಿತಿಯ ಸ್ವತಃ ಅಧ್ಯಯನಕ್ಕೆಂದು ಸಭೆಯ ಎರಡೂ ಕಡೆಯ ಸದಸ್ಯರಿರುವ ನಿಯೋಗವೊಂದನ್ನು ಹಾಸನಕ್ಕೆ ಕಳುಹಿಸಬೇಕೆಂಬ ಒತ್ತಾಯಕ್ಕೂ ಸರ್ಕಾರದ ಕಡೆಯಿಂದ ಉತ್ತೇಜಕ ಪ್ರತಿಕ್ರಿಯೆ ಬರದೇ ಹೋದಾಗ ತಾವೇ ಒಂದು ನಿಯೋಗ ಕಳುಹಿಸಲು ವಿರೋಧ ಪಕ್ಷದವರು ನಿರ್ಧರಿಸಿದರು. ನಿಯೋಗ ಈಗಾಗಲೇ ಇಲ್ಲಿಂದ ಹೊರಟಿದ್ದು, ಅದರಲ್ಲಿ ಸಂಸ್ಥಾ ಕಾಂಗ್ರೆಸ್ಸಿನ ಸರ್ವಶ್ರೀ ಎಚ್.ಎಚ್.ಸಿದ್ಧಪ್ಪ, ಹನುಮೇಗೌಡ, ಕಾಗೋಡು ತಿಮ್ಮಪ್ಪ (ಸಮಾಜವಾದಿ) ಮತ್ತು ಎಂ.ಎಸ್. ಕೃಷ್ಣನ್ (ಕಮ್ಯುನಿಸ್ಟ್) ಅವರುಗಳಿದ್ದಾರೆ.

• **ಪ್ರಾಥಮಿಕ ಶಿಕ್ಷಕರ ವರ್ಗದಲ್ಲಿ ಏಕರೀತಿ ತರಲು ಕೆಲವು ಮಾರ್ಗಸೂಚಿ**

ಬೆಂಗಳೂರು, ಸೆ. 6– ಪ್ರಾಥಮಿಕ ಶಾಲಾ ಶಿಕ್ಷಕರ ವರ್ಗಾವಣೆಯಲ್ಲಿ ಏಕರೀತಿ ತರುವ ಸಲುವಾಗಿ ಹಾಗೂ ಅದನ್ನು ಕ್ರಮಗೊಳಿಸಲು 1973ರ ಏಪ್ರಿಲ್ 25ರಂದು ಸರ್ಕಾರ ಕೆಲವು ಮಾರ್ಗಸೂಚಿಗಳನ್ನು ರೂಪಿಸಿದೆ ಎಂದು ಶಿಕ್ಷಣ ಸಚಿವ ಶ್ರೀ ಎ.ಆರ್. ಬದರಿನಾರಾಯಣ ಅವರು ಇಂದು ವಿಧಾನಸಭೆಯಲ್ಲಿ ವರ್ಗಾವಣೆಯನ್ನು ಸಮರ್ಥಿಸಿಕೊಂಡರು.

ಸರ್ಕಾರಿ ನೌಕರರ ವರ್ಗಾವಣೆ ಅನಿವಾರ್ಯ ಎಂದು ಹೇಳಿದ ಸಚಿವರು, ಅನೇಕ ವರ್ಷಗಳಿಂದ ಪ್ರಾಥಮಿಕ ಶಾಲಾ ಶಿಕ್ಷಕರು ಒಂದೇ ಕಡೆ ಉಳಿಯುವುದು ಪಟ್ಟಭದ್ರ ಹಿತಾಸಕ್ತಿಗಳು ಬೆಳೆಯಲು ಕಾರಣವಾಗುತ್ತದೆ. ಮಾರ್ಗಸೂಚಿಯನ್ನು ಅನುಸರಿಸದೇ, ವರ್ಗಾವಣೆಯ ಸಂಬಂಧದಲ್ಲಿ ತಾರತಮ್ಯ ಮಾಡಲಾಗುತ್ತಿದೆ ಎಂಬ ದೂರುಗಳು ಬರುತ್ತಿವೆ ಎಂದರು.

ಸಂಗತ

'ಗ್ಯಾರಂಟಿ': ಮೀಸಲು ನಿಧಿ ಮೇಲೇಕೆ ಕಣ್ಣು?

ಪರಿಶಿಷ್ಟ ಸಮುದಾಯದ ಆರ್ಥಿಕ ಹಿತ ಕಾಯಬೇಕಾದ ಸರ್ಕಾರವು ಗ್ಯಾರಂಟಿ ಯೋಜನೆಗೆ ಅವರ ಮೀಸಲು ನಿಧಿ ಬಳಸುತ್ತಿರುವುದು ಬೇಲಿಯೇ ಎದ್ದು ಹೊಲ ಮೇಯ್ದಂತೆಯೇ ಸರಿ

• ಕೋಟ ಶ್ರೀನಿವಾಸ ಪೂಜಾರಿ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಬಾರಿಯ ತಮ್ಮ ಬಜೆಟ್ ಭಾಷಣದಲ್ಲಿ ಗಿರೀಶ ಕಾರ್ನಾಡರ 'ಯಯಾತಿ' ನಾಟಕದ ಸಾಲುಗಳನ್ನು ಉಲ್ಲೇಖಿಸಿ, 'ಬೆಳಕಿಲ್ಲದ ಹಾದಿಯಲ್ಲಿ ನಡೆಯಬಹುದು. ಆದರೆ ಕನಸುಗಳಿಲ್ಲದ ಹಾದಿಯಲ್ಲಿ ನಡೆಯುವುದೆಂತು' ಎಂದು ಪ್ರಶ್ನಿಸಿದ್ದರು. ಅಲ್ಲದೆ, ಕಾಂಗ್ರೆಸ್ ಪಕ್ಷ ಘೋಷಿಸಿರುವ ಐದು ಗ್ಯಾರಂಟಿಗಳನ್ನು ಭ್ರಷ್ಟಾಚಾರ-ರಹಿತ ಬಿಗಿ ಆರ್ಥಿಕ ನೀತಿ ಜಾರಿಗೊಳಿಸುವ ಮೂಲಕ ಯಥಾವತ್ತಾಗಿ ಅನುಷ್ಠಾನ ಮಾಡುವುದಾಗಿ, ದಲಿತ ಜನಾಂಗವನ್ನು ಮೇಲೆತ್ತಲು ಕ್ರಮ ಜರುಗಿಸುವುದಾಗಿ ವಾಗ್ದಾನ ಮಾಡಿದ್ದರು.

ಇಂತಹ ಕಾರಣಗಳಿಂದ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದವರ ದೃಷ್ಟಿಯಲ್ಲಿ ಸಿದ್ದರಾಮಯ್ಯ ಅವರು ದುರ್ಬಲ ಮತ್ತು ಧ್ವನಿ ಇಲ್ಲದವರ ಪರವಾಗಿ ಇರುವವರು ಎಂಬ ಭಾವನೆ ಇತ್ತು. ಆದರೆ ಈಗ ಅವರ ವಿಷಯದಲ್ಲಿ 'ಎಲ್ಲಾ ಬಣ್ಣವನ್ನು ಒಂದು ಮಸಿ ನುಂಗಿಹಾಕಿತು' ಎಂಬಂತಹ ಅನುಭವವು ರಾಜ್ಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಆಗುತ್ತಿದೆ.

ಯಾವ ಸಿದ್ದರಾಮಯ್ಯನವರು ದಲಿತ ಜನಾಂಗದ ಕಲ್ಯಾಣಕ್ಕೆ ಒತ್ತು ನೀಡುವ ಭರವಸೆ ಮೂಡಿಸಿದ್ದರೋ ಅದೇ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಈಗ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಮೀಸಲು ನಿಧಿಯಲ್ಲಿ ₹ 11,150 ಕೋಟಿಯನ್ನು ತನ್ನ ಗ್ಯಾರಂಟಿ ಯೋಜನೆಗಳಿಗೆ ಬಳಸಿಕೊಳ್ಳಲು ಅರ್ಥಾತ್ ಕಸಿದುಕೊಳ್ಳಲು ಅನುಮತಿ ನೀಡಿದೆ. ಶತಮಾನಗಳಿಂದ ಸಾಮಾಜಿಕ ತುಳಿತಕ್ಕೆ ಒಳಗಾದ ಜನರ ಅಭಿವೃದ್ಧಿಯ ಕನಸಿನ ಮೀಸಲು ನಿಧಿಯನ್ನು ಆ ಸಮುದಾಯದ ಸಹಮತವಿಲ್ಲದೆ ಬಳಸಿಕೊಳ್ಳುವುದು ಸಾಮಾಜಿಕ ನ್ಯಾಯಕ್ಕಾಗಿ ಪರಿತಪಿಸುತ್ತಿರುವ ಜನರಿಗೆ ಮಾಡಿದ ಅನ್ಯಾಯವಲ್ಲದೇ ಮತ್ತೇನು?

ರಾಜ್ಯದ 832 ವಸತಿಸಹಿತ ಇಂಗ್ಲಿಷ್ ಮಾಧ್ಯಮ ಶಾಲೆಗಳು ಸಮಾಜ ಕಲ್ಯಾಣ ಇಲಾಖೆಯ ಮೂಲಕ ನಡೆಯುತ್ತಿವೆ. ಈ ಶಾಲೆಗಳಲ್ಲಿ ಅಲೆಮಾರಿ ಮಕ್ಕಳ ಸಹಿತ ಕಡುಬಡವರ ಸಾವಿರಾರು ಮಕ್ಕಳು ಕಲಿಯುತ್ತಿದ್ದಾರೆ. ಇನ್ನು, ಕಲ್ಯಾಣ ಕರ್ನಾಟಕದ ತೀರಾ ಹಿಂದುಳಿದ ಜಿಲ್ಲೆಗಳಲ್ಲಿ, ಆದಿವಾಸಿಗಳ ಮಕ್ಕಳು ಶಾಲೆಗೆ ಹೋಗುವ ವಯಸ್ಸಿನಲ್ಲಿ ಬಸ್ ನಿಲ್ದಾಣಗಳಲ್ಲಿ ಭಿಕ್ಷೆ ಬೇಡುತ್ತಿರುವುದನ್ನು ಕಣ್ಣಾರೆ ಕಂಡಿದ್ದೇನೆ. ಅಂತಹ ಮಕ್ಕಳ ಶಿಕ್ಷಣಕ್ಕಾಗಿ ಮೀಸಲಿರಿಸಿದ ಹಣವನ್ನು ಸರ್ಕಾರವು ಗ್ಯಾರಂಟಿ ಯೋಜನೆಗೆ ವರ್ಗಾವಣೆ ಮಾಡುತ್ತದೆಂದರೆ ಏನರ್ಥ?

ವಿದೇಶಿ ವ್ಯಾಸಂಗಕ್ಕಾಗಿ ಇರುವ 'ಪ್ರಬುದ್ಧ' ಯೋಜನೆಯಡಿ ಜಗತ್ತಿನ 500 ಆಯ್ದ ಶ್ರೇಷ್ಠ ವಿಶ್ವವಿದ್ಯಾಲಯಗಳಲ್ಲಿ ಕಲಿಯುತ್ತಿರುವವರ ಶಿಕ್ಷಣಕ್ಕೆ ಈ ಮೀಸಲು ನಿಧಿಯೇ ವೆಚ್ಚವಾಗುತ್ತಿದೆ. ಆ ಹಣವನ್ನು ಇತರ ಯೋಜನೆಗೆ ಖರ್ಚು ಮಾಡಿದರೆ ಕಲಿಯುವ ಮಕ್ಕಳ ಭವಿಷ್ಯದ ಕತ್ತು ಹಿಸುಕಿದಂತೆ ಆಗುವುದಿಲ್ಲವೇ?

ಅರೆವೈದ್ಯಕೀಯ ಶಿಕ್ಷಣ, ಮೆಟ್ರಿಕ್‌ಪೂರ್ವ ಮತ್ತು ನಂತರದ ವಿದ್ಯಾರ್ಥಿವೇತನ, ಎಸ್‌ಎಸ್‌ಎಲ್‌ಸಿ ತೇರ್ಗಡೆಯಾದ ಮಕ್ಕಳಿಗೆ ಪ್ರೋತ್ಸಾಹಧನ, ಅಂತರ್ಜಾತಿ ವಿವಾಹ, ಕಾನೂನು ಪದವೀಧರರಿಗೆ ನೆರವು, ದೇವದಾಸಿ ಕುಟುಂಬಗಳ ನಿರ್ವಹಣೆ, ದೌರ್ಜನ್ಯಕ್ಕೆ ಒಳಗಾದ ಸಂತ್ರಸ್ತರಿಗೆ ಪರಿಹಾರ ವಿತರಣೆಯೂ ಸೇರಿದಂತೆ ಸಮಾಜ ಕಲ್ಯಾಣ ಇಲಾಖೆಯ ಹೊಣೆಗಾರಿಕೆ ಬಹುದೊಡ್ಡದು. ಮುಂದಿನ ದಿನಗಳಲ್ಲಿ ಈ ಯೋಜನೆಗಳ ನಿರ್ವಹಣೆಗೆ ಹಣದ ಕೊರತೆ ಕಾಡಲಿದೆ. ಅಂಬೇಡ್ಕರ್, ಭೋವಿ, ಆದಿಜಾಂಬವ, ತಾಂಡ, ಅಲೆಮಾರಿ, ಲಿಡ್ಕರ್‌ನಂತಹ ನಿಗಮ, ಮಂಡಳಿಗಳಿಗೆ ಅನುದಾನವಿಲ್ಲದೆ ಬಡವರ ಕಲ್ಯಾಣ ಕಾರ್ಯಕ್ರಮಗಳು ಸೊರಗಲಿವೆ. ಮೂಲ ಇಲಾಖೆ ಹೊರತುಪಡಿಸಿ, ಇತರ ಇಲಾಖೆಗಳಲ್ಲಿ ಮೀಸಲಿರಿಸಿದ ನಿಧಿಗಳನ್ನು ಗ್ಯಾರಂಟಿ ಯೋಜನೆಗಳಿಗೆ ಕಡಿತಗೊಳಿಸಿದರೆ ಮೂಲ ಉದ್ದೇಶಕ್ಕೆ ಧಕ್ಕೆಯಾಗಲಿದೆ. ಪರಿಶಿಷ್ಟ ಪಂಗಡದ ಶ್ರೇಯೋಭಿವೃದ್ಧಿಗಾಗಿ ರಚಿಸಿದ ವಾಲ್ಮೀಕಿ ನಿಗಮಕ್ಕೂ ಹೊಡೆತ ಬೀಳುತ್ತದೆ.

ನಿರ್ಲಕ್ಷ್ಯಕ್ಕೆ ಒಳಗಾಗಿರುವ ಪರಿಶಿಷ್ಟ ಜಾತಿ ಮತ್ತು ಪಂಗಡದವರ ಕೇರಿ ಅಭಿವೃದ್ಧಿಗಿರಲಿ ಅವರ ಮೂಲ ಬೇಡಿಕೆಯಾದ ಕೃಷಿಗೆ ನೀರುಣಿಸುವ ಕೊಳವೆ ಬಾವಿಗಾಗಲಿ, ಕೋಳಿ, ಕುರಿ, ದನ ಸಾಕಾಣಿಕೆಗಾಗಲಿ, ವಿದ್ಯುತ್ ಸಂಪರ್ಕಕ್ಕಾಗಲಿ, ಹೊಸ ನಿವೇಶನ ಖರೀದಿ, ಮನೆಗಳ ನಿರ್ಮಾಣಕ್ಕಾಗಲಿ ತೀವ್ರ ಹಣದ ಕೊರತೆ ಕಾಡಲಿದೆ. ವ್ಯಾಪಾರಿಗಳಿಗೆ ಕಿರುಸಾಲ ವಿತರಿಸುವ ಯೋಜನೆಗೆ ಅನುದಾನ ಬಿಡುಗಡೆಯಾಗುವುದು ಕಷ್ಟ. ಭೂ ಒಡೆತನಕ್ಕಾಗಿ ಹಂಬಲಿಸುವ ಕಾರಂತರ ಚೋಮನಂತಿರುವ ಕಡುಬಡವರ ಕನಸಿಗೆ ಸಹಜವಾಗಿಯೇ ಕೊಡಲಿಪೆಟ್ಟು ಬೀಳಲಿದೆ.



ಇದರಿಂದ, ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಅವರದೇ ಹಣದಿಂದ ಗ್ಯಾರಂಟಿ ಯೋಜನೆಗಳನ್ನು ಕೊಟ್ಟಂತೆ ಆಗುತ್ತದೆ. ಆಗ, ರಾಜ್ಯದ ಜನಸಂಖ್ಯೆಯಲ್ಲಿ ಶೇ 24.01ರಷ್ಟಿರುವ ದಲಿತ ಜನಾಂಗಕ್ಕೆ ಗ್ಯಾರಂಟಿ ಯೋಜನೆಗಳಿಗಾಗಿ ಸರ್ಕಾರ ಒಂದೇ ಒಂದು ರೂಪಾಯಿಯನ್ನೂ ಖಜಾನೆಯಿಂದ ಬಿಡುಗಡೆ ಮಾಡಿದಂತೆ ಆಗುವುದಿಲ್ಲ. ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕಾಗಿ ಸರ್ಕಾರ ಸುತ್ತಿ ಬಳಸಿ ಬಡವರ ಅದರಲ್ಲೂ ಸಮಾಜದ ಕಟ್ಟಕಡೆಯ ಮನುಷ್ಯರ ಅನ್ನ, ವಿದ್ಯೆ, ಆರೋಗ್ಯದ ಬಟ್ಟಲಿಗೆ ಕೈಯಿಕ್ಕಿರುವುದು ಬೇಲಿಯೇ ಎದ್ದು ಹೊಲ ಮೇಯ್ದಂತೆಯೇ ಸರಿ.

ಹೀಗಿರುವಾಗ, ಶೋಷಿತರ ಹಿತ ಕಾಯುವವರಾರು? ಅಂಬೇಡ್ಕರ್ ಹೀಗೆ ಹೇಳಿದ್ದಾರೆ, 'ನಮ್ಮ ಹಕ್ಕುಗಳನ್ನು ನಮ್ಮ ಕಣ್ಣೆದುರೇ ಕಸಿಯುವಾಗ ಮೌನ ವಹಿಸುವುದು ಪರೋಕ್ಷವಾಗಿ ಅನ್ಯಾಯಕ್ಕೆ ಬೆಂಬಲ ಕೊಟ್ಟಂತೆ'. ಇದೀಗ ನ್ಯಾಯದ ಚೆಂಡು ಮುಖ್ಯಮಂತ್ರಿಯವರ ಅಂಗಳದಲ್ಲಿದೆ.

ಲೇಖಕ: ವಿಧಾನ ಪರಿಷತ್ ಬಿಜೆಪಿ ಸದಸ್ಯ
ಸಮಾಜ ಕಲ್ಯಾಣ ಖಾತೆಯ ಮಾಜಿ ಸಚಿವ
ಲೇಖನದ ಪೂರ್ಣಪಾಠ prajavani.net
'ಅಭಿಮತ' ವಿಭಾಗದಲ್ಲಿ

ವಾಚಕರ ವಾಣಿ

ಪ್ರೌಢಶಾಲಾ ಶಿಕ್ಷಕರ ನೇಮಕಾತಿ ಎಂದು?

ಸರ್ಕಾರಿ ಪ್ರೌಢಶಾಲೆಗಳಿಗೆ 2014ರಿಂದ ಶಿಕ್ಷಕರ ನೇಮಕವಾಗಿಲ್ಲ. ಅಲ್ಲಿನ ಅರ್ಧಕ್ಕರ್ಧ ಹುದ್ದೆಗಳು ಖಾಲಿಯಿವೆ. ಈ ಕಾರಣದಿಂದ ಸರ್ಕಾರಿ ಪ್ರೌಢಶಾಲೆಗಳ ಶಿಕ್ಷಣದ ಗುಣಮಟ್ಟ ಕುಸಿಯುತ್ತಿದೆ. ಅಂದಿನಿಂದ ಇಂದಿನವರೆಗೆ ರಾಜ್ಯದ ಮೂರೂ ಪ್ರಮುಖ ಪಕ್ಷಗಳು ಅಧಿಕಾರ ನಡೆಸಿವೆ. ಈ ಅವಧಿಯಲ್ಲಿ ಸಿದ್ದರಾಮಯ್ಯ, ಎಚ್.ಡಿ.ಕುಮಾರಸ್ವಾಮಿ, ಯಡಿಯೂರಪ್ಪ ಹಾಗೂ ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಗಳಾಗಿ ಆಡಳಿತ ನಡೆಸಿದ್ದಾರೆ.

ಪ್ರತಿವರ್ಷ ಅಥವಾ ಎರಡು ವರ್ಷಗಳಿಗೊಮ್ಮೆ ಪ್ರೌಢಶಾಲಾ ಶಿಕ್ಷಕರ ನೇಮಕಾತಿ ನಡೆಯುವ ಪರಂಪರೆಯಿತ್ತು. ಆದರೆ ಇಷ್ಟು ಸುದೀರ್ಘ ಅವಧಿಗೆ ನೇಮಕಾತಿ ನಡೆಯದಿರುವುದು ಅತ್ಯಂತ ದುರದೃಷ್ಟಕರ. ಶಿಕ್ಷಕರ ನೇಮಕಾತಿಗೆ ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಬೇಕು. ಇದರಿಂದ ನಿರುದ್ಯೋಗಿಗಳಿಗೆ ಉದ್ಯೋಗ ದೊರಕುವುದಲ್ಲದೆ ಶಾಲೆಗಳಿಗೆ ಹೆಚ್ಚಿನ ಅನುಕೂಲ ಆಗುತ್ತದೆ.

ಗಿರೀಶ್ ಮತ್ತೇರ, ಯರಗಟ್ಟಿಹಳ್ಳಿ, ಚನ್ನಗಿರಿ

ಧಾರ್ಮಿಕ ಸಂಘರ್ಷದ ಹೇಳಿಕೆ ಖಂಡನೀಯ

ಸನಾತನ ಧರ್ಮವನ್ನು ಡೆಂಗಿ, ಮಲೇರಿಯಾ ರೀತಿಯೇ ನಿರ್ಮೂಲ ಮಾಡಬೇಕು ಎಂಬ ತಮಿಳುನಾಡು ಸಚಿವ ಉದಯನಿಧಿ ಸ್ಟಾಲಿನ್ ಅವರ ಹೇಳಿಕೆ ವಿಷಾದಕರ. ಜವಾಬ್ದಾರಿಯುತ ಸ್ಥಾನದಲ್ಲಿ ಇರುವವರು ಇನ್ನೊಬ್ಬರ ಭಾವನೆಗಳಿಗೆ ನೋವಾಗುವಂಥ ಹೇಳಿಕೆ ನೀಡಬಾರದು. ಪ್ರತಿಯೊಬ್ಬ ಪ್ರಜೆಗೂ ತನ್ನ ಧರ್ಮವೇ ಶ್ರೇಷ್ಠ ಎಂಬ ಭಾವನೆ ಇರುತ್ತದೆ. ಇದು ತಪ್ಪಲ್ಲ. ಹೀಗಿರುವಾಗ, ಗಣ್ಯ ವ್ಯಕ್ತಿಯೊಬ್ಬರು ತಮ್ಮ ತುಷ್ಟೀಕರಣ ರಾಜಕಾರಣಕ್ಕಾಗಿ ಇಂತಹ ಹೇಳಿಕೆ ನೀಡಿರುವುದು ಖಂಡನೀಯ.

ಸರ್ವಧರ್ಮ ಸಹಬಾಳ್ವೆಯ ಈ ನೆಲದಲ್ಲಿ, ಧರ್ಮವೊಂದರ ನಿರ್ಮೂಲನೆ ಮತ್ತು ನಾಶಕ್ಕೆ ಕರೆ ಕೊಡುವುದು ಸಹ ತಪ್ಪು ಎಂಬುದನ್ನು ನೆನಪಿಟ್ಟುಕೊಳ್ಳಬೇಕು. ಯಾವುದೇ ಧರ್ಮವು ಸಮಾಜದಲ್ಲಿ ಜನರ ನಡುವೆ ಸದಾಕಾಲ ಇರುವಂತಹದ್ದು. ಎಲ್ಲರಿಗೂ ಸುಖವನ್ನು ಬಯಸುವುದು ಪ್ರತಿಯೊಂದು ಧರ್ಮದ ಮೂಲವಾಗಿದೆ. ಹೀಗಿರುವಾಗ ಧರ್ಮಸಂಘರ್ಷಕ್ಕೆ ಎಡೆ ಮಾಡಿಕೊಡುವಂತಹ ಹೇಳಿಕೆಗಳು ದೇಶಕ್ಕೆ ಹಾಗೂ ಪ್ರಜಾಪ್ರಭುತ್ವಕ್ಕೆ ಮಾರಕವಾಗುತ್ತವೆ. ಉದಯನಿಧಿ ಸೇರಿದಂತೆ ಸಮಾಜದ ಎಲ್ಲಾ ಜನಪ್ರತಿನಿಧಿಗಳು ಪಕ್ಷಾತೀತವಾಗಿ ನಮ್ಮ ಸಂವಿಧಾನವನ್ನು ಪಾಲನೆ ಮಾಡಬೇಕಾದದ್ದು ಆದ್ಯ ಕರ್ತವ್ಯ.

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

ಹಿಂದಿ ಹೇರಿಕೆಗೆ ಇನ್ನಿಲ್ಲದ ಕಸರತ್ತು

ಜಿ20 ಶೃಂಗಸಭೆಯ ಭೋಜನಕೂಟದ ಆಮಂತ್ರಣ ಪತ್ರಿಕೆಯಲ್ಲಿ 'ಪ್ರೆಸಿಡೆಂಟ್ ಆಫ್ ಇಂಡಿಯಾ' ಬದಲಿಗೆ 'ಪ್ರೆಸಿಡೆಂಟ್ ಆಫ್ ಭಾರತ್' ಎಂದು ಮುದ್ರಿಸಿರುವುದು ಈಗ ಚರ್ಚೆಯಲ್ಲಿದೆ. ಇಂಡಿಯಾವೇ ಬೇರೆ, ವಿರೋಧ ಪಕ್ಷಗಳ ಮೈತ್ರಿಕೂಟವಾದ I.N.D.I.A.ವೇ ಬೇರೆ. ಹೀಗಿರುವಾಗ ಈ ದಿಢೀರ್ ಬದಲಾವಣೆ ಏಕೆ? ಇದೇನೇ ಇರಲಿ, ಭಾರತವನ್ನು ಹಿಂದೀಕರಣ ಮಾಡಲಾಗುತ್ತಿದೆಯೇನೋ ಎನ್ನುವ ಬಲವಾದ ಗುಮಾನಿ ಕಾಡುತ್ತಿದೆ.

ಆಕಾಶವಾಣಿಯಲ್ಲಿ ಇಂಗ್ಲಿಷ್ ಭಾಷೆಯಲ್ಲಿ ಸುದ್ದಿ ಪ್ರಸಾರ ಮಾಡುವಾಗ 'ದಿಸ್ ಈಸ್ ಆಲ್ ಇಂಡಿಯಾ ರೇಡಿಯೊ' ಎಂದೇ ಇತ್ತೀಚಿನವರೆಗೂ ವಾರ್ತಾ ವಾಚಕರು ಹೇಳುತ್ತಿದ್ದರು. ಆದರೆ ಇತ್ತೀಚೆಗೆ ಇದ್ದಕ್ಕಿದ್ದಂತೆ ಅದನ್ನು 'ದಿಸ್ ಈಸ್ ಆಕಾಶವಾಣಿ' ಎಂದು ಬದಲಾಯಿಸಿದ್ದಾರೆ. ರಾಷ್ಟ್ರೀಯ ಹಬ್ಬಗಳಂದು ರಾಷ್ಟ್ರಪತಿ ಅಥವಾ ಪ್ರಧಾನಿ ಅವರು ರಾಷ್ಟ್ರವನ್ನುದ್ದೇಶಿಸಿ ಭಾಷಣ ಮಾಡುವಾಗ ಮೊದಲು ಹಿಂದಿಯಲ್ಲಿ, ನಂತರ ರಾಷ್ಟ್ರದ ಹಿಂದಿಯೇತರ ಜನರಿಗೂ ತಿಳಿಯಲಿ ಎಂಬ ಕಾರಣಕ್ಕೆ ಇಂಗ್ಲಿಷ್‌ನಲ್ಲಿ ಮಾತನಾಡುತ್ತಿದ್ದರು. ಆದರೆ ಈಚಿನ ವರ್ಷಗಳಲ್ಲಿ ಇಂಗ್ಲಿಷ್ ಭಾಷಣಕ್ಕೆ ತಿಲಾಂಜಲಿ ನೀಡಲಾಗಿದೆ. ಹಿಂದಿ ಹೇರಿಕೆಗೆ ಇನ್ನಿಲ್ಲದ ಕಸರತ್ತು ನಡೆಸಲಾಗುತ್ತಿದೆ. ಇದಕ್ಕೆ ಕಡಿವಾಣ ಹಾಕಬೇಕು.

ಮುಳ್ಳೂರು ಪ್ರಕಾಶ್, ಮೈಸೂರು

ಲೈಂಗಿಕ ಅಲ್ಪಸಂಖ್ಯಾತರ ವರ್ತನೆ ಬದಲಾಗಲಿ

ಮದುವೆ, ಗೃಹಪ್ರವೇಶದಂತಹ ಸಮಾರಂಭಗಳಲ್ಲಿ ದಿಢೀರನೆ ಪ್ರತ್ಯಕ್ಷವಾಗಿ, ಬಲವಂತದಿಂದ ಹಣ ವಸೂಲಿ ಮಾಡುವ ಲೈಂಗಿಕ ಅಲ್ಪಸಂಖ್ಯಾತರು ನೀಡುವ ಕಿರುಕುಳದ ಬಗ್ಗೆ ನಾನು ಬರೆದ ಪತ್ರಕ್ಕೆ ರಾಸುಮ ಭಟ್ ಅವರು ಪ್ರತಿಕ್ರಿಯಿಸಿ (ವಾ.ವಾ., ಸೆ. 5), ಲೈಂಗಿಕ ಅಲ್ಪಸಂಖ್ಯಾತರಿಗೆ ಶಾಶ್ವತ ನೆಲೆ ಕಲ್ಪಿಸುವುದು ಸರ್ಕಾರ ಮತ್ತು ಸಮಾಜದ ಕರ್ತವ್ಯ ಎಂದು ಹೇಳಿದ್ದಾರೆ. ಈ ದಿಸೆಯಲ್ಲಿ ನಾವು ಮಾಡಿದ ಪ್ರಾಯೋಗಿಕ ಪ್ರಯತ್ನವೊಂದನ್ನು ಹೇಳಬಯಸುತ್ತೇನೆ. ಕೆಲ ದಿನಗಳ ಹಿಂದೆ ಇಬ್ಬರು ಲೈಂಗಿಕ ಅಲ್ಪಸಂಖ್ಯಾತರನ್ನು ಹೋಟೆಲೊಂದರಲ್ಲಿ ಹೌಸ್‌ಕೀಪಿಂಗ್ ಕೆಲಸಕ್ಕೆ ಸೇರಿಸಿದೆವು. ಅವರು ಎರಡು ದಿನ ಕೆಲಸ ಮಾಡಿ, 'ಇದು ನಮ್ಮಿಂದ ಆಗುವ ಕೆಲಸವಲ್ಲ' ಎಂದು ಹೇಳಿ, ಮತ್ತೆ ತಮ್ಮ ಹಳೆಯ ವಸೂಲಿ ಜಾಗಕ್ಕೇ ಮರಳಿದರು.

ಸಮಾಜದ ಮುಖ್ಯವಾಹಿನಿಗೆ ಬರುವಂತೆ ಇವರ ಮನಃಸ್ಥಿತಿಯಲ್ಲಿ ಮೊದಲು ಬದಲಾವಣೆ ಆಗಬೇಕು. ಅಲ್ಲದೆ, ಇವರು ಶ್ರಮವಹಿಸಿ ದುಡಿಯುವ ಅಭ್ಯಾಸ ಮಾಡಿಕೊಳ್ಳಬೇಕು. ಇವರಲ್ಲಿ ಹೆಚ್ಚಿನವರಿಗೆ ಅಂತಹ ಅಭ್ಯಾಸ ಇದ್ದಂತೆ ಇಲ್ಲ. ಅಂತಹವರನ್ನು ಸುಲಭವಾಗಿ ಸರಿದಾರಿಗೆ ತರಲು ಸಾಧ್ಯವಿಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಇವರ ಸಾರ್ವಜನಿಕ ನಡವಳಿಕೆಗಳು ಬದಲಾಗಬೇಕು.

ಬೂಕನಕೆರೆ ವಿಜೇಂದ್ರ, ಮೈಸೂರು

ವಂದೇಭಾರತ್: ಆಗಲಿ ಅನುಕೂಲಸ್ನೇಹಿ

ನೈರುತ್ಯ ರೈಲ್ವೆಯಿಂದ, ಬೆಂಗಳೂರು-ಕಲಬುರಗಿ-ಬೆಂಗಳೂರು ವಂದೇಭಾರತ್ ರೈಲು ಸೇವೆ ಆರಂಭವಾಗಲಿದೆ ಎಂಬ ಸುದ್ದಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಇದು ನಿಜವಾಗಲಿ ಎಂಬುದು ಬಹುಜನರ ಹಾರೈಕೆ. ಹಾಗೇನಾದರೂ ಈ ರೈಲು ಆರಂಭವಾದರೆ, ಬೆಳಿಗ್ಗೆ ಬೆಂಗಳೂರಿನಿಂದ ಕಲಬುರಗಿಗೆ ಹೊರಡುವ ಬದಲು, ಕಲಬುರಗಿಯಿಂದ ಬೆಳಿಗ್ಗೆ ಹೊರಟು ಬೆಂಗಳೂರು ತಲುಪಿ, ಅಲ್ಲಿಂದ ಸಂಜೆ ಹೊರಟು ರಾತ್ರಿ ಕಲಬುರಗಿಗೆ ಬರುವಂತಾದರೆ ಹಲವರಿಗೆ ಅನುಕೂಲವಾಗುತ್ತದೆ.

ವೆಂಕಟೇಶ ಮುದಗಲ್, ಕಲಬುರಗಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಜಿ–20 ಶೃಂಗಸಭೆಯ ಪ್ರತಿನಿಧಿಗಳಿಗೆ ಆಯೋಜಿಸಿರುವ ಭೋಜನಕೂಟದ ಆಹ್ವಾನ ಪತ್ರಿಕೆಯಲ್ಲಿ ರಾಷ್ಟ್ರಪತಿ ಅವರನ್ನು 'ಪ್ರೆಸಿಡೆಂಟ್ ಆಫ್ ಭಾರತ್' ಎಂದು ಸಂಬೋಧಿಸಿರುವುದು ಹೊಸ ಚರ್ಚೆಯನ್ನು ಹುಟ್ಟುಹಾಕಿದೆ. ಕೇಂದ್ರ ಸರ್ಕಾರವು 'ಇಂಡಿಯಾ' ಎಂಬುದನ್ನು ತೆಗೆದುಹಾಕಲು ಯತ್ನಿಸುತ್ತಿದೆ ಎಂದು ವಿರೋಧ ಪಕ್ಷಗಳು ಆರೋಪಿಸಿವೆ. ಇದಕ್ಕೆ, ಹೆಸರನ್ನು ಬದಲಿಸುವ ಯೋಚನೆ ಇಲ್ಲ ಕೇಂದ್ರ ಸಚಿವ ಅನುರಾಗ್ ಸಿಂಗ್ ಠಾಕೂರ್ ಪ್ರತಿಕ್ರಿಯೆ ನೀಡಿದ್ದಾರೆ. ದೇಶದ ಸಂವಿಧಾನದಲ್ಲಿ 'ಇಂಡಿಯಾ, ಅಂದರೆ ಭಾರತ' ಎಂದು ಹೇಳಲಾಗಿದೆ. ಜನಸಾಮಾನ್ಯರಾದಿಯಾಗಿ ಎಲ್ಲರೂ ಇಂಡಿಯಾ ಅಥವಾ ಭಾರತ ಯಾವುದನ್ನಾದರೂ ಬಳಸಬಹುದು ಎಂದು ಸುಪ್ರೀಂ ಕೋರ್ಟ್ ಈಗಾಗಲೇ ಹಲವು ಬಾರಿ ಹೇಳಿದೆ. ಆದರೆ, ದೇಶದ ಕರಡು ಸಂವಿಧಾನದಲ್ಲಿ 'ಭಾರತ' ಎಂಬ ನಾಮಪದವೇ ಇರಲಿಲ್ಲ. ನಂತರ ನಡೆದ ಕರಡು ಸಂವಿಧಾನದ ಚರ್ಚೆಯ ಸಂದರ್ಭದಲ್ಲಿ 'ಭಾರತ' ಎಂಬ ನಾಮಪದವನ್ನು ಸೇರಿಸುವ ಸಂಬಂಧ ಸಂವಿಧಾನ ರಚನಾ ಸಭೆಯಲ್ಲಿ ನಡೆದ ಚರ್ಚೆಯೇ ಸ್ವಾರಸ್ಯಕರವಾಗಿದೆ

'ಇಂಡಿಯಾ, ಅಂದರೆ ಭಾರತ...'

• ಜಯಸಿಂಹ ಆರ್.

ಬ್ರಿಟಿಷರ ಆಳ್ವಿಕೆಯಿಂದ ಸ್ವತಂತ್ರಗೊಂಡ ಭಾರತಕ್ಕೆ ಹೊಸ ಸರ್ಕಾರ, ಸಂವಿಧಾನದ ಅವಶ್ಯಕತೆ ಇತ್ತು. ಬ್ರಿಟಿಷರ ವಿರುದ್ಧ ಶತಮಾನಕ್ಕೂ ಹೆಚ್ಚುಕಾಲ ಹೋರಾಡಿ ಸ್ವಾತಂತ್ರ್ಯ ಪಡೆದ ಭಾರತಕ್ಕೆ, ಸ್ವಾತಂತ್ರ್ಯ ಪಡೆದಾಗ 'ಭಾರತ' ಎಂಬ ಹೆಸರೇ ಇರಲಿಲ್ಲ ಎಂಬುದು ಅತ್ಯಂತ ಕುತೂಹಲಕಾರಿ ವಿಷಯ. ಇಲ್ಲಿ ವಸಾಹತು ಸ್ಥಾಪಿಸಿದ್ದ ಐರೋಪ್ಯ ದೇಶಗಳೆಲ್ಲವೂ, ಭಾರತವನ್ನು 'ಇಂಡಿಯಾ' ಎಂದೇ ಕರೆಯುತ್ತಿದ್ದವು. ಮೊದಲು ಈಸ್ಟ್ ಇಂಡಿಯಾ ಕಂಪನಿ ವಿರುದ್ಧ, ನಂತರ ಬ್ರಿಟನ್ ವಿರುದ್ಧ ಭಾರತೀಯರು ಹೋರಾಡಿ ಸ್ವಾತಂತ್ರ್ಯ ಪಡೆದುಕೊಂಡರು. ಅಂತೆಯೇ ಸಂವಿಧಾನವನ್ನು ರೂಪಿಸಿಕೊಳ್ಳುವ ಸಲುವಾಗಿ ಸಂವಿಧಾನ ಕರಡು ರಚನಾ ಸಮಿತಿಯನ್ನು ರಚಿಸಲಾಯಿತು. ಆ ಸಮಿತಿಗೆ ಬಿ.ಆರ್.ಅಂಬೇಡ್ಕರ್ ನಾಯಕರಾಗಿದ್ದರು. ಆ ಸಮಿತಿಯು ಕರಡು ಸಂವಿಧಾನವನ್ನು ಸಂವಿಧಾನ ರಚನಾ ಸಭೆಯ ಮುಂದಿರಿಸಿತು. ಆ ಕರಡು ಸಂವಿಧಾನದಲ್ಲಿ ಭಾರತ ಎಂಬ ನಾಮಪದವೇ ಇರಲಿಲ್ಲ. ಅದರಲ್ಲಿ ದೇಶವನ್ನು 'ಇಂಡಿಯಾ' ಎಂದೇ ಉಲ್ಲೇಖಿಸಲಾಗಿತ್ತು. 1ನೇ ವಿಧಿಯನ್ನು 'ಡಿಸ್‌ಕ್ರಿಪ್ಷನ್ ಆಫ್ ಇಂಡಿಯಾ' ಎಂದು ಹೆಸರಿಸಲಾಗಿತ್ತು ಮತ್ತು ಈ ವಿಧಿಯ ಉದ್ದಕ್ಕೂ 'ಇಂಡಿಯಾ' ಎಂದಷ್ಟೇ ಉಲ್ಲೇಖಿಸಲಾಗಿತ್ತು. ಇಂಡಿಯಾ ಎಂಬುದರ ಜತೆಗೆ ಭಾರತ ಎಂಬ ನಾಮಪದವನ್ನೂ ಬಳಸಬಹುದು ಎಂಬುದನ್ನು ಮೊದಲು ಪ್ರಸ್ತಾಪಿಸಿದ್ದು ಅಂಬೇಡ್ಕರ್ ಅವರೇ.


1949ರ ಸೆಪ್ಟೆಂಬರ್ 17ರಂದು ನಡೆದ ಸಂವಿಧಾನ ರಚನಾ ಸಭೆಯಲ್ಲಿ ಅಂಬೇಡ್ಕರ್ ಅವರು ಒಂದು ತಿದ್ದುಪಡಿಯನ್ನು ಮಂಡಿಸಿದ್ದರು. ಆ ತಿದ್ದುಪಡಿಯ ಸಂಖ್ಯೆ 130. ಆ ತಿದ್ದುಪಡಿಯಲ್ಲಿ ಅವರು, 1ನೇ ವಿಧಿಗೆ 'ಇಂಡಿಯಾ, ಅಂದರೆ ಭಾರತ. ಅದು ರಾಜ್ಯಗಳ ಒಕ್ಕೂಟವಾಗಬೇಕು' ಎಂಬುದನ್ನು ಸೇರಿಸಬೇಕು ಎಂದು ಪ್ರತಿಪಾದಿಸಿದ್ದರು. ಆದರೆ ಅಂದೇ ಅದು ಚರ್ಚೆಗೆ ಬರಲಿಲ್ಲ. ತಿದ್ದುಪಡಿಯನ್ನು ಮಂಡಿಸಿದಾಗ ಅದಾಗಲೇ ಸಂಜೆಯಾಗಿದ್ದ ಕಾರಣ, ಚರ್ಚೆಯನ್ನು ಮರುದಿನಕ್ಕೆ ಮುಂದೂಡಲಾಗಿತ್ತು. ಮರುದಿನ, ಅಂದರೆ 1949ರ ಸೆಪ್ಟೆಂಬರ್ 18ರಂದು ಆ ತಿದ್ದುಪಡಿಯನ್ನು ಚರ್ಚೆಗೆ ಎತ್ತಿಕೊಳ್ಳಲಾಯಿತು. ಎಚ್.ವಿ.ಕಾಮತ್ ಅವರು ಅಂಬೇಡ್ಕರ್ ಅವರ ತಿದ್ದುಪಡಿಗೇ, ಒಂದು ತಿದ್ದುಪಡಿಯನ್ನು ಮಂಡಿಸಿದರು. 'ಹಿಂದ್, ಅಂದರೆ ಇಂಗ್ಲಿಷ್ ಭಾಷೆಯಲ್ಲಿ ಇಂಡಿಯಾ, ಅದು ರಾಜ್ಯಗಳ ಒಕ್ಕೂಟವಾಗಿರಬೇಕು' ಎಂಬುದು ಆ ತಿದ್ದುಪಡಿಯಾಗಿತ್ತು.


ಆದರೆ, ಅವರು ತಾವು ಪ್ರಸ್ತಾಪಿಸಿದ ತಿದ್ದುಪಡಿಯ ಮೇಲೆ ಮಾತನಾಡುತ್ತಾ, 'ಒಂದು ಮಗು ಹುಟ್ಟಿದಾಗ, ಅದಕ್ಕೆ ಹೊಸ ಹೆಸರಿಡಲಾಗುತ್ತದೆ. ಅದುವೇ ನಾಮಕರಣ. ದೇಶವೂ ಈಗ ಬ್ರಿಟಿಷರಿಂದ ಸ್ವತಂತ್ರಗೊಂಡು ಹುಟ್ಟುಪಡೆದಿದೆ. ಅದಕ್ಕೆ ನಾಮಕರಣ ಮಾಡುವ ಅವಶ್ಯಕತೆ ಇದೆ. ಈ ನೆಲವನ್ನು ಪುರಾಣಗಳಲ್ಲಿ, ವಿದೇಶಿ ಪ್ರವಾಸಿಗರ ಬರಹಗಳಲ್ಲಿ ಹಿಂದ್, ಹಿಂದುಸ್ತಾನ್, ಭಾರತ, ಭರತವರ್ಷ, ಭರತಖಂಡ, ಭರತಭೂಮಿ ಎಂದೆಲ್ಲಾ ಕರೆಯಲಾಗಿದೆ. ಭಾರತ ಎಂಬುದು ಈ ನೆಲಕ್ಕೆ ನಾವು ನೀಡಬಹುದಾದ ಅತ್ಯಂತ ಪ್ರಾಚೀನವಾದ ಹೆಸರು ಮತ್ತು ಅದು ಸೂಕ್ತವೂ ಹೌದು' ಎಂದು ಹೇಳಿದ್ದರು. ಅವರ ಮಾತನ್ನು ಅರ್ಧದಲ್ಲೇ ನಿಲ್ಲಿಸಿದ್ದ ಅಂಬೇಡ್ಕರ್ ಅವರು, 'ಭಾರತ ಎಂಬುದನ್ನು ಒಪ್ಪಿಕೊಳ್ಳುವುದಾದರೆ, ಇನ್ನೊಂದು ಹೆಸರನ್ನು (ಹಿಂದ್) ಏಕೆ ಪ್ರಸ್ತಾಪಿಸುತ್ತಿದ್ದೀರಿ' ಎಂದು ಪ್ರಶ್ನಿಸಿದ್ದರು. ಅದಕ್ಕೆ ಪ್ರತಿಕ್ರಿಯಿಸಿದ್ದ ಕಾಮತ್ ಅವರು, 'ಒಂದು ಹೆಸರನ್ನು ಒಪ್ಪಿಕೊಳ್ಳದಿದ್ದರೆ, ಅದಕ್ಕೆ ಪರ್ಯಾಯವಾಗಿ ಇನ್ನೊಂದು ಇರಲಿ ಎಂದಷ್ಟೆ. ನಾನು ಭಾರತ ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಆದರೆ, 'ಇಂಡಿಯಾ, ಎಂಬುದನ್ನು ಭಾರತ ಎನ್ನಬೇಕು' ಎಂದು ತಿದ್ದುಪಡಿ ಮಾಡಬೇಕು' ಎಂದು ಪ್ರತಿಪಾದಿಸಿದ್ದರು.

ಚರ್ಚೆಯ ನಂತರದ ಹಂತಗಳಲ್ಲಿ ಮಾತನಾಡಿದ್ದ ಸೇಠ್ ಗೋವಿಂದ್ ದಾಸ್, ಇಂಡಿಯಾ ಎಂಬುದನ್ನು ನಮ್ಮ ಯಾವ ಪುರಾಣಗಳಲ್ಲೂ ಉಲ್ಲೇಖಿಸಿಲ್ಲ. ಋಗ್ವೇದದಲ್ಲಿ 'ಇದ್ಯಂ' ಮತ್ತು 'ಇದನ್ಯಃ' ಎಂಬ ಪ್ರಯೋಗಗಳಿವೆ. ಆದರೆ ಅವು ಇಂಡಿಯಾ ಎಂಬುದಕ್ಕೆ ಸಂಬಂಧಿಸಿದ್ದಲ್ಲ. ಇಂಡಿಯಾ ಎಂಬುದು ನಮ್ಮ ಪ್ರಾಚೀನ ಕೃತಿಗಳಲ್ಲಿ ಎಲ್ಲಿಯೂ ಇಲ್ಲ. ಗ್ರೀಕರು ಇಲ್ಲಿಗೆ ಬಂದ ನಂತರವಷ್ಟೇ ಇಂಡಿಯಾ ಎಂಬುದು ಬಂದಿತು. ನಮ್ಮ ಸಿಂಧೂ ನದಿಯನ್ನು ಅವರು ಇಂಡಸ್ ಎಂದು ಕರೆದರು. ಇಂಡಿಯಾ ಎಂಬುದು ಇಂಡಸ್ ಎಂಬ ಪದದಿಂದ ಬಂದಿದೆ. ವಿಷ್ಣು ಪುರಾಣ, ಬ್ರಹ್ಮ ಪುರಾಣ, ವಾಯುಪುರಾಣಗಳಲ್ಲಿ ಭಾರತ, ಭಾರತಂ ಎಂದು ಕರೆಯಲಾಗಿದೆ. ಚೀನಾ ಪ್ರವಾಸಿ ಹ್ಯೂಯೆನ್–ತ್ಸಾಂಗ್ ಸಹ ಭಾರತ ಎಂದೇ ಕರೆದಿದ್ದಾನೆ. ಹೀಗಾಗಿ ಅಂಬೇಡ್ಕರ್ ಅವರು ಪ್ರಸ್ತಾಪಿಸಿರುವ ತಿದ್ದುಪಡಿಯನ್ನು ಬದಲಿಸಬೇಕು. 'ಭಾರತ, ವಿದೇಶಗಳಲ್ಲಿ ಇಂಡಿಯಾ ಎಂದೂ ಹೆಸರಾಗಿರುವ' ಎಂಬುದು ಆ ತಿದ್ದುಪಡಿಯಾಗಿರಬೇಕು ಎಂದು ಅವರು ಪ್ರತಿಪಾದಿಸಿದ್ದರು.

ಕಮಲಪತಿ ತ್ರಿಪಾಠಿ ಅವರು, 'ಇಂಡಿಯಾ ಎಂಬುದು ಮೊದಲು ಬರುವುದರ ಬದಲಿಗೆ, ಭಾರತ ಎಂಬುದು ಮೊದಲು ಬರಬೇಕು. ಇದಕ್ಕಾಗಿ ತಿದ್ದುಪಡಿಯನ್ನು 'ಭಾರತ, ಇಂಗ್ಲಿಷ್ ಭಾಷೆಯಲ್ಲಿ ಇಂಡಿಯಾ ಎನ್ನಲಾಗುವ' ಎಂದು ಬದಲಿಸಬೇಕು' ಎಂದು ತಿದ್ದುಪಡಿಯನ್ನು ಸೂಚಿಸಿದರು. ಅಂದಿನ ಸಭೆಯಲ್ಲೇ ಸೇಠ್ ಗೋವಿಂದ್ ದಾಸ್, ಕಮಲಪತಿ ತ್ರಿಪಾಠಿ, ಎಚ್.ವಿ.ಕಾಮತ್ ಅವರ ನಿರ್ಣಯಗಳನ್ನು ಮತಕ್ಕೆ ಹಾಕಲಾಯಿತು. ಆ ಎಲ್ಲಾ ನಿರ್ಣಯಗಳು ಅಗತ್ಯ ಮತಗಳನ್ನು ಪಡೆಯಲು ವಿಫಲವಾದವು. ಕೊನೆಗೆ ಅಂಬೇಡ್ಕರ್ ಅವರು ಸೂಚಿಸಿದ್ದ 130ನೇ ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

ಆ ಪ್ರಕಾರ ಸಂವಿಧಾನದ 1ನೇ ವಿಧಿಗೆ 1ನೇ ಉಪವಿಧಿಯನ್ನು ಸೇರಿಸಲಾಯಿತು. ಅದು 'ಇಂಡಿಯಾ, ಅಂದರೆ ಭಾರತ. ಅದು ರಾಜ್ಯಗಳ ಒಕ್ಕೂಟವಾಗಬೇಕು' ಎಂದಾಯಿತು.





Article 1 — 3. Description of India.—In article 1 of the Draft, India has been described as a Union of States. For uniformity the Committee has thought it desirable to describe the Units of the Union in the new Constitution as States, whether they are known at present as Governors' Provinces, or Chief Commissioners' Provinces or Indian States. Some difference between the Units there will undoubtedly remain even in the new Constitution; and in order to mark this difference, the Committee has divided the States into three classes: those enumerated in Part I of the First Schedule, those enumerated in Part II, and those enumerated in Part III. These correspond respectively to the existing Governors' Provinces, Chief Commissioners' Provinces and Indian States.

ಕರಡು ಸಂವಿಧಾನದ 1ನೇ ವಿಧಿಯಲ್ಲಿ 'ಡಿಸ್‌ಕ್ರಿಪ್ಷನ್ ಆಫ್ ಇಂಡಿಯಾ' ಎಂದೇ ಬರೆಯಲಾಗಿತ್ತು

'ಹೆಸರು ಬದಲಾಯಿಸಬೇಕಾಗಿಲ್ಲ' ಎಂದು 2015ರಲ್ಲಿ ಕೇಂದ್ರವೇ ಹೇಳಿತ್ತು

• ಸುಕೃತ ಎಸ್.

ಈ ದೇಶವನ್ನು 'ಇಂಡಿಯಾ' ಅಥವಾ 'ಭಾರತ' ಎಂಬ ಹೆಸರುಗಳಲ್ಲಿ ಯಾವುದನ್ನು ಬೇಕಾದರೂ ಕರೆಯಬಹುದು ಎಂದು ಸಂವಿಧಾನದಲ್ಲಿಯೇ ಹೇಳಲಾಗಿದೆ. ಈ ಹಿನ್ನೆಲೆಯಲ್ಲಿ 'ಪ್ರೆಸಿಡೆಂಟ್ ಆಫ್ ಭಾರತ್' ಎಂದು ರಾಷ್ಟ್ರಪತಿ ಅವರನ್ನು ಸಂಬೋಧಿಸಿರುವುದು ಸಂವಿಧಾನ ವಿರೋಧ ನಡೆ ಅಲ್ಲ. ಆದರೆ, ಹೀಗೆ ರಾಷ್ಟ್ರಪತಿ ಅವರನ್ನು ಸಂಬೋಧಿಸಿರುವುದು ದೇಶದ ಹೆಸರನ್ನು ಬದಲು ಮಾಡುವ ಸೂಚನೆಯೇ ಎಂಬುದಷ್ಟೇ ಚರ್ಚೆ ಆಗುತ್ತಿರುವ ವಿಷಯ. ಇದರೊಂದಿಗೆ ಸೋಜುಗದ ವಿಷಯವೊಂದಿದೆ. 'ದೇಶದ ಹೆಸರನ್ನು ಬದಲಾಯಿಸಬೇಕಾಗಿಲ್ಲ' ಎಂದು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು 2015ರಲ್ಲಿ ಸುಪ್ರೀಂ ಕೋರ್ಟ್‌ಗೆ ಹೇಳಿತ್ತು. ಈಗ ಮೋದಿ ಸರ್ಕಾರದ ಸಚಿವರು ಅದೇ ಮಾತನ್ನು ಮತ್ತೆ ಹೇಳಿದ್ದಾರೆ. ಆದ್ದರಿಂದ ಈಗ ನಡೆಯುತ್ತಿರುವ ಇಡೀ ಚರ್ಚೆಯು ಚರ್ಚೆಯಷ್ಟೇ ಆಗಿದೆ.

ಈ ದೇಶವನ್ನು 'ಭಾರತ' ಎಂದೇ ಕರೆಯಬೇಕು ಎಂಬ ಚರ್ಚೆ ಆರಂಭವಾಗಿದ್ದು 2010ರ ಹೊತ್ತಿಗೆ. ಇಲ್ಲಿಂದ ಆರಂಭವಾದ ಚರ್ಚೆ 2023ರ ತನಕ ಬಂದು ನಿಂತಿದೆ. ಈ ಚರ್ಚೆಗಳು ನಿಯಮಬದ್ಧವಾಗಿಯೇ ಇದ್ದವು. ನಂತರ 2014 ಹಾಗೂ 2020ರಲ್ಲಿ ಕೆಲವರು ಸುಪ್ರೀಂ ಕೋರ್ಟ್ ಮೆಟ್ಟಿಲನ್ನೂ ಏರಿದರು. 2010, 2012 ಮತ್ತು 2014ರಲ್ಲಿ ನಡೆದ ಸಂಸತ್ತಿನ ಅಧಿವೇಶನಗಳಲ್ಲಿ ಮೂರು ಖಾಸಗಿ ಮಸೂದೆಗಳನ್ನು ಮಂಡಿಸಲಾಯಿತು. 2010 ಮತ್ತು 2012ರಲ್ಲಿ ಮಂಡಿಸಲಾದ ಮಸೂದೆಗಳಲ್ಲಿ ದೇಶವನ್ನು 'ಭಾರತ' ಎನ್ನಬೇಕು ಎಂದು ಹೇಳಲಾದರೆ, 2014ರ ಮಸೂದೆಯಲ್ಲಿ ದೇಶವನ್ನು 'ಹಿಂದೂಸ್ಥಾನ' ಎಂದು ಕರೆಯಬೇಕು ಎಂದು ಹೇಳಲಾಗಿತ್ತು. ಈ ಮಸೂದೆಯನ್ನು ಉತ್ತರ ಪ್ರದೇಶದ ಅಂದಿನ ಸಂಸದ (ಈಗ ಮುಖ್ಯಮಂತ್ರಿ) ಯೋಗಿ ಆದಿತ್ಯನಾಥ ಅವರು ಮಂಡಿಸಿದ್ದರು. 2010 ಮತ್ತು 2014ರಲ್ಲಿ ಕಾಂಗ್ರೆಸ್ ಸಂಸದ ಶಾಂತಾರಾಮ್ ನಾಯಕ್ ಅವರು ಮಸೂದೆಯನ್ನು ಮಂಡಿಸಿದ್ದರು.

2014ರಲ್ಲಿ ಮಹಾರಾಷ್ಟ್ರದ ಸಾಮಾಜಿಕ ಕಾರ್ಯಕರ್ತ ನಿರಂಜನ್ ಭಟ್ವಾಲ್ ಅವರು ದೇಶವನ್ನು 'ಭಾರತ' ಎಂದು ಕರೆಯಬೇಕು ಎಂದು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ಅಂದಿನ ಸಿಜೆಐ ಎಚ್.ಎಲ್. ದತ್ತು ಅವರು ಈ ಅರ್ಜಿಯನ್ನು ತಿರಸ್ಕರಿಸಿದ್ದರು. ಈ ಬಗ್ಗೆ ಸರ್ಕಾರದ ಬಳಿ ಹೋಗಿ ಎಂದೂ ಹೇಳಿದ್ದರು. ಸರ್ಕಾರದ ನಿರುತ್ತರದಿಂದ ಬೇಸತ್ತ ನಿರಂಜನ್ 2015ರಲ್ಲಿ ಮತ್ತೊಮ್ಮೆ ಸುಪ್ರೀಂ ಕೋರ್ಟ್ ಮೊರೆ ಹೋದರು. ಅಂದಿನ ಸಿಜೆಐ ಟಿ.ಎಸ್. ಠಾಕೂರ್ ಅವರು ಈ ಅರ್ಜಿಯ ಬಗ್ಗೆ ಕೇಂದ್ರ ಸರ್ಕಾರದ ಪ್ರತಿಕ್ರಿಯೆ ಕೇಳಿದ್ದರು.

'ದೇಶವನ್ನು 'ಭಾರತ' ಎಂದು ಮರುನಾಕರಣ ಮಾಡುವ ಅಗತ್ಯ ಇಲ್ಲ. ಸಂವಿಧಾನ ರಚನೆಯ ವೇಳೆಯಲ್ಲಿ 'ಭಾರತ' ಎಂದು ಉಲ್ಲೇಖವೇ ಇರಲಿಲ್ಲ. ಸಂವಿಧಾನ ರಚನಾ ಸಭೆಯ ಚರ್ಚೆಯಲ್ಲಿ ಮಾತ್ರವೇ ಈ ಬಗ್ಗೆ ಪ್ರಸ್ತಾಪ ಮಾಡಲಾಗಿದೆ. ಆದ್ದರಿಂದ ದೇಶದ ಹೆಸರು ಬದಲಾಯಿಸುವ ಅಗತ್ಯ ಇಲ್ಲ' ಎಂದು ಕೇಂದ್ರ ಗೃಹ ಸಚಿವಾಲಯ ನ್ಯಾಯಾಲಯಕ್ಕೆ ಹೇಳಿತ್ತು. 'ಭಾರತ ಎಂದು ಕರೆಯಬೇಕು ಅನ್ನಿಸಿದರೆ, ಹಾಗೇ ಕರೆಯಿರಿ. ಇಂಡಿಯಾ ಎನ್ನಬೇಕು ಅನ್ನಿಸಿದರೆ, ಹಾಗೇ ಕರೆಯಿರಿ. ಸಂವಿಧಾನದಲ್ಲಿ ಎರಡೂ ಪ್ರಯೋಗಗಳಿವೆ. ಪಿಐಎಲ್ ಅನ್ನು ಬಡಜನರ ಪರವಾಗಿ ಬಳಸಿಕೊಳ್ಳಿ. ನ್ಯಾಯಾಲಯದ ಸಮಯ ಹಾಳು ಮಾಡಬೇಡಿ' ಎಂದು ಟಿ.ಎಸ್. ಠಾಕೂರ್ ಅವರಿದ್ದ ಪೀಠ ಅರ್ಜಿಯನ್ನು ತಿರಸ್ಕರಿಸಿತ್ತು. 2020ರಲ್ಲಿ ದೆಹಲಿ ಮೂಲದ ವ್ಯಕ್ತಿಯೊಬ್ಬರು ಮತ್ತೊಮ್ಮೆ ಇದೇ ರೀತಿಯ ಅರ್ಜಿಯನ್ನು ಸುಪ್ರೀಂ ಕೋರ್ಟ್‌ನಲ್ಲಿ ಸಲ್ಲಿಸಿದಾಗಲೂ ನ್ಯಾಯಾಲಯ ಒಂದು ಹಂತದಲ್ಲಿ ಇದೇ ರೀತಿಯ ಪ್ರತಿಕ್ರಿಯೆ ನೀಡಿತ್ತು. 'ಇಂಡಿಯಾವನ್ನು ಭಾರತ ಎಂದೇ ಸಂವಿಧಾನವೂ ಕರೆದಿದೆ. ಈ ಮನವಿಯನ್ನು ಸರ್ಕಾರ ಬಳಿ ಮಾಡಿ' ಎಂದು ಅಂದಿನ ಸಿಜೆಐ ಎಸ್.ಎ. ಬೊಬಡೆ ಅರ್ಜಿಯನ್ನು ವಜಾ ಮಾಡಿದ್ದರು.

ಆಧಾರ: ಸಂವಿಧಾನ ರಚನಾ ಸಭೆಯ ಚರ್ಚೆಗಳು, ಭಾರತ ಸಂವಿಧಾನ, ಪಿಟಿಐ, ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ 'ಇಂಡಿಯಾ ದಟ್ ಈಸ್ ಭಾರತ್: ದಿ ಪೊಲಿಟಿಕ್ಸ್ ಆಫ್ ಎ ನ್ಯಾಷನಲ್ ನೇಮ್' 2020ರ ಸಂಶೋಧನಾ ಲೇಖನ

ಮಗನಿಗಾಗಿ ನಿರ್ದೇಶನಕ್ಕಿಳಿದ ರವಿಶಂಕರ್



2004ರಲ್ಲಿ ಮಾಲಾಶ್ರೀ ಅಭಿನಯದ 'ದುರ್ಗಿ' ಚಿತ್ರವನ್ನು ನಿರ್ದೇಶಿಸಿದ್ದ ಜನಪ್ರಿಯ ಖಳನಟ ರವಿಶಂಕರ್, 20 ವರ್ಷಗಳ ಬಳಿಕ ಮತ್ತೆ ನಿರ್ದೇಶನಕ್ಕಿಳಿಯುತ್ತಿದ್ದಾರೆ.

'ತಮ್ಮ ಮಗ ಅದ್ವೇಶ್‌ಗಾಗಿ ಸಿನಿಮಾ ಮಾಡಲು ರವಿಶಂಕರ್ ಸಿದ್ಧತೆ ನಡೆಸಿದ್ದಾರೆ. ಮತ್ತೆ ನಿರ್ದೇಶಕನ ಕ್ಯಾಪ್ ತೊಟ್ಟು ಟೀಸರ್ ಚಿತ್ರೀಕರಣದಲ್ಲಿ ಮಗ್ನರಾಗಿದ್ದಾರೆ. ವಿಜಯದಶಮಿ ವೇಳೆಗೆ ಚಿತ್ರ ಸೆಟ್ಟೇರುವ ಸಾಧ್ಯತೆಯಿದೆ' ಎಂದು ಅವರ ಆಪ್ತಮೂಲಗಳು ತಿಳಿಸಿವೆ. ತೆಲುಗು ಚಿತ್ರರಂಗದಲ್ಲಿ ವೃತ್ತಿ ಪ್ರಾರಂಭಿಸಿದ ನಟ ರವಿಶಂಕರ್ ಜನಪ್ರಿಯವಾಗಿದ್ದು ಕನ್ನಡದಲ್ಲಿ. 'ಕೆಂಪೇಗೌಡ' ಚಿತ್ರದಿಂದ ಪ್ರಾರಂಭಿಸಿ ಸುದೀಪ್ ಜೊತೆಗಿನ ಸಿನಿಮಾಗಳಲ್ಲಿ ಖಳನಾಯಕನಾಗಿ ಮನೆಮಾತಾದರು. ಬಳಿಕ ನಟ ಶರಣ್ ಜೊತೆ 'ವಿಕ್ಟರಿ', 'ಅಧ್ಯಕ್ಷ' ಸಿನಿಮಾಗಳಲ್ಲಿಯೂ ಪ್ರೇಕ್ಷಕರನ್ನು ರಂಜಿಸಿದರು.

ತೆಲುಗು, ತಮಿಳು ಚಿತ್ರರಂಗದಲ್ಲಿ ಬರಹಗಾರರಾಗಿಯೂ ಗುರುತಿಸಿಕೊಂಡವರು ರವಿಶಂಕರ್. ಕನ್ನಡದಲ್ಲಿ 'ಆರ್ಮುಗಂ ಕೋಟೆ' ಕಟ್ಟಿರುವ ಇವರು, ತಮ್ಮ ಮಗನನ್ನು ಇಲ್ಲಿಂದಲೇ ಲಾಂಚ್ ಮಾಡಲು ಸಿದ್ಧರಾಗುತ್ತಿದ್ದಾರೆ.

'ಸಂಖ್ಯಾಶಾಸ್ತ್ರದ ಪ್ರಕಾರ ಮಗನ ಹೆಸರು ಬದಲಿಸಿ ಸಿನಿಮಾ ಘೋಷಿಸುವ ತಯಾರಿಯಲ್ಲಿದ್ದಾರೆ. ಹೀಗಾಗಿ ಸಿನಿಮಾ ಬಗ್ಗೆ ಅವರು ಯಾವುದೇ ಮಾಹಿತಿ ನೀಡುತ್ತಿಲ್ಲ. ಆದರೆ ಈ ಅಕ್ಟೋಬರ್‌ಗೆ ಸಿನಿಮಾ ಸೆಟ್ಟೇರುವುದು ಖಚಿತ' ಎಂದು ಅವರ ಆಪ್ತವಲಯ ತಿಳಿಸಿದೆ.

ಹಿಂದಿಯಲ್ಲಿ ರಕ್ಷಿತ್, ರುಕ್ಮಿಣಿ ಧ್ವನಿ



ರಕ್ಷಿತ್ ಶೆಟ್ಟಿ, ರುಕ್ಮಿಣಿ

ಕಳೆದ ಶುಕ್ರವಾರ(ಸೆ.1) ತೆರೆಕಂಡ ಹೇಮಂತ್ ಎಂ.ರಾವ್ ನಿರ್ದೇಶನದ 'ಸಪ್ತ ಸಾಗರದಾಚೆ ಎಲ್ಲೋ' ಸಿನಿಮಾ ಪ್ರೇಕ್ಷಕರ ಮೆಚ್ಚುಗೆ ಪಡೆದು, ಪ್ರದರ್ಶನ ಕಾಣುತ್ತಿದೆ. ರಕ್ಷಿತ್ ಶೆಟ್ಟಿ–ರುಕ್ಮಿಣಿ ವಸಂತ್ ಜೋಡಿ ತೆರೆಯಲ್ಲಿ ಮೋಡಿ ಮಾಡಿದ್ದು, ಸಿನಿಮಾ ಇತರೆ ಭಾಷೆಗಳಲ್ಲಿ ಡಬ್ ಆಗಿ ಪ್ರದರ್ಶನ ಕಾಣಲು ಸಜ್ಜಾಗುತ್ತಿದೆ.

ಸಿನಿಮಾ ಬಿಡುಗಡೆ ಮುನ್ನವೇ ಚಿತ್ರಕ್ಕೆ ಇತರೆ ಭಾಷೆಗಳಿಂದ ಬೇಡಿಕೆ ಇದ್ದ ಕಾರಣ, ಚಿತ್ರತಂಡವು ಮೊದಲೇ ಐದು ಭಾಷೆಗಳಲ್ಲಿ ಡಬ್ಬಿಂಗ್ ಪೂರ್ಣಗೊಳಿಸಿದೆ. ಈ ಪೈಕಿ ಹಿಂದಿ ಭಾಷೆಗೆ ಸ್ವತಃ ರಕ್ಷಿತ್ ಶೆಟ್ಟಿ ಹಾಗೂ ರುಕ್ಮಿಣಿ ಅವರು ಧ್ವನಿ ನೀಡಿದ್ದಾರೆ ಎನ್ನುತ್ತಾರೆ ನಿರ್ದೇಶಕ ಹೇಮಂತ್. 'ಇತರೆ ಭಾಷೆಗಳಲ್ಲಿ ಸಿನಿಮಾ ಬಿಡುಗಡೆ ವಿಷಯ ಮಾತುಕತೆ ಹಂತದಲ್ಲಿದೆ' ಎಂದಿದ್ದಾರೆ ನಿರ್ಮಾಪಕ ರಕ್ಷಿತ್ ಶೆಟ್ಟಿ.

ಸದ್ಯ ಚಿತ್ರತಂಡ ರಾಜ್ಯದೆಲ್ಲೆಡೆಯ ಚಿತ್ರಮಂದಿರಗಳ ಪ್ರವಾಸದಲ್ಲಿದೆ. ಈಗಾಗಲೇ ಬೆಂಗಳೂರಿನ ಹಲವು ಚಿತ್ರಮಂದಿರಗಳಿಗೆ ಭೇಟಿ ನೀಡಿರುವ ಚಿತ್ರತಂಡವು, ಸೆ.7ರಂದು ಉಡುಪಿ, ಕುಂದಾಪುರ, ಸೆ.8ರಂದು ಮಂಗಳೂರು, ಸೆ.9ರಂದು ಶಿವಮೊಗ್ಗ, ಸೆ.10 ಹುಬ್ಬಳ್ಳಿ–ಧಾರವಾಡ, ಸೆ.11ರಂದು ಬೆಳಗಾವಿ ಹಾಗೂ ಸೆ.12ರಂದು ದಾವಣಗೆರೆ ಮತ್ತು ತುಮಕೂರು ನಗರದಲ್ಲಿನ ಥಿಯೇಟರ್‌ಗಳಿಗೆ ಭೇಟಿ ನೀಡಲಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಜಿ–20ಯ ಅಧ್ಯಕ್ಷತೆ ವಹಿಸಿರುವ ಭಾರತವು ಸೆ.9 ಮತ್ತು 10ರಂದು ದೆಹಲಿಯಲ್ಲಿ ಶೃಂಗಸಭೆಯನ್ನು ಆಯೋಜಿಸಿದೆ. ಇದರ ಅಂಗವಾಗಿ ಆಯೋಜಿಸಿರುವ ಭೋಜನಕೂಟದ ಆಮಂತ್ರಣ ಪತ್ರಿಕೆಯಲ್ಲಿ ರಾಷ್ಟ್ರಪತಿ ಅವರನ್ನು 'ಪ್ರೆಸಿಡೆಂಟ್ ಆಫ್ ಭಾರತ' ಎಂದು ಸಂಬೋಧಿಸಲಾಗಿದೆ. ಈ ವಿಚಾರವು ದೇಶದಾದ್ಯಂತ ಹೊಸ ಚರ್ಚೆಯನ್ನು ಹುಟ್ಟುಹಾಕಿದೆ. ದೇಶದ ಹೆಸರನ್ನು ಇಂಡಿಯಾದಿಂದ ಭಾರತ ಎಂದು ಬದಲಾಯಿಸಲಾಗುತ್ತದೆ. ಸೆ. 18ರಿಂದ ಕರೆದಿರುವ ವಿಶೇಷ ಅಧಿವೇಶನದಲ್ಲಿಯೇ ಈ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದೂ ಸಾಮಾಜಿಕ ಜಾಲತಾಣಗಳಲ್ಲಿ ಚರ್ಚಿಸಲಾಗುತ್ತಿದೆ. ಇಂಥ ಚರ್ಚೆ ನಡೆಯುವ ವೇಳೆಯಲ್ಲಿ '2020ರಲ್ಲಿಯೇ ಸುಪ್ರೀಂ ಕೋರ್ಟ್ ಇಂಡಿಯಾವನ್ನು ಭಾರತ ಎಂದು ಕರೆಯಲು ಆದೇಶ ನೀಡಿತ್ತು. ಭಾಷೆಯ ಹಂಗಿಲ್ಲದೆ ದೇಶದ ಎಲ್ಲಾ ಭಾಷೆಗಳಲ್ಲೂ ಭಾರತ ಎಂದೇ ದೇಶವನ್ನು ಸಂಬೋಧಿಸಬೇಕು ಎಂದು ನ್ಯಾಯಾಲಯ ಹೇಳಿತ್ತು' ಎಂಬ ವಾದವನ್ನು ಸಾರ್ವಜನಿಕರು ತಮ್ಮ ಅಭಿಪ್ರಾಯದಲ್ಲಿ ಮುಂದಿಡುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.

ದೆಹಲಿ ಮೂಲದ ವ್ಯಕ್ತಿಯೊಬ್ಬರು 2020ರಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸುತ್ತಾರೆ. ಇಂಡಿಯಾದ ಹೆಸರನ್ನು ಭಾರತ ಎಂದು ಮರುನಾಮಕರಣ ಮಾಡಬೇಕು. ಆ ಮೂಲಕ ದೇಶದ ಹೆಸರನ್ನು ಏಕಪ್ರಕಾರವಾಗಿ ಸಂಬೋಧಿಸಲು ಅನುಕೂಲವಾಗಲಿದೆ ಎಂದು ವಾದಿಸಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ಅಂದಿನ ಸಿಜೆಐ ಆಗಿದ್ದ ಎಸ್.ಎ. ಬೊಬಡೆ ಅವರು ಈ ಅರ್ಜಿಯನ್ನು ವಜಾ ಮಾಡಿದ್ದರು. 'ಇಂಡಿಯಾವನ್ನು ಭಾರತ ಎಂದು ಈಗಾಗಲೇ ಕರೆಯಲಾಗುತ್ತಿದೆ. ಜೊತೆಗೆ, ಇಂಡಿಯಾ, ಡಟ್ ಈಸ್ ಭಾರತ ಎಂದು ಸಂವಿಧಾನದ 1 (1)ನೇ ವಿಧಿಯಲ್ಲಿಯೇ ಹೇಳಲಾಗಿದೆ. ಜೊತೆಗೆ, ದೇಶವನ್ನು ಮರುನಾಮಕರಣ ಮಾಡುವ ಬಗ್ಗೆ ಸರ್ಕಾರಕ್ಕೆ ಮನವಿ ಸಲ್ಲಿಸಿ' ಎಂದು ಅವರು ಹೇಳಿದ್ದರು. ಆದ್ದರಿಂದ, 2020ರಲ್ಲಿ ಸುಪ್ರೀಂ ಕೋರ್ಟ್ ಇಂಡಿಯಾವನ್ನು ಭಾರತ ಎಂದು ಕರೆಯುವಂತೆ ಆದೇಶ ನೀಡಿಲ್ಲ.

ಗುಂಡಣ್ಣ



ಮಾತೇ ದೀಪ್ತಿ

ನುಡಿ ಬೆಳಗು





ದೀಪಾ ಹಿರೇಗುತ್ತಿ, ಇಂಗ್ಲಿಷ್ ಉಪನ್ಯಾಸಕಿ

ಒಂದೂರಿನಲ್ಲಿ ಬಹುಚುರುಕಿನ ಹುಡುಗನೊಬ್ಬನಿದ್ದ. ಆದರೆ ಸಿಟ್ಟು ಮಾಡಿಕೊಂಡು ಒರಟಾಗಿ ಮಾತಾಡುವುದು ಅವನ ಸ್ವಭಾವ. ಹೀಗೇ ಆದರೆ ಮುಂದೇನು ಎಂದು ಬಹಳ ಯೋಚಿಸಿ ತಂದೆ ಒಂದು ಉಪಾಯ ಮಾಡುತ್ತಾರೆ. ಮಗನನ್ನು ಕರೆದು ಒಂದು ದೊಡ್ಡ ಚೀಲದ ತುಂಬ ಮೊಳೆಗಳು ಹಾಗೂ ಒಂದು ದೊಡ್ಡ ಸುತ್ತಿಗೆಯನ್ನು ಕೊಟ್ಟು, ಕೋಪ ಬಂದಾಗಲೆಲ್ಲ ಹಿತ್ತಿಲಿನಲ್ಲಿ ಇರುವ ಒಂದು ಮರದ ದಪ್ಪನೆಯ ಹಲಗೆಗೆ ಒಂದೊಂದು ಮೊಳೆಯನ್ನು ಜೋರಾಗಿ ಹೊಡೆಯಲು ಹೇಳುತ್ತಾರೆ. ಕಬ್ಬಿಣದಷ್ಟು ಗಟ್ಟಿಯಿರುವ ಆ ಹಲಗೆಗೆ ಮೊದಲ ದಿನವೇ ಎಂಟು ಮೊಳೆ ಹೊಡೆಯುತ್ತಾನೆ ಆ ಹುಡುಗ!

ಗಟ್ಟಿಯಾದ ಆ ಹಲಗೆಗೆ ಕಷ್ಟಪಟ್ಟು ಮೊಳೆ ಹೊಡೆಯುವುದಕ್ಕಿಂತ ಸಿಟ್ಟನ್ನು ತಡೆಹಿಡಿಯುವುದೇ ಸುಲಭವೆಂದು ಆತನಿಗೆ ದಿನಗಳೆದಂತೆ ಅನಿಸತೊಡಗುತ್ತದೆ. ಹಂತಹಂತವಾಗಿ ಪ್ರಯತ್ನಿಸುತ್ತ ಆತ ಒಮ್ಮೆಯೂ ಕೋಪಿಸಿಕೊಳ್ಳದಿರುವ ದಿನವೂ ಬರುತ್ತದೆ. ತಾನಿವತ್ತು ಹಲಗೆಗೆ ಒಂದೂ ಮೊಳೆ ಹೊಡೆದಿಲ್ಲವೆಂದು ಹೆಮ್ಮೆಯಿಂದ ತಂದೆಯ ಹತ್ತಿರ ಹೇಳಿಕೊಳ್ಳುತ್ತಾನೆ. ಆಗ ಅಪ್ಪ ಶಹಬ್ಬಾಸ್‌ಗಿರಿ ನೀಡಿ, 'ಹಾಗಾದರೆ ನೀನು ಒಮ್ಮೆಯೂ ಕೋಪಿಸಿಕೊಳ್ಳದಿರುವ ದಿನ ಒಂದೊಂದೇ ಮೊಳೆಯನ್ನು ಕೀಳುತ್ತ ಬಾ' ಎನ್ನುತ್ತಾರೆ.

ಹಲವಾರು ವಾರಗಳ ನಂತರ, 'ಎಲ್ಲ ಮೊಳೆಗಳನ್ನೂ ಕಿತ್ತುಬಿಟ್ಟೆ' ಎಂದಾತ ಹೇಳಿದಾಗ ತಂದೆ ಆತನನ್ನು ಹಲಗೆಯ ಹತ್ತಿರ ಕರೆದುಕೊಂಡು ಹೋಗುತ್ತಾರೆ. 'ನಿಜಕ್ಕೂ ಮನಸ್ಸು ಮಾಡಿದರೆ ಏನು ಬೇಕಾದರೂ ಸಾಧ್ಯ ಎಂದು ನೀನು ತೋರಿಸಿಕೊಟ್ಟೆ. ಆದರೆ ಮೊಳೆಗಳನ್ನು ಕಿತ್ತ ಹಲಗೆಯನ್ನು ನೋಡಿದ್ದೀಯಾ? ಈಗ ಅದು ಮುಂಚಿನಂತಾಗಲು ಸಾಧ್ಯವಿದೆಯೇ? ಇಲ್ಲ ತಾನೇ, ಅದೇ ರೀತಿ ಕೋಪದಲ್ಲಿ ನೀನಾಡಿದ ಮಾತುಗಳು ಇತರರ ಮನಸ್ಸಿನ ಮೇಲೆ ಮಾಯದ ಕಲೆಗಳನ್ನುಂಟು ಮಾಡುತ್ತವೆ. ನೀನೆಷ್ಟೇ ಕ್ಷಮೆ ಕೋರಿದರೂ ಆ ಕಲೆ ಹಾಗೇ ಉಳಿಯುತ್ತದೆ' ಎಂದು ಅಪ್ಪ ಹೇಳುತ್ತಾರೆ. ಆಗ ಮಗನಿಗೆ ತನ್ನ ತಪ್ಪಿನ ತೀವ್ರತೆ ಅರ್ಥವಾಗಿ ಇನ್ನೆಂದೂ ಕೋಪದ ಕೈಲಿ ಬುದ್ಧಿಯನ್ನು ಕೊಡುವುದಿಲ್ಲವೆಂದು ತೀರ್ಮಾನಿಸುತ್ತಾನೆ.

ಈ ಮಾತುಗಳು ಬಹು ವಿಚಿತ್ರ. ಒಬ್ಬರ ಹೃದಯದಲ್ಲಿ ಹೂವನ್ನರಳಿಸಬಲ್ಲ ಮಾತುಗಳಿಗೆ ಮತ್ತೊಬ್ಬರ ಬದುಕನ್ನು ಕಾಳ್ಗಿಚ್ಚಿನಂತೆ ಸುಟ್ಟು ಬಿಡುವ ತಾಕತ್ತೂ ಇದೆ. ಮಾತುಗಳು ಜಗತ್ತಿನ ಇತಿಹಾಸವನ್ನೇ ಬದಲಾಯಿಸಿವೆ. ಮಾಣಿಕ್ಯದ ದೀಪ್ತಿಯಂತೆ, ಮುತ್ತಿನ ಹಾರದಂತೆ ಇರಬೇಕಾದ ಮಾತುಗಳನ್ನು ಬಳಸುವಾಗ ಬಲು ಜಾಗೃತೆಯಿಂದಿರಬೇಕು. ಆಡದಿರುವ ಮಾತುಗಳ ಮಾಲೀಕರು ನಾವಾದರೂ ಬಾಯಿಂದ ಹೊರಬಿದ್ದ ಮೇಲೆ ಪದಗಳು ನಮ್ಮನ್ನು ಆಳುತ್ತವೆ. ಮಾತುಗಳು ನಮ್ಮನ್ನು ಕೊಲ್ಲಬಲ್ಲವು, ಕಾಯಬಲ್ಲವು, ಗಾಸಿಗೊಳಿಸಬಲ್ಲವು, ಗುಣಪಡಿಸಬಲ್ಲವು! ಹಕ್ಕಿಯ ರೆಕ್ಕೆಯಷ್ಟು ಹಗುರವಾಗಿ ತೇಲಾಡಿಸಬಲ್ಲ ಮಾತುಗಳೇ ಕಬ್ಬಿಣದ ಗುಂಡು ಕಟ್ಟಿ ಮುಳುಗಿಸಬಲ್ಲವು. ಹಾಗಾಗಿ ಪದಗಳನ್ನು ಎಚ್ಚರಿಕೆಯಿಂದ ಉಪಯೋಗಿಸೋಣ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಸೆಪ್ಟೆಂಬರ್ 7, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಕೃಷ್ಣ ಅಷ್ಟಮಿ ಗಂ. 16-15 ನಕ್ಷತ್ರ: ರೋಹಿಣಿ ಗಂ. 10-25 ಯೋಗ: ವಜ್ರ ಗಂ. 22-02 ಕರಣ: ಕೌಲವ ಗಂ. 16-15, ಸಿಂಹ ಮಾಸದ 21 ನೇ ದಿನ, ಮಳೆನಕ್ಷತ್ರ: ಪೂರ್ವ ಫಲ್ಗುಣಿ 3. ರಾಹುಕಾಲ : ಮಧ್ಯಾಹ್ನ 01-30 – 03-00

ಸೂರ್ಯೋದಯ : 06-23 ಸೂರ್ಯಾಸ್ತ : 06-34, ಮುಸ್ಲಿಂ ದಿನಾಂಕ : 21 ಸಫರ್

ದಿನ ವಿಶೇಷ : ಶ್ರೀ ಜಯಂತಿ (ರಾಮಾನುಜ), ಜನ್ಮಾಷ್ಟಮಿ (ವೈಷ್ಣವ), ಗೋಕುಲಾಷ್ಟಮಿ (ನಂದೋತ್ಸವ), ಅದೃಷ್ಟ ಸಂಖ್ಯೆ : 9, 1

ಮೇಷ: ಕಾರ್ಯಗಳ ಒತ್ತಡದ ನಡುವೆ ಕುಟುಂಬದ ಸಮಸ್ಯೆಯತ್ತ ಗಮನ ನೀಡುವುದನ್ನು ಮರೆಯದಿರಿ. ಚೋರ ಕೃತ್ಯಗಳಿಗೆ ಪರಿಹಾರವಾಗಿ ವ್ಯವಹಾರ ಕ್ಷೇತ್ರದ ರಕ್ಷಣಾ ದೇವತೆಯನ್ನು ಆರಾಧಿಸಿ. ಶುಭ ಕಾರ್ಯಗಳಿಗೆ ಪ್ರಯತ್ನವಿರಲಿ.

ವೃಷಭ: ಪ್ರಭಾವಶಾಲಿ ವ್ಯಕ್ತಿಯೊಂದಿಗಿನ ಭೇಟಿಯನ್ನು ತಳ್ಳಿಹಾಕದೆ ಅವರಿಂದ ವೃತ್ತಿ ಕ್ಷೇತ್ರಕ್ಕೆ ಲಾಭ ಉಂಟಾಗುವಂತೆ ನೋಡಿಕೊಳ್ಳುವ ಪ್ರಯತ್ನಮಾಡಿ. ದೈವಾನು ಗ್ರಹದಿಂದ ಸಾಹಸ ಕಾರ್ಯಗಳು ಕೈಗೂಡಿ ನಿರೀಕ್ಷಿತ ಫಲ ಲಭಿಸಲಿದೆ.

ಮಿಥುನ: ವೃತ್ತಿ ಬದುಕಿನಲ್ಲಿ ಅಭಿಪ್ರಾಯಗಳಿಗೆ ವಿರೋಧ ಬರಲಿದೆ. ಆದ್ದರಿಂದ ವಿಶ್ವಾಸದಲ್ಲಿ ಯಾವುದೇ ರೀತಿಯ ಸಲಹೆ ಸೂಚನೆಯನ್ನು ನೀಡಬೇಡಿ. ಇಂದು ನ್ಯಾಯಮೂರ್ತಿಗಳಿಗೆ, ಆಡಳಿತ ಅಧಿಕಾರಿಗಳಿಗೆ ಸತ್ಫಲಗಳು ಸಿಗಲಿವೆ.

ಕರ್ಕಾಟಕ: ರಾಜಕೀಯ ವಿದ್ಯಮಾನಗಳಿಂದಾಗಿ, ಸಾಮಾಜಿಕ ಕೆಲಸಗಳಿಗಾಗಿ ಓಡಾಟ ಅಧಿಕಗೊಳ್ಳುವುದು. ಮಡದಿ, ಮಕ್ಕಳು, ಮನೆ ಮೇಲೆ ಹೆಚ್ಚಿನ ಗಮನ ಹರಿಸಬೇಕಾಗುವುದು. ಹಣಕಾಸಿನ ಪರಿಸ್ಥಿತಿ ಉತ್ತಮ ಪಡಿಸಿಕೊಳ್ಳುವಿರಿ.

ಸಿಂಹ: ಪ್ರಗತಿಯನ್ನು ಎಲ್ಲೆಡೆಯೂ ಪ್ರಶಂಸಿಸುತ್ತಿರುವುದರಿಂದ ಕಾರ್ಯ ಕ್ಷೇತ್ರದಲ್ಲಿ ಹೊಸದೊಂದು ಹುಮ್ಮಸ್ಸು ಬರುವುದರ ಜೊತೆಗೆ ವೃತ್ತಿಪರ ಶತ್ರುಗಳ ಸಂಖ್ಯೆಯು ಗಗನ ಮುಟ್ಟಲಿದೆ. ಆರೋಗ್ಯದ ಬಗ್ಗೆ ಗಮನ ನೀಡಬೇಕಾಗುತ್ತದೆ.

ಕನ್ಯಾ: ದಾಂಪತ್ಯದಲ್ಲಿ ಅನ್ಯೋನ್ಯತೆ ಬದುಕನ್ನು ಕಾಪಾಡಿಕೊಳ್ಳುವುದು ನಿಮ್ಮ ಜವಾಬ್ದಾರಿಯಾಗಿರುತ್ತದೆ. ವ್ಯಾಪಾರ ಮಾರುಕಟ್ಟೆ ವಿಸ್ತರಿಸಲು ಬೇಕಾದ ತಯಾರಿ ಮಾಡಿಕೊಳ್ಳಿರಿ. ತಂದೆ ತಾಯಿಯ ಆರೋಗ್ಯ ಉತ್ತಮವಾಗಿರುವುದು.

ತುಲಾ: ಬರುವ ಅವಕಾಶಗಳನ್ನು ನಿಮ್ಮತ್ತ ತಿರುಗಿಸಿಕೊಂಡು ಸದುಪಯೋಗ ಪಡೆದುಕೊಳ್ಳುವುದು ನಿಮ್ಮ ಕೈಗೆ ಬಿಟ್ಟ ವಿಷಯವಾಗಿರುತ್ತದೆ. ನಿರುದ್ಯೋಗಿಗಳಿಗೆ ಉದ್ಯೋಗ ದೊರೆತು ಕುಟುಂಬದವರಿಗೆ ಹೆಚ್ಚಿನ ಸಂತಸ ಆಗುತ್ತದೆ.

ವೃಶ್ಚಿಕ: ಸಲಹೆ ಸೂಚನೆಗಳನ್ನು ಹೆಚ್ಚು ಚರ್ಚಿಸದೆ ಮೇಲಧಿಕಾರಿಗಳು ಒಪ್ಪಿಕೊಳ್ಳುವರು. ಸಹಭಾಗಿಗೆ ಅಥವಾ ಮಕ್ಕಳಿಗೆ ಸಹಾಯ ಮಾಡುವುದರಲ್ಲಿ ಹೆಚ್ಚಿನ ಆನಂದ ಸಿಗುವುದು. ಕಾರ್ಮಿಕರ ಬೇಡಿಕೆ ಪರಿಶೀಲಿಸುವಿರಿ.

ಧನು: ವ್ಯವಹಾರದಲ್ಲಿ ಹೆಚ್ಚಿನ ಬಂಡವಾಳ ಹೂಡಲು ತಂದೆಯವರ ಸಮ್ಮತಿ ಪಡೆಯುವುದು ಒಳ್ಳೆಯದು. ಇಲಾಖೆ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಬಡ್ತಿ ದೊರೆಯುವ ಸಂಭವವಿದೆ. ಅವಿವಾಹಿತರಿಗೆ ಶುಭ ಸಮಾಚಾರ ಕೇಳುವಿರಿ.

ಮಕರ: ನಿಮ್ಮೆದುರಿಗಿರುವ ಸವಾಲನ್ನು ಎದುರಿಸುವ ಶಕ್ತಿ ಹಾಗೂ ಪರಿಸ್ಥಿತಿಗೆ ಹೊಂದಿಕೊಳ್ಳುವ ಸ್ವಭಾವವು ನಿಮ್ಮಲ್ಲಿದೆ. ಸಾರಿಗೆ ಸಂಸ್ಥೆಗಳಲ್ಲಿ ಕೆಲಸ ಮಾಡುವವರಿಗೆ ಬಡ್ತಿ ದೊರೆಯಲಿದೆ. ನಿಮ್ಮಲ್ಲಿನ ಏಕಾಗ್ರತೆಯಿಂದ ಜಯ.

ಕುಂಭ: ಮನೆಯವರ ಸಹಾಯದಿಂದ ನಿಮ್ಮ ಹಿಂದಿನ ಹಣಕಾಸಿನ ತೊಂದರೆಗಳು ದೂರಾಗಿ ಈ ದಿನ ಹೊಸ ಯೋಜನೆಗೆ ಚಾಲನೆಯು ದೊರೆಯಲಿದೆ. ಸಂಘ ಸಂಸ್ಥೆಯಲ್ಲಿ ಜವಾಬ್ದಾರಿಯುತ ಸ್ಥಾನಮಾನ ಲಭ್ಯ.

ಮೀನ: ಉನ್ನತ ಪೊಲೀಸ್ ಅಧಿಕಾರಿಯೊಬ್ಬರ ಸಹಾಯದಿಂದ ಗಂಭೀರ ಸಮಸ್ಯೆಯೊಂದಕ್ಕೆ ಉತ್ತರ ದೊರೆತು ಬಗೆಹರಿಯುವುದು. ಎಲ್ಲಾ ವಿಷಯಗಳಲ್ಲಿಯೂ ನಿಮ್ಮ ಸ್ವಾಭಾವಿಕ ಗುಣಕ್ಕಿಂತ ಹೆಚ್ಚಿನ ಸಮಾಧಾನದಿಂದಿರಿ.


ಪದಬಂಧ 5434 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಹಾಡಿನ ಆರಂಭದ ಸಾಲು (3)
3.ವನದಲ್ಲಿರುವ ಉಡುಗೆ! (3)
5.ಕಾಡಿನಲ್ಲಿ ಸಂಚರಿಸುವಿಕೆ (5)
6.ಶರಧಿಯಲ್ಲಿರುವ ಬಾಣ (2)
8.ನಾವಿಕನಿಗೆ ಪ್ರಾಪ್ತಿಯಾಗಿರುವ ಸ್ವರ್ಗ (2)
9.ಹತೋಟಿಗೊಂದು ಪರ್ಯಾಯ ಪದ (2)
10.ಕಲಾವಿದನ ಮನೆ ಬಾಗಿಲು (2)
14.ಕೈಗೂಡದ ಆಸೆಯಿದು (5)
15. ಕರಿಯ ಮರಿ ಬಿದ್ದಿರುವ ಆಳವಾದ ಗುಂಡಿ (3)
16.ಬತ್ತ ಕುಟ್ಟುವ ಸಾಧನ (3)

ಮೇಲಿಂದ ಕೆಳಕ್ಕೆ

1.ಬೇರೆಯವರ ಅಧೀನದಲ್ಲಿರುವಿಕೆ (4)
2.ಬಣ್ಣಗೆಟ್ಟಿದ್ದು ಇದು (3)
3.ವರ ಹಿಡಿದಿರುವ ಚಿನ್ನದ ನಾಣ್ಯ (3)
4.ಬೆಂಬಿಡದೆ ಕಾಡುವವನೀತ (4)
7.ರಸಿಕನಿಂದ ಒಸರುತ್ತಿರುವ ಕೀವು (3)
8.ನಾಕದಲ್ಲಿ ತೂರಿಸಿದ ಮೂಗು! (3)
9.ಮಂಗಳ ಗ್ರಹವನ್ನು ಹೀಗೂ ಕರೆವರು (4)
11.ಬಲಾತ್ಕಾರದ ಆಡಳಿತ (4)
12. ನಗರದ ಹತ್ತಿರ ಕೇಳಿದ ಚರ್ಮವಾದ್ಯ (3)
13.ನೀರು ಜಿನುಗುವ ತಗ್ಗು ಉಲ್ಟಾ ಕಾಣುತ್ತಿದೆ (3)



5433ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪ್ರಾಣದಾನ 3.ಅಪರೂಪ
5.ನಡುಕ 8.ಮಿಥುನ
9.ಯೋಗ್ಯತಾ ಪತ್ರ
10.ತಪ್ಪಲೆ 11.ಹಡಪ
15.ರಿಯಾಯಿತಿ
16.ಅಭಿಲಾಷೆ

ಮೇಲಿಂದ ಕೆಳಕ್ಕೆ:
1.ಪ್ರಾಚೀನ 2.ನಡು
3.ಅತ್ತೆ 4.ಪರಧನ
6.ಕರೆಯೋಲೆ 7.ಸಂತಾಪ
8.ಮಿತ್ರದ್ರೋಹ
10.ತರಕಾರಿ 12.ಪರಿಷೆ
13.ಜ್ಞಾತಿ 14.ಕ್ಕಅ

ಸುಡೊಕು 5820

	3		9		2	1		6
1		6					8	
	8			6				5
7								
	5		7	1	4	2		8
4					6			7
2		5		7			6	
	6					8		
8		1	6		3			9

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5819 ಸುಡೊಕು

4	3	8	2	1	9	5	6	7
1	2	9	6	5	7	3	4	8
7	6	5	8	4	3	2	9	1
3	4	2	9	6	1	8	7	5
8	7	6	3	2	5	9	1	4
5	9	1	7	8	4	6	3	2
9	1	7	5	3	2	4	8	6
6	5	3	4	7	8	1	2	9
2	8	4	1	9	6	7	5	3

ನಿವೃತ್ತಿ ಬಳಿಕ ಸರ್ಕಾರಿ ಹುದ್ದೆಗೆ ನ್ಯಾಯಮೂರ್ತಿಗಳ ನೇಮಕ ಪ್ರಶ್ನಿಸಿದ್ದ ಅರ್ಜಿ ವಜಾಗೊಳಿಸಿದ 'ಸುಪ್ರೀಂ'

2 ವರ್ಷ ವಿರಾಮ ಅವಧಿ ನಿಗದಿಗೆ ನಕಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ನ್ಯಾಯಮೂರ್ತಿಗಳು ನಿವೃತ್ತಿಯಾದ ತಕ್ಷಣವೇ ಸರ್ಕಾರಿ ಹುದ್ದೆ ಒಪ್ಪಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಎರಡು ವರ್ಷಗಳ ವಿರಾಮ ಅವಧಿಯನ್ನು (ಕೂಲಿಂಗ್ ಆಫ್ ಪೀರಿಯಡ್) ನಿಗದಿಪಡಿಸುವಂತೆ ಕೋರಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಸುಪ್ರೀಂ ಕೋರ್ಟ್, ಬುಧವಾರ ವಜಾಗೊಳಿಸಿದೆ.

ಬಾಂಬೆ ವಕೀಲರ ಸಂಘವು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್ ಹಾಗೂ ಸುಧಾಂಶು ಧುಲಿಯಾ ಅವರಿದ್ದ ವಿಭಾಗೀಯ ನ್ಯಾಯಪೀಠವು, 'ಅಂತಹ ಹುದ್ದೆ ಒಪ್ಪಿಕೊಳ್ಳುವುದು ಸಂಬಂಧಪಟ್ಟ ನ್ಯಾಯಮೂರ್ತಿಗಳ ವಿವೇಚನೆಗೆ ಬಿಟ್ಟಿದ್ದು' ಎಂದು ಅಭಿಪ್ರಾಯಪಟ್ಟಿತು.

ನ್ಯಾಯಾಂಗದಲ್ಲಿ ಹಲವು ವರ್ಷಗಳ ಕಾಲ ನ್ಯಾಯಮೂರ್ತಿಗಳಾಗಿ ಸೇವೆ ಸಲ್ಲಿಸಿರುತ್ತಾರೆ. ನಿವೃತ್ತಿ ಬಳಿಕ ಸರ್ಕಾರಿ ಹುದ್ದೆ ಒಪ್ಪಿಕೊಂಡರೆ ಅವರ ನ್ಯಾಯಿಕ ಅಧಿಕಾರಾವಧಿಯಲ್ಲಿ ಸರ್ಕಾರದ ಪಕ್ಷಪಾತಿಯಾಗಿದ್ದರು ಎಂಬ ತಪ್ಪುಕಲ್ಪನೆ ಜನರಲ್ಲಿ ಮೂಡುತ್ತದೆ ಎಂದು ಅರ್ಜಿದಾರರ ಪರ ವಕೀಲ ಅಹ್ಮದ್ ಮೆಹದಿ ಅಬ್ದಿ ಅವರು ಮಂಡಿಸಿದ ವಾದವನ್ನು, ನ್ಯಾಯಪೀಠವು ತಿರಸ್ಕರಿಸಿತು.

'ಶಾಸನಬದ್ಧ ಹುದ್ದೆಗಳಿಗೆ ನ್ಯಾಯ ಮೂರ್ತಿಗಳನ್ನು ನೇಮಕ ಮಾಡುವುದನ್ನು ಪ್ರಶ್ನಿಸುವುದಿದ್ದರೆ ಆಡಳಿತಾತ್ಮಕ ನ್ಯಾಯಮಂಡಳಿಗಳ ಮೊರೆ ಹೋಗಬಹುದು' ಎಂದು ಸೂಚಿಸಿತು.

ಇದಕ್ಕೆ ಪ್ರತಿಕ್ರಿಯಿಸಿದ ವಕೀಲ ಅಬ್ದಿ, 'ಈ ಅರ್ಜಿಯು ಸರ್ಕಾರದ ವಿವೇಚನೆಯಿಂದ ನೇಮಿಸುವ ರಾಜಕೀಯ ಹುದ್ದೆಗಳಿಗೆ ಸಂಬಂಧಿಸಿದ್ದಾಗಿದೆ' ಎಂದು ಗಮನ ಸೆಳೆದರು.

ಆಗ ನ್ಯಾಯಪೀಠವು, 'ನಿವೃತ್ತ ನ್ಯಾಯಮೂರ್ತಿಗಳು ಯಾವ ಹುದ್ದೆ ಒಪ್ಪಿಕೊಳ್ಳಬೇಕು ಎಂಬುದನ್ನು ಅವರ ವಿವೇಚನೆಗೆ ಬಿಡುವುದು ಒಳಿತು. ಈ ವಿಷಯಕ್ಕೆ ಸಂಬಂಧಿಸಿ ಕಾನೂನು ರೂಪಿಸಲು ಶಾಸಕಾಂಗವು ಸ್ವತಂತ್ರವಾಗಿದ್ದರೂ, ಸಂವಿಧಾನದ 32ನೇ ವಿಧಿಯಡಿ ನ್ಯಾಯಾಲಯವು ನಿರ್ದೇಶನ ನೀಡಲು ಸಾಧ್ಯವಿಲ್ಲ' ಎಂದಿತು.

ವಿಚಾರಣೆ ವೇಳೆ ಅಬ್ದಿ ಅವರು, ವಿರಾಮ ಅವಧಿ ಇಲ್ಲದಿದ್ದರಿಂದ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ ನಿವೃತ್ತಿಯಾದ ತಕ್ಷಣವೇ ಎಸ್. ಅಬ್ದುಲ್ ನಜೀರ್ ಅವರನ್ನು ಆಂಧ್ರಪ್ರದೇಶದ ರಾಜ್ಯಪಾಲರನ್ನಾಗಿ ಸರ್ಕಾರ ನೇಮಿಸಿದ್ದನ್ನು ಉಲ್ಲೇಖಿಸಿದರು. ಇದಕ್ಕೆ ನ್ಯಾಯಪೀಠವು ಆಕ್ಷೇಪ ವ್ಯಕ್ತಪಡಿಸಿತು.

ಅರ್ಜಿದಾರರ ವಾದ ಏನು?

ಸುಪ್ರೀಂ ಕೋರ್ಟ್ ಹಾಗೂ ಹೈಕೋರ್ಟ್ ನ್ಯಾಯಮೂರ್ತಿಗಳು ನಿವೃತ್ತರಾದ ತಕ್ಷಣವೇ ಯಾವುದೇ ವಿರಾಮ ಅವಧಿ ಇಲ್ಲದೆಯೇ ಸರ್ಕಾರಿ ಹುದ್ದೆಗಳನ್ನು ಒಪ್ಪಿಕೊಳ್ಳುತ್ತಾರೆ. ಒಂದು ವೇಳೆ ಒಪ್ಪಿಕೊಂಡರೆ ನ್ಯಾಯಾಂಗ ವ್ಯವಸ್ಥೆ ಕುರಿತು ಜನರಲ್ಲಿ ತಪ್ಪು ಭಾವನೆ ಮೂಡುತ್ತದೆ ಎಂಬುದು ಅರ್ಜಿದಾರರ ವಾದ.

2013ರಲ್ಲಿ ಬಿಸಿಸಿಐ ಸುಧಾರಣೆಗೆ ಸುಪ್ರೀಂ ಕೋರ್ಟ್ ನೇಮಿಸಿದ್ದ ನಿವೃತ್ತ ಸಿಜೆಐ ಆರ್.ಎಂ. ಲೋಧಾ ನೇತೃತ್ವದ ಸಮಿತಿಯು ವಿರಾಮ ಅವಧಿಗೆ ಸಂಬಂಧಿಸಿದಂತೆ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಿದೆ. ಅದನ್ನು ಸರ್ಕಾರಿ ಹುದ್ದೆಗಳಿಗೆ ನ್ಯಾಯಮೂರ್ತಿಗಳನ್ನು ನೇಮಿಸುವಾಗಲೂ ಅನುಸರಿಸಬೇಕು ಎಂದು ಅರ್ಜಿಯಲ್ಲಿ ಕೋರಲಾಗಿತ್ತು.

ಅಯೋಧ್ಯೆ ಪ್ರಕರಣದ ತೀರ್ಪು ನೀಡಿದ ಸಾಂವಿಧಾನಿಕ ಪೀಠದಲ್ಲಿದ್ದ ನ್ಯಾಯಮೂರ್ತಿಗಳ ಪೈಕಿ ನಜೀರ್ ಕೂಡ ಒಬ್ಬರಾಗಿದ್ದರು. ಅವರು ನಿವೃತ್ತಿಯಾದ ತಕ್ಷಣವೇ ರಾಜ್ಯಪಾಲರ ಹುದ್ದೆಗೆ ನೇಮಿಸಿದ ನಿದರ್ಶನವನ್ನು ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ.

ರಾಜಕೀಯವಾಗಿ ಅತ್ಯಂತ ಸೂಕ್ಷ್ಮ ಪ್ರಕರಣಗಳಾದ ಅಸ್ಸಾಂ ಎನ್‌ಆರ್‌ಸಿ, ಶಬರಿಮಲೆ, ಅಯೋಧ್ಯೆ, ರಫೇಲ್ ವಿವಾದದ ವಿಚಾರಣೆಯನ್ನು ಸಿಜೆಐ ಆಗಿದ್ದ ರಂಜನ್ ಗೊಗೊಯ್ ನಡೆಸಿದ್ದರು. ನಿವೃತ್ತಿಯಾದ ಬಳಿಕ ರಾಜ್ಯಸಭೆಗೆ ಅವರನ್ನು ನಾಮಕರಣ ಮಾಡಲಾಗಿದೆ ಎಂದು ಹೇಳಲಾಗಿದೆ.

ಅಯೋಧ್ಯೆ ಪ್ರಕರಣದ ಸಂವಿಧಾನಿಕ ಪೀಠದಲ್ಲಿದ್ದ ನ್ಯಾಯಮೂರ್ತಿ ಅಶೋಕ್ ಭೂಷಣ್ ಅವರನ್ನು ರಾಷ್ಟ್ರೀಯ ಕಂಪನಿ ಕಾನೂನು ಮೇಲ್ಮನವಿ ನ್ಯಾಯಮಂಡಳಿಯ ಅಧ್ಯಕ್ಷರನ್ನಾಗಿ ನೇಮಿಸಿರುವ ಬಗ್ಗೆಯೂ ಪ್ರಸ್ತಾಪಿಸಲಾಗಿದೆ.

ಎಡಿಟರ್ಸ್ ಗಿಲ್ಡ್‌ನ ನಾಲ್ವರು ಸದಸ್ಯರಿಗೆ 11ರ ವರೆಗೆ 'ಸುಪ್ರೀಂ' ರಕ್ಷಣೆ

ನವದೆಹಲಿ(ಪಿಟಿಐ): ಮಣಿಪುರದಲ್ಲಿನ ಹಿಂಸಾಚಾರ ಕುರಿತು ಪ್ರಕಟಿಸಿರುವ ವರದಿಗೆ ಸಂಬಂಧಿಸಿ ಎಡಿಟರ್ಸ್ ಗಿಲ್ಡ್‌ನ(ಇಜಿಐ) ನಾಲ್ವರ ಸದಸ್ಯರ ವಿರುದ್ಧ ದಾಖಲಾಗಿರುವ ಎರಡು ಎಫ್‌ಐಆರ್‌ಗಳ ಅನ್ವಯ ಅವರ ವಿರುದ್ಧ ಸೆ.11ರ ವರೆಗೆ ಯಾವುದೇ ಬಲವಂತದ ಕ್ರಮ ತೆಗೆದುಕೊಳ್ಳಬಾರದು ಎಂದು ಸುಪ್ರೀಂಕೋರ್ಟ್ ಬುಧವಾರ ಹೇಳಿದೆ.

ಅರ್ಜಿ ವಿಚಾರಣೆ ನಡೆಸಿದ ಮುಖ್ಯನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದೀವಾಲಾ ಹಾಗೂ ಮನೋಜ್ ಮಿಶ್ರಾ ಅವರಿದ್ದ ನ್ಯಾಯಪೀಠ, ಈ ಕುರಿತು ಪ್ರತಿಕ್ರಿಯೆ ಸಲ್ಲಿಸುವಂತೆ ಮಣಿಪುರ ಸರ್ಕಾರಕ್ಕೆ ಸೂಚಿಸಿ ವಿಚಾರಣೆಯನ್ನು ಸೆ.11ಕ್ಕೆ ಮುಂದೂಡಿತು.

ರಾಜ್ಯದಲ್ಲಿ ಭುಗಿಲೆದ್ದಿದ್ದ ಹಿಂಸಾಚಾರ ಹಿನ್ನೆಲೆಯಲ್ಲಿ ಗಿಲ್ಡ್‌ನ ನಾಲ್ವರ ಸದಸ್ಯರಿದ್ದ ಸತ್ಯಶೋಧನಾ ತಂಡ ಇತ್ತೀಚೆಗೆ ಮಣಿಪುರಕ್ಕೆ ಭೇಟಿ ನೀಡಿ, ವರದಿ ಪ್ರಕಟಿಸಿತ್ತು. ರಾಜ್ಯದಲ್ಲಿ ಇಂಟರ್‌ನೆಟ್ ಸೇವೆಯನ್ನು ಸ್ಥಗಿತಗೊಳಿಸಿದ್ದು ಮಾಧ್ಯಮಗಳ ಕಾರ್ಯ ನಿರ್ವಹಣೆಗೆ ತೊಂದರೆಯಾಗಿತ್ತು ಎಂದು ವರದಿಯಲ್ಲಿ ಹೇಳಲಾಗಿತ್ತು.

'ಕೂಟ ಪ್ರಕಟಿಸಿದ್ದ ವರದಿ ಪ್ರಚೋದನಕಾರಿಯಾಗಿದೆ' ಎಂದು ಆರೋಪಿಸಿದ್ದ ರಾಜ್ಯ ಸರ್ಕಾರ, ಈ ಸಂಬಂಧ ಗಿಲ್ಡ್ ಅಧ್ಯಕ್ಷೆ ಸೀಮಾ ಮುಸ್ತಾಫ, ಸದಸ್ಯರಾದ ಸೀಮಾ ಗುಹಾ, ಭರತ್ ಭೂಷಣ್ ಹಾಗೂ ಸಂಜಯ್ ಕಪೂರ್ ವಿರುದ್ಧ ಎಫ್‌ಐಆರ್‌ಗಳನ್ನು ದಾಖಲಿಸಿತ್ತು.

'ದಾನಿಗಳ ರಕ್ತವು ಶುದ್ಧವಾಗಿರಬೇಕು'



ಸುಪ್ರೀಂ ಕೋರ್ಟ್

ನವದೆಹಲಿ (ಪಿಟಿಐ): 'ದಾನಿಗಳಿಂದ ತಮಗೆ ವರ್ಗಾವಣೆಯಾಗುತ್ತಿರುವ ರಕ್ತವು ಶುದ್ಧವಾಗಿದೆ ಎಂಬುದು ಸ್ವೀಕರಿಸುವವರಿಗೆ ಖಚಿತವಾಗಿ ತಿಳಿದಿರಬೇಕು' ಎಂದು ಸುಪ್ರೀಂ ಕೋರ್ಟ್ ಬುಧವಾರ ಹೇಳಿದೆ.

ಲಿಂಗತ್ವ ಅಲ್ಪಸಂಖ್ಯಾತರು, 'ಗೇ' (ಪುರುಷ-ಪುರುಷನ ನಡುವಿನ ಲೈಂಗಿಕ ಸಂಬಂಧ ಹೊಂದಿರುವವರು) ಹಾಗೂ ಲೈಂಗಿಕ ಕಾರ್ಯಕರ್ತೆಯರನ್ನು ರಕ್ತದಾನದಿಂದ ಹೊರಗಿಟ್ಟಿರುವ ಮಾರ್ಗಸೂಚಿ 2017 ಅನ್ನು ಪ್ರಶ್ನಿಸಿ ಸಲ್ಲಿಸಲಾಗದ ಅರ್ಜಿಯ ವಿಚಾರಣೆ ವೇಳೆ ಸುಪ್ರೀಂ ಕೋರ್ಟ್ ಈ ರೀತಿ ತಾಕೀತು ಮಾಡಿದೆ.

ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್ ಮತ್ತು ಸುಧಾಂಶು ಧುಲಿಯಾ ಅವರನ್ನೊಳಗೊಂಡ ನ್ಯಾಯಪೀಠವು, ಅರ್ಜಿಗೆ ಸಂಬಂಧಿಸಿದಂತೆ ನೋಟಿಸ್ ನೀಡುತ್ತಿಲ್ಲ. ಇದೇ ವಿಷಯವನ್ನು ಪ್ರಸ್ತಾಪಿಸುವ ಮತ್ತೊಂದು ಬಾಕಿ ಉಳಿದಿರುವ ಅರ್ಜಿಯೊಂದಿಗೆ ಸೇರಿಸಲಾಗುವುದು ಎಂದು ಹೇಳಿದೆ.

ಬುಧವಾರದ ಅರ್ಜಿಯ ವಿಚಾರಣೆಯ ಸಂದರ್ಭದಲ್ಲಿ, ಮಹಾರಾಷ್ಟ್ರ ಮೂಲದ ಅರ್ಜಿದಾರರ ಪರ ವಕೀಲರು, ಕೆಲವು ವರ್ಗದ ಜನರು ರಕ್ತದಾನ ಮಾಡುವುದನ್ನು ಹೊರತುಪಡಿಸಿದ ಮಾರ್ಗಸೂಚಿಗಳು ಅವರ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತವೆ ಎಂದು ಸುಪ್ರೀಂ ಕೋರ್ಟ್‌ಗೆ ತಿಳಿಸಿದರು.

'ದಾನಿಗಳಿಂದ ತಮಗೆ ವರ್ಗಾವಣೆಯಾಗುತ್ತಿರುವ ರಕ್ತವು ಶುದ್ಧವಾಗಿದೆ ಎಂಬುದು ಸ್ವೀಕರಿಸುವವರು ಖಚಿತಪಡಿಸಿಕೊಳ್ಳಬೇಕು' ಎಂಬುದನ್ನು ನ್ಯಾಯಪೀಠವು ಗಮನಿಸಿತು.

ಸುದ್ದಿ 2 ನಿಮಿಷ

ಲಡಾಖ್ ಹಿಲ್ ಕೌನ್ಸಿಲ್ ಚುನಾವಣೆ ಅಧಿಸೂಚನೆ ರದ್ದುಪಡಿಸಿದ 'ಸುಪ್ರೀಂ'

ನವದೆಹಲಿ (ಪಿಟಿಐ): ಲಡಾಖ್‌ನ ಹಿಲ್ ಕೌನ್ಸಿಲ್‌ನ ಚುನಾವಣೆಗೆ ಕೇಂದ್ರಾಡಳಿತ ಪ್ರದೇಶದ ಚುನಾವಣಾ ಇಲಾಖೆಯು ಹೊರಡಿಸಿದ್ದ ಅಧಿಸೂಚನೆಯನ್ನು ಸುಪ್ರೀಂ ಕೋರ್ಟ್ ಬುಧವಾರ ರದ್ದುಪಡಿಸಿದೆ. ವಾರದಲ್ಲಿ ಹೊಸ ಅಧಿಸೂಚನೆ ಹೊರಡಿಸಲೂ ಆದೇಶಿಸಿದೆ.

ನ್ಯಾಷನಲ್ ಕಾನ್ಫರೆನ್ಸ್ ಪಕ್ಷವು 'ನೇಗಿಲು' ಚಿಹ್ನೆ ಪಡೆಯಲು ಅರ್ಹವಾಗಿದೆ ಎಂದು ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಅಹಸಾನುದ್ದೀನ್ ಅಮಾನುಲ್ಲಾ ಅವರಿದ್ದ ಪೀಠವು ಅಭಿಪ್ರಾಯಪಟ್ಟಿತು.

ನ್ಯಾಷನಲ್ ಕಾನ್ಫರೆನ್ಸ್ ಪಕ್ಷದ ಅಭ್ಯರ್ಥಿಗಳಿಗೆ ಈ ಚಿಹ್ನೆಯನ್ನು ಹಂಚಿಕೆ ಮಾಡಲು ನಿರಾಕರಿಸಿ ಲಡಾಖ್ ಆಡಳಿತವು ಸಲ್ಲಿಸಿದ್ದ ಅರ್ಜಿಯನ್ನು ವಜಾ ಮಾಡಿದ ನ್ಯಾಯಪೀಠವು, ₹ 1 ಲಕ್ಷ ದಂಡವನ್ನು ವಿಧಿಸಿತು.

ಈ ಮೊದಲು ಜಮ್ಮು ಮತ್ತು ಕಾಶ್ಮೀರ ಹಾಗೂ ಲಡಾಖ್ ಹೈಕೋರ್ಟ್‌ನ ಏಕಸದಸ್ಯ ಪೀಠವು ನ್ಯಾಷನಲ್ ಕಾನ್ಫರೆನ್ಸ್ ಅಭ್ಯರ್ಥಿಗಳಿಗೆ ಪಕ್ಷದ ಚಿಹ್ನೆಯಡಿ ಸ್ಪರ್ಧಿಸಲು ಅನುಮತಿ ನೀಡಿತ್ತು. ಲಡಾಖ್‌ನ ಆಡಳಿತ ಇದನ್ನು ಪ್ರಶ್ನಿಸಿ ಮೇಲ್ಮನವಿಯನ್ನು ಸಲ್ಲಿಸಿತ್ತು.

ಚುನಾವಣೆ ಇಲಾಖೆಯ ಅಧಿಸೂಚನೆಯಂತೆ 30 ಸದಸ್ಯ ಬಲದ ಲಡಾಖ್ ಸ್ವಾಯತ್ತ ಗುಡ್ಡಗಾಡು ಪ್ರದೇಶಾಭಿವೃದ್ಧಿ ಮಂಡಳಿಯ (ಎಲ್‌ಎಎಚ್‌ಡಿಸಿ) 26 ಸ್ಥಾನಗಳಿಗೆ ಸೆ.10ರಂದು ಚುನಾವಣೆ ನಡೆಯಲಿದ್ದು, ನಾಲ್ಕು ದಿನದ ನಂತರ ಮತಎಣಿಕೆ ನಡೆಯಲಿದೆ.



ತನಿಖೆಯ ವಸ್ತುಸ್ಥಿತಿ ವರದಿಗೆ 'ಸುಪ್ರೀಂ' ಸೂಚನೆ

ನವದೆಹಲಿ (ಪಿಟಿಐ): ಉತ್ತರ ಪ್ರದೇಶದ ಖುಬ್ಬಾಪುರ ಗ್ರಾಮದ ಖಾಸಗಿ ಶಾಲೆಯಲ್ಲಿ ಶಿಕ್ಷಕಿಯೊಬ್ಬರು ಮುಸ್ಲಿಂ ವಿದ್ಯಾರ್ಥಿಗೆ ಸಹಪಾಠಿಗಳಿಂದ ಕಪಾಳಕ್ಕೆ ಏಟು ಕೊಡಿಸಿದ್ದರು ಎನ್ನಲಾದ ಘಟನೆಗೆ ಸಂಬಂಧಿಸಿದ ತನಿಖೆ ಕುರಿತ ವಸ್ತುಸ್ಥಿತಿ ವರದಿ ಸಲ್ಲಿಸುವಂತೆ ಮುಜಫ್ಫರನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಸುಪ್ರೀಂಕೋರ್ಟ್ ಬುಧವಾರ ನಿರ್ದೇಶನ ನೀಡಿದೆ.

ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಅಭಯ ಎಸ್. ಓಕಾ ಹಾಗೂ ಪಂಕಜ್ ಮಿತ್ತಲ್ ಅವರಿದ್ದ ನ್ಯಾಯಪೀಠ, ಸಂತ್ರಸ್ತ ವಿದ್ಯಾರ್ಥಿ ಹಾಗೂ ಆತನ ಪಾಲಕರ ರಕ್ಷಣೆಗೆ ತೆಗೆದುಕೊಂಡ ಕ್ರಮಗಳ ಕುರಿತು ಮಾಹಿತಿ ನೀಡುವಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಸೂಚಿಸಿದೆ.

ಸೆಪ್ಟೆಂಬರ್ 25ರ ಒಳಗಾಗಿ ಪ್ರತಿಕ್ರಿಯೆ ಸಲ್ಲಿಸುವಂತೆ ಉತ್ತರ ಪ್ರದೇಶ ಸರ್ಕಾರಕ್ಕೂ ನ್ಯಾಯಪೀಠವು ನೋಟಿಸ್ ಜಾರಿ ಮಾಡಿದೆ. ಈ ಘಟನೆ ಕುರಿತು ಮಹಾತ್ಮ ಗಾಂಧಿ ಮರಿಮೊಮ್ಮಗ ತುಷಾರ್ ಗಾಂಧಿ ಅವರು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿ, ತ್ವರಿತ ವಿಚಾರಣೆಗೆ ಮನವಿ ಮಾಡಿದ್ದರು.

'ಡೈಜಿನ್ ಜೆಲ್' ಮಾರಾಟ ಸ್ಥಗಿತಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಗೋವಾದಲ್ಲಿರುವ ಅಬಾಟ್ ಇಂಡಿಯಾ ಕಂಪನಿಯ ಘಟಕದಲ್ಲಿ ಉತ್ಪಾದಿತ ಅಂಟಾಸಿಡ್ 'ಡೈಜಿನ್ ಜೆಲ್'ನ ಕೆಲ ಬ್ಯಾಚ್‌ಗಳ ಮಾರಾಟ ಮಾಡದಂತೆ ಕೇಂದ್ರೀಯ ಔಷಧ ಗುಣಮಟ್ಟ ನಿಯಂತ್ರಣ ಸಂಘಟನೆ (ಸಿಡಿಎಸ್‌ಸಿಒ) ಸೂಚಿಸಿದೆ.

ಔಷಧದ ಬಣ್ಣ, ರುಚಿ ಹಾಗೂ ವಾಸನೆ ಕುರಿತು ವ್ಯಾಪಕ ದೂರುಗಳು ಬಂದ ಹಿನ್ನೆಲೆಯಲ್ಲಿ ಈ ಔಷಧವನ್ನು ಸ್ವಯಂಪ್ರೇರಿತವಾಗಿ ಮಾರುಕಟ್ಟೆಯಿಂದ ಹಿಂಪಡೆದಿರುವುದಾಗಿ ಕಂಪನಿ ಘೋಷಿಸಿತ್ತು. ಇದಾದ 12 ದಿನಗಳ ನಂತರ ಸಿಡಿಎಸ್‌ಸಿಒದಿಂದ ಈ ಸೂಚನೆ ಹೊರಬಿದ್ದಿದೆ.

ಈ ಸಂಬಂಧ, ವಿತರಕರು ಹಾಗೂ ಸಗಟು ವ್ಯಾಪಾರಿಗಳಿಗೆ ಸಿಡಿಎಸ್‌ಸಿಒ ಆಗಸ್ಟ್ 31ರಂದು ನೀಡಿರುವ ಸೂಚನೆಯನ್ನು ಮಂಗಳವಾರ ಬಹಿರಂಗಗೊಳಿಸಲಾಗಿದೆ.

ಅಧಿವೇಶನ: ಸೋನಿಯಾ–ಜೋಶಿ ಪತ್ರ ಜಟಾಪಟಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಸೆಪ್ಟೆಂಬರ್ 18 ರಿಂದ ನಡೆಯಲಿರುವ ಸಂಸತ್‌ನ ವಿಶೇಷ ಅಧಿವೇಶನಕ್ಕೆ ಯಾವುದೇ ಕಾರ್ಯಸೂಚಿ ನೀಡಿಲ್ಲ ಎಂದು ಆಕ್ಷೇಪಿಸಿ ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗೆ ಬುಧವಾರ ಪತ್ರ ಬರೆದಿದ್ದಾರೆ. ಐದು ದಿನದ ಅಧಿವೇಶನದಲ್ಲಿ ಮಣಿಪುರ ಗಲಭೆ, ಜಾತಿ ಗಣತಿ, ಬೆಲೆ ಏರಿಕೆ, ಅದಾನಿ ಸಮೂಹದ ವಿರುದ್ಧದ ಆರೋಪಗಳು ಸೇರಿದಂತೆ ಒಂಬತ್ತು ವಿಷಯಗಳ ಕುರಿತು ಚರ್ಚೆ ನಡೆಸಬೇಕು ಎಂದೂ ಒತ್ತಾಯಿಸಿದ್ದಾರೆ.

ಈ ಪತ್ರಕ್ಕೆ ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಸೋನಿಯಾ ಅವರಿಗೆ ಪತ್ರ ಬರೆದಿರುವ ಅವರು, 'ಯಾವುದೇ ವಿಷಯದ ಬಗ್ಗೆ ಚರ್ಚಿಸಲು ನಮ್ಮ ಸರ್ಕಾರ ಸಿದ್ಧವಿದೆ' ಎಂದೂ ಹೇಳಿದ್ದಾರೆ.

ಎರಡು ಪುಟಗಳ ಪತ್ರದಲ್ಲಿ ಸೋನಿಯಾ, 'ಅಧಿವೇಶನದಲ್ಲಿ ಭಾಗವಹಿಸಲು ಖಂಡಿತವಾಗಿ ಬಯಸುತ್ತಿದ್ದೇವೆ. ಏಕೆಂದರೆ ಇದು ಸಾರ್ವಜನಿಕ ಕಾಳಜಿ ಮತ್ತು ಪ್ರಮುಖ ವಿಷಯಗಳನ್ನು ಪ್ರಸ್ತಾಪಿಸಲು ಅವಕಾಶ ನೀಡುತ್ತದೆ. ಸೂಕ್ತವಾದ ನಿಯಮದಡಿಯಲ್ಲಿ ಒಂಬತ್ತು ವಿಷಯಗಳ ಚರ್ಚೆಗೆ ಸಮಯ ನಿಗದಿಪಡಿಸಬೇಕು' ಎಂದು ಆಗ್ರಹಿಸಿದ್ದಾರೆ.

'ರಾಜಕೀಯ ಪಕ್ಷಗಳೊಂದಿಗೆ ಯಾವುದೇ ಸಮಾಲೋಚನೆ ನಡೆಸದೆ ಈ ವಿಶೇಷ ಅಧಿವೇಶನ ಕರೆಯಲಾಗಿದೆ. ನಮ್ಮಲ್ಲಿ ಯಾರಿಗೂ ಅಧಿವೇಶನದ ಕಾರ್ಯಸೂಚಿಯ ಬಗ್ಗೆ ಯಾವುದೇ ಕಲ್ಪನೆ ಇಲ್ಲ. ಎಲ್ಲಾ ಐದು ದಿನಗಳನ್ನು ಸರ್ಕಾರಿ ವ್ಯವಹಾರಕ್ಕೆ ಮೀಸಲಿಡಲಾಗಿದೆ ಎಂಬುದಾಗಿ ತಿಳಿಸಲಾಗಿದೆ' ಎಂದೂ ಅವರು ಹೇಳಿದ್ದಾರೆ.

ಈ ಪತ್ರವನ್ನು ಪತ್ರಿಕಾಗೋಷ್ಠಿಯಲ್ಲಿ ಬಿಡುಗಡೆ ಮಾಡಿದ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್, 'ಕಾರ್ಯಸೂಚಿ ಬಗ್ಗೆ ಚರ್ಚಿಸದೆ ಅಥವಾ ಪ್ರಚಾರ ಮಾಡದೆ ವಿಶೇಷ ಅಧಿವೇಶನ ಕರೆಯುತ್ತಿರುವುದು ಇದೇ ಮೊದಲು' ಎಂದರು.

ಬೆಲೆ ಏರಿಕೆ, ನಿರುದ್ಯೋಗ ಹೆಚ್ಚಳ, ಅಸಮಾನತೆ ಹೆಚ್ಚಳ, ಸಣ್ಣ ಕೈಗಾರಿಕಾ ಕ್ಷೇತ್ರ ಎದುರಿಸುತ್ತಿರುವ ಬಿಕ್ಕಟ್ಟು ಕೇಂದ್ರೀಕರಿಸಿ ಪ್ರಸ್ತುತ ಆರ್ಥಿಕ ಪರಿಸ್ಥಿತಿಯ ಕುರಿತು ಚರ್ಚೆ ನಡೆಸಬೇಕು ಎಂದು ಸೋನಿಯಾ ಪತ್ರದಲ್ಲಿ ಒತ್ತಾಯಿಸಿದ್ದಾರೆ.

ಅದಾನಿ ಸಮೂಹದ ವಹಿವಾಟಿನ ಬಗ್ಗೆ ಜಂಟಿ ಸಂಸದೀಯ ಸಮಿತಿಯ (ಜೆಪಿಸಿ) ತನಿಖೆ ನಡೆಸಬೇಕು. ಮಣಿಪುರದ ಜನರು ಎದುರಿಸುತ್ತಿರುವ ನಿರಂತರ ಸಂಕಟದ ಬಗ್ಗೆ ಚರ್ಚಿಸಬೇಕು ಎಂದು ಆಗ್ರಹಿಸಿದ್ದಾರೆ.

'ಕಾಂಗ್ರೆಸ್‌ನ ಮಾಜಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಹಿರಿಯ ಸಂಸದರಾಗಿದ್ದರೂ ಮುಂಬರುವ ಸಂಸತ್ತಿನ ಅಧಿವೇಶನಕ್ಕೆ ಸಂಬಂಧಿಸಿದಂತೆ ಅನಗತ್ಯ ವಿವಾದ ಸೃಷ್ಟಿಸಲು ಯತ್ನಿಸುತ್ತಿರುವುದು ದುರದೃಷ್ಟಕರ. ಸಂಸತ್ತಿನ ಅಧಿವೇಶನವನ್ನು ಕರೆಯುವುದು ಭಾರತ ಸರ್ಕಾರದ ಸಾಂವಿಧಾನಿಕ ಹಕ್ಕು. ಸಂಸತ್ತಿನ ಘನತೆ ಕಾಪಾಡಲು ಎಲ್ಲ ಪಕ್ಷಗಳು ಸಂಪೂರ್ಣ ಸಹಕಾರ ನೀಡುತ್ತವೆ ಎಂದು ಭಾವಿಸುತ್ತೇನೆ' ಎಂದು ಜೋಶಿ ಪತ್ರದಲ್ಲಿ ಹೇಳಿದ್ದಾರೆ.

ಎಲ್ಲ ಕಾರ್ಯವಿಧಾನಗಳನ್ನು ಅನುಸರಿಸಿ ಸೆಪ್ಟೆಂಬರ್ 18 ರಿಂದ ಸಂಸತ್ತಿನ ಅಧಿವೇಶನವನ್ನು ಕರೆಯಲಾಗಿದೆ. ರಾಜಕೀಯ ಪಕ್ಷಗಳನ್ನು ಎಂದಿಗೂ ಮುಂಚಿತವಾಗಿ ಸಮಾಲೋಚಿಸುವುದಿಲ್ಲ ಎಂದು ಜೋಶಿ ಹೇಳಿದರು. ಸೋನಿಯಾ ಪತ್ರದಲ್ಲಿ ಪ್ರಸ್ತಾಪಿಸಿರುವ ವಿಷಯ ಕುರಿತು ಮುಂಗಾರು ಅಧಿವೇಶನದಲ್ಲೇ ಚರ್ಚಿಸಲಾಗಿದೆ ಹಾಗೂ ಸರ್ಕಾರದಿಂದ ಉತ್ತರ ನೀಡಲಾಗಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ಗಣೇಶ ಚತುರ್ಥಿ ದಿನ ಹೊಸ ಕಟ್ಟಡಕ್ಕೆ ಸಂಸತ್ ಅಧಿವೇಶನ ಸ್ಥಳಾಂತರ

ನವದೆಹಲಿ: ಸಂಸತ್‌ನ ವಿಶೇಷ ಅಧಿವೇಶನವು ಇದೇ 18ರಂದು ಸಂಸತ್‌ನ ಹಳೆಯ ಕಟ್ಟಡದಲ್ಲಿ ಪ್ರಾರಂಭವಾಗಲಿದೆ. ಎರಡನೇ ದಿನದ ಅಧಿವೇಶನ ಸೆ.19ರಂದು ಗಣೇಶ ಚತುರ್ಥಿ ಸಂದರ್ಭ ಸಂಸತ್‌ನ ಹೊಸ ಕಟ್ಟಡಕ್ಕೆ ಸ್ಥಳಾಂತರವಾಗಲಿದೆ.

ಮೂಲಗಳ ಪ್ರಕಾರ, ಈ ವಿಶೇಷ ಅಧಿವೇಶನದ ಮೊದಲ ದಿನ ಸಂಸತ್ತಿನ ಉಭಯ ಸದನಗಳ ಕಲಾಪ ಈ ಹಿಂದೆ ಇದ್ದ ರೀತಿಯಲ್ಲಿಯೇ ಸಂಸತ್ತಿನ ಹಳೆಯ ಕಟ್ಟಡದಲ್ಲಿ ಆರಂಭವಾಗಲಿದೆ. ಎರಡನೇ ದಿನದಿಂದ (ಸೆ.19) ಉಭಯ ಸದನಗಳ ಕಲಾಪಗಳು ಹೊಸ ಕಟ್ಟಡದಲ್ಲಿ ನಡೆಯಬಹುದು. ಹಿಂದೂ ನಂಬಿಕೆಯಂತೆ, ಗಣೇಶನಿಗೆ ಪೂಜೆ ಸಲ್ಲಿಸುವ ಮೂಲಕ ಹೊಸ ಕಟ್ಟಡದಲ್ಲಿ ಕಲಾಪ ಪ್ರಾರಂಭಿಸುವುದು ಮಂಗಳಕರ. ಹೊಸ ಕಟ್ಟಡದಲ್ಲಿ ಶುಭ ದಿನದಂದು ಅಧಿವೇಶನ ಪ್ರಾರಂಭಿಸಲು ಸರ್ಕಾರ ಗಣೇಶ ಚತುರ್ಥಿ ಆಯ್ದುಕೊಂಡಿದೆ ಎಂದು ಮೂಲಗಳು ಹೇಳಿವೆ.

ಕೇಂದ್ರ ಸರ್ಕಾರವು ಸೆ.18ರಿಂದ ಸೆ.22ರವರೆಗೆ ವಿಶೇಷ ಅಧಿವೇಶನ ಕರೆದಿದೆ. ಆದಾಗ್ಯೂ, ಸಂಸತ್ತಿನ ಹೊಸ ಕಟ್ಟಡದಲ್ಲಿ ಕಲಾಪಗಳು ನಡೆಯುವ ಬಗ್ಗೆ ಈವರೆಗೆ ಯಾವುದೇ ಅಧಿಕೃತ ಘೋಷಣೆ ಹೊರಬಿದ್ದಿಲ್ಲ.

ಸುದ್ದಿ ಚಾನಲ್‌ನ ಪ್ರಧಾನ ಸಂಪಾದಕ ಸೇರಿ ಇಬ್ಬರ ವಿರುದ್ಧ ಎಫ್‌ಐಆರ್


ಮುಂಬೈ (ಪಿಟಿಐ): ಲೈಂಗಿಕ ಪ್ರಚೋದನಾತ್ಮಕ ವಿಡಿಯೊ ಪ್ರಸಾರ ಮಾಡಿದ್ದ ಆರೋಪದಡಿ ಇಲ್ಲಿನ ಪ್ರಾದೇಶಿಕ ಸುದ್ದಿ ಚಾನಲ್‌ನ ಪ್ರಧಾನ ಸಂಪಾದಕ ಮತ್ತು ಮಾಧ್ಯಮ ಪ್ರತಿನಿಧಿಯ ವಿರುದ್ಧ ಪೊಲೀಸರು ಎಫ್‌ಐಆರ್ ದಾಖಲು ಮಾಡಿದ್ದಾರೆ.

ಕಿರಿಟ್ ಸೋಮೈಯ ಕುರಿತ ತಿರುಚಲಾದ ವಿಡಿಯೊ ಪ್ರಕರಣದ ಸಂಬಂಧ 'ಲೋಕಶಾಹಿ' ಸುದ್ದಿ ಚಾನಲ್‌ನ ಪ್ರಧಾನ ಸಂಪಾದಕ ಕಮಲೇಶ್ ಸುತಾರ್ ಮತ್ತು ಮಾಧ್ಯಮ ಪ್ರತಿನಿಧಿ ಅನಿಲ್ ತಟ್ಟೆ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ.

ಬಿಜೆಪಿ ನಾಯಕ, ಮಾಜಿ ಸಂಸದ ಸೋಮೈಯ ಅವರು ಈ ಕುರಿತು ದೂರು ನೀಡಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ. 'ತನಿಖೆಗೆ ಪೂರ್ಣ ಸಹಕಾರ ನೀಡುತ್ತೇವೆ. ಆದರೆ, ಪ್ರಶ್ನಿಸುವುದನ್ನು ನಿಲ್ಲಿಸುವುದಿಲ್ಲ' ಎಂದು ಸುತಾರ್ ಪ್ರತಿಕ್ರಿಯಿಸಿದ್ದಾರೆ.

ಇಬ್ಬರ ವಿರುದ್ಧ ಭಾರತೀಯ ಅಪರಾಧ ಸಂಹಿತೆಯ ಸೆಕ್ಷನ್ 500 (ಮಾನಹಾನಿ), ಸೆಕ್ಷನ್ 66ಇ (ಖಾಸಗೀತನದ ಉಲ್ಲಂಘನೆ), ಹಾಗೂ ಮಾಹಿತಿ ತಂತ್ರಜ್ಞಾನ ಕಾಯ್ದೆಯ 67ಎ (ಲೈಂಗಿಕ ಪ್ರಚೋದನಾತ್ಮಕ ಅಡಕಗಳ ಪ್ರಸಾರ) ಅನ್ವಯ ಪ್ರಕರಣ ದಾಖಲಾಗಿದೆ.

ರಷ್ಯಾ ವಿದೇಶಾಂಗ ಸಚಿವರ ಜೊತೆ ಜೈಶಂಕರ್ ಚರ್ಚೆ



ಎಸ್.ಜೈಶಂಕರ್

ಜಕಾರ್ತಾ (ಪಿಟಿಐ): ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರು ಬುಧವಾರ ಇಲ್ಲಿ ಇಂಡೊನೇಷ್ಯಾ ಮತ್ತು ರಷ್ಯಾದ ವಿದೇಶಾಂಗ ಸಚಿವರನ್ನು ಪ್ರತ್ಯೇಕವಾಗಿ ಭೇಟಿ ಮಾಡಿದ್ದು, ಜಿ20 ಶೃಂಗಸಭೆ, ದ್ವಿಪಕ್ಷೀಯ ಬಾಂಧವ್ಯ ಕುರಿತು ಚರ್ಚಿಸಿದರು.

ಇಂಡೊನೇಷ್ಯಾದ ರೆಟ್ನೊ ಮಾರ್ಸುಡಿ ಹಾಗೂ ರಷ್ಯಾದ ಸೆರ್ಗಿ ಲಾವ್ರೋವ್ ಅವರ ಜೊತೆಗೆ ಚರ್ಚಿಸಿದರು. ಜೈಶಂಕರ್ ಅವರು ಇಲ್ಲಿಗೆ 20ನೇ ಆಸಿಯಾನ್-ಇಂಡಿಯಾ ಶೃಂಗಸಭೆಯಲ್ಲಿ ಪಾಲ್ಗೊಳ್ಳಲು ಬಂದಿದ್ದಾರೆ.

ಆಸಿಯಾನ್ ದೇಶಗಳ ಅಧ್ಯಕ್ಷರಾಗಿ ಇಂಡೊನೇಷ್ಯಾವು ಈ ಶೃಂಗಸಭೆಯನ್ನು ಆಯೋಜಿಸುತ್ತಿದೆ. ಎರಡು ರಾಷ್ಟ್ರಗಳ ವಿದೇಶಾಂಗ ಸಚಿವರ ಜೊತೆಗಿನ ಭೇಟಿ ಕುರಿತು ಜೈಶಂಕರ್ ಅವರು 'ಎಕ್ಸ್' ವೇದಿಕೆಯಲ್ಲಿ ಸಂದೇಶವನ್ನು ಪೋಸ್ಟ್ ಮಾಡಿದ್ದಾರೆ.

20ನೇ ಆಸಿಯಾನ್-ಇಂಡಿಯಾ ಶೃಂಗಸಭೆ ಹಾಗೂ 18ನೇ ಪೂರ್ವ ಏಷ್ಯಾ ಶೃಂಗಸಭೆಯಲ್ಲಿ ಪಾಲ್ಗೊಳ್ಳಲು ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ ಇಲ್ಲಿಗೆ ಆಗಮಿಸುತ್ತಿದ್ದಾರೆ.

ಚಂಡಮಾರುತಕ್ಕೆ ಇಬ್ಬರು ಬಲಿ

ಬೀಜಿಂಗ್ (ಎಪಿ): ಚೀನಾದ ಆಗ್ನೇಯ ಭಾಗದಲ್ಲಿರುವ ಫುಜಿಯಾನ್ ಪ್ರಾಂತ್ಯಕ್ಕೆ ಅಪ್ಪಳಿಸಿರುವ 'ಹೈಕುಯ್' ಚಂಡಮಾರುತಕ್ಕೆ ಇಬ್ಬರು ಮೃತರಾಗಿದ್ದಾರೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

ಶಾಲೆಗಳಿಗೆ ರಜೆ ಘೋಷಿಸಲಾಗಿದ್ದು, ವಿಮಾನ, ಬಸ್ಸು, ರೈಲು ಸಂಚಾರ ಸ್ಥಗಿತಗೊಳಿಸಲಾಗಿದೆ. ಅಂದಾಜು 30,000ಕ್ಕೂ ಹೆಚ್ಚು ಜನರನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲಾಗಿದೆ.

ಘಟನೆಯಲ್ಲಿ ಇಬ್ಬರು ಅಗ್ನಿಶಾಮಕ ಸಿಬ್ಬಂದಿ ಮೃತರಾಗಿದ್ದು, ಪೊಲೀಸ್ ಅಧಿಕಾರಿಯೊಬ್ಬರು ಕಾಣೆಯಾಗಿದ್ದಾರೆ ಎಂದು ಫುಝೌಹ್ ಅಗ್ನಿಶಾಮಕ ಇಲಾಖೆ ಸಾಮಾಜಿಕ ಮಾಧ್ಯಮದಲ್ಲಿ ಹೇಳಿದೆ.



ರಾಧಾ–ಕೃಷ್ಣ ಪಂಜಾಬ್‌ನ ಅಮೃತಸರದಲ್ಲಿ ಬುಧವಾರ ಶ್ರೀಕೃಷ್ಣ ಜನ್ಮಾಷ್ಟಮಿ ಆಚರಣೆ ವೇಳೆ ಕೃಷ್ಣ ಮತ್ತು ರಾಧೆಯ ವೇಷಧಾರಿ ವಿದ್ಯಾರ್ಥಿಗಳಿಗೆ ಶಾಲಾ ಮಕ್ಕಳು ಪುಷ್ಪವೃಷ್ಟಿಗರೆದರು – ಪಿಟಿಐ ಚಿತ್ರ

ದಿವಾಳಿ: ಬರ್ಮಿಂಗ್‌ಹ್ಯಾಂ ಘೋಷಣೆ

ಲಂಡನ್ (ಪಿಟಿಐ): ಬ್ರಿಟನ್‌ನ ಎರಡನೇ ದೊಡ್ಡ ನಗರವಾದ ಬರ್ಮಿಂಗ್‌ಹ್ಯಾಂನ ಸ್ಥಳೀಯ ಆಡಳಿತವು ದಿವಾಳಿಯಾಗಿರುವುದಾಗಿ ಘೋಷಿಸಿಕೊಂಡಿದೆ. ಆಡಳಿತದ ವಾರ್ಷಿಕ ಬಜೆಟ್‌ನಲ್ಲಿ ಲಕ್ಷಾಂತರ ಪೌಂಡ್‌ಗಳಷ್ಟು ಕೊರತೆಯಾದ ಕಾರಣ ಈ ನಿರ್ಧಾರ ತೆಗೆದುಕೊಂಡಿದೆ.

ದುರ್ಬಲರ ರಕ್ಷಣೆ, ಶಾಸನಬದ್ಧ ಸೇವೆಗಳ ಹೊರತಾಗಿ ಬಾಕಿ ಎಲ್ಲಾ ಖರ್ಚುಗಳನ್ನು ಕೂಡಲೇ ನಿಲ್ಲಿಸಲಾಗುವುದು ಎಂದು ಬರ್ಮಿಂಗ್‌ಹ್ಯಾಂ ಸ್ಥಳೀಯ ಆಡಳಿತ ಮಂಡಳಿ ನೋಟಿಸ್ ಹೊರಡಿಸಿದೆ.

ಈ ಸ್ಥಳೀಯ ಆಡಳಿತವು ವಿರೋಧ ಪಕ್ಷವಾದ ಲೇಬರ್ ಪಕ್ಷದ ಆಡಳಿತಕ್ಕೆ ಒಳಪಟ್ಟಿದೆ. ಇದು ಯುರೋಪ್‌ನ ಅತ್ಯಂತ ದೊಡ್ಡ ಸ್ಥಳೀಯ ಆಡಳಿತವಾಗಿದ್ದು, ಸುಮಾರು 100 ಕೌನ್ಸಿಲರ್‌ಗಳನ್ನು ಒಳಗೊಂಡಿದೆ.


ಮತಾಂತರ: ಪಿಐಎಲ್ ವಜಾ

ನವದೆಹಲಿ (ಪಿಟಿಐ): ದೇಶದಲ್ಲಿ ಧಾರ್ಮಿಕ ಮತಾಂತರಕ್ಕೆ ಕಡಿವಾಣ ಹಾಕಲು ಕೇಂದ್ರ ಸರ್ಕಾರಕ್ಕೆ ಸೂಕ್ತ ನಿರ್ದೇಶನ ನೀಡುವಂತೆ ಕೋರಿ ಸಲ್ಲಿಕೆಯಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಸುಪ್ರೀಂ ಕೋರ್ಟ್, ಬುಧವಾರ ವಜಾಗೊಳಿಸಿದೆ.

ಹಿಂದೂ ಮತ್ತು ಅಲ್ಪಸಂಖ್ಯಾತ ಸಮುದಾಯದವರನ್ನು ಗುರಿಯಾಗಿಸಿಕೊಂಡು ಆಮಿಷವೊಡ್ಡಿ ಮತಾಂತರ ಮಾಡಲಾಗುತ್ತಿದೆ. ಇದಕ್ಕೆ ನಿಯಂತ್ರಣ ಹೇರಬೇಕಿದೆ ಎಂದು ಕರ್ನಾಟಕ ಮೂಲದ ಜೆರೋಮ್ ಆಂಟೊ ಎಂಬುವರು ಅರ್ಜಿ ಸಲ್ಲಿಸಿದ್ದರು.

ಇದರ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ, ಮನೋಜ್ ಮಿಶ್ರಾ ಅವರಿದ್ದ ತ್ರಿಸದಸ್ಯ ನ್ಯಾಯಪೀಠವು, 'ಈ ವಿಷಯದಲ್ಲಿ ನ್ಯಾಯಾಲಯ ಏಕೆ ಮಧ್ಯ ಪ್ರವೇಶಿಸಬೇಕು? ಈ ನಿಟ್ಟಿನಲ್ಲಿ ಆಡಳಿತಾತ್ಮಕ ಕ್ರಮಕೈಗೊಳ್ಳುವಂತೆ ಸರ್ಕಾರಕ್ಕೆ ಸೂಚಿಸಲು ಹೇಗೆ ಸಾಧ್ಯ' ಎಂದು ಪ್ರಶ್ನಿಸಿತು. 'ಇದು ಯಾವ ತರಹದ ಅರ್ಜಿ? ಪ್ರತಿಯೊಬ್ಬರು ಪಿಐಎಲ್ ಅನ್ನು ಸಾಧನವಾಗಿ ಬಳಸಿಕೊಂಡು ನ್ಯಾಯಾಲಯಕ್ಕೆ ಈ ರೀತಿಯ ಅರ್ಜಿ ಸಲ್ಲಿಸುತ್ತಿದ್ದಾರೆ' ಎಂದು ಹೇಳಿತು.

ಗ್ರೀನ್‌ಕಾರ್ಡ್ ನಿರೀಕ್ಷೆಯಲ್ಲಿ 10 ಲಕ್ಷ ಭಾರತೀಯರು



ವಾಷಿಂಗ್ಟನ್(ಪಿಟಿಐ): ಅಮೆರಿಕದಲ್ಲಿ ಶಾಶ್ವತವಾಗಿ ನೆಲೆಸುವುದಕ್ಕಾಗಿ ನೀಡುವ, ಉದ್ಯೋಗ ಆಧಾರಿತ ಗ್ರೀನ್ ಕಾರ್ಡ್‌ಗಾಗಿ 10.5 ಲಕ್ಷಕ್ಕೂ ಹೆಚ್ಚು ಭಾರತೀಯರು ಕಾಯುತ್ತಿದ್ದಾರೆ.

ಈ ಕಾರ್ಡ್ ಪಡೆಯುವುದಕ್ಕಾಗಿ ಕಾಯುತ್ತಿರುವವರ ಸಂಖ್ಯೆ ದೊಡ್ಡದು. ದೇಶವಾರು ನಿಗದಿ ಮಾಡಿರುವ ಮಿತಿಯಿಂದಾಗಿ ಬಹಳ ವರ್ಷಗಳವರೆಗೆ ಕಾಯುವುದು ಅನಿವಾರ್ಯವಾಗಿದೆ.

ಕಾರ್ಡ್‌ಗಾಗಿ ಕಾಯುತ್ತಿರುವವರ ಸಂಖ್ಯೆ ಎಷ್ಟು ದೊಡ್ಡದಿದೆ ಅಂದರೆ, ಗ್ರೀನ್ ಕಾರ್ಡ್ ಕೈಸೇರುವ ಮುನ್ನವೇ 4 ಲಕ್ಷದಷ್ಟು ಭಾರತೀಯರು ಮೃತಪಡಬಹುದು ಎಂದು ಮೂಲಗಳು ಹೇಳಿವೆ.

ಗ್ರೀನ್ ಕಾರ್ಡ್‌ಗಾಗಿ ಕಾಯುತ್ತಿರುವವರ ಸಂಖ್ಯೆ ಈ ವರ್ಷ ದಾಖಲೆಯ 10.8 ಲಕ್ಷದ ಗಡಿ ತಲುಪಿದೆ. ಈ ಪೈಕಿ 10.1 ಲಕ್ಷದಷ್ಟು (ಶೇ 63) ಭಾರತೀಯರಿದ್ದರೆ, ಚೀನಾ ಪ್ರಜೆಗಳ ಸಂಖ್ಯೆ 2.50 ಲಕ್ಷ (ಶೇ 14) ಎಂಬುದು 'ಕ್ಯಾಟೊ ಇನ್‌ಸ್ಟಿಟ್ಯೂಟ್'ನ ಡೇವಿಡ್ ಬಿಯರ್ ನಡೆಸಿರುವ ಅಧ್ಯಯನದಿಂದ ತಿಳಿದುಬಂದಿದೆ.


ಬೀಜಿಂಗ್‌ನ ಹೊಸ ನಕ್ಷೆ; ಜಪಾನ್ ಪ್ರತಿಭಟನೆ

ಬೀಜಿಂಗ್ (ಪಿಟಿಐ): ಪೂರ್ವ ಚೀನಾ ಸಮುದ್ರದಲ್ಲಿನ ವಿವಾದಿತ ಸೆಂಕಾಕು ದ್ವೀಪಗಳನ್ನು ತನ್ನ ಭೂಪ್ರದೇಶದ ಭಾಗವಾಗಿ ಸೇರ್ಪಡೆ ಮಾಡಿಕೊಂಡು ಹೊಸ 'ನಕ್ಷೆ' ಪ್ರಕಟಿಸಿರುವ ಚೀನಾದ ವಿರುದ್ಧ ಜಪಾನ್ ಪ್ರತಿಭಟನೆ ದಾಖಲಿಸಿದೆ.

ಈಗಾಗಲೇ ಚೀನಾದ ಹೊಸ ನಕ್ಷೆ ವಿರುದ್ಧ ಪ್ರತಿಭಟನೆ ದಾಖಲಿಸಿರುವ ಭಾರತ, ಫಿಲಿಪ್ಪೀನ್ಸ್, ಮಲೇಷ್ಯಾ, ವಿಯೆಟ್ನಾಂ, ತೈವಾನ್ ಜೊತೆಗೆ ಇದೀಗ ಜಪಾನ್ ಸಹ ಕೈಜೋಡಿಸಿದೆ.

ಹೊಸ ನಕ್ಷೆ ಕುರಿತಂತೆ ಜಪಾನ್ ರಾಜತಾಂತ್ರಿಕ ಮಾರ್ಗಗಳ ಮೂಲಕ ಚೀನಾಕ್ಕೆ ಬಲವಾದ ಪ್ರತಿಭಟನೆ ಸಲ್ಲಿಸಿದೆ ಎಂದು ಜಪಾನ್‌ನ ಮುಖ್ಯ ಸಂಪುಟ ಕಾರ್ಯದರ್ಶಿ ಹಿರೊಕಾಝು ಮತ್ಸುನೊ ಟೋಕಿಯೊದಲ್ಲಿ ಮಾಧ್ಯಮಗಳಿಗೆ ತಿಳಿಸಿದರು.

ಷೇರುಪೇಟೆ ವಹಿವಾಟು 100



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,575
ಇಂದಿನ ಅಂತ್ಯ	19,611
▲	36
ದಿನದ ಗರಿಷ್ಠ	19,636

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹480
12 ಮೊಟ್ಟೆಗೆ	₹65
ಮೈಸೂರು	
100 ಮೊಟ್ಟೆಗೆ	₹480

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1720(1730)
ಸೋಯಾ (ರಿಫೈನ್ಡ್)	₹915(920)
ಸೂರ್ಯಕಾಂತಿ (ರಿಫೈನ್ಡ್)	₹920(922)
ಪಾಮೋಲಿನ್	₹842(843)

ವಿನಿಮಯ ದರ

$ ಡಾಲರ್	83.13
£ ಪೌಂಡ್	104.38
€ ಯುರೊ	89.23
¥ ಯೆನ್ (100ಕ್ಕೆ)	56

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ತಿಪಟೂರು	₹4500-7300
ತುರುವೇಕೆರೆ	---
ತುಮಕೂರು	₹3800-4200

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿ)

ಆರ್‌ಎಸ್‌ಎಸ್-4	₹145
ಆರ್‌ಎಸ್‌ಎಸ್-5	₹138
ಗುಡ್ ಲಾಟ್	₹126

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಕೆ.ಜಿ)	₹322-553
ದ್ವಿತಳಿ (ಕೆ.ಜಿ)	₹312-672

ಬಿಐಎಎಲ್: ದಾಖಲೆ ಪ್ರಮಾಣದ ಮಾವು ರಫ್ತು

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಮೂಲಕ ಮಾಡಲಾದ ಮಾವು ರಫ್ತಿನಲ್ಲಿ ದಾಖಲೆ ಪ್ರಮಾಣದ ಏರಿಕೆ ಕಂಡಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ 2023ರಲ್ಲಿ ಮಾವು ರಫ್ತಿನಲ್ಲಿ ಶೇ 124ರಷ್ಟು ಹೆಚ್ಚಳವಾಗಿದೆ.

ಪ್ರಸಕ್ತ ವರ್ಷದಲ್ಲಿ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ರಫ್ತು ವಿಭಾಗದ ಮೂಲಕ 6,84,648 ಕೆ.ಜಿ ಮಾವಿನ ಹಣ್ಣು ರವಾನೆ ಆಗಿದೆ. ಹಿಂದಿನ ವರ್ಷದಲ್ಲಿ 3,05,521 ಕೆ.ಜಿ ರಫ್ತಾಗಿತ್ತು. ಈ ಋತುವಿನಲ್ಲಿ ಕಾಯಿಗಳ ರಫ್ತಿನಲ್ಲಿ ಶೇ 86ರಷ್ಟು ಹೆಚ್ಚಳವಾಗಿದೆ.

ವಿಮಾನ ನಿಲ್ದಾಣದ ರಫ್ತು ಜಾಲ 60ಕ್ಕೂ ಹೆಚ್ಚು ಅಂತರರಾಷ್ಟ್ರೀಯ ಸ್ಥಳಗಳಿಗೆ ಕೊಂಡಿಯಾಗಿದೆ. ಈ ವರ್ಷ ಅಮೆರಿಕಕ್ಕೆ ಗಮನಾರ್ಹ ಪ್ರಮಾಣದಲ್ಲಿ ರಫ್ತು ಹೆಚ್ಚಾಗಿದೆ ಎಂದು ಬಿಐಎಎಲ್ ಮುಖ್ಯ ಕಾರ್ಯತಂತ್ರ ಮತ್ತು ಅಭಿವೃದ್ಧಿ ಅಧಿಕಾರಿ ಸತ್ಯಕಿ ರಘುನಾಥ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸೆನ್ಸೆಕ್ಸ್ ಅಲ್ಪ ಗಳಿಕೆ

ಮುಂಬೈ (ಪಿಟಿಐ): ಎಚ್‌ಡಿಎಫ್‌ಸಿ ಬ್ಯಾಂಕ್ ಷೇರುಗಳ ಖರೀದಿ ಹಾಗೂ ಏಷ್ಯಾದ ಇತರ ಷೇರುಪೇಟೆಗಳಲ್ಲಿ ನಡೆದ ಉತ್ತಮ ವಹಿವಾಟಿನ ಪರಿಣಾಮವಾಗಿ ದೇಶಿ ಷೇರು ಮಾರುಕಟ್ಟೆಗಳು ಬುಧವಾರ ಏರಿಕೆ ದಾಖಲಿಸಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 100 ಅಂಶ, ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 36 ಅಂಶ ಏರಿಕೆ ಕಂಡವು.

ಬಿಎಸ್‌ಇ ಮಿಡ್‌ಕ್ಯಾಪ್ ಸೂಚ್ಯಂಕ ಅಲ್ಪ ಏರಿಕೆ ಕಂಡಿದೆ. ಸ್ಮಾಲ್‌ಕ್ಯಾಪ್ ಸೂಚ್ಯಂಕವು ಅಲ್ಪ ಇಳಿಕೆ ದಾಖಲಿಸಿದೆ. 'ಕಚ್ಚಾ ತೈಲದ ಬೆಲೆಯಲ್ಲಿನ ಏರಿಕೆಯು ಹಣದುಬ್ಬರ ಹೆಚ್ಚಾಗುವ ಭೀತಿಯನ್ನು ಎಲ್ಲೆಡೆ ಮೂಡಿಸಿದೆ. ಇದರಿಂದಾಗಿ ವಿದೇಶಿ ಬಂಡವಾಳ ಹೂಡಿಕೆದಾರರ ಖರೀದಿ ಭರಾಟೆ ಕಡಿಮೆ ಆಗಿದೆ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ವಿದೇಶಿ ಹೂಡಿಕೆದಾರರು (ಎಫ್‌ಐಐ) ಬುಧವಾರ ಒಟ್ಟು ₹3,245 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಎನ್‌ಎಸ್‌ಇ, ಬಿಎಸ್‌ಇಗೆ ಸ್ಪಷ್ಟನೆ ನೀಡಿದ ಕಂಪನಿ

ಹಲ್ದಿರಾಮ್ಸ್ ಸ್ವಾಧೀನ ಇಲ್ಲ: ಟಾಟಾ

ನವದೆಹಲಿ (ಪಿಟಿಐ/ರಾಯಿಟರ್ಸ್): ಕುರುಕಲು ತಿಂಡಿಗಳ ತಯಾರಿಕೆಯಲ್ಲಿ ಜನಪ್ರಿಯವಾಗಿರುವ ಹಲ್ದಿರಾಮ್ಸ್ ಕಂಪನಿಯ ಕನಿಷ್ಠ ಶೇಕಡ 51ರಷ್ಟು ಷೇರುಗಳನ್ನು ಖರೀದಿಸುವ ಸಂಬಂಧ ಯಾವುದೇ ಮಾತುಕತೆ ನಡೆದಿಲ್ಲ ಎಂದು ಟಾಟಾ ಕನ್ಸ್ಯೂಮರ್ ಪ್ರಾಡಕ್ಟ್ಸ್ ಸ್ಪಷ್ಟಪಡಿಸಿದೆ.

ಟಾಟಾ ಕನ್ಸ್ಯೂಮರ್ ಪ್ರಾಡಕ್ಟ್ಸ್ (ಟಿಸಿಪಿಎಲ್) ಕಂಪನಿಯು ಹಲ್ದಿರಾಮ್ಸ್‌ನಲ್ಲಿ ಗರಿಷ್ಠ ಪ್ರಮಾಣದ ಷೇರುಗಳನ್ನು ಖರೀದಿಸಲು ಮಾತುಕತೆ ನಡೆಸುತ್ತಿದೆ ಎಂದು ರಾಯಿಟರ್ಸ್ ಸುದ್ದಿಸಂಸ್ಥೆ ವರದಿ ಮಾಡಿತ್ತು. ಆದರೆ, ಹಲ್ದಿರಾಮ್ಸ್‌ನ ಮಾರುಕಟ್ಟೆ ಮೌಲ್ಯದ ವಿಚಾರವಾಗಿ ಒಮ್ಮತಕ್ಕೆ ಬರಲು ಸಾಧ್ಯವಾಗಿಲ್ಲ ಎಂದು ಮೂಲಗಳು ಹೇಳಿರುವುದಾಗಿ ವರದಿಯಲ್ಲಿ ಉಲ್ಲೇಖಿಸಲಾಗಿತ್ತು.

ಆದರೆ, ಅಂತಹ ಯಾವುದೇ ಮಾತುಕತೆಯನ್ನು ನಡೆಸಿಲ್ಲ ಎಂದು ಟಿಸಿಪಿಎಲ್ ಷೇರುಪೇಟೆಗೆ ತಿಳಿಸಿದೆ. ಈ ಕುರಿತಾದ ವರದಿಯ ಬಗ್ಗೆ ಸ್ಪಷ್ಟನೆ ನೀಡುವಂತೆ ಮುಂಬೈ ಮತ್ತು ರಾಷ್ಟ್ರೀಯ ಷೇರುಪೇಟೆಗಳು ಟಿಸಿಪಿಎಲ್ ಕಂಪನಿಯನ್ನು ಕೇಳಿದ್ದವು.

ಹಲ್ದಿರಾಮ್ಸ್‌ನ ವಾರ್ಷಿಕ ವರಮಾನ ₹12,468 ಕೋಟಿ ಇದೆ ಎಂದು ಮೂಲಗಳು ಹೇಳಿರುವುದಾಗಿ ರಾಯಿಟರ್ಸ್ ವರದಿ ಮಾಡಿತ್ತು.

ಕುರುಕಲು ತಿಂಡಿ ಮಾರುಕಟ್ಟೆ

₹51,534 ಕೋಟಿ
ದೇಶಿ ಮಾರುಕಟ್ಟೆಯ ಒಟ್ಟು ಮೌಲ್ಯ

13%
ಹಲ್ದಿರಾಮ್ಸ್ ಪಾಲು

13% ಲೇಸ್ ಚಿಪ್ಸ್‌ಗೆ
ಜನಪ್ರಿಯವಾಗಿರುವ ಪೆಪ್ಸಿ ಪಾಲು

ಯುರೊಮಾನಿಟರ್ ಇಂಟರ್‌ನ್ಯಾಷನಲ್ ಕಂಪನಿಯ ಮಾಹಿತಿ

ಮಲಬಾರ್ ಮಳಿಗೆಗಳಲ್ಲಿ ಆಭರಣ ಹಬ್ಬ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್ ಕಂಪನಿಯು ತನ್ನ ಮಳಿಗೆಗಳಲ್ಲಿ 'ರತ್ನದ ಆಭರಣಗಳ ಹಬ್ಬ'ಕ್ಕೆ ಚಾಲನೆ ನೀಡಿದೆ.

ಇದರ ಅಡಿಯಲ್ಲಿ, ಅಮೂಲ್ಯ ರತ್ನವನ್ನು ಹಾಗೂ ಅನ್‌ಕಟ್ ವಜ್ರವನ್ನು ಬಳಸಿರುವ ಚಿನ್ನದ ಆಭರಣಗಳ ಪ್ರದರ್ಶನ ಇರಲಿದೆ.

ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್‌ನ ಮಳಿಗೆಗಳಲ್ಲಿ ಈ ಪ್ರದರ್ಶನವು ಸೆಪ್ಟೆಂಬರ್ 17ರವರೆಗೆ ಇರಲಿದೆ. 'ರತ್ನದ ಆಭರಣಗಳ

MALABAR
GOLD & DIAMONDS
CELEBRATE THE BEAUTY OF LIFE

ಹಬ್ಬವನ್ನು ಆಚರಿಸುತ್ತಿರುವುದಕ್ಕೆ ನಮಗೆ ಸಂತಸವಾಗಿದೆ. ಆಭರಣ ಖರೀದಿದಾರರು ಅತ್ಯುತ್ತಮ ಗುಣಮಟ್ಟದ, ಶುದ್ಧತೆಯ, ನ್ಯಾಯಯುತ ಬೆಲೆ ಹೊಂದಿರುವ ಮತ್ತು ಮರುಖರೀದಿಯ ಖಾತರಿ ಇರುವ ನಮ್ಮ ಉತ್ಪನ್ನಗಳನ್ನು ಖುಷಿಯಿಂದ ಖರೀದಿಸಬಹುದು' ಎಂದು ಮಲಬಾರ್ ಸಮೂಹದ ಅಧ್ಯಕ್ಷ ಎಂ.ಪಿ. ಅಹಮದ್ ಅವರು ಹೇಳಿದ್ದಾರೆ.

ಅಮೂಲ್ಯವಾದ ರತ್ನಗಳನ್ನು ಹೊಂದಿರುವ ಆಭರಣಗಳು ಭಾರತದಲ್ಲಿ ಹಾಗೂ ವಿದೇಶಗಳಲ್ಲಿ ಜನಪ್ರಿಯವಾಗಿವೆ. ಮಲಬಾರ್ ಸಮೂಹವು ನೈಸರ್ಗಿಕ ರತ್ನಗಳನ್ನು ಬಳಸುತ್ತದೆ ಹಾಗೂ ಅವುಗಳಿಗೆ ಗುಣಮಟ್ಟದ ವಿಚಾರವಾಗಿ ಪ್ರಮಾಣಪತ್ರ ಪಡೆದಿರುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

6–9–2023

ಜಾವಾ 70/80(ಹೊಸ)	12700-12800
ಜಾವಾ 80/90(ಹೊಸ)	12100-12200
ದಪ್ಪ ಮಧ್ಯಪ್ರದೇಶ(ಹೊಸ)	11200-11300
ದಪ್ಪ ಗುಜರಾತ್(ಹೊಸ)	12300-12400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1730(1740)
ಒಂದು ವಾರದ ಡೆಲಿವರಿ	1725(1735)
ಸೋಯಾ ಕಚ್ಚಾ	865(865)
ಪಾಮ್ ವಾರದ ಡೆಲಿವರಿ	840(841)
ಸೂರ್ಯಕಾಂತಿ ಎಣ್ಣೆ ಕಚ್ಚಾ	840(850)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	59,150(59,200)
ಬೆಳ್ಳಿ ಕೆ.ಜಿ	72,100(72,400)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	750-800
ನಡುಗೋಲು	900-950
ರಾಶಿ	1000-1100
ರಾಶಿ ಉತ್ತಮ	1150-1200
ಹೆರಕಿದ್ದು	1600-1700
ಹಸಿರು (ಸಾಧಾರಣ)	1200-1250
ಹಸಿರು ಉತ್ತಮ	1600-1700
ಹಸಿರು ಅತಿ ಉತ್ತಮ	1900-2000
ಕಾಳುಮೆಣಸು -	620
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-48500
ಕುಂದಾಪುರ	
ಹಳೆಚಾಲಿ	43500-47000
ಹೊಸಚಾಲಿ	37000-41500
ಸಿದ್ದಾಪುರ	
ಬಿಳಿಗೋಟು	33619-35599
ಕೋಕ	30199-34499
ಚಾಲಿ	37799-41599
ಕೆಂಪುಗೋಟು	33119-34119
ರಾಶಿ	46699-48799
ತಟ್ಟಿಬೆಟ್ಟೆ	39399-47299
ಶಿರಸಿ	
ಬೆಟ್ಟೆ	38599-45369
ಬಿಳಿಗೋಟು	27199-36426
ಚಾಲಿ	37309-42309
ಕೆಂಪುಗೋಟು	22199-35161
ರಾಶಿ	46308-49508

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	12900	13000	13200	153.45 ಸೆಂಟ್ಸ್
ಎಸಿ	6860	6500	6700	
ಆರ್‌ಪಿ	10100	10000	10100	ಲಂಡನ್
ಆರ್‌ಸಿ	5960	238 on OT	5900	2453 ಡಾಲರ್ಸ್

ಪೆಟ್ರೋಲ್, ಡೀಸೆಲ್ ಬೆಲೆ ಪರಿಷ್ಕರಣೆ, ಬೆಲೆ ಇಳಿಕೆ ಸದ್ಯಕ್ಕೆ ಅನುಮಾನ

90 ಡಾಲರ್ ಸನಿಹಕ್ಕೆ ಕಚ್ಚಾ ತೈಲ

ನವದೆಹಲಿ (ಪಿಟಿಐ): ಕಚ್ಚಾ ತೈಲ ಉತ್ಪಾದನೆ ಹಾಗೂ ರಫ್ತು ಕಡಿತವನ್ನು ಈ ವರ್ಷದ ಅಂತ್ಯದವರೆಗೆ ಮುಂದುವರಿಸಲು ರಷ್ಯಾ ಮತ್ತು ಸೌದಿ ಅರೇಬಿಯಾ ತೀರ್ಮಾನಿಸಿರುವ ಪರಿಣಾಮವಾಗಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯು ಬ್ಯಾರೆಲ್‌ಗೆ 90 ಡಾಲರ್ ಸನಿಹಕ್ಕೆ ಬಂದಿದೆ. ಇದು 10 ತಿಂಗಳ ಗರಿಷ್ಠ ಮಟ್ಟ.

ಈ ಬೆಲೆ ಏರಿಕೆಯ ಕಾರಣದಿಂದಾಗಿ ಭಾರತವು ಕಚ್ಚಾ ತೈಲ ಆಮದಿಗೆ ಹೆಚ್ಚು ಹಣ ವ್ಯಯಿಸಬೇಕಾಗಿದೆ. ಹೀಗಾಗಿ, ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿನ ಬೆಲೆ ಆಧಾರದಲ್ಲಿ ದೇಶಿ ಮಾರುಕಟ್ಟೆಯಲ್ಲಿ ಪೆಟ್ರೋಲ್, ಡೀಸೆಲ್ ದರವನ್ನು ಪ್ರತಿನಿತ್ಯ ಪರಿಷ್ಕರಿಸುವ ವ್ಯವಸ್ಥೆ ಮತ್ತೆ ಜಾರಿಗೆ ಬರುವ ಸಾಧ್ಯತೆ ಸದ್ಯಕ್ಕೆ ಕಡಿಮೆಯಾಗಿದೆ.

ಮುಖ್ಯಾಂಶಗಳು

- ಮತ್ತೆ ಹೆಚ್ಚಿದ ಕಚ್ಚಾ ತೈಲ ದರ
- ಪೆಟ್ರೋಲ್, ಡೀಸೆಲ್ ಬೆಲೆ ಇಳಿಕೆ ಅನುಮಾನ
- ತನ್ನ ಅಗತ್ಯದ ಶೇ 85ರಷ್ಟು ಇಂಧನವನ್ನು ಆಮದು ಮಾಡಿಕೊಳ್ಳುತ್ತಿರುವ ಭಾರತ

ರಷ್ಯಾ ಹಾಗೂ ಸೌದಿ ಅರೇಬಿಯಾ ತೈಲ ಉತ್ಪಾದನೆಯನ್ನು ಹೆಚ್ಚಿಸದೆ ಇರುವ ತೀರ್ಮಾನ ಕೈಗೊಂಡ ಒಂದು ವಾರದಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇಕಡ 6.5ರಷ್ಟು ಹೆಚ್ಚಾಗಿದೆ. ಬ್ರೆಂಟ್ ಕಚ್ಚಾ ತೈಲದ ಬೆಲೆಯು ಮಂಗಳವಾರ 90 ಡಾಲರ್‌ಗಿಂತ ಹೆಚ್ಚಾಗಿದೆ. ಈ ವರ್ಷದಲ್ಲಿ ಬೆಲೆಯು



90 ಡಾಲರ್‌ಗಿಂತ ಹೆಚ್ಚಾಗಿದ್ದುದು ಇದೇ ಮೊದಲು.

ಭಾರತಕ್ಕೆ ಪೂರೈಕೆಯಾಗುವ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಆಗಸ್ಟ್‌ನಲ್ಲಿ ಸರಾಸರಿ 86.43 ಡಾಲರ್ ಇದ್ದಿದ್ದು, ಈ ತಿಂಗಳಲ್ಲಿ 89.81 ಡಾಲರ್ ಆಗಿದೆ. ಮೇ ಮತ್ತು ಜೂನ್‌ನಲ್ಲಿ ಸರಾಸರಿ ಬೆಲೆಯು 73ರಿಂದ 75 ಡಾಲರ್ ನಡುವೆ ಇತ್ತು. ಬೆಲೆ ಕಡಿಮೆ ಇದ್ದ ಕಾರಣ, ಅಂತರರಾಷ್ಟ್ರೀಯ ಮಾರುಕಟ್ಟೆ ಬೆಲೆ ಆಧಾರಿತ ಪರಿಷ್ಕರಣೆ ವ್ಯವಸ್ಥೆ ಮತ್ತೆ ಜಾರಿಗೆ ಬರಲಿದೆ ಹಾಗೂ ಪೆಟ್ರೋಲ್, ಡೀಸೆಲ್ ಬೆಲೆಯು ತುಸು ತಗ್ಗಬಹುದು ಎಂಬ ಆಸೆ ಚಿಗುರಿತ್ತು.

ಕಳೆದ 17 ತಿಂಗಳುಗಳಿಂದ ಪೆಟ್ರೋಲ್, ಡೀಸೆಲ್ ಬೆಲೆಯನ್ನು ಪರಿಷ್ಕರಿಸಿಲ್ಲ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯು 73–74 ಡಾಲರ್ ಮಟ್ಟದಲ್ಲಿ ಉಳಿದಿದ್ದರೆ, ಸರ್ಕಾರಿ ಸ್ವಾಮ್ಯದ ತೈಲೋತ್ಪನ್ನಗಳ ಮಾರಾಟ ಕಂಪನಿಗಳು ಪೆಟ್ರೋಲ್, ಡೀಸೆಲ್ ಬೆಲೆ ಪರಿಷ್ಕರಣೆಯನ್ನು ಪುನರಾರಂಭಿಸುತ್ತಿದ್ದವು ಎಂದು ಮೂಲಗಳು ಹೇಳಿವೆ.

ಫಿನ್‌ಟೆಕ್‌ಗೆ ಸ್ವ–ನಿಯಂತ್ರಣ ಸಂಘಟನೆ ಅಗತ್ಯ: ದಾಸ್

ಮುಂಬೈ (ಪಿಟಿಐ): ಫಿನ್‌ಟೆಕ್ ಉದ್ಯಮದ ಬೆಳವಣಿಗೆಗೆ ನೆರವಾಗಲು ಸ್ವ–ನಿಯಂತ್ರಣ ಸಂಘಟನೆಯನ್ನು ಸ್ಥಾಪಿಸುವಂತೆ ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಗವರ್ನರ್ ಶಕ್ತಿಕಾಂತ ದಾಸ್ ಅವರು ಬುಧವಾರ ಸಲಹೆ ನೀಡಿದ್ದಾರೆ.

ಇಲ್ಲಿನ ಕಾನೂನಿಗೆ ಹೊಂದುವಂತೆ ಫಿನ್‌ಟೆಕ್ ಕಂಪನಿಗಳು ಉದ್ಯಮದಲ್ಲೇ ಉತ್ತಮವಾದ ಪದ್ಧತಿಗಳನ್ನು, ಖಾಸಗಿತನ ಮತ್ತು ದತ್ತಾಂಶ ರಕ್ಷಣೆಯ ನಿಯಮಗಳನ್ನು ರೂಪಿಸಿಕೊಳ್ಳಬೇಕು ಎಂದು ಅವರು ಹೇಳಿದ್ದಾರೆ. ನೈತಿಕ ವಹಿವಾಟಿನ ರೂಢಿಗಳು ಮತ್ತು ದರದಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಶಿಷ್ಟತೆಯನ್ನು ನಿಗದಿಪಡಿಸುವಂತೆಯೂ ಅವರು ಸಲಹೆ ನೀಡಿದ್ದಾರೆ.

ಜಾಗತಿಕ ಫಿನ್‌ಟೆಕ್ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಯಾವುದೇ ಕಂಪನಿಯ ಉಳಿವು ಮತ್ತು ದೀರ್ಘಾವಧಿಯ ಯಶಸ್ಸಿಗೆ ಉತ್ತಮ ಆಡಳಿತವು ಬಹಳ ಮುಖ್ಯವಾಗಿದೆ ಎಂದಿದ್ದಾರೆ.

ಅಂದಾಜಿನ ಪ್ರಕಾರ ಫಿನ್‌ಟೆಕ್ ವಲಯದ ವರಮಾನವು 2030ರ ವೇಳೆಗೆ ₹16.63 ಲಕ್ಷ ಕೋಟಿಯಷ್ಟು ಆಗಲಿದೆ ಎಂದು ದಾಸ್ ಹೇಳಿದ್ದಾರೆ. 'ಫಿನ್‌ಟೆಕ್ ವಲಯದಲ್ಲಿ ಬಹುದೊಡ್ಡ ರೂಪಾಂತರದ ಹಂತದಲ್ಲಿ ನಾವು ಇದ್ದೇವೆ' ಎಂದು ಶಕ್ತಿಕಾಂತ ದಾಸ್ ಹೇಳಿದ್ದಾರೆ.

ಫಿನ್‌ಟೆಕ್‌ಗಳಲ್ಲಿ ಬಹುತೇಕ ನವೋದ್ಯಮಗಳಿದ್ದು, ಮೌಲ್ಯ ಹೆಚ್ಚಿಸಿಕೊಳ್ಳಲು ಮತ್ತು ಲಾಭಕ್ಕಾಗಿ ಪಟ್ಟು ಹಿಡಿಯುವುದನ್ನು ತಪ್ಪಿಸುವಂತೆ ಮತ್ತು ಗ್ರಾಹಕರ ಕೇಂದ್ರಿತ ವಿಷಯಗಳತ್ತ ಗಮನ ಹರಿಸುವಂತೆ ಸಲಹೆ ನೀಡಿದ್ದಾರೆ.

ಕೇಂದ್ರೀಯ ಬ್ಯಾಂಕ್‌ನ ಡಿಜಿಟಲ್ ಕರೆನ್ಸಿ (ಸಿಬಿಡಿಸಿ) ವ್ಯವಸ್ಥೆಯಲ್ಲಿ ಆಗುತ್ತಿರುವ ಪ್ರಗತಿಯ ಕುರಿತಾಗಿಯೂ ದಾಸ್ ಮಾತನಾಡಿದ್ದಾರೆ. ಸಿಬಿಡಿಸಿಯ ಸಗಟು ವಹಿವಾಟಿನಲ್ಲಿ ಹೊಸ ಸೌಲಭ್ಯಗಳನ್ನು ಶೀಘ್ರದಲ್ಲೇ ಅಳವಡಿಸಲಾಗುವುದು ಎಂದಿದ್ದಾರೆ.

ಸಿಬಿಡಿಸಿಯ ಪ್ರಾಯೋಗಿಕ ರಿಟೇಲ್ ವಹಿವಾಟು 26 ನಗರಗಳಲ್ಲಿ 13 ಬ್ಯಾಂಕ್‌ಗಳ ಮೂಲಕ ನಡೆಯುತ್ತಿದೆ. 2023ರ ಆಗಸ್ಟ್ 31ರವರೆಗಿನ ಮಾಹಿತಿಯ ಪ್ರಕಾರ 14.6 ಕೋಟಿ ಬಳಕೆದಾರರು ಇದರ ಭಾಗವಾಗಿದ್ದಾರೆ ಎಂದು ದಾಸ್ ಮಾಹಿತಿ ನೀಡಿದ್ದಾರೆ.

'ಆರೋಗ್ಯ ವಿಮೆ: ಸಂಪೂರ್ಣ ನಗದುರಹಿತ ಪಾವತಿ ಶೀಘ್ರ'

ಮುಂಬೈ (ಪಿಟಿಐ): ವೈದ್ಯಕೀಯ ವಿಮೆ ಮೊತ್ತವು ಸಂಪೂರ್ಣವಾಗಿ ನಗದುರಹಿತವಾಗಿ ಆಸ್ಪತ್ರೆಗಳಿಗೆ ಪಾವತಿ ಆಗುವಂತೆ ಮಾಡಲು ವಿಮಾ ಕಂಪನಿಗಳ ಜೊತೆ ಕೆಲಸ ಮಾಡುತ್ತಿರುವುದಾಗಿ ವಿಮೆ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರವು (ಐಆರ್‌ಡಿಎಐ) ಬುಧವಾರ ಹೇಳಿದೆ.

ಸದ್ಯ, ನಗದುರಹಿತ ಪಾವತಿಯು ಸರಿಯಾಗಿ ಇಲ್ಲ. ವಿಮಾ ಕಂಪನಿಗಳು ಒಟ್ಟು ಬಿಲ್ ಮೊತ್ತದಲ್ಲಿ ಶೇ 10ರಷ್ಟನ್ನು ಕಡಿತ ಮಾಡುತ್ತಿವೆ. ಅಲ್ಲದೆ, ವಿಮಾ ಉತ್ಪನ್ನಗಳು ನಗದುರಹಿತ ಸೌಲಭ್ಯವನ್ನು ನೀಡಿದರೂ ಹಲವು ಆಸ್ಪತ್ರೆಗಳು ರೋಗಿಯನ್ನು ದಾಖಲು ಮಾಡಿಕೊಳ್ಳುವಾಗ ಆ ಸೌಲಭ್ಯವನ್ನು ನೀಡುತ್ತಿಲ್ಲ.

ಜಾಗತಿಕ ಫಿನ್‌ಟೆಕ್ ಉತ್ಸವವನ್ನು ಉದ್ದೇಶಿಸಿ ಮಾತನಾಡಿದ ಐಆರ್‌ಡಿಎಐನ ಅಧ್ಯಕ್ಷ ದೆಬಶಿಶ್ ಪಂಡಾ ಅವರು, ಶೇ 100ರಷ್ಟು ನಗದುರಹಿತ ಪಾವತಿ ವ್ಯವಸ್ಥೆಯನ್ನು ಶೀಘ್ರದಲ್ಲೇ



ಜಾರಿಗೊಳಿಸಲು ಆರೋಗ್ಯ ವಿಮಾ ಕಂಪನಿಗಳು, ರಾಷ್ಟ್ರೀಯ ಆರೋಗ್ಯ ಪ್ರಾಧಿಕಾರ ಮತ್ತು ವಿಮಾ ಮಂಡಳಿಯ ಜೊತೆ ಕೆಲಸ ಮಾಡಲಾಗುತ್ತಿದೆ ಎಂದು ತಿಳಿಸಿದ್ದಾರೆ.

ನಗದುರಹಿತ ಪಾವತಿ ಸೌಲಭ್ಯಕ್ಕಾಗಿ ರಾಷ್ಟ್ರೀಯ ಆರೋಗ್ಯ ವಿನಿಮಯ ಕೇಂದ್ರಕ್ಕೆ ಹೆಚ್ಚಿನ ಆಸ್ಪತ್ರೆಗಳನ್ನು ಸೇರಿಸಲು ರಾಷ್ಟ್ರೀಯ ಆರೋಗ್ಯ ಪ್ರಾಧಿಕಾರದೊಂದಿಗೆ ಸಂಪರ್ಕದಲ್ಲಿ ಇರುವುದಾಗಿ ಐಆರ್‌ಡಿಎಐ ಹೇಳಿದೆ.

ಹಿರಿಯರಿಗೆ ಕೈಗೆಟಕುವ ಬೆಲೆಗೆ ಉತ್ತಮವಾದ ಆರೋಗ್ಯ ವಿಮೆ ಒದಗಿಸುವ ನಿಟ್ಟಿನಲ್ಲಿಯೂ ಕೆಲಸ ನಡೆಯುತ್ತಿದೆ. ಈಗಿನ ವೈದ್ಯಕೀಯ ಯೋಜನೆಗಳು ಹಿರಿಯರ ಕೈಗೆಟುಕದಂತಾಗಿವೆ ಎಂದು ಹೇಳಿದ್ದಾರೆ.

ಸೋಲಿನೊಡನೆ ಮೂರನೇ ಸ್ಥಾನಕ್ಕೆ ಇಳಿದ ಗುಕೇಶ್

ಕೋಲ್ಕತ್ತ (ಪಿಟಿಐ): ಮಂಗಳವಾರ ಪಂದ್ಯಗಳ ನಂತರ ಮುನ್ನಡೆ ಹಂಚಿಕೊಂಡಿದ್ದ ಭಾರತದ ಡಿ.ಗುಕೇಶ್, ಟಾಟಾ ಸ್ಟೀಲ್ ಚೆಸ್ ಇಂಡಿಯಾ ಟೂರ್ನಿಯಲ್ಲಿ ಬುಧವಾರ ಸ್ವದೇಶದ ವಿದಿತ್ ಸಂತೋಷ್ ಗುಜರಾತಿ ಎದುರು ಸೋತು ಮೂರನೇ ಸ್ಥಾನಕ್ಕೆ ಜಾರಿದರು.

ಇನ್ನೊಬ್ಬ ಪ್ರತಿಭಾವಂತ ಆಟಗಾರ ಆರ್.ಪ್ರಜ್ಞಾನಂದ ಕೂಡ ರ‍್ಯಾಪಿಡ್ ವಿಭಾಗದಲ್ಲಿ ಎರಡನೇ ಸೋಲನ್ನು ಕಂಡರು. ಗುಕೇಶ್, ಪ್ರಜ್ಞಾನಂದ, ವಿದಿತ್– ಈ ಮೂವರೂ 3 ಪಾಯಿಂಟ್ಸ್ ಸಂಗ್ರಹಿಸಿ ಮೂರನೇ ಸ್ಥಾನ ಹಂಚಿಕೊಂಡಿದ್ದಾರೆ. ಕೊನೆಯ ದಿನವಾದ ಗುರುವಾರ ಮೂರು ಸುತ್ತುಗಳು ಆಡಲು ಉಳಿದಿವೆ.

2021ರ ವಿಶ್ವ ಬ್ಲಿಟ್ಜ್ ಚಾಂಪಿಯನ್ ಆಗಿರುವ ಮ್ಯಾಕ್ಸಿಮ್ ವಾಷಿಯರ್ ಲಗ್ರಾವ್ (ಫ್ರಾನ್ಸ್) ಅವರು 4.5 ಪಾಯಿಂಟ್ಸ್ ಸಂಗ್ರಹಿಸಿ ಏಕಾಂಗಿಯಾಗಿ ಅಗ್ರ ಸ್ಥಾನದಲ್ಲಿದ್ದಾರೆ. 2019ರ ವಿಶ್ವಕಪ್ ವಿಜೇತ ತೈಮೋರ್ ರಾಜಾಬೋವ್ (ಅಜರ್ ಬೈಜಾನ್) ಅವರು ನಾಲ್ಕು ಪಾಯಿಂಟ್ಸ್ ಗಳಿಸಿದ್ದು ಎರಡನೇ ಸ್ಥಾನದಲ್ಲಿದ್ದಾರೆ.

ಪ್ರಜ್ಞಾನಂದ 5ನೇ ಸುತ್ತಿನಲ್ಲಿ ಭಾರತದವರೇ ಆದ ಪೆಂಟ್ಯಾಲ ಹರಿಕೃಷ್ಣ ಅವರಿಗೆ ಮಣಿದರು. ಪ್ರಗ್ನು ತಮ್ಮ ದಿನದ ಕೊನೆಯ ಪಂದ್ಯವನ್ನು ಅಲೆಕ್ಸಾಂಡರ್ ಗ್ರಿಶ್ಚುಕ್ ಜೊತೆ 66 ನಡೆಗಳಲ್ಲಿ ಡ್ರಾ ಮಾಡಿಕೊಂಡರು.

ದಂಡಯಾತ್ರೆ ಮುಂದುವರಿಸಿದ ಜೊಕೊ

ಅಮೆರಿಕ ಓಪನ್ ಟೆನಿಸ್ ಟೂರ್ನಿ: ನಾಲ್ಕರ ಘಟ್ಟಕ್ಕೆ ಅಮೆರಿಕದ ಬೆನ್ ಶೆಲ್ಟನ್

ನ್ಯೂಯಾರ್ಕ್ (ಎಎಫ್‌ಪಿ): ಸರ್ಬಿಯಾದ ತಾರೆ ನೊವಾಕ್ ಜೊಕೊವಿಚ್ ಅವರು ಮಂಗಳವಾರ ನೇರಸೆಟ್‌ಗಳಿಂದ ಆತಿಥೇಯ ಅಮೆರಿಕದ ಆಟಗಾರ ಟೇಲರ್ ಫ್ರಿಟ್ಜ್ ಅವರನ್ನು ನೇರ ಸೆಟ್‌ಗಳಿಂದ ಹಿಮ್ಮೆಟ್ಟಿಸಿ ಅಮೆರಿಕ ಓಪನ್ ಸಿಂಗಲ್ಸ್ ಸೆಮಿಫೈನಲ್‌ಗೆ ಮುನ್ನಡೆದರು.


36 ವರ್ಷದ ಜೊಕೊವಿಚ್ 6-1, 6-4, 6-4 ರಿಂದ ಒಂಬತ್ತನೇ ಶ್ರೇಯಾಂಕದ ಫ್ರಿಟ್ಜ್ ಅವರನ್ನು ಮಣಿಸಿ ದಾಖಲೆ 24ನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯತ್ತ ದಿಟ್ಟ ಹೆಜ್ಜೆಯಿಟ್ಟರು. ಫ್ಲಷಿಂಗ್ ಮಿಡೋಸ್‌ನಲ್ಲಿ ಅವರು 13ನೇ ಬಾರಿ ಸೆಮಿಫೈನಲ್ ತಲುಪಿದಂತಾಯಿತು. ಆ ಮೂಲಕ ತಮ್ಮ ದೀರ್ಘಕಾಲದ ಎದುರಾಳಿ ರೋಜರ್ ಫೆಡರರ್ ಹೆಸರಿನಲ್ಲಿದ್ದ ದಾಖಲೆಯೊಂದನ್ನು (ಒಂದೇ ಗ್ರ್ಯಾನ್‌ಸ್ಲಾಮ್ ಟೂರ್ನಿಯಲ್ಲಿ ಅತಿ ಹೆಚ್ಚು ಸಲ ಸೆಮಿಫೈನಲ್ ತಲುಪಿದ್ದು) ಮುರಿದರು.

ಜೊಕೊವಿಚ್ ಅವರಿಗೆ ಫ್ರಿಟ್ಜ್ ವಿರುದ್ಧ ಇದು ಸತತ ಎಂಟನೇ ಜಯ. ಈ ಬಾರಿ ವಿಪರೀತ ಸೆಕೆ ಮತ್ತು 32 ಡಿಗ್ರಿ ಸೆಲ್ಸಿಯಸ್ ತಾಪಮಾನದಲ್ಲಿ ಆಡುವ ಸವಾಲನ್ನೂ ಎದುರಿಸಿದರು. ಫ್ರಿಟ್ಜ್ ಕ್ವಾರ್ಟರ್‌ಫೈನಲ್‌ವರೆಗೆ ಒಮ್ಮೆ ಮಾತ್ರ ಸರ್ವ್ ಕಳೆದುಕೊಂಡಿದ್ದರು. ಆದರೆ ಇಲ್ಲಿ ಮೊದಲ ಸೆಟ್‌ನಲ್ಲೇ ಮೂರು ಬಾರಿ ಅವರ ಸರ್ವ್ ಬ್ರೇಕ್ ಆಯಿತು.

ಶೆಲ್ಟನ್‌ಗೆ ಜಯ: ಮೂರು ಬಾರಿಯ ಚಾಂಪಿಯನ್ ಜೊಕೊವಿಚ್ ಸೆಮಿಫೈನಲ್‌ನಲ್ಲಿ ಅಮೆರಿಕದ ಇನ್ನೊಬ್ಬ ಆಟಗಾರ ಬೆನ್ ಶೆಲ್ಟನ್ ಅವರನ್ನು ಎದುರಿಸಲಿದ್ದಾರೆ. ಆರ್ಥರ್ ಆ್ಯಷ್ ಕ್ರೀಡಾಂಗಣದಲ್ಲಿ ನಡೆದ ಆತಿಥೇಯ ಅಮೆರಿಕ ಆಟಗಾರರಿಬ್ಬರ ನಡುವಣ ಪಂದ್ಯದಲ್ಲಿ 20 ವರ್ಷದ ಶೆಲ್ಟನ್ 6-2, 3-6, 7-6 (9-7), 6-2 ರಿಂದ ಹತ್ತನೇ ಶ್ರೇಯಾಂಕದ ಫ್ರಾನ್ಸಿಸ್ ಟಿಫೊ ಅವರನ್ನು ಸೋಲಿಸಿದರು. ಟಿಫೊ ಕಳೆದ ವರ್ಷ ಸೆಮಿಫೈನಲ್ ತಲುಪಿದ್ದರು.

ಬಿರುಸಿನ ಸರ್ವ್‌ಗಳಿಗೆ ಹೆಸರಾದ ಶೆಲ್ಟನ್ 14 ಏಸ್‌ಗಳನ್ನು ಸಿಡಿಸಿದರು. ಆದರೆ ಅವರ ಆಟದಲ್ಲಿ 11 ಡಬಲ್ ಫಾಲ್ಟ್‌ಗಳೂ ಇದ್ದವು. ಆದರೆ ಸರ್ವ್ ಮಾತ್ರ ಅವರ ಶಸ್ತ್ರವಾಗಿರಲಿಲ್ಲ. ಶರವೇಗದ ಫೋರ್‌ಹ್ಯಾಂಡ್ ಹೊಡೆತಗಳೂ ಅವರಿಗೆ ಹೇರಳ ಪಾಯಿಂಟ್ ತಂದುಕೊಟ್ಟವು. ಆಟದಲ್ಲಿ 50 ವಿನ್ನರ್ ಹೊಡೆತಗಳೂ ಇದ್ದವು.

ಜನವರಿಯಲ್ಲಿ ತಮ್ಮ ಮೊದಲ ಯತ್ನದಲ್ಲೇ ಆಸ್ಟ್ರೇಲಿಯಾ ಓಪನ್ ಎಂಟರ ಘಟ್ಟ ತಲುಪಿದ್ದ 20 ವರ್ಷದ ಉದಯೋನ್ಮುಖ ಆಟಗಾರ ಶೆಲ್ಟನ್ ಪ್ರಮುಖ ಟೂರ್ನಿಯೊಂದರಲ್ಲಿ ಮೊದಲ ಬಾರಿ ಸೆಮಿಫೈನಲ್ ತಲುಪಿದರು. ಪ್ರಸ್ತುತ ವಿಶ್ವ ಕ್ರಮಾಂಕದಲ್ಲಿ



ಗೆಲುವಿನ ಸಂಭ್ರಮದಲ್ಲಿ ಅರಿನಾ ಸಬಲೆಂಕಾ –ಎಎಫ್‌ಪಿ ಚಿತ್ರ

ಅವರು 47ನೇ ಸ್ಥಾನದಲ್ಲಿದ್ದಾರೆ.

ಸೆಮಿಗೆ ಸಬಲೆಂಕಾ: ಬೆಲಾರಸ್‌ನ ಅರಿನಾ ಸಬಲೆಂಕಾ ಬುಧವಾರ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ 6-1, 6-4ರಿಂದ ಚೀನಾದ ಝೆಂಗ್ ಕ್ವಿನ್ವೆನ್ ಅವರನ್ನು ಹಿಮ್ಮೆಟ್ಟಿಸಿ, ಅಂತಿಮ ನಾಲ್ಕರ ಘಟ್ಟ ಪ್ರವೇಶಿಸಿದರು.

ಆಸ್ಟ್ರೇಲಿಯಾ ಓಪನ್ ಚಾಂಪಿಯನ್ ಆಗಿರುವ ಅವರು, ಪ್ರಸಕ್ತ ಋತುವಿನಲ್ಲಿ ಎರಡನೇ ಗ್ರ್ಯಾಂಡ್ ಸ್ಲಾಮ್ ಪ್ರಶಸ್ತಿಯತ್ತ ಹೆಜ್ಜೆ ಹಾಕಿದರು. ಪ್ರಸ್ತುತ ಎರಡನೇ ರ‍್ಯಾಂಕ್‌ನಲ್ಲಿರುವ ಅವರು ಮುಂದಿನ ವಾರ ಅಗ್ರಸ್ಥಾನಕ್ಕೆ ಏರಲಿದ್ದಾರೆ.

ತವರಿನ ನೆಚ್ಚಿನ ಆಟಗಾರ್ತಿ, ಆರನೇ ಶ್ರೇಯಾಂಕದ ಕೊಕೊ ಗಾಫ್ ಅವರು 6-0, 6-2 ರಿಂದ ಲಾತ್ವಿಯಾದ ಯೆಲೆನಾ ಒಸ್ಟಪೆಂಕೊ ಅವರನ್ನು ಸೋಲಿಸಿ ಅಂತಿಮ ನಾಲ್ಕರ ಘಟ್ಟಕ್ಕೆ ತಲುಪಿದರು. ಅವರು ಸೆಮಿಫೈನಲ್‌ನಲ್ಲಿ ಫ್ರೆಂಚ್ ಓಪನ್ ರನ್ನರ್ ಅಪ್ ಕರೊಲಿನಾ ಮುಚೋವಾ ಅವರನ್ನು ಎದುರಿಸಲಿದ್ದಾರೆ. 10ನೇ ಶ್ರೇಯಾಂಕದ ಮುಚೋವಾ (ಜೆಕ್ ರಿಪಬ್ಲಿಕ್) 6-0, 6-3 ರಿಂದ ರುಮೇನಿಯಾದ ಸೊರಾನಾ ಸಿಸ್ಟಿಯಾ ಅವರನ್ನು ಸೋಲಿಸಿದರು.

ಸೆಮಿಫೈನಲ್‌ಗೆ ಬೋಪಣ್ಣ–ಎಬ್ಡೆನ್

ನ್ಯೂಯಾರ್ಕ್ (ಪಿಟಿಐ): ಭಾರತದ ರೋಹನ್ ಬೋಪಣ್ಣ ಮತ್ತು ಆಸ್ಟ್ರೇಲಿಯಾದ ಜೊತೆಗಾರ ಮ್ಯಾಥ್ಯೂ ಎಬ್ಡೆನ್ ಅವರು ನೇರ ಸೆಟ್‌ಗಳಿಂದ ಅಮೆರಿಕದ ನಥಾನಿಯಲ್ ಲಮೋನ್ಸ್– ಜಾಕ್ಸನ್ ವಿಥ್ರೊ ಜೋಡಿಯನ್ನು ಸೋಲಿಸಿ ಅಮೆರಿಕ ಓಪನ್ ಪುರುಷರ ಡಬಲ್ಸ್ ಸೆಮಿಫೈನಲ್‌ಗೆ ದಾಪುಗಾಲಿಟ್ಟರು.

ಕ್ವಾರ್ಟರ್‌ಫೈನಲ್‌ನಲ್ಲಿ 7-6 (10), 6-1 ರಿಂದ ಜಯಗಳಿಸಿದ ಆರನೇ ಶ್ರೇಯಾಂಕದ ರೋಹನ್– ಎಬ್ಡೆನ್ ಜೋಡಿ ಈ ವರ್ಷ ಸತತ ಎರಡನೆ ಗ್ರ್ಯಾನ್‌ಸ್ಲಾಮ್ ಟೂರ್ನಿಯ ಸೆಮಿಫೈನಲ್ ತಲುಪಿದಂತಾಗಿದೆ. ಇದಕ್ಕೆ ಮೊದಲು ವಿಂಬಲ್ಡನ್‌ನಲ್ಲೂ ಸೆಮಿಫೈನಲ್‌ಗೆ ತಲುಪಿದ್ದು, ಅಲ್ಲಿ ವೆಸ್ಲಿ ಕೂಲ್ಹಾಫ್– ನೀಲ್ ಸ್ಕುಪ್‌ಸ್ಕಿ ಜೋಡಿ ಎದುರು ಸೋಲನುಭವಿಸಿತ್ತು. ಬೋಪಣ್ಣ– ಎಬ್ಡೆನ್ ಜೋಡಿ ಸೆಮಿಫೈನಲ್‌ನಲ್ಲಿ ಫ್ರಾನ್ಸ್‌ನ ಪಿಯರೆ ಹ್ಯೂಗ್ಸ್ ಹರ್ಬರ್ಟ್– ನಿಕೋಲಸ್ ಮಹುಟ್ ಜೋಡಿಯನ್ನು ಎದುರಿಸಲಿದೆ. 43 ವರ್ಷದ ಬೋಪಣ್ಣ, 2010ರಲ್ಲಿ ಇದೇ ಟೂರ್ನಿಯಲ್ಲಿ ಮೊದಲ ಬಾರಿ ಫೈನಲ್ ಆಡಿದ್ದರು.

ಬ್ಯಾಸ್ಕೆಟ್‌ಬಾಲ್ ವಿಶ್ವಕಪ್: ಸೆಮಿಗೆ ಜರ್ಮನಿ, ಕೆನಡಾ

ಮನಿಲಾ (ಎಎಫ್‌ಪಿ): ಜರ್ಮನಿ ತಂಡವು ಬುಧವಾರ 81–79 ಪಾಯಿಂಟ್‌ಗಳಿಂದ ಲಾತ್ವಿಯಾ ತಂಡವನ್ನು ಮಣಿಸಿ ವಿಶ್ವಕಪ್ ಬ್ಯಾಸ್ಕೆಟ್‌ಬಾಲ್ ಸೆಮಿಫೈನಲ್ ಪ್ರವೇಶಿಸಿತು.

ರೋಚಕ ಹಣಾಹಣಿಯಲ್ಲಿ ಕೇವಲ 2 ಪಾಯಿಂಟ್‌ಗಳಿಂದ ಜರ್ಮನಿ ಗೆಲುವು ಸಾಧಿಸಿತು. ನಾಲ್ಕರ ಘಟ್ಟದ ಪಂದ್ಯದಲ್ಲಿ ಜರ್ಮನಿಯು ಅಮೆರಿಕ ತಂಡದ ವಿರುದ್ಧ ಪೈಪೋಟಿ ನಡೆಸಲಿದೆ.

ಜರ್ಮನಿ ತಂಡದ ಫ್ರಾಂಜ್ ವ್ಯಾಗ್ನರ್ 16 ಪಾಯಿಂಟ್ ಗಳಿಸಿದರೆ, ಆಂಡ್ರಿಯಾಸ್ ಒಬ್ಸ್ಟ್ 13, ಮೊರಿಟ್ಜ್ ವ್ಯಾಗ್ನರ್ 12 ಪಾಯಿಂಟ್‌ಗಳ ಕೊಡುಗೆ ನೀಡಿದರು.

ವಿಶ್ವಕಪ್‌ಗೆ ಈ ಬಾರಿ ಪದಾರ್ಪಣೆ ಮಾಡಿದ ಲಾತ್ವಿಯಾ ತಂಡವು ಹಾಲಿ ಚಾಂಪಿಯನ್ ಸ್ಪೇನ್ ಮತ್ತು ಟೋಕಿಯೊ ಒಲಿಂಪಿಕ್ಸ್ ಬೆಳ್ಳಿ ಪದಕ ವಿಜೇತ ಫ್ರಾನ್ಸ್ ತಂಡವನ್ನು ಮಣಿಸಿತ್ತು.

ಮತ್ತೊಂದು ಪಂದ್ಯದಲ್ಲಿ ಕೆನಡಾ ತಂಡವು 100–89 ಪಾಯಿಂಟ್‌ಗಳಿಂದ ಸ್ಲೊವೇನಿಯಾ ತಂಡವನ್ನು ಮಣಿಸಿ ಸೆಮಿಫೈನಲ್ ಪ್ರವೇಶ ಪಡೆಯಿತು.

ಕೆನಡಾದ ಡಲ್ಲಾಸ್ ಮೇವರಿಕ್ಸ್ 26 ಪಾಯಿಂಟ್ ಗಳಿಸಿ ಮಿಂಚಿದರು. ಸೆಮಿಫೈನಲ್‌ನಲ್ಲಿ ಕೆನಡಾವು ಸರ್ಬಿಯಾ ತಂಡವನ್ನು ಎದುರಿಸಲಿದೆ.

ಫಿಕ್ಸಿಂಗ್: ಲಂಕಾ ಮಾಜಿ ಸ್ಪಿನ್ನರ್ ಬಂಧನ

ಕೊಲಂಬೊ (ಎಎಫ್‌ಪಿ): ಮ್ಯಾಚ್ ಫಿಕ್ಸಿಂಗ್ ಆರೋಪದ ಮೇಲೆ ಶ್ರೀಲಂಕಾ ತಂಡದ ಮಾಜಿ ಸ್ಪಿನ್ನರ್ ಸುಚಿತ್ರ ಸೇನಾನಾಯಕೆ ಅವರನ್ನು ಬುಧವಾರ ಪೊಲೀಸರು ಬಂಧಿಸಿದ್ದಾರೆ.

ಕ್ರೀಡೆಗೆ ಸಂಬಂಧಿಸಿದ ಅಪರಾಧಗಳ ತನಿಖೆ ನಡೆಸುತ್ತಿರುವ ಪೊಲೀಸ್ ಘಟಕವು 38 ವರ್ಷದ ಸೇನಾನಾಯಕೆ ಅವರನ್ನು ಬಂಧಿಸಿ ಕಸ್ಟಡಿಗೆ ಪಡೆದುಕೊಂಡಿತದೆ ಎಂದು ಪೊಲೀಸ್ ವಕ್ತಾರರು ತಿಳಿಸಿದ್ದಾರೆ. ಅವರ ವಿರುದ್ಧ ಆರೋಪ ಪಟ್ಟಿ ಇನ್ನೂ ಸಿದ್ಧಗೊಂಡಿಲ್ಲ.

ಆದರೆ ಅವರು ಲಂಕನ್ ಪ್ರೀಮಿಯರ್ ಲೀಗ್‌ನಲ್ಲಿ ಪಂದ್ಯ ಹೊಂದಾಣಿಕೆ ಮಾಡುವಂತೆ ಇಬ್ಬರು ಆಟಗಾರರ ಮೇಲೆ ಪ್ರಭಾವ ಬೀರಿದ್ದಾರೆ ಎನ್ನುವ ಆರೋಪಕ್ಕೆ ಸಂಬಂಧಿಸಿ ಬಂಧನ ನಡೆದಿದೆ. ಮ್ಯಾಚ್ ಫಿಕ್ಸಿಂಗ್ (ಕಳ್ಳಾಟ) ಶ್ರೀಲಂಕಾದಲ್ಲಿ ಕ್ರಿಮಿನಲ್ ಅಪರಾಧವಾಗಿದೆ.

ಸೇನಾನಾಯಕೆ 74 ಅಂತರರಾಷ್ಟ್ರೀಯ ಪಂದ್ಯಗಳನ್ನು ಆಡಿದ್ದಾರೆ. 2016ರಲ್ಲಿ ಕೊನೆಯ ಬಾರಿ ಶ್ರೀಲಂಕಾಕ್ಕೆ ಆಡಿದ್ದರು. ಕಳೆದ ತಿಂಗಳು, ಪೊಲೀಸ್ ವಿಚಾರಣೆಯ ವೇಳೆ ನ್ಯಾಯಾಲಯವೊಂದು ಅವರ ಪಾಸ್‌ಪೋರ್ಟ್ ಸ್ವಾಧೀನಕ್ಕೆ ಸೂಚಿಸಿತ್ತು.

ಅವರು ಮಾಡಿದ ತಪ್ಪು ಸಾಬೀತಾದಲ್ಲಿ 10 ವರ್ಷಗಳ ಕಾಲ ಜೈಲು ಶಿಕ್ಷೆ ಅಥವಾ 10 ಕೋಟಿ ರೂಪಾಯಿ ತೆರಬೇಕಾಗುತ್ತದೆ ಅಥವಾ ಎರಡನ್ನೂ ಅವರಿಗೆ ವಿಧಿಸಲಾಗುತ್ತದೆ.

ಶ್ರೀಲಂಕಾದಲ್ಲಿ ಮ್ಯಾಚ್ ಫಿಕ್ಸಿಂಗ್ ಪಿಡುಗು ವ್ಯಾಪಕವಾಗಿದೆ ಎಂದು 2021ರಲ್ಲಿ ಆಗಿನ ಕ್ರೀಡಾ ಸಚಿವ ಮಹಿಂದಾನಂದ ಅಲುತಗಾಮಗೆ ಸಂಸತ್ತಿಗೆ ತಿಳಿಸಿದ್ದರು.

ಕಿಂಗ್ಸ್ ಕಪ್: ಇರಾಕ್ ವಿರುದ್ಧ ಪಂದ್ಯ ಇಂದು

ಚೆಟ್ರಿಯಿಲ್ಲದೇ ಆಡಲಿರುವ ಭಾರತ

ಚಿಯಾಂಗ್ ಮೈ (ಥಾಯ್ಲೆಂಡ್), (ಪಿಟಿಐ): ಭಾರತ ತಂಡದವರು ನಾಲ್ಕು ರಾಷ್ಟ್ರಗಳ ಕಿಂಗ್ಸ್ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಗುರುವಾರ ತಮ್ಮ ಮೊದಲ ಪಂದ್ಯವನ್ನು ಇರಾಕ್ ವಿರುದ್ಧ ಆಡಲಿದ್ದಾರೆ. ತಂಡದ ಆಧಾರಸ್ತಂಭವಾಗಿರುವ ಸುನಿಲ್ ಚೆಟ್ರಿ ಅವರ ಅನುಪಸ್ಥಿತಿಯು ಈ ಟೂರ್ನಿಯಲ್ಲಿ ಭಾರತವನ್ನು ಕಾಡುವ ಸಾಧ್ಯತೆಯಿದೆ.

ಇಂಟರ್‌ಕಾಂಟಿನೆಂಟಲ್ ಕಪ್ ಮತ್ತು ಸ್ಯಾಫ್ ಚಾಂಪಿಯನ್‌ಷಿಪ್‌ನಲ್ಲಿ ಭಾರತದ ಗೆಲುವಿನಲ್ಲಿ ಈ ಅನುಭವಿ ಆಟಗಾರ ಪ್ರಮುಖ ಪಾತ್ರ ವಹಿಸಿದ್ದರು. ಗಂಡುಮಗುವಿನ ತಂದೆಯಾಗಿರುವ ಅವರು ಆ ಸಂಭ್ರಮದಲ್ಲಿ ಪಾಲ್ಗೊಳ್ಳಲು ಈ ಟೂರ್ನಿಗೆ ವಿರಾಮ ಪಡೆದಿದ್ದಾರೆ. ಮೂರು ಟೂರ್ನಿಗಳ ಗೆಲುವಿನ ನಂತರ ಇಗರ್ ಸ್ಟಿಮಾಚ್ ತರಬೇತಿಯ ತಂಡ ಮೊದಲ ಬಾರಿ ಕಣಕ್ಕಿಳಿಯಲಿದೆ.

ಆದರೆ ಇರಾಕ್ ತಂಡವೂ ಪ್ರಬಲವಾಗಿದೆ. ಫಿಫಾ ವಿಶ್ವ ಕ್ರಮಾಂಕದಲ್ಲಿ ಭಾರತಕ್ಕಿಂತ 29 ಸ್ಥಾನಗಳಷ್ಟು ಮೇಲಿರುವ ಇರಾಕ್, ಇತ್ತೀಚೆಗಷ್ಟೇ ಅರೇಬಿಯನ್ ಗಲ್ಫ್ ಕಪ್ ಗೆದ್ದುಕೊಂಡಿದ್ದು ಈ ಪಂದ್ಯದಲ್ಲಿ ಗೆಲ್ಲುವ ನೆಚ್ಚಿನ ತಂಡವೆನಿಸಿದೆ. ಇರಾಕ್ ವಿರುದ್ಧ ಭಾರತ ಆರು ಪಂದ್ಯಗಳನ್ನು ಆಡಿದ್ದು, ಒಮ್ಮೆಯೂ ಗೆದ್ದಿಲ್ಲ. ನಾಲ್ಕು ಬಾರಿ ಸೋತಿದ್ದು, ಎರಡು ಪಂದ್ಯಗಳು ಡ್ರಾ ಆಗಿವೆ. ಕೊನೆಯ ಬಾರಿ ಷಾರ್ಜಾದಲ್ಲಿ ನಡೆದ 'ಫ್ರೆಂಡ್ಲಿ'ಯಲ್ಲಿ ಇರಾಕ್ 2-0ಯಿಂದ ಜಯಗಳಿಸಿತ್ತು.

2 ರೌಂಡ್‌ರಾಬಿನ್ ಪಂದ್ಯಗಳ ನಂತರ ಮೊದಲ ಎರಡು ಸ್ಥಾನ ಪಡೆಯುವ ತಂಡಗಳು ಫೈನಲ್‌ನಲ್ಲಿ ಆಡಲಿವೆ. ಆತಿಥೇಯ ಥಾಯ್ಲೆಂಡ್ ತಂಡ ದಿನದ ಎರಡನೇ ಪಂದ್ಯದಲ್ಲಿ ಲೆಬನಾನ್ ವಿರುದ್ಧ ಆಡಲಿದೆ. ಸೋತ ಎರಡು ತಂಡಗಳು ಕಂಚಿನ ಪದಕಕ್ಕೆ ಪೈಪೋಟಿ ನಡೆಸಲಿವೆ. ಭಾನುವಾರ ಫೈನಲ್ ನಡೆಯಲಿದೆ.

ಪಾಕಿಸ್ತಾನ ಜಯಭೇರಿ: ಇಮಾಮ್, ರಿಜ್ವಾನ್ ಅಮೋಘ ಬ್ಯಾಟಿಂಗ್

ಹ್ಯಾರಿಸ್ ದಾಳಿಗೆ ಬಾಂಗ್ಲಾ ತತ್ತರ



ಹ್ಯಾರಿಸ್ ರವೂಫ್ –ಎಎಫ್‌ಪಿ ಚಿತ್ರ

ಲಾಹೋರ್ (ಪಿಟಿಐ): ವೇಗದ ಜೋಡಿ ಹ್ಯಾರಿಸ್ ರವೂಫ್ ಮತ್ತು ನಸೀಂ ಶಹಾ ಅವರ ಅಮೋಘ ಬೌಲಿಂಗ್‌ನಿಂದ ಪಾಕಿಸ್ತಾನ ತಂಡವು ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯ ಸೂಪರ್ ಫೋರ್ ಹಂತದಲ್ಲಿ ಶುಭಾರಂಭ ಮಾಡಿತು.

ಗಡಾಫಿ ಮೈದಾನದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಪಾಕಿಸ್ತಾನ ತಂಡವು 7 ವಿಕೆಟ್‌ಗಳಿಂದ ಬಾಂಗ್ಲಾದೇಶದ ಎದುರು ಜಯಿಸಿತು.

ಟಾಸ್ ಗೆದ್ದ ಬಾಂಗ್ಲಾದೇಶ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಹ್ಯಾರಿಸ್ (19ಕ್ಕೆ4) ಹಾಗೂ ನಸೀಂ (34ಕ್ಕೆ3) ಅವರ ದಾಳಿಯ ಮುಂದೆ ಬಾಂಗ್ಲಾ ತಂಡವು 38.4 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 193 ರನ್‌ಗಳ ಸಾಧಾರಣ ಮೊತ್ತ ಗಳಿಸಿತು.

ಬಾಂಗ್ಲಾ ತಂಡವು ಆರಂಭದಲ್ಲಿಯೇ ಆಘಾತ ಅನುಭವಿಸಿತು. 47 ರನ್‌ಗಳಿಗೇ ನಾಲ್ಕು ವಿಕೆಟ್ ಕಳೆದುಕೊಂಡಿತು. ಈ ಹಂತದಲ್ಲಿ ಜೊತೆಗೂಡಿದ ಶಕೀಬ್ (53; 57ಎ, 4X7) ಮತ್ತು ಮುಷ್ಫೀಕುರ್ ರಹೀಂ (64; 87ಎ, 4X5) ಐದನೇ ವಿಕೆಟ್ ಜೊತೆಯಾಟದಲ್ಲಿ ನೂರು ರನ್ ಸೇರಿಸಿದರು. ಇದರಿಂದಾಗಿ ತಂಡವು ಅಲ್ಪಮೊತ್ತ-ಕ್ಕೆ ಕುಸಿಯುವುದು ತಪ್ಪಿತು. ಆದರೆ, ಉಳಿದ ಬ್ಯಾಟರ್‌ಗಳು ಮಂಕಾದರು.

ಏಷ್ಯಾ ಕಪ್ 2023

ವೇಗಿ ರವೂಫ್ ಏಕದಿನ ಕ್ರಿಕೆಟ್‌ನಲ್ಲಿ ಒಟ್ಟು 50ಕ್ಕೂ ಹೆಚ್ಚು ವಿಕೆಟ್ ಗಳಿಸಿದ ಸಾಧನೆ ಮಾಡಿದರು.

ಗುರಿ ಬೆನ್ನಟ್ಟಿದ ಪಾಕ್ ತಂಡವು 39.3 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 194 ರನ್ ಗಳಿಸಿ ಗೆದ್ದಿತು. ಇನಿಂಗ್ಸ್‌ನಲ್ಲಿ ಇನ್ನೂ 63 ಎಸೆತಗಳು ಬಾಕಿ ಇದ್ದವು.

ಆರಂಭಿಕ ಬ್ಯಾಟರ್ ಇಮಾಮ್ ಉಲ್ ಹಕ್ (78; 84ಎ) ಮತ್ತು ಮೊಹಮ್ಮದ್ ರಿಜ್ವಾನ್ (ಔಟಾಗದೆ 63; 79ಎ) ತಂಡವನ್ನು ಗೆಲುವಿನತ್ತ ಮುನ್ನಡೆಸಿದರು. ಈ ಹಂತದಲ್ಲಿ ಪಾಕ್ ತಂಡವು ತನ್ನ ಎರಡನೇ ಪಂದ್ಯದಲ್ಲಿ ಭಾರತ ತಂಡವನ್ನು ಎದುರಿಸಲಿದೆ. ಇದೇ 10ರಂದು ಪಂದ್ಯ ನಡೆಯಲಿದೆ.

ಸಂಕ್ಷಿಪ್ತ ಸ್ಕೋರು: ಬಾಂಗ್ಲಾದೇಶ: 38.4 ಓವರ್‌ಗಳಲ್ಲಿ 193 (ಮೊಹಮ್ಮದ್ ನೈಮ್ 20, ಶಕೀಬ್ ಅಲ್ ಹಸನ್ 53, ಮುಷ್ಫಿಕುರ್ ರಹೀಮ್ 64; ನಸೀಂ ಶಹಾ 34ಕ್ಕೆ3, ಹ್ಯಾರಿಸ್ ರವೂಫ್ 19ಕ್ಕೆ4) **ಪಾಕಿಸ್ತಾನ:** 39.3 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 194 (ಫಕರ್ ಜಮಾನ್ 20, ಇಮಾಮ್ ಉಲ್ ಹಕ್ 78, ಬಾಬರ್ ಆಜಂ 17, ಮೊಹಮ್ಮದ್ ರಿಜ್ವಾನ್ ಔಟಾಗದೆ 63, ಆಘಾ ಸಲ್ಮಾನ್ ಔಟಾಗದೆ 12; ತಸ್ಕಿನ್ ಅಹಮದ್ 32ಕ್ಕೆ1, ಶೊರಿಫುಲ್ ಇಸ್ಲಾಂ 24ಕ್ಕೆ1, ಮೆಹದಿ ಹಸನ್ ಮಿರಾಜ್ 51ಕ್ಕೆ1)

ಫಲಿತಾಂಶ: ಪಾಕಿಸ್ತಾನ ತಂಡಕ್ಕೆ 7 ವಿಕೆಟ್‌ಗಳ ಜಯ.

ಹೊನಲು ಬೆಳಕು ವ್ಯತ್ಯಯ: ಪಂದ್ಯ ಸ್ಥಗಿತ

ಲಾಹೋರ್ (ಪಿಟಿಐ): ಆತಿಥೇಯ ಪಾಕಿಸ್ತಾನ ಮತ್ತು ಬಾಂಗ್ಲಾದೇಶ ತಂಡಗಳ ನಡುವಣ ಪಂದ್ಯದ ಸಂದರ್ಭದಲ್ಲಿ ಮೈದಾನದಲ್ಲಿರುವ ಹೊನಲು ಬೆಳಕಿನ ವ್ಯವಸ್ಥೆಯಲ್ಲಿ ಉಂಟಾದ ತಾಂತ್ರಿಕ ದೋಷದ ಕಾರಣದಿಂದಾಗಿ 20 ನಿಮಿಷಗಳ ಕಾಲ ಆಟ ಸ್ಥಗಿತವಾಯಿತು.

ಇದರಿಂದಾಗಿ ಆಯೋಜಕರು ಮುಜುಗರಕ್ಕೆ ಒಳಗಾದರು. ಬಾಂಗ್ಲಾ ತಂಡವು 193 ರನ್‌ಗಳಿಸಿ ಆಲೌಟ್ ಆಯಿತು. ಗುರಿ ಬೆನ್ನಟ್ಟಿದ ಪಾಕ್ ತಂಡವು ಐದು ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 15 ರನ್ ಗಳಿಸಿದ್ದ ಸಂದರ್ಭದಲ್ಲಿ ಮೈದಾನದಲ್ಲಿ ಬೆಳಕು ಚೆಲ್ಲುತ್ತಿದ್ದ ಒಂದು ಸ್ಥಂಭದ ಕಾರ್ಯ ದಿಢೀರನೇ ಸ್ಥಗಿತವಾಯಿತು.

ಇದಕ್ಕೆ ನಿಖರವಾದ ಕಾರಣ ತಿಳಿದುಬಂದಿಲ್ಲ. ಆದರೆ ಸುಮಾರು 20 ನಿಮಿಷ ಆಟ ಸ್ಥಗಿತವಾಯಿತು. ಈ ಸಂದರ್ಭದಲ್ಲಿ ಪಾಕ್ ತಂಡದ ಬ್ಯಾಟರ್‌ಗಳಾದ ಇಮಾಮ್ ಉಲ್ ಹಕ್ ಮತ್ತು ಫಕರ್ ಜಮಾನ್ ಅವರು ಅಂಪೈರ್‌ಗಳ ಜೊತೆ ಹರಟೆ ಹೊಡೆದರು.

ಪಾಕಿಸ್ತಾನ ಆತಿಥ್ಯಕ್ಕೆ ಬಿನ್ನಿ ಸಂತಸ



ವಾಘಾ ಗಡಿಯಲ್ಲಿ ಬಿಸಿಸಿಐ ಅಧ್ಯಕ್ಷ ರೋಜರ್ ಬಿನ್ನಿ ಹಾಗೂ ಉಪಾಧ್ಯಕ್ಷ ರಾಜೀವ್ ಶುಕ್ಲಾ –ಪಿಟಿಐ ಚಿತ್ರ

ಅಮೃತಸರ್ (ಪಿಟಿಐ): ಪಾಕಿಸ್ತಾನಕ್ಕೆ ಭೇಟಿ ನೀಡಿದ ತಮ್ಮ ನಿಯೋಗಕ್ಕೆ ಉತ್ತಮವಾದ ಆತಿಥ್ಯ ಲಭಿಸಿತು ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಅಧ್ಯಕ್ಷ ರೋಜರ್ ಬಿನ್ನಿ ಸಂತಸ ವ್ಯಕ್ತಪಡಿಸಿದ್ದಾರೆ.

ಏಷ್ಯಾಕಪ್ ಕ್ರಿಕೆಟ್ ಟೂರ್ನಿಗೆ ಆತಿಥ್ಯ ವಹಿಸಿರುವ ಪಾಕಿಸ್ತಾನ ಕ್ರಿಕೆಟ್ ಮಂಡಳಿಯು (ಪಿಸಿಬಿ) ಬಿಸಿಸಿಐ ಪದಾಧಿಕಾರಿಗಳಿಗೆ ತಮ್ಮ ದೇಶಕ್ಕೆ ಭೇಟಿ ನೀಡಲು ಆಹ್ವಾನ ಕೋರಿತ್ತು. ಬಿನ್ನಿ ಮತ್ತು ಉಪಾಧ್ಯಕ್ಷ ರಾಜೀವ್ ಶುಕ್ಲಾ ಅವರು ಭೇಟಿ ನೀಡಿದ್ದರು. ಬುಧವಾರ ಅವರಿಬ್ಬರೂ ಅಠಾರಿ–ವಾಘಾ ಗಡಿಯ ಮೂಲಕ ಭಾರತಕ್ಕೆ ಮರಳಿದರು.

ಕಳೆದ 17 ವರ್ಷಗಳಲ್ಲಿ ಬಿಸಿಸಿಐ ಪದಾಧಿಕಾರಿಗಳು ಪಾಕಿಸ್ತಾನಕ್ಕೆ ಭೇಟಿ ನೀಡಿರಲಿಲ್ಲ. ಉಭಯ ದೇಶಗಳ ನಡುವಣ ಇರುವ ರಾಜತಾಂತ್ರಿಕ ಬಿಕ್ಕ-ಟ್ಟಿನಿಂದಾಗಿ ದ್ವಿಪಕ್ಷೀಯ ಸರಣಿಗಳೂ ನಡೆಯುತ್ತಿಲ್ಲ. ಏಷ್ಯಾ ಕಪ್ ಟೂರ್ನಿಯಲ್ಲಿ ಆಡಲು ಭಾರತ ತಂಡವನ್ನು ಪಾಕಿಸ್ತಾನಕ್ಕೆ ಕಳುಹಿಸಲು ಬಿಸಿಸಿಐ ನಿರಾಕರಿಸಿತ್ತು. ಆದ್ದರಿಂದಾಗಿ ಭಾರತದ ಪಂದ್ಯಗಳನ್ನು ತಟಸ್ಥ ತಾಣವಾದ ಶ್ರೀಲಂಕಾದಲ್ಲಿ ಆಯೋಜಿಸಲಾಗಿದೆ.

‘ಪಾಕಿಸ್ತಾನವು ನಮಗೆ ಉತ್ತಮ ಆತಿಥ್ಯ ನೀಡಿತು. ನಮ್ಮ ಸುಗಮ ಪ್ರಯಾಣ ಮತ್ತು ಭೇಟಿಗಾಗಿ ಸಕಲ ವ್ಯವಸ್ಥೆಗಳನ್ನು ಮಾಡಿತ್ತು’ ಎಂದು ಬಿನ್ನಿ ಸುದ್ದಿಗಾರರ ಮುಂದೆ ಮೆಚ್ಚುಗೆ ವ್ಯಕ್ತಪಡಿಸಿದರು.

ಉಭಯ ದೇಶಗಳ ನಡುವೆ ಕ್ರಿಕೆಟ್ ಸಂಬಂಧಗಳ ಮರುಸ್ಥಾಪನೆ ಕುರಿತು ಪ್ರತಿಕ್ರಿಯಿಸಿದ ಅವರು, ‘ಈ ಕುರಿತು ಬಿಸಿಸಿಐ ಏನೂ ಹೇಳಲಾಗದು. ಇದು ಸರ್ಕಾರದ ವಿಷಯ. ಮುಂಬರುವ ವಿಶ್ವಕಪ್ ಟೂರ್ನಿಯು ಭಾರತದಲ್ಲಿ ನಡೆಯಲಿದ್ದು, ಪಂದ್ಯ ಆಡಲು ಪಾಕಿಸ್ತಾನ ಬರುತ್ತಿದೆ’ ಎಂದರು.

ಅಕ್ಟೋಬರ್ 14ರಂದು ಭಾರತ ಮತ್ತು ಪಾಕ್ ತಂಡಗಳು ಅಹಮದಾಬಾದಿನಲ್ಲಿ ನಡೆಯುವ ವಿಶ್ವಕಪ್ ಪಂದ್ಯದಲ್ಲಿ ಆಡಲಿವೆ.

‘ಪಾಕ್ ಭೇಟಿಯು ಸಂತಸ ನೀಡಿತು. ಭದ್ರತೆ ಹಾಗೂ ಇನ್ನಿತರ ವ್ಯವಸ್ಥೆಗಳು ಉತ್ತಮವಾಗಿದ್ದವು. ಕ್ರಿಕೆಟ್ ವರ್ಚಸ್ಸು ವೃದ್ಧಿಯ ದೃಷ್ಟಿಕೋನದಿಂದ ಇದು ಮಹತ್ವದ ಭೇಟಿಯಾಗಿದೆ. ಎಲ್ಲ ದೇಶಗಳ ಕ್ರಿಕೆಟ್ ಮಂಡಳಿಗಳೊಂದಿಗೆ ಬಾಂಧವ್ಯ ಹೊಂದುವ ಗುರಿ ಬಿಸಿಸಿಐ ನದ್ದು. ಆದ್ದರಿಂದ ಶ್ರೀಲಂಕಾಗೂ ಭೇಟಿ ನೀಡಿದ್ದೆವು. ಏಷ್ಯಾ ಕ್ರಿಕೆಟ್ ಕೌನ್ಸಿಲ್ ಸದಸ್ಯರೊಂದಿಗೂ ಉತ್ತಮ ಸಂಬಂಧ ಹೊಂದಿದ್ದೇವೆ’ ಎಂದು ಉಪಾಧ್ಯಕ್ಷ ಶುಕ್ಲಾ ಹೇಳಿದರು.

ವಿಶ್ವಕಪ್: ನಾಲ್ಕು ಲಕ್ಷ ಟಿಕೆಟ್ ಬಿಡುಗಡೆ ಮಾಡಲಿರುವ ಬಿಸಿಸಿಐ

ನವದೆಹಲಿ (ಪಿಟಿಐ): ಮುಂದಿನ ತಿಂಗಳು ಆರಂಭವಾಗಲಿರುವ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಪಂದ್ಯಗಳ ಟಿಕೆಟ್‌ಗಳಿಗೆ ಈಗಾಗಲೇ ಅಪಾರ ಬೇಡಿಕೆ ಸೃಷ್ಟಿಯಾಗಿದೆ.

ಇದಕ್ಕಾಗಿ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಮುಂದಿನ ಹಂತದಲ್ಲಿ ನಾಲ್ಕು ಲಕ್ಷ ಟಿಕೆಟ್‌ಗಳನ್ನು ಮಾರಾಟಕ್ಕಾಗಿ ಬಿಡುಗಡೆ ಮಾಡಲಿದೆ. ಇದರಲ್ಲಿ ಬಹುತೇಕ ಟಿಕೆಟ್‌ಗಳು ಭಾರತ ಆಡುವ ಪಂದ್ಯಗಳದ್ದಾಗಿರಲಿವೆ.

‘ಜಗತ್ತಿನೆಲ್ಲೆಡೆ ಇರುವ ಕ್ರಿಕೆಟ್ ಅಭಿಮಾನಿಗಳು ಪಂದ್ಯಗಳನ್ನು ವೀಕ್ಷಣೆ ಮಾಡಲು ಮೈದಾನದಲ್ಲಿರುವ ಆಸನಗಳನ್ನು ಖಚಿ-ತಪಡಿಸಿಕೊಳ್ಳಲು ಇದು ಸಕಾಲ’ ಎಂದು ಬಿಸಿಸಿಐ ಪ್ರಕಟಣೆಯಲ್ಲಿ ಉಲ್ಲೇಖಿಸಲಾಗಿದೆ.

‘ಟಿಕೆಟ್‌ಗಳ ಮಾರಾಟವು ಇದೇ 8ರಂದು ರಾತ್ರಿ 8ರಿಂದ ಅಧಿಕೃತ ಟಿಕೆಟ್ ವೆಬ್‌ಸೈಟ್ https://tickets.cricketworldcup.com ಮೂಲಕ ನಡೆಯಲಿದೆ’ ಎಂದು ಮಂಡಳಿ ತಿಳಿಸಿದೆ.

ಪಂದ್ಯ ಸ್ಥಳಾಂತರ: ನಷ್ಟ ಪರಿಹಾರಕ್ಕೆ ಪಿಸಿಬಿ ಆಗ್ರಹ

ಲಾಹೋರ್ (ಪಿಟಿಐ): ಪಾಕಿ-ಸ್ತಾನದಲ್ಲಿ ನಡೆಯಬೇಕಿದ್ದ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯ ಕೆಲವು ಪಂದ್ಯಗಳನ್ನು ಶ್ರೀಲಂಕಾಕ್ಕೆ ಸ್ಥಳಾಂತರಿಸಲಾಗಿದೆ. ಆದ್ದರಿಂದ ಆಗಿರುವ ನಷ್ಟಕ್ಕೆ ಪರಿಹಾರ ನೀಡಬೇಕು ಎಂದು ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ)ಯು ಏಷ್ಯಾ ಕ್ರಿಕೆಟ್ ಸಂಸ್ಥೆಯನ್ನು ಆಗ್ರಹಿಸಿದೆ.

ಈ ಕುರಿತು ಪಿಸಿಬಿ ಅಧಿಕೃತವಾಗಿ ಯಾವುದೇ ಹೇಳಿಕೆಯನ್ನು ಬಿಡುಗಡೆ ಮಾಡಿಲ್ಲ. ಆದರೆ ಮಂಡಳಿಯ ಮುಖ್ಯಸ್ಥ ಝಕಾ ಅಶ್ರಫ್ ಅವರು ಎಸಿಸಿ ಅಧ್ಯಕ್ಷ ಜಯ್ ಶಾಗೆ ಈ ಕುರಿತು ಪತ್ರ ಬರೆದಿದ್ದಾರೆಂದು ಸ್ಥಳೀಯ ಮಾಧ್ಯಮಗಳಲ್ಲಿ ವರದಿಯಾಗಿದೆ.

ಪತ್ರದಲ್ಲಿ ಅಶ್ರಫ್ ಅವರು ತೀವ್ರ ಬೇಸರ ವ್ಯಕ್ತಪಡಿಸಿ-ದ್ದಾರೆನ್ನಲಾಗಿದೆ. ಪಂದ್ಯಗಳು ಪಾಕಿಸ್ತಾನದ ಮೈದಾನಗಳಲ್ಲಿ ನಡೆದಿದ್ದರೆ ಟಿಕೆಟ್ ಆದಾಯ ಪಿಸಿಬಿಗೆ ದೊರೆಯುತ್ತಿತ್ತು. ಈಗ ಅದು ಕೈತಪ್ಪಿದೆ. ಅಲ್ಲದೇ ಪಂದ್ಯಗಳನ್ನು ಸ್ಥಳಾಂತರ ಮಾಡುವಾಗ ಸದಸ್ಯ ರಾಷ್ಟ್ರಗಳಿಂದ ಅಭಿಪ್ರಾಯ ಸಂಗ್ರಹಿಸಿರಲಿ-ಲ್ಲ. ಎಸಿಸಿ ಏಕಪಕ್ಷೀಯವಾಗಿ ತೀರ್ಮಾನ ಕೈಗೊಂಡಿದೆ ಎಂದೂ ಅವರು ಉಲ್ಲೇಖಿಸಿದ್ದಾರೆ.

ಪಂದ್ಯಗಳನ್ನು ಆಯೋಜಿಸುವ ತಾಣಗಳನ್ನು ಆಯ್ಕೆ ಮಾಡುವಾಗಲೂ ಆತಿಥೇಯ ಪಾಕ್ ಮಂಡಳಿಯನ್ನು ಗಣನೆಗೆ ತೆಗೆದುಕೊಂಡಿಲ್ಲ ಎಂದೂ ಅವರು ಬೇಸರ ವ್ಯಕ್ತಪಡಿಸಿದ್ದಾರೆ.

ಚೀನಾ ಓಪನ್: ಸಾತ್ವಿಕ್– ಚಿರಾಗ್ ಜೋಡಿಗೆ ಆಘಾತ

ಚಾಂಗ್‌ಝೌ (ಚೀನಾ), (ಪಿಟಿಐ): ವಿಶ್ವದ ಎರಡನೇ ಕ್ರಮಾಂಕದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ ಜೋಡಿ ಚೀನಾ ಓಪನ್ ಸೂಪರ್ ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಡಬಲ್ಸ್ ಮೊದಲ ಸುತ್ತಿನಲ್ಲೇ ಇಂಡೊನೇಷ್ಯಾ ಆಟಗಾರರ ಎದುರು ಅಚ್ಚರಿಯ ಸೋಲನುಭವಿಸಿದರು. ಇದರೊಂದಿಗೆ ಈ ಟೂರ್ನಿಯಲ್ಲಿ ಭಾರತದ ಸವಾಲು ಅಂತ್ಯಗೊಂಡಿತು.

ಬುಧವಾರ ನಡೆದ ಪಂದ್ಯದಲ್ಲಿ ಕಾಮನ್ವೆಲ್ತ್ ಗೇಮ್ಸ್ ಚಾಂಪಿಯನ್ನರಾದ ಭಾರತದ ಜೋಡಿ 17–21, 21–11, 17–21ರಲ್ಲಿ ಇಂಡೊನೇಷ್ಯಾದ ಮುಹಮ್ಮದ್ ಶೊಹಿಬುಲ್ ಫಿಕ್ರಿ–ಮೌಲಾನಾ ಬಾಗಾ ಜೋಡಿ ಎದುರು ಸೋಲನುಭವಿಸಿತು. ವಿಶ್ವ ಕ್ರಮಾಂಕದಲ್ಲಿ 13ನೇ ಸ್ಥಾನದಲ್ಲಿರುವ ಶೊಹಿಬುಲ್–ಮೌಲಾನಾ ಜೋಡಿ ಗೆಲ್ಲಲು ಒಂದು ಗಂಟೆ ಎಂಟು ನಿಮಿಷ ತೆಗೆದುಕೊಂಡಿತು.

ಭಾರತದ ಮಿಕ್ಸೆಡ್ ಡಬಲ್ಸ್ ಜೋಡಿಯಾದ ಸಿಕ್ಕಿ ರೆಡ್ಡಿ– ರೋಹನ್ ಕಪೂರ್ ಅವರೂ ಮೊದಲ ಸುತ್ತಿನಲ್ಲೇ ಹೊರಬಿದ್ದರು. ಮಲೇಷ್ಯಾದ ಚೆನ್ ಟಾಂಗ್ ಜಿ– ತೊ ಇ ವೀ ಜೋಡಿ 21–15, 21–16ರಲ್ಲಿ ನೇರ ಆಟಗಳಿಂದ ಭಾರತದ ಜೋಡಿ ಮೇಲೆ ಜಯಗಳಿಸಿತು.

ಟೆನಿಸ್: ಎಂಟರ ಘಟ್ಟಕ್ಕೆ ಗೌರವ್, ಸಾಯಿ



ಸೆಹಜ್ ಸಿಂಗ್ ಪವಾರ್ ಅವರ ಆಟದ ವೈಖರಿ –ಪ್ರಜಾವಾಣಿ ಚಿತ್ರ/ ಎಸ್‌.ಕೆ. ದಿನೇಶ್

ಬೆಂಗಳೂರು: ಸ್ಥಳೀಯ ಮತ್ತು ಎರಡನೇ ಶ್ರೇಯಾಂಕದ ಗಂಧರ್ವ ಗೌರವ್ ಕೊತ್ತಪಲ್ಲಿ ಅವರು ಇಲ್ಲಿ ನಡೆಯುತ್ತಿರುವ ಐಟಿಎಫ್ ಜೆ30 ಟೆನಿಸ್ ಟೂರ್ನಿಯ ಬಾಲಕರ ವಿಭಾಗದಲ್ಲಿ ನೇರ ಗೇಮ್‌ಗಳ ಜಯದೊಂದಿಗೆ ಕ್ವಾರ್ಟರ್ ಫೈನಲ್ ಪ್ರವೇಶ ಮಾಡಿದರು.

ಬುಧವಾರ ನಡೆದ ಪಂದ್ಯದಲ್ಲಿ ಗೌರವ್ ಅವರು 6–2, 6–4ರಿಂದ ವಂಶ ನಂದಲ್ ಅವರನ್ನು ಮಣಿಸಿದರು. ಅವರು ಮುಂದಿನ ಸುತ್ತಿನಲ್ಲಿ ಆರಾಧ್ಯ ಕ್ಷಿತಿಜ್ ಅವರನ್ನು ಎದುರಿಸಲಿ-ದ್ದಾರೆ. ಆರಾಧ್ಯ ಅವರು 6-3, 6-4ರಿಂದ ಐದನೇ ಶ್ರೇಯಾಂಕದ ಸ್ಮಿತ್ ನೀಲೇಶ್‌ಭಾಯ್ ಪಟೇಲ್ ಅವರಿಗೆ ಆಘಾತ ನೀಡಿದರು.

ಅಗ್ರ ಶ್ರೇಯಾಂಕದ ಆಟಗಾರ ಸೆಹಜ್ ಸಿಂಗ್ ಪವಾರ್ ಅವರು 6-3, 7-6 (7-5)ರಿಂದ ದಕ್ಷ್ ಕುಕ್ರೆತಿ ಅವರನ್ನು ಸೋಲಿಸಿದರು. ಮತ್ತೊಂದು ಪಂದ್ಯದಲ್ಲಿ ಎಂಟನೇ ಶ್ರೇಯಾಂಕದ ವ್ರಾಜ್ ಗೊಹ್ಲಿ ಅವರು 5-7, 2-6ರಿಂದ ಧೀರಜ್ ರೆಡ್ಡಿ ಅವರಿಗೆ ತಲೆಬಾಗಿದರು.

ಬಾಲಕಿಯರ ವಿಭಾಗದ ಪಂದ್ಯದಲ್ಲಿ ಅಗ್ರ ಶ್ರೇಯಾಂಕದ ಕರ್ನಾಟಕದ ಸಾಯಿ ಜಾನ್ವಿ ಅವರು ಎದುರಾಳಿ ಆಟಗಾರ್ತಿ ಸ್ನಿದ್ಧಾ ಕಾಂತ ಮೊದಲ ಗೇಮ್‌ನ ಮಧ್ಯದಲ್ಲೇ ನಿವೃತ್ತಿ ಪಡೆದ ಕಾರಣ ಮುಂದಿನ ಸುತ್ತು ಪ್ರವೇಶಿಸಿದರು. ಮೂರನೇ ಶ್ರೇಯಾಂಕದ ಕರ್ನಾಟಕದ ಅಮೋದಿನಿ ನಾಯಕ್ ಅವರು 6-3, 7-5ರಿಂದ ಅರ್ಜಾನ್ ಖೋರಕಿವಾಲಾ ಅವರನ್ನು ಮಣಿಸಿ ಎಂಟರ ಘಟ್ಟ ತಲುಪಿದರು. ಕಶ್ವಿ ಸುನಿಲ್ ಅವರು 6-4, 6-2ರಿಂದ ಎರಡನೇ ಶ್ರೇಯಾಂಕದ ದುರ್ಗಂಶಿ ಕುಮಾರ್ ಅವರಿಗೆ ಆಘಾತ ನೀಡಿದರು.


ಟಿಟಿ ಏಷ್ಯನ್ ಚಾಂಪಿಯನ್‌ಷಿಪ್: ಭಾರತಕ್ಕೆ ಕಂಚು

ಪ್ಯೊಂಗ್‌ಚಾಂಗ್, ದಕ್ಷಿಣ ಕೊರಿಯಾ (ಪಿಟಿಐ): ಭಾರತ ಪುರುಷರ ಟೇಬಲ್ ಟೆನಿಸ್ ತಂಡವು ಇಲ್ಲಿ ನಡೆಯುತ್ತಿರುವ ಏಷ್ಯನ್ ಚಾಂಪಿಯನ್‌ಷಿಪ್‌ನ ಸೆಮಿಫೈನಲ್ ಪಂದ್ಯದಲ್ಲಿ 0–3ರಿಂದ ಚೈನೀಸ್ ತೈಪೆಯ ವಿರುದ್ಧ ಸೋತು, ಕಂಚಿನ ಪದಕಕ್ಕೆ ತೃಪ್ತಿಪಟ್ಟುಕೊಂಡಿತು.

ಬುಧವಾರ ನಡೆದ ಪಂದ್ಯದಲ್ಲಿ ಮೂರನೇ ಶ್ರೇಯಾಂಕದ ಭಾರತ ತಂಡದ ಪ್ರದರ್ಶನ ನಿರಾಶಾದಾಯಕವಾಗಿ-ತ್ತು. ಅನುಭವಿ ಶರತ್ ಕಮಲ್ ಮತ್ತು ಜಿ. ಸತ್ಯನ್ ಅವರು ಎದುರಾಳಿಗೆ ಸುಲಭವಾಗಿ ಮಣಿದರೆ, ಹರ್ಮೀತ್ ದೇಸಾಯಿ ಕೊಂಚ ಪ್ರತಿರೋಧ ತೋರಿದರು.

ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಸೆಮಿಫೈನಲ್ ಪಂದ್ಯದಲ್ಲಿ ಸೋತ ತಂಡಗಳಿಗೆ ಕಂಚಿನ ಪದಕ ನೀಡಲಾಗುತ್ತದೆ.

ಐಸಿಸಿ ರ‍್ಯಾಂಕಿಂಗ್: ಮೂರನೇ ಸ್ಥಾನದಲ್ಲಿ ಶುಭಮನ್ ಗಿಲ್



ಶುಭಮನ್ ಗಿಲ್

ದುಬೈ (ಪಿಟಿಐ): ಭಾರತ ಕ್ರಿಕೆಟ್ ತಂಡದ ಯುವ ಆಟಗಾರರಾದ ಶುಭಮನ್ ಗಿಲ್ ಹಾಗೂ ಇಶಾನ್ ಕಿಶನ್ ಅವರು ಅಂತರ ರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ರ‍್ಯಾಂಕಿಂಗ್‌ನಲ್ಲಿ ಬಡ್ತಿ ಗಳಿಸಿದ್ದಾರೆ.

ಬುಧವಾರ ಪ್ರಕಟವಾಗಿರುವ ರ‍್ಯಾಂಕಿಂಗ್ ಪಟ್ಟಿಯಲ್ಲಿ ಏಕದಿನ ಕ್ರಿಕೆಟ್ ವಿಭಾಗದ ಬ್ಯಾಟರ್‌ಗಳಲ್ಲಿ ಗಿಲ್ ಮೂರನೇ ಸ್ಥಾನ ಗಳಿಸಿದ್ದಾರೆ. ಅವರ ಖಾತೆಯಲ್ಲಿ 750 ಅಂಕಗಳು ಇವೆ. ವಿಕೆಟ್ ಕೀಪರ್ ಬ್ಯಾಟರ್ ಇಶಾನ್ ಕಿಶನ್ 624 ಅಂಕಗಳೊಂದಿಗೆ 24ನೇ ಸ್ಥಾನ ಗಳಿಸಿದ್ದಾರೆ. ಇದು ಅವರಿಬ್ಬರಿಗೂ ತಮ್ಮ ವೃತ್ತಿಜೀವನದ ಶ್ರೇಷ್ಠ ರ‍್ಯಾಂಕಿಂಗ್ ಆಗಿದೆ.

ಅನುಭವಿ ಬ್ಯಾಟರ್ ವಿರಾಟ್ ಕೊಹ್ಲಿ ಹತ್ತನೇ ಸ್ಥಾನದಲ್ಲಿದ್ದಾರೆ. ಅವರ ಖಾತೆಯಲ್ಲಿ 695 ಅಂಕಗಳು ಇವೆ. ಭಾರತ ತಂಡದ ನಾಯಕ ರೋಹಿತ್ ಶರ್ಮಾ 11ನೇ ಸ್ಥಾನದಲ್ಲಿದ್ದಾರೆ. ಕೊಹ್ಲಿಗಿಂತ ಐದು ಅಂಕ ಕಡಿಮೆ ಗಳಿಸಿದ್ದಾರೆ.

ಬ್ಯಾಟರ್‌ಗಳ ವಿಭಾಗದಲ್ಲಿ ಪಾಕಿಸ್ತಾನ ತಂಡದ ನಾಯಕ ಬಾಬರ್ ಆಜಂ (777) ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ. ದಕ್ಷಿಣ ಆಫ್ರಿಕಾದ ರೆಸಿ ವ್ಯಾನ್ ಡರ್ ಡಸೆನ್ ಎರಡನೇ ಸ್ಥಾನದಲ್ಲಿದ್ದಾರೆ.

ಬೌಲಿಂಗ್ ವಿಭಾಗದಲ್ಲಿ ಆಸ್ಟ್ರೇಲಿಯಾದ ಜೋಶ್ ಹ್ಯಾಜಲ್‌ವುಡ್ ಪ್ರಥಮ ಸ್ಥಾನದಲ್ಲಿದ್ದಾರೆ. ಭಾರತದ ಮೊಹಮ್ಮದ್ ಸಿರಾಜ್ ಹಾಗೂ ಸ್ಪಿನ್ನರ್ ಕುಲದೀಪ್ ಯಾದವ್ ಕ್ರಮವಾಗಿ ಎಂಟು ಹಾಗೂ 12ನೇ ಸ್ಥಾನದಲ್ಲಿದ್ದಾರೆ.

ಆಲ್‌ರೌಂಡರ್ ವಿಭಾಗದಲ್ಲಿ ಬಾಂಗ್ಲಾ ತಂಡದ ಶಕೀಬ್ ಅಲ್ ಹಸನ್ ಅಗ್ರಸ್ಥಾನದಲ್ಲಿದ್ದಾರೆ. ಭಾರತದ ಹಾರ್ದಿಕ್ ಪಾಂಡ್ಯ ಹತ್ತನೇ ಸ್ಥಾನ-ದಲ್ಲಿದ್ದಾರೆ. ಈ ವಿಭಾಗದಲ್ಲಿ ಅಗ್ರ 20ರಲ್ಲಿರುವ ಭಾರತದ ಏಕೈಕ ಆಟಗಾರ ಅವರಾಗಿದ್ದಾರೆ.

ಸಂಕ್ಷಿಪ್ತ ಸುದ್ದಿ

ವಿಶ್ವಕಪ್: ಆಸ್ಟ್ರೇಲಿಯಾ ತಂಡಕ್ಕೆ ಕಮಿನ್ಸ್ ನಾಯಕ

ಮೆಲ್ಬರ್ನ್ (ಪಿಟಿಐ): ಭಾರತದಲ್ಲಿ ಮುಂದಿನ ತಿಂಗಳು ನಡೆಯಲಿರುವ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಆಸ್ಟ್ರೇಲಿಯಾದ ಸಂಭಾವ್ಯ ತಂಡವನ್ನು ಪ್ರಕಟಿಸಲಾಗಿದೆ.

ಪ್ಯಾಟ್ ಕಮಿನ್ಸ್ ನಾಯಕತ್ವದ ತಂಡದಲ್ಲಿ ಅನುಭವಿ ಬ್ಯಾಟರ್ ಸ್ಟೀವ್ ಸ್ಮಿತ್, ಗ್ಲೆನ್ ಮ್ಯಾಕ್ಸ್‌ವೆಲ್ ಮತ್ತು ವೇಗಿ ಮಿಚೆಲ್ ಸ್ಟಾರ್ಕ್ ಅವರಿಗೆ ಸ್ಥಾನ ನೀಡಲಾಗಿದೆ. ಗಾಯಗೊಂಡಿರುವ ಬೌಲಿಂಗ್ ಆಲ್‌ರೌಂಡರ್ ಸೀನ್ ಅಬಾಟ್ ಕೂಡ ತಂಡದಲ್ಲಿದ್ದಾರೆ.

ಆದರೆ, ಗುರುವಾರದಿಂದ ಆರಂಭವಾ-ಗಲಿರುವ ದಕ್ಷಿಣ ಆಫ್ರಿಕಾ ಎದುರಿನ ಏಕದಿನ ಕ್ರಿಕೆಟ್ ಸರಣಿಯಲ್ಲಿ ಪ್ಯಾಟ್ ಕಮಿನ್ಸ್ ಆಡಲಿದ್ದಾರೆ. ಆದರೆ ಉಳಿದ ಮೂವರು ಅನುಭವಿಗಳೂ ಆಡುವುದು ಖಚಿತವಿಲ್ಲ.

ತಂಡ ಇಂತಿದೆ: ಪ್ಯಾಟ್ ಕಮಿನ್ಸ್ (ನಾಯಕ), ಸೀನ್ ಅಬಾಟ್, ಆ್ಯಸ್ಟನ್ ಅಗರ್, ಅಲೆಕ್ಸ್ ಕ್ಯಾರಿ, ಕ್ಯಾಮರಾನ್ ಗ್ರೀನ್, ಜೋಶ್ ಹ್ಯಾಜಲ್‌ವುಡ್, ಟ್ರಾವಿಸ್ ಹೆಡ್, ಜೋಶ್ ಇಂಗ್ಲಿಸ್, ಮಿಚೆಲ್ ಮಾರ್ಷ್, ಗ್ಲೆನ್ ಮ್ಯಾಕ್ಸ್‌ವೆಲ್, ಸ್ಟೀವ್ ಸ್ಮಿತ್, ಮಿಚೆಲ್ ಸ್ಟಾರ್ಕ್, ಮಾರ್ಕಸ್ ಸ್ಟೊಯಿನಿಸ್, ಡೇವಿಡ್ ವಾರ್ನರ್, ಆ್ಯಡಂ ಜಂಪಾ.

ಸ್ಪೋರ್ಟಿಂಗ್ ಕ್ಲಬ್ ತಂಡಕ್ಕೆ ಜಯ

ಬೆಂಗಳೂರು: ಸ್ಪೋರ್ಟಿಂಗ್ ಕ್ಲಬ್ ಬೆಂಗಳೂರು ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 4–1ರಿಂದ ಎಂಇಜಿ ಅಂಡ್ ಸೆಂಟರ್ ಎಫ್‌ಸಿ ತಂಡವನ್ನು ಮಣಿಸಿತು.

ಬುಧವಾರ ನಡೆದ ಪಂದ್ಯದಲ್ಲಿ ಸ್ಪೋರ್ಟಿಂಗ್ ಕ್ಲಬ್ ಪರವಾಗಿ ಶ್ರವಣ್ ಶೆಟ್ಟಿ (14ನೇ), ಆರಿಫ್ ಶೇಖ್ (31ನೇ), ಮುಸ್ತಫಾ ಶೇಖ್ (36ನೇ), ಸೈಯ್ಯದ್ ಉಮರ್ (45 + 5ನೇ) ತಲಾ ಒಂದು ಗೋಲು ದಾಖಲಿಸಿದರು.

ಮತ್ತೊಂದು ಪಂದ್ಯದಲ್ಲಿ ರೂಟ್ಸ್ ಎಫ್‌ಸಿ ತಂಡವು 1–0ಯಿಂದ ಎಎಸ್‌ಸಿ ಅಂಡ್ ಸೆಂಟರ್ ಎಫ್‌ಸಿ ತಂಡವನ್ನು ಪರಾಭವಗೊಳಿಸಿತು. ರೂಟ್ಸ್ ಪರವಾಗಿ ಗಾಡ್ವಿನ್ ಜಾನ್ಸನ್ (67ನೇ) ಚೆಂಡನ್ನು ಗುರಿ ಸೇರಿಸಿದರು.